# ಅಂತರಂಗದ ಅಲೆ

ಜಗ್ಗುಪ್ರಿಯದರ್ಶಿನಿ





## ಈ ಲೇಖಕಿಯ ಇತರ ಕೃತಿಗಳು :

ಬಂಗಾರ ಲಕ್ಷ್ಮಿ — ಕಾದಂಬರಿ
"ಮೌನಗೀತೆ" ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ.
ಮಕ್ಕಳಿಗೆ — ಮಧು — ಕಾವ್ಯಾನಂದ ಪುರಸ್ಕಾರ ಪಡೆದ ಪುಸ್ತಕ.

## ಸಣ್ಣ ಕತೆಗಳು :

ಪರ್ವತ ಪ್ರಪಾತ    ಅಪವಾದ
ನನ್ನ ಒಗಟಿಗೆ ಉತ್ತರ    ವಂಶೋದ್ಧಾರಕ    ನಿಶಾಚರಿ
ನಾಗ-ಸಾಕಿ (ಮಕ್ಕಳ ಕತೆ) ಇನ್ನೂ ಮುಂತಾದವು.

## ಪ್ರಕಟಿಸಲು ಸಿದ್ಧವಾಗಿರುವ ನಾಟಕಗಳು :

ಪರಸಾಮ್ಯ ಅಥವಾ ಮಾದರಿ ಮದುವೆ (ಸಾಮಾಜಿಕ)
ಅದೃಷ್ಟ — ಸಾಮಾಜಿಕ
ಮಿತಸಂತಾನವೇ ಸುಖಸಂಸಾರ — ನಾಟಕ
ರಾಧಾಮಾಧವ — ಪೌರಾಣಿಕ
ಬಂಧವಿಮೋಚನೆ — ಪೌರಾಣಿಕ
ಮತ್ತು ಕವನಗಳು.

॥ ಜೈ ಭಾರತಮಾತ ॥

# ಅಂತರಂಗದ ಅಲೆ

## ಸಾಮಾಜಿಕ ಕಾದಂಬರಿ

ಲೇಖಕಿ :

**ಜಗ್ಗು ಪ್ರಿಯದರ್ಶಿನಿ**

ಸಂಪಾದಕರು ಮತ್ತು ಪ್ರಕಾಶಕರು :

**ಜಗ್ಗು ಪ್ರಿಯದರ್ಶಿನಿ**

10 ನೇ ಅಡ್ಡರಸ್ತೆ, ಸೋಮೇಶ್ವರ ಬಡಾವಣೆ,

ತುಮಕೂರು – 572 102.

ಮೊದಲ ಮುದ್ರಣ – ಏಪ್ರಿಲ್ 1987

ಎಲ್ಲಾ ಹಕ್ಕು ಲೇಖಕಿಯರದು.

ಬೆಲ ರೂ. 15-00

ಮುದ್ರಕರು ಮತ್ತು ಪ್ರಕಾಶಕರು :

**ಮಾತಾ ಮುದ್ರಣ ಮತ್ತು ಪ್ರಕಾಶನ**

"ಜ್ಯೋತಿ" 10 ನೇ ಅಡ್ಡರಸ್ತೆ, ಸೋಮೇಶ್ವರಪುರಂ,

ತುಮಕೂರು–572 102.

# ನನ್ನ ನುಡಿ

'ಲಂಬಾಣಿ ಲಕ್ಕಿ' ನನ್ನ ಮೊದಲನೆಯ ಕಾದಂಬರಿ, ಅದಾದ ನಂತರ ನಾನು ಹೆಚ್ಚು ಮಕ್ಕಳ ಸಾಹಿತ್ಯ, ನಾಟಕ, ಇವುಗಳ ಕಡೆ ಗಮನ ಕೊಟ್ಟೆ. 'ಅಂತರಂಗದ ಅಲೆ' ನನ್ನ ಎರಡನೇ ಕಾದಂಬರಿ.

ಸಾಹಿತ್ಯ ನಾನಾ ಪ್ರಾಕಾರಗಳು. ಅದರಲ್ಲಿ ಉತ್ತಮ ಕಾದಂಬರಿಗಳು ಜನಪ್ರಿಯ ವಾಗುವುದರಲ್ಲಿ ಸಂದೇಹವಿಲ್ಲ. ಕಾದಂಬರಿ ಬರೆಯುವುದೆಂದರೆ ಕಳಪೆ ಸಾಹಿತ್ಯ ಎಂಬ ಅಭಿಪ್ರಾಯ ತಪ್ಪು. ಸಮಾಜದ ಓರೆ–ಕೋರೆಗಳನ್ನು ಎತ್ತಿ ಹಿಡಿದು ತಿದ್ದಲು ಕಾದಂಬರಿಯಂಥ ಮಾಧ್ಯಮ ಆವಶ್ಯಕ. ಡಾ॥ ಅ. ನ. ಕೃ. ರವರು ಅಂತಹ ಅನೇಕ ಕಾದಂಬರಿಗಳ ಕರ್ತೃವಾಗಿ, ಸಮಾಜದ ತಪ್ಪಿಗೆ ಕನ್ನಡಿ ಹಿಡಿದು ಎಚ್ಚರಿಸಿ 'ಕಾದಂಬರಿಗಳ ಸಾರ್ವಭೌಮ' ಎನ್ನಿಸಿಕೊಂಡಿದ್ದಾರೆ.

ಲೇಖಕ ಅಥವಾ ಲೇಖಕಿ ಯಾರೇ ಕಾದಂಬರಿ ಬರೆದರೂ ಅದು ಓದುಗರ ಮನಸ್ಸಿನ ಮೇಲೆ ಪರಿಣಾಮ ಮೂಡಿಸಿ ಕೆಲವು ಕಾಲ ನಿಲ್ಲುವಂತಿರಬೇಕು. ಅಂತಹ ಒಂದು ಪ್ರಯತ್ನದಲ್ಲಿ ಮೂಡಿ ಬಂದ ಕಾದಂಬರಿಯೇ ''ಅಂತರಂಗದ ಅಲೆ''

ಕಾದಂಬರಿಗಾಗಿ ನಾನು ವಸ್ತುವನ್ನು ಹುಡುಕಿಕೊಂಡು ಹೋಗುವುದಿಲ್ಲ. ಯಾವುದೋ ಒಂದು ಸಂದರ್ಭದ ಒಂದೇ ಒಂದು ಮಾತು, ಒಂದು ತುಣುಕು ನನ್ನ ಅಂತರಂಗದಲ್ಲಿ ಮೂಡಿದಾಗ ಅದು ಚಿಂತನ ಮಂಥನಕ್ಕೆ ಸಿಕ್ಕಿ ಅದರ ಪರಿಣಾಮ ವೇನಾಗಬಹುದೆಂದು ನನ್ನ ತಲೆಯಲ್ಲಿ ತರಂಗಗಳೇಳುತ್ತಲೇ ಇರುತ್ತವೆ. ಅದರ ಒತ್ತಡವೇ ಹೊರ ಹೊಮ್ಮಿ ಕಾದಂಬರಿ ರೂಪುಗೊಳ್ಳುತ್ತದೆ. ಅಂತಹ ಒಂದೇ ಒಂದು ಎಳೆ ಸಿಕ್ಕಿ ''ಅಂತರಂಗದ ಅಲೆ'' ಕಾದಂಬರಿಯನ್ನು ಹೆಣೆದಿರುತ್ತೇನೆ. ಇದು ಯಾರನ್ನೂ ಅಥವಾ ಯಾವ ವ್ಯಕ್ತಿಯನ್ನೂ ಕುರಿತು ಬರೆದದ್ದಲ್ಲ. ಈ ರೀತಿ ಒಂದು ಆಕಸ್ಮಿಕವಾದರೆ ಆ ಕುಟುಂಬದ ಪರಿಣಾಮವೇನಾಗಬಹುದು ? ಎಂಬ ಕಲ್ಪನೆಯೇ ಈ ಕಾದಂಬರಿ.

ಸಂಸಾರದಲ್ಲಿ ಏನೇ ಏರು–ಪೇರಾದರೂ ಅದು ಹೆಣ್ಣಿನ ಬಾಳಿನ ಮೇಲೆ ಪರಿಣಾಮಕಾರಿಯಾಗುತ್ತದೆ. ಸಮಾಜ ತಪ್ಪನ್ನೆಲ್ಲಾ ಹೆಣ್ಣಿನ ಮೇಲೆಯೇ ವಾಲಿಸು ತ್ತದೆ. ಒಂದು ಹೆಣ್ಣಿನ ಮಾನಸಿಕ, ಯಾತನೆ, ತಳ–ಮಳವೇ 'ಅಂತರಂಗದ ಅಲೆ' ಬಹಿರಂಗಪಡಿಸಲಾರದ ರಹಸ್ಯವನ್ನು ಬಚ್ಚಿಟ್ಟು ಮಾನಸಿಕವಾಗಿ ಚಿತ್ರಹಿಂಸೆಯನ್ನು

ಅನುಭವಿಸುವ ಹೆಣ್ಣಿನ ಸಂಕಟವನ್ನು ಬಹಿರಂಗಪಡಿಸಿದ್ದೇನೆ. ಹೀಗೊಂದು ಸಂಸಾರದಲ್ಲಿ ಇದ್ದರೂ ಇರಬಹುದು.

''ಅಂತರಂಗದ ಅಲೆ'' ಕಾದಂಬರಿ ಬರೆದ ನಂತರ ಹಸ್ತಪ್ರತಿಯನ್ನು ಒಂದು ವಾರಪತ್ರಿಕೆ ಸಂಪಾದಕರಿಗೆ ಧಾರಾವಾಹಿಯಾಗಿ ಪ್ರಕಟಿಸಲು ಕೊಟ್ಟೆ. ಆ ಮಹನೀಯರು ಪ್ರಕಟಿಸುತ್ತೇವೆಂಬ ಭರವಸೆ ಕೊಡುತ್ತಲೇ ಮೂರು ವರ್ಷ ನನಗೆ ಆಸೆ ತುಂಬಿದರು. ನಿರೀಕ್ಷಣೆಗೂ ಒಂದು ಮಿತಿಯುಂಟು. ಕಾದಂಬರಿ ಪ್ರಕಟವಾಗಲಿಲ್ಲವೆಂಬ ಕೊರಗು ನನ್ನನ್ನು ಕೊರೆಯುತ್ತಲೇ ಇತ್ತು. ಇನ್ನು ಬರೆಯುವ ಹವ್ಯಾಸವೇ ಬೇಡ ಎನ್ನುವಷ್ಟು ಸಂಕಟ ಪಟ್ಟೆ.

ಅನೇಕ ಓದುಗರು ಕೇಳುತ್ತಲೇ ಇದ್ದರು ''ನಿಮ್ಮ ಇನ್ನೊಂದು ಕಾದಂಬರಿ ಯಾವುದು ?'' ಎಂದು. ಕಡೆಗೆ ಗಟ್ಟಿ ಮನಸ್ಸು ಮಾಡಿ ಈ ಕಾದಂಬರಿಯನ್ನೂ ಸ್ವಂತ ಖರ್ಚಿನಿಂದ ಮುದ್ರಣ ಮಾಡಿಸಿದೆ. ಓದುಗರ ಪ್ರೋತ್ಸಾಹವೇ ಸಾಹಿತಿಗೆ ಜೀವನಾಡಿ.

ಈ ಕಾದಂಬರಿಯನ್ನು ಮುದ್ರಣ ಮಾಡಿಸಲು ಪ್ರೋತ್ಸಾಹಿಸಿ, ಅಂದವಾಗಿ ಮುದ್ರಣ ತಪ್ಪಿಲ್ಲದಂತೆ ಮುತುವರ್ಜಿ ವಹಿಸಿ ಕಾದಂಬರಿ ಓದುಗರ ಕೈ ಸೇರುವಂತೆ ಶ್ರಮವಹಿಸಿದ '' ಮಾತಾ ಮುದ್ರಣ ಮತ್ತು ಪ್ರಕಾಶನ '' ದ ಮಾಲೀಕರಾದ ಶ್ರೀಮತಿ ವೇದಮಾತ ಮತ್ತು ಶ್ರೀ ಸಿ. ವಿ. ಶ್ರೀನಿವಾಸಮೂರ್ತಿಯವರಿಗೂ ನಾನು ಕೃತಜ್ಞಳು.

ಸಹೃದಯದಿಂದ ಈ ಕಾದಂಬರಿಯನ್ನು ಓದಿ ತಮ್ಮ ಅಭಿಪ್ರಾಯದ ಮುನ್ನುಡಿಯನ್ನು ಬರೆದುಕೊಟ್ಟ ಶ್ರೀಮತಿ ಉಷಾನವರತ್ನರಾಂ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಕಾದಂಬರಿ ಪ್ರಕಟವಾಗಲೇಬೇಕೆಂದು ಪ್ರೋತ್ಸಾಹಿಸಿದ ನನ್ನ ಸಹೋದರಿಯರಿಗೂ ನಾನು ಕೃತಜ್ಞಳು. ಮುಖಪುಟಕ್ಕೆ ಅಂದವಾಗಿ ಚಿತ್ರ ಬರೆದುಕೊಟ್ಟ ನಮ್ಮ ಮನೆಯವರೇ ಆದ ಶ್ರೀಮತಿ ಜಗ್ಗು ರಾಧಾರವರಿಗೆ ಧನ್ಯವಾದಗಳು.

ನಮ್ಮ ವಾಚಕ ಬಂಧುಗಳು 'ಲಂಬಾಣಿ ಲಕ್ಕಿ'ಗೆ ಕೊಟ್ಟ ಪ್ರೋತ್ಸಾಹವನ್ನೇ ಅಂತರಂಗದ ಅಲೆ' ಗೂ ಕೊಡುವರೆಂದು ಆಶಿಸುತ್ತೇನೆ.

**ಜಗ್ಗು ಪ್ರಿಯದರ್ಶಿನಿ**

# ಮುನ್ನುಡಿ

ಸಮಾಜದಲ್ಲಿ ಯಾವುದೇ ಒಂದು ಸಮಸ್ಯೆಯ ಪರಿಹಾರವಾಗಬೇಕಾದರೂ ಅದರ ಮೊದಲ ಬಿಸಿ ತಗಲುವುದು ಹೆಣ್ಣಿಗೇ. ಸಮಾಜದ ಯಾವುದೇ ಮೌಲ್ಯವನ್ನು ಅಳೆಯಬೇಕಾದರೂ ಅದರ ಮಾಪನ ಹೆಣ್ಣೇ. ಹೀಗಾಗಿ ಬದುಕಿನ ಎಳೆಎಳೆಯಲ್ಲಿ ಹಾಸುಹೊಕ್ಕಾಗ ಬರುವುದೇ ಹೆಣ್ಣಿನ ಅಂತರಂಗದ ತುಮುಲ. ಅದನ್ನು ಜಗ್ಗು-ಪ್ರಿಯದರ್ಶಿನಿಯವರು ತಮ್ಮದೇ ಆದ ವಿಭಿನ್ನ ವಸ್ತುವಿನ ಆಯ್ಕೆ ಮಾಡಿ ಮೂಡಿಸಿರುವ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಜನಸಂಖ್ಯಾಸ್ಫೋಟವನ್ನು ತಡೆಗಟ್ಟುವುದು ದೇಶದ ಸಮಗ್ರ ಸಮಸ್ಯೆ ಹೇಗೋ ಹಾಗೆ ಹೆಣ್ಣಿನ ಸಮಗ್ರ ಬದುಕಿನ ಸಮಸ್ಯೆಯೂ ಹೌದು. ಜನಸಂಖ್ಯೆ ನಿಯಂತ್ರಣಕ್ಕೆ ಪುರುಷನೆಷ್ಟು ಜವಾಬ್ದಾರನೋ ಅಷ್ಟೇ ಜವಾಬ್ದಾರಿ ಹೆಣ್ಣಿನದು. ಆದರೆ ಅನಾವಶ್ಯಕವಾದ ಹೇರಿಕೆ ಬರುವುದು ಹೆಣ್ಣಿನ ಮೇಲೆ. ಸಾಂಸಾರಿಕ ಜೀವನದಲ್ಲಿ ಯಾವ ಏರುಪೇರಾದರೂ ಅದರಿಂದ ಸಂಕಷ್ಟಗಳನ್ನು ಅನುಭವಿಸುವುದು ಹೆಣ್ಣೇ. ಹೆಣ್ಣಿನ ಅಂತರಂಗವನ್ನು ಬಹಿರಂಗ ಮಾಡಿ ಸುಂದರವಾಗಿ ವಾಸಂತಿಯ ಜೀವನದ ಒಳಹೊರಗನ್ನು ಚಿತ್ರಿಸಿದ್ದಾರೆ. ಕೈ ಹಿಡಿದ ಗಂಡ, ಕಾಮುಕ ಮೈದುನ, ನೈಜತೆಗೆ ಅಭಿಮುಖವಾಗಿರುವ ಅತ್ತೆ. ಮಾವ ಇವರೆಲ್ಲರನ್ನೂ ವಿಮರ್ಶಕ ದೃಷ್ಟಿಯಿಂದ ನೋಡುವ ಸಮಾಜ, ಇವೆಲ್ಲವನ್ನೂ ಎದುರಿಸಿ ಬದುಕಿನ ಮಹಾಪೂರದಲ್ಲಿ ಕೊಚ್ಚಿ ಹೋಗುವ ವಾಸಂತಿಯ ಬದುಕು ಓದುಗರ ಅಂತರಂಗವನ್ನು ಕಲಕುವುದರಲ್ಲಿ ಯಶಸ್ವಿಯಾಗಿದೆ. ಕಾದಂಬರಿಯ ವಿಭಿನ್ನ ಕಥಾವಸ್ತು, ವಿವಿಧ ಪಾತ್ರಗಳ ಜೀವಂತ ಚಿತ್ರಣ, ಮನಮುಟ್ಟುವ ಸರಳ ಶೈಲಿ ಕೊನೆಯವರೆವಿಗೂ ಓದಿಸಿಕೊಂಡು ಹೋಗುವ ಚುಂಬಕ ನಿರೂಪಣೆ ಇವುಗಳಿಂದ 'ಅಂತರಂಗದ ಅಲೆ' ಯಶಸ್ವಿ, ಜನಪ್ರಿಯ ಕಾದಂಬರಿಯಾಗುವುದರಲ್ಲಿ ಸಂದೇಹವಿಲ್ಲ. ಈ ಲೇಖಕಿಯಿಂದ ಮತ್ತೂ ವಿಭಿನ್ನ, ಭಿನ್ನವಾದ ಕಥಾವಸ್ತುಗಳ ಸುತ್ತ ಕಾದಂಬರಿಗಳು ಮೂಡಿಸುವ ಶಕ್ತಿಯನ್ನು ಭಗವಂತ ನೀಡಲೆಂದು ಹಾರೈಸುವೆ.

**ಉಷಾನವರತ್ನರಾಮ್**

## ಶ್ರೀಮತಿ ಜಗ್ಗು ಪ್ರಿಯದರ್ಶಿನಿಯ ಬಗ್ಗೆ
# ಒಂದೆರಡು ಮಾತು

ಕಥೆ ಬರೆಯುವುದೊಂದು ಕಲೆ. ಕಲಿತ ಕಲೆಗಳಲ್ಲೊಂದು, ಇದೊಂದು ಪ್ರತಿಭಾನ್ವಿತ ಕಲೆ. ಈ ಕಲೆ ಒಲಿಯುವುದು ಕೆಲವರಿಗೆ ಮಾತ್ರ. ಅಂತಹ ಅಪ ರೂಪದ ಪ್ರತಿಭಾನ್ವಿತ ಕಥೆಗಾರ್ತಿ ಶ್ರೀಮತಿ ಜಗ್ಗು ಪ್ರಿಯದರ್ಶಿನಿಯವರ ಕಥೆಗಳು ಹೃದಯಂಗಮ ಚಿತ್ರಣದಿಂದ ಓದುಗರನ್ನು ಸೆರೆ ಹಿಡಿಯುತ್ತವೆ. ಕಥೆಯ ಒಂದೊಂದು ಸಂದರ್ಭವೂ ರಸನಿಮಿಷವೇ. ಭಾವ, ಭಾವನೆಗಳನ್ನು ಮನ ಮುಟ್ಟುವಂತೆ ಬರೆಯುವ ಚತುರೆಯಾದ ಇವರು ಅನುಭವದ ಜೊತೆಗೆ ಕಲ್ಪನೆಯನ್ನೂ ನೈಜತೆ ಇರುವಂತೆ ರೂಪಿಸಿ ಆಸಕ್ತಿ ಮೂಡಿಸುತ್ತಾರೆ. ಸತ್ಯಸಂಗತಿಯ ಸಾರಾಂಶವೇ ಇವರ ಕಥೆಗಳಲ್ಲಿ ಕಂಡುಬರುವ ಅಂಶ. ಹಿಡಿದ ಪುಸ್ತಕವನ್ನು ಬಿಡದೆ ಓದಿಬಿಡುವಷ್ಟು ರಸವತ್ತಾಗಿವೆ ಇವರ ಕಥೆಗಳು. ಚಿಕ್ಕದಾಗಲೀ, ದೊಡ್ಡದಾಗಲೀ ಕಥೆಯ ಮಾಧುರ್ಯವನ್ನು ಓದುಗರು ಸವಿದು, ಮನದಲ್ಲಿ ಊರಿಟ್ಟು ಚಪ್ಪರಿಸುವಂತಾಗುತ್ತದೆ. ಜಗ್ಗು ಪ್ರಿಯ ದರ್ಶಿನಿಯವರ ಕಥೆಗಳು ಇನ್ನೂ ಹೆಚ್ಚು ಹೆಚ್ಚಾಗಿ ಹೊರಬರಲು ಇಚ್ಛಿಸಿ ಹಾರೈಸು ತ್ತೇನೆ. ಈ ಕಾದಂಬರಿಯನ್ನೂ ಇವರು ಸ್ವಂತ ಖರ್ಚಿನಲ್ಲಿ ಮುದ್ರಣ ಮಾಡಿಸು ತ್ತಿರುವುದು ಅವರ ಒಂದು ಸಾಹಸವೇ ಸರಿ.

ಬೆಂಗಳೂರು

**ಕಮಲಸಂಪಳ್ಳಿ**, ಎಂ. ಎ.,

# ಲೇಖಕಿಯ ಬಗ್ಗೆ

ತುಮಕೂರಿನ ಶ್ರೀಮತಿ ಜಗ್ಗು ಪ್ರಿಯದರ್ಶಿನಿಯವರು ' ಮೌನಗೀತೆ ' ಯ ಮೂಲಕ ಕರ್ನಾಟಕದಾದ್ಯಂತೆ ಎಲ್ಲರಿಗೂ ಚಿರಪರಿಚಿತರಾಗಿದ್ದಾರೆ. ಇವರ ಕಾದಂಬರಿ ' ಲಂಬಾಣಿ ಲಕ್ಕಿ ' ಯೇ ಮೌನಗೀತೆ ಹೆಸರಿನಲ್ಲಿ ಸಿನಿಮಾ ಆಗಿರುವುದು. ಇವರ ಅನೇಕ ಸಣ್ಣ ಕಥೆಗಳೂ, ನಾಟಕಗಳೂ ಪ್ರಕಟಗೊಂಡಿವೆ. ಶೋಷಣೆಗೆ ಒಳಗಾಗಿ ಅಂತರ್ಯದಲ್ಲಿಯೇ ನರಳುವ ಹೆಣ್ಣಿನ ಅಂತರಂಗದ ತುಮುಲವನ್ನು ಚಿತ್ರಿಸುವುದ ರಲ್ಲಿ ಇವರ ಲೇಖನಿ ಸಮರ್ಥವಾದುದು. ಈ ಕಾರಣಕ್ಕಾಗಿಯೇ ವಿಮರ್ಶೆಗೆ ನಾನು ಇವರ ' ಲಂಬಾಣಿ ಲಕ್ಕಿ ' ಕಾದಂಬರಿಯನ್ನು ಆರಿಸಿದುದು. ನನ್ನ ವಿಮರ್ಶೆಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪುರಸ್ಕಾರವೂ ದೊರೆಯಿತು. ಜಗ್ಗು ಪ್ರಿಯದರ್ಶಿನಿ ಯವರು ತಮ್ಮ ಕೃತಿಗಳೆನ್ನೆಲ್ಲಾ ಸ್ವಂತ ಮುದ್ರಣ ಮಾಡಿಸುವ ಸಾಹಸ ಕೈಗೊಂಡಿ ದ್ದಾರೆ. ಇವರ ಪ್ರಯತ್ನಕ್ಕೆ ಕನ್ನಡಿಗರ ಒಳ್ಳೆಯ ಬೆಂಬಲ ಸಿಕ್ಕಲಿ ಮತ್ತು ಇವರಿಂದ ಸಮಾಜಕ್ಕೆ ಮಾರ್ಗದರ್ಶಕರಾಗುವಂತಹ ಇನ್ನೂ ಅನೇಕ ಕೃತಿಗಳು ಹೊರಬರಲಿ ಎಂದು ಆಶಿಸುತ್ತೇನೆ.

**ತುಮಕೂರು**

**ರುಕ್ಮಿಣಿಗೋಪಾಲ್**

ನಾಗರಾಜನಿಗೆ ಹೆಣ್ಣು ಕೊಡಲು ಅವರ ಮನೆಯ ಬಾಗಿಲಿಗೆ ಅಲೆದ ಕನ್ಯಾ ಪಿತೃಗಳೆಷ್ಟೋ ? ಲೆಕ್ಕವೇ ಇಲ್ಲ. ಎಲ್ಲರಿಗೂ ನಾಗರಾಜನ ಒಂದೇ ಉತ್ತರ "ನಾನು ಮದುವೆ ಆಗೋಲ್ಲ" ಈ ಉತ್ತರದಿಂದ ಎಲ್ಲರಿಗೂ ಆಶ್ಚರ್ಯ. ಎಲ್ಲರಿಗಿಂತ ಅವನ ತಂದೆ ತಾಯಿಯರಿಗೇ ಮಗನ ಮನಸ್ಸು ಅರ್ಥವಾಗಲೊಲ್ಲದು.

ಮಗನಿಗೆ ಒಂದು ಕೆಲಸ ಸಿಕ್ಕಿದ ಕೂಡಲೇ ಮದುವೆ ಮಾಡಬೇಕೆಂದು ಕಾತುರರಾಗಿದ್ದ ಅವರು ಮಗನಿಗೆ ಕೆಲಸ ಸಿಕ್ಕಿ ಮೂರು ವರ್ಷವಾದರೂ ಸೊಸೆ ಕಾಣಲು ಸಾಧ್ಯವಾಗಲಿಲ್ಲ.

ಈ ಪುಣ್ಯಾತ್ಮನನ್ನು ಪಡೆಯಲು ಭಾಗೀರಥಮ್ಮ ಬೆಟ್ಟದಷ್ಟು ಹರಕೆ ಹೊತ್ತರು. ಕಂಡ ಕಂಡ ದೇವರಿಗೆಲ್ಲಾ ಕೈ ಮುಗಿದರು. ಅವರಿಗೆ ಮದುವೆಯಾಗಿ ಹನ್ನೆರಡು ವರ್ಷವಾದರೂ ಮಕ್ಕಳಾಗಲಿಲ್ಲ. ಆ ವೇಳೆಗೆ ಅವರ ಸಂಸಾರದಲ್ಲಿ ಎಷ್ಟೆಷ್ಟೋ ಮಾತುಗಳು ಜರುಗಿದವು. ಮಗನಿಗೆ ಇನ್ನೊಂದು ಮದುವೆ ಮಾಡುತ್ತೇನೆಂದು ಅವರ ಅತ್ತೆ ಥಕ–ಥಕ ಕುಣಿದಾಡಿದರು.

ಏನೇ ಆದರೂ ಅವರ ಪತಿ ಪರಮಶಿವಯ್ಯನವರು ಯಾವುದಕ್ಕೂ ಸೊಪ್ಪು ಹಾಕಲಿಲ್ಲ. 'ಮಕ್ಕಳಿಲ್ಲದವರಿಗೆ ಯಾವ ತಾಪತ್ರಯವೂ ಇಲ್ಲ ನೀನು ಸುಮ್ಮನಿರಮ್ಮ' ಎಂದುಬಿಟ್ಟರು. ಕಡೆಗೆ ನಾಗ ಪ್ರತಿಷ್ಠೆ ಮಾಡಿ ಪಡೆದ ಮಗ ಈ ನಾಗರಾಜ. ಆದಕ್ಕೆಂದೇ ಅವನ ಹೆಸರು ನಾಗರಾಜ.

ಅವನು ಹುಟ್ಟಿದ ಐದು ವರ್ಷಗಳ ನಂತರ ಹುಟ್ಟಿದವನು ರವಿ. ನಂತರ ಅವರಿಗೆ ಮಕ್ಕಳೇ ಆಗಲಿಲ್ಲ. ಪರಮಶಿವಯ್ಯನವರು ಪೋಲೀಸ್ ದಫೇದಾರಿಕೆಯಿಂದ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಪದವಿ ಏರಿ ನಿವೃತ್ತಿ ಆಗಿದ್ದರು. ಕೆಲಸದಿಂದ ನಿವೃತ್ತಿಯಾಗಿದ್ದರೂ ವೃತ್ತಿಯ ದರ್ಪ ಕಿಂಚಿತ್ತೂ ಕಮ್ಮಿಯಾಗಿರಲಿಲ್ಲ.

ಮಕ್ಕಳಿಗಂತೂ ತಂದೆಯನ್ನು ಕಂಡರೆ ಮೊದಲಿನಿಂದಲೂ ಭಯ. ಅವರು ಮನೆಗೆ ಬಂದರೆ ತಾಯಿಯ ಸೆರಗಿನಲ್ಲಿ ತೂರಿಕೊಳ್ಳುತ್ತಿದ್ದೆವು. ಹೀಗಾಗಿ ಮಕ್ಕಳಿಗೆ ತಂದೆಗಿಂತ ತಾಯಿಯಲ್ಲಿ ಸಲಿಗೆ ಜಾಸ್ತಿ.

ಹರಕೆ ಹೊತ್ತು ಹುಟ್ಟಿದ ಆ ಎರಡು ಮಕ್ಕಳನ್ನು ಎರಡು ಕಣ್ಣಾಗಿ ಬೆಳೆಸಿದರು ಭಾಗೀರಥಮ್ಮ. ಬೆಳೆಯುತ್ತಾ ಮಕ್ಕಳು ಒಳ್ಳೆ ರಾಮ ಲಕ್ಷ್ಮಣರಂತೆ ಒಬ್ಬರನ್ನೊಬ್ಬರು ಗಳಿಗೆಯೂ ಬಿಟ್ಟಿರದೆ ಪ್ರೀತಿಯಿಂದ ಇರುವುದನ್ನು ಕಂಡಾಗ ಸಂತೋಷಕ್ಕಿಂತ ಒಂದೊಂದು ಸಲ ಭಯವೇ ಆಗುತ್ತಿತ್ತು ಭಾಗೀರಥಮ್ಮನವರಿಗೆ. ತಮ್ಮ ಚಂದದ ಮಕ್ಕಳ ಮೇಲೆ ಯಾರ ಕಣ್ಣು ಬಿದ್ದು ದೃಷ್ಟಿ ತಾಕೀತೋ ? ಎಂದು.

ನಾಗರಾಜ ಬಿ.ಕಾಂ. ಓದು ಮುಗಿಸಿದ ಕೂಡಲೇ ಅವನಿಗೆ ಮಂಗಳೂರು ಬಳಿ ಚೆಂಗಾವಿ ಎಂಬ ಊರಿನಲ್ಲಿ ಬ್ಯಾಂಕಿನ ಕೆಲಸ ಸಿಕ್ಕಿತು. ಕೆಲಸ ಸಿಕ್ಕಿದ ಸಂತೋಷಕ್ಕಿಂತ ನಾಗರಾಜನಿಗೆ ತಮ್ಮನನ್ನು ಬಿಟ್ಟು ಹೋಗಬೇಕಲ್ಲಾ ಎಂಬ ದುಃಖ.

ರವಿಗಾದರೂ ಅಷ್ಟೆ. ಅಣ್ಣನಿಲ್ಲದ ಮನೆಯೇ ಅವನಿಗೆ ಬೇಕಾಗಲಿಲ್ಲ. ಮಕ್ಕಳ ಮನವನ್ನರಿತ ಭಾಗೀರಥಮ್ಮನವರಿಗೂ ಚಿಂತೆಯಾಯಿತು.

ನಾಳೆ ನಾಗರಾಜ ಹೊರಡಬೇಕೆನ್ನುವಾಗ ಮೊದಲ ದಿನ ಭಾಗೀರಥಮ್ಮ ತೊವ್ವೆ ಪಾಯಸದ ಅಡಿಗೆ ಮಾಡಿದರು. ಎಲ್ಲರೂ ಊಟಕ್ಕೆ ಕುಳಿತಾಗ ನಾಗರಾಜ, ರವಿ ಇಬ್ಬರೂ ತಟ್ಟೆಯ ಮುಂದೆ ಕುಳಿತು ಚಿಂತಿಸುತ್ತಿದ್ದಾರೆ, ತುತ್ತು ಬಾಯಿಗೆ ಎತ್ತಿಲ್ಲ.

ಪರಮಶಿವಯ್ಯನವರೂ ಮಕ್ಕಳ ಪಕ್ಕದಲ್ಲೇ ಕುಳಿತು ಊಟ ಮಾಡುತ್ತಿದ್ದರು. ಮಕ್ಕಳ ದುಃಖ ಅವರಿಗೂ ಅರ್ಥವಾಗಿತ್ತು. ಆದರೂ ಗದರಿ ಮಾತಾಡುವುದೇ ಅವರ ಸ್ವಭಾವ.

"ಏಳ್ರೋ ಊಟ ಮಾಡಿ. ಮಹಾ.... ಸೀಮೆಗಿಲ್ಲದ ಅಣ್ಣತಮ್ಮಂದಿರು ನೀವೇನಾ ? ಆದರೂ ಅವನೇನು ಪರದೇಶಕ್ಕೆ ಹೊರಟುಹೋಗುತ್ತಾನೆಯೇ" ಎಂದು ಗದರಿದರು.

ಮಧ್ಯೆ ಭಾಗೀರಥಮ್ಮನವರು ಬಾಯಿಹಾಕಿ ಅಲ್ಲಾಂದ್ರೇ, ಅವು ಒಂದು ದಿನಕ್ಕಾದರೂ ಒಬ್ಬರನ್ನೊಬ್ಬರು ಬಿಟ್ಟು ಅಗಲಿರಲಿಲ್ಲ. ಈಗ ಇದ್ದಕ್ಕಿದ್ದಂತೆಯೇ ನಾಗರಾಜ, ಎಂದು ಹೇಳುತ್ತಿರುವಂತೆಯೇ ಮಗನ ಅಗಲಿಕೆ ದುಃಖ ಒತ್ತರಿಸಿ ಬಂದು ಮುಂದೆ ಮಾತನಾಡಲಾರದೇ ಕಣ್ಣೊರಸಿಕೊಂಡು ಒಳಕ್ಕೆ ಹೋದರು.

ಪರಮಶಿವಯ್ಯನವರಿಗಾದರೂ ಅದೇ ಸ್ಥಿತಿಯಾಗಿತ್ತು. ನಾಗರಾಜನೆಂದರೆ ಅವರಿಗೆ ಪ್ರಾಣ. ಅವನು ತಮ್ಮ ಕಣ್ಣುಮುಂದೆ ಓಡಾಡುತ್ತಿದ್ದರೆ ಅವರಿಗೆ ತೃಪ್ತಿ. ಈಗ ಮಗನನ್ನು ಬಿಟ್ಟಿರಲಾರದ ವ್ಯಥೆ.

ಅಲ್ಲಾ ಕಣೇ.... ಭಾಗೂ... ನನಗೆ ಮಾತ್ರ ನಾಗರಾಜ ಒಬ್ಬನನ್ನೇ ಕಳುಹಿಸೋದಕ್ಕೆ ಇಷ್ಟಾನೇನೇ ? ನಾನೂ ಅವನ ಜೊತೇಲಿ ಹೋಗಿ ಒಂದು ಒಳ್ಳೇ ಜಾಗ ಮಾಡಿ ಬಿಟ್ಟು ಬರ್ತೀನಿ.

ಒಂದಾರು ತಿಂಗಳು, ಇರಲಿ ಸುಮ್ಮನಿರು. ಇಲ್ಲಿಗೇ ವರ್ಗ ಮಾಡಿಸಿ ಬಿಡ್ತೀನಿ. ಆಗಾಗ ರಜಕ್ಕೆ ಬರ್ತಿರ್ತಾನೆ, ಅದಕ್ಕೇಕ್ರೋ ವೊದ್ದಾಡ್ತೀರಾ ? ಊಟಮಾಡಿ ಏಳ್ರೋ, ಎಂದು ಸಮಾಧಾನ ಹೇಳಿದರು ಪರಮಶಿವಯ್ಯ.

ಅವರು ಹೇಳಿದಂತೆಯೇ ನಾಗರಾಜ ಕೆಲಸಕ್ಕೆ ಸೇರಿ ಒಂದು ವರ್ಷ ಪೂರ್ತಿಯಾಯಿತೆನ್ನುವಾಗ ಪರಮಶಿವಯ್ಯನವರು ಅವನಿಗೆ ಬೆಂಗಳೂರಿಗೇ ವರ್ಗ ಮಾಡಿಸಿದ್ದರು.

ಆದರೆ ನಾಗರಾಜ ಮಾತ್ರ ಮೊದಲಿನ ನಾಗರಾಜನಾಗಿರಲಿಲ್ಲ. ಅವನ ಹಾಸ್ಯ ಸ್ವಭಾವ ಎಲ್ಲಿಯೋ ಮಾಯವಾಗಿತ್ತು. ತಾಯಿಯೊಂದಿಗೆ ಗಂಟೆಗಟ್ಟಲೆ ಹರಟೆ ಹೊಡೆಯುತ್ತಿದ್ದವನು ಈಗ ಹೆಚ್ಚು ಮಾತೇ ಆಡುತ್ತಿರಲಿಲ್ಲ. ಅಷ್ಟು ಪ್ರೀತಿಯ ತಮ್ಮನಲ್ಲಿಯೂ ಹುಡುಗಾಟಿಕೆ ಬೇಕಾಗಿರಲಿಲ್ಲ. ಮಗ ಈ ರೀತಿ ಬದಲಾವಣೆ ಯಾದದ್ದು ತಂದೆ ತಾಯಿಯರಿಗೆ ಬಲು ಯೋಚನೆಗಿಟ್ಟುಕೊಂಡಿತು.

ನಾಗರಾಜ ಕೆಲಸದಿಂದ ಮನೆಗೆ ಬಂದ ಮೇಲೂ ಹೆಚ್ಚು ಹೊತ್ತು ಮನೆಯಲ್ಲಿ ಇರುತ್ತಿರಲಿಲ್ಲ. ತಾಯಿ ಕೊಟ್ಟ ತಿಂಡಿ ತಿಂದು ಕಾಫಿ ಕುಡಿದು ಹೊರಕ್ಕೆ ತಿರುಗಾಡಲು ಹೊರಟುಹೋಗುತ್ತಿದ್ದ. ಮನೆಯಲ್ಲಿದ್ದ ಸ್ವಲ್ಪ ಹೊತ್ತೂ ಚಿಂತೆ ಅವನನ್ನು ಮುಸುಕಿರುತ್ತಿತ್ತು.

ಒಂದು ವರ್ಷದೊಳಗಾಗಿ ಮಗ ಹೀಗೇಕೆ ವಿಚಿತ್ರವಾಗಿಬಿಟ್ಟ ? ಎನ್ನುವುದೇ ಹಗಲಿರುಳು ಭಾಗೀರಥಮ್ಮನಿಗೆ ಕೊರಗು. ಅಣ್ಣನ ಜೊತೆ ಮೊದಲಿನಂತೆ ಹುಡುಗಾಟ ಮಾಡುವುದಕ್ಕೆ ಹೋಗಿ ರವಿ ಎಷ್ಟೋ ಸಲ ನಾಗರಾಜನಿಂದ ಬೈಸಿಕೊಂಡು ತೆಪ್ಪ ಗಾಗಿದ್ದ.

ಮಗನಿಗೆ ಮದುವೆ ಮಾಡಿದರೆ ಅವನು ಸರಿಯಾಗಬಹುದೆಂದು ತಂದೆ ತಾಯಿ ಯರ ಆಸೆ. ಆ ಒಂದು ದಿನ ಭಾನುವಾರ, ನಾಗರಾಜ ಹೆಚ್ಚು ಹೊತ್ತು ಮನೆ ಯಲ್ಲಿಯೇ ಇದ್ದ. ಬೆಳಗ್ಗೆ ತಿಂಡಿಗೆ ಇಡ್ಲಿ–ಚಟ್ನಿ ಮಾಡಿದ್ದರು ಭಾಗೀರಥಮ್ಮ. ರವಿ–ರಾಜ ಇಬ್ಬರೂ ಅಡಿಗೆ ಮನೆಯಲ್ಲಿಯೇ ಕುಳಿತು ತಿನ್ನುತ್ತಿದ್ದರು. ಪರಮ ಶಿವಯ್ಯನವರೂ ಅಲ್ಲಿಗೇ ಬಂದರು.

ಎಲ್ಲರೂ ಒಟ್ಟಿಗೇ ಕುಳಿತಿದ್ದಾಗ ಭಾಗೀರಥಮ್ಮ “ ಏನೊಂದ್ರೆ ಈ ವರ್ಷ ನಾಗರಾಜನಿಗೆ ಮದುವೆ ಮಾಡಿ ಬಿಡೋಣ ” ಎಂದರು.

ಪರಮಶಿವಯ್ಯನವರು ಖುಷಿಯಿಂದ “ ಅದಕ್ಕೇನೇ ಧಾರಾಳವಾಗಿ ಆಗಬಹುದು. ಹೆಣ್ಣಿನವರಿಗೇನು ನಾನು – ತಾನು ಎಂದು ಬರುತ್ತಾರೆ ” ಎಂದರು.

“ ಸರಿಯಾದ ಒಂದು ಸಂಬಂಧ ನೋಡೀಂದ್ರೇ ” ಭಾಗೀರಥಮ್ಮನವರು ಇಷ್ಟು ಹೇಳುತ್ತಿದ್ದಂತೆಯೇ ನಾಗರಾಜ ತಿನ್ನುತ್ತಿದ್ದ ತಿಂಡಿಯನ್ನು ಅಷ್ಟಕ್ಕೇ ಬಿಟ್ಟು ತಟ್ಟೆ ಯನ್ನು ಕೆಳಗಿಟ್ಟು ಅಮ್ಮಾ “ ಮದುವೆ ಸುದ್ದೀನೇ ಎತ್ತಬೇಡ ನಾನು ಈ ಜನ್ಮದಲ್ಲಿ ಮದುವೆ ಆಗೋಲ್ಲ” ಎಂದು ಹೇಳಿದವನೇ ಸಿಡಾರನೆ ಅಲ್ಲಿಂದ ಹೊರಟು ಹೋದ.

ಆಗ ಹೊರಗೆ ಹೋದವನು ಸಂಜೆಯುವರೆಗೂ ಮನೆಗೆ ಬರಲಿಲ್ಲ. ನಾಗರಾಜನ ಈ ರೀತಿಯ ವರ್ತನೆ ಮನೆಯವರಿಗೆ ಹೊಸದು. ಎಲ್ಲರಿಗೂ ಗಾಬರಿಯಾಯಿತು. ಯಾಕೆ ತಾನೇ ನಾವು ಮದುವೆ ಸುದ್ದಿ ಎತ್ತಿದೆವೋ ? ಗ್ರಹಚಾರಕ್ಕೆ, ಎನ್ನಿಸಿಬಿಟ್ಟಿತು ಅವರಿಗೆ.

ರವಿ ಅಣ್ಣನನ್ನು ಎಲ್ಲೆಲ್ಲೋ ಹುಡುಕಿದ. ಕಡೆಗೆ ಪಾರ್ಕಿನಲ್ಲಿ ಒಂದು ಕಲ್ಲು ಬೆಂಚಿನ ಮೇಲೆ ಕುಳಿತಿದ್ದುದನ್ನು ಕಂಡ. ರವಿ ಹತ್ತಿರ ಹೋದಾಗಲೂ ನಾಗರಾಜ ಎಲ್ಲೋ ಶೂನ್ಯದತ್ತ ನೋಡುತ್ತಾ ಕುಳಿತಿದ್ದ. ರವಿ ಅವನ ಹತ್ತಿರ ಹೋಗಿ "ಬಾ ಅಣ್ಣಾ ನಾವು ಯಾರೂ ಮಧ್ಯಾಹ್ನದಿಂದ ಊಟ ಮಾಡಿಲ್ಲ" ಎಂದ.

ರವಿ ಎಂದರೆ ಪ್ರಾಣ ನಾಗರಾಜನಿಗೆ .. ಗಾಬರಿಯಿಂದ ಹೌದೇನೋ, ನೀವು ಯಾಕೋ ಊಟ ಮಾಡ್ಲಿಲ್ಲ, ಏನೋ ಬೇಜಾರು ಅಂತ ಸ್ವಲ್ಪ ಹೆಚ್ಚು ಹೊತ್ತು ಇಲ್ಲೇ ಕುಳಿತುಬಿಟ್ಟೆ. ನಡಿ–ನಡಿ ಮೊದಲು ಊಟ ಮಾಡೋಣ ಎಂದ.

ಪಾಪ ! ಅಣ್ಣನ ಮನಸ್ಸಿಗೆ ಏನೋ ನೋವು, ಒಂದು ದಿನಕ್ಕಾದರೂ ಹೀಗೆ ಒಂಟಿಯಾಗಿ ಇದ್ದವನಲ್ಲ ಎನ್ನಿಸಿತು ರವಿಗೆ. ಅಣ್ಣಾ ಇನ್ನೆಂದೂ ಹೀಗೆ ಊಟ ಬಿಟ್ಟು ಹೋಗಬೇಡ ಎಂದು ಅತ್ತುಬಿಟ್ಟ.

ರವೀ ತಪ್ಪಾಯ್ತು ಕಣೋ ಇನ್ನೆಂದೂ ನಿನಗೆ ಬೇಜಾರು ಮಾಡೋಲ್ಲ. ಬಾ, ಮನೆಗೆ ಹೋಗೋಣ, ಎಂದು ಅವನೊಟ್ಟಿಗೆ ಮನೆಗೆ ಬಂದ.

ಮಕ್ಕಳಿಬ್ಬರೂ ಒಟ್ಟಿಗೆ ಮನೆಗೆ ಬಂದದ್ದು ನೋಡಿ ಭಾಗೀರಥಮ್ಮನವರಿಗೆ ನೆಮ್ಮದಿಯಾಯಿತು. ಸಧ್ಯ ಮಹರಾಯಾ ಬಂದ್ಯೇನೋ, ನಾನು ಇನ್ನು ನಿನ್ನ ಸುದ್ದೀಗೂ ಬರೋಲ್ಲಾಪ್ಪ ಬಾ, ಊಟ ಮಾಡು, ಎಂದರು ಭಾಗೀರಥಮ್ಮ ತುಂಬಾ ವ್ಯಸನದಿಂದ.

ನಾಗರಾಜನಿಗಾದರೂ ಮನೆಯವರನ್ನೆಲ್ಲಾ ನೋಯಿಸುತ್ತಿರುವ ಈಗಿನ ತನ್ನ ವಿಚಿತ್ರ ಸ್ವಭಾವಕ್ಕೆ ತನ್ನ ಮೇಲೆಯೇ ಕೋಪ ಬರುತ್ತಿತ್ತು. ನೂರು ಹರಕೆ ಹೊತ್ತು ನನ್ನನ್ನು ಪಡೆದ ತಂದೆ ತಾಯಿಯವರಿಗೆ ತಾನೊಂದು ಮುಳ್ಳಾದೆನಲ್ಲಾ ಎಂದು ಕೊರಗುತ್ತಿದ್ದ.

ಭಾಗೀರಥಮ್ಮನವರಿಗೆ ವಯಸ್ಸಾದ ಮೇಲೆ ಮಕ್ಕಳಾಯಿತು, ಮಕ್ಕಳು ಚಿಕ್ಕವರಾಗಿರುವಾಗಲೇ ಒಂದೊಂದು ದಿನ ಪರಮಶಿವಯ್ಯನವರು ಹೆಂಡತಿಯನ್ನು "ಲೇ.... ಭಾಗೂ – ಒಬ್ಬಳೇ ದುಡಿದು ದುಡಿದೂ ಸಾಕಾಗಿದ್ದೀ. ಮುಪ್ಪಿನ ಕಾಲಕ್ಕೆ ಇಬ್ಬರೂ ಸೊಸೇರು ಬರ್ತಾರೆ ಸುಮ್ಮನಿರು. ಹಾಯಾಗಿ ನಿನ್ನ ಮಂಚದ ಮೇಲೆ ಕೂರ್ಸಿ ಮಾಡ್ತಾರೆ" ಅನ್ನುತ್ತಿದ್ದರು.

ಸಧ್ಯ.... ಈಗಾಗಲೇ ಸೊಸೆ ಕನಸು ಕಂಡು ಬಿಟ್ರಾ ? ಇನ್ನು ಸೋ.... ಅನ್ನಲಿಲ್ಲ ಸೋಬಾನೆ.... ಅನ್ನಲಿಲ್ಲ ಅವನಿಗಿನ್ನೂ ಹತ್ತು ವರ್ಷ ತುಂಬಿಲ್ಲ. ಸೊಸೆ ಬರುವ ಕಾಲ ನೋಡಿಕೊಳ್ಳೋಣ ಎಂದು ತಮ್ಮ ಕೆಲಸದಲ್ಲಿ ತಾವು ತೊಡಗುತ್ತಿದ್ದರು.

ಹೀಗೆ ಇಬ್ಬರೂ ಮಕ್ಕಳ ಭವಿಷ್ಯದ ಮೇಲೆ ಆಶಾ ಕೋಟೆಯನ್ನು ಕಟ್ಟಿ ಅದರೊಳಗೆ ವಿಹರಿಸುತ್ತಿದ್ದರು. ಕಲ್ಪನೆಯ ಕನಸನ್ನು ಕಾಣುತ್ತಿದ್ದರು.

ಎರಡು ಮಕ್ಕಳನ್ನು ಎರಡು ಕಣ್ಣಾಗಿ ಕಾಪಾಡುತ್ತಿದ್ದರು, ಅವರ ಕನಸು ನನಸಾಗುವ ಕಾಲಕ್ಕೆ ಅವರ ಆಶಾ ಕೋಟೆಯಲ್ಲಿ ಏನೋ ಒಂದು ಬಿರುಕು ಕಾಣು ವಂತಾಯಿತು. ಅದು ತಮ್ಮ ಮುದ್ದು ಮಗ ಮದುವೆಯೇ ಆಗುವುದಿಲ್ಲವೆಂಬ ನಿರ್ಧಾರ. ಮಗನಿಗೆ ಒಂದು ಕೆಲಸ ಸಿಕ್ಕಿದ ಕೂಡಲೆ ಮದುವೆ ಮಾಡಬೇಕೆಂದು ಕಾತುರರಾಗಿದ್ದ ಅವರು ಮಗನಿಗೆ ಕೆಲಸ ಸಿಕ್ಕಿ ಮೂರು ವರ್ಷವಾದರೂ ಸೊಸೆಯನ್ನು ಕಾಣಲು ಸಾಧ್ಯವಾಗಲಿಲ್ಲ.

ನಾಗರಾಜನ ಈ ನಿರ್ಧಾರದಿಂದ ತಂದೆ ತಾಯಿಯರಿಬ್ಬರೂ ಕಂಗಾಲಾದರು. ಕಾರಣ ತಿಳಿಯದೆ ಕಣ್ಣೀರಿಟ್ಟರು. ನಯ ಭಯಗಳಿಂದ ಅವನ ಮನ ಒಲಿಸಲು ಪ್ರಯತ್ನಿಸಿ ಸೋತರು. ಮದುವೆಯ ಮಾತೆತ್ತಿದರೆ ಮಗ ಮನೆಗೆ ಬರುವುದನ್ನೇ ನಿಲ್ಲಿಸುತ್ತಿದ್ದ. ಆ ಭಯಕ್ಕೆ ಸುಮ್ಮನಿದ್ದರು.

ನಾಗರಾಜ ಸುಂದರ ಯುವಕ, 25 ರ ಪ್ರಾಯ ಆಕರ್ಷಕವಾದ ನಿಲುವು, ದೃಢಕಾಯ, ಬ್ಯಾಂಕಿನಲ್ಲಿ ಕೆಲಸ, ಮನೆಯಲ್ಲಿ ಯಾವ ತಂಗು ತೊಡಕೂ ಇಲ್ಲ.

ವರನ ಬೇಟೆಯಲ್ಲಿ ಅಲೆದಾಡುತ್ತಿರುವ ಯಾವ ಹೆಣ್ಣಿನ ಮನೆಯವರು ತಾನೇ ಇಂತಹ ವರನನ್ನು ಬಿಟ್ಟಾರು ?

ಅನೇಕರು ಬಂದು ನಾನಾ ಬಗೆಯಲ್ಲಿ ಬಲೆ ಬೀಸಿದರು. ವರದಕ್ಷಿಣೆ ಆಸೆಗೂ ಇಲ್ಲ, ಹುಡುಗಿಯ ರೂಪ ಲಾವಣ್ಯವೂ ಆತನ ಮನಸ್ಸನ್ನು ವಿಚಲಿತಗೊಳಿಸಲಿಲ್ಲ.

ಅವನು ಬಹಳ ಬೇಸರದಿಂದ ಹೇಳುತ್ತಿದ್ದ, "ಅಮ್ಮಾ, ನಮ್ಮ ಮನೆಗೆ ಯಾವ ಹೆಣ್ಣಿನವರೂ ಸುಳಿಯುವುದೇ ಬೇಡ ನಾನು ಈ ಮನೆಯಲ್ಲಿ ಉಳಿಯಬೇಕೆಂದಿದ್ದರೆ ನೀನು ನನ್ನ ಮದುವೆ ಸುದ್ದಿ ಎತ್ತಬೇಡಮ್ಮಾ" ಎನ್ನುತ್ತಿದ್ದ.

ಯಾವುದರಲ್ಲಿಯೂ ತಮ್ಮ ಮನಸ್ಸನ್ನು ನೋಯಿಸದ ಮಗ ಈ ಮದುವೆ ವಿಷಯದಲ್ಲಿ ಏಕೆ ಹೀಗಾಡುತ್ತಾನೆ ? ಎಂಬುದೇ ಅವರಿಗೆ ಬಿಡಿಸಲಾರದ ಒಗಟಾಗಿತ್ತು.

ಭಾಗೀರಥಮ್ಮ ಇದೇ ಕೊರಗಿನಲ್ಲಿ ಕೃಶವಾಗತೊಡಗಿದರು. ತಂದೆ ಪರಮ ಶಿವಯ್ಯನವರು ಸೊಸೆ ಮನೆ ತುಂಬಿ ಬರುವ ಹಂಬಲವನ್ನಿಟ್ಟುಕೊಂಡಿದ್ದು ಮಗನ ಮೂರ್ಖತನವನ್ನು ಸಹಿಸಲಾರದೆ ಪ್ರೀತಿಸುತ್ತಿದ್ದ ಮಗನನ್ನು ದ್ವೇಷಿಸತೊಡಗಿದರು.

ರವಿ ಎಷ್ಟೋ ಸಲ ಅಣ್ಣನನ್ನು ತಮಾಷೆ ಮಾಡುತ್ತಾ "ಅಣ್ಣಾ, ನಿನಗೆ ಹೆಂಡತಿ ಬೇಡದಿದ್ದರೆ ಹೋಗಲಿ, ನನಗೆ ಅತ್ತಿಗೆ ಬೇಕು, ಬೇಗ ಮದುವೆ ಆಗಣ್ಣಾ" ಎನ್ನುತ್ತಿದ್ದ.

ಮನೆಯ ಈ ಪರಿಸ್ಥಿತಿಯನ್ನು ಎದುರಿಸಲಾರದೇ ನಾಗರಾಜ ಸೋತು ಹೋದ. ಹಾಗೂ ತಾಯಿಗೆ ಹೇಳಿದ, ಅಮ್ಮಾ ನನಗೆ ಮದುವೆ ಬೇಡ, ಮೊದಲು ರವೀಗೆ ಮಾಡಿ ಬಿಡಮ್ಮಾ, ನಿನ್ನ ಆಸೆಯಂತೆ ಸೊಸೆ ಮನೆಗೆ ಬಂದರೆ ಆಯಿತಲ್ಲಾ" ಎಂದ.

ಈ ಮಾತು ಭಾಗೀರಥಮ್ಮನವರ ಎದೆಗೆ ಬಾಣ ನೆಟ್ಟಂತಾಯಿತು. "ಅಲ್ಲಾ ಕಣೋ ನಾಗರಾಜ, ನೀನು ಯಾವ ಮಠಕ್ಕೆ ಸನ್ಯಾಸಿ ಆಗಬೇಕೂಂತ ಇದೀಯಪ್ಪ ? ಅದನ್ನಾದರೂ ಹೇಳಿಬಿಡು ಮಹರಾಯ, ನಮ್ಮ ಹೊಟ್ಟೆ ಯಾಕೆ ಹೀಗೆ ಉರಿಸು ತ್ತೀಯಾ ? ಇನ್ನೂ ಕಾಲೇಜಿನಲ್ಲಿ ಓದುತ್ತಾ ಇರೋ ರವಿಗೆ ಮದುವೆ ಮಾಡಿ ಅಂತೀಯಲ್ಲಾ, ನಿನ್ನ ಮಾತಿಗೆ ಯಾರಾದರೂ ನಗೋಲ್ಲವೇನೋ ? ಎಂದರು.

ಈ ಮಾತನ್ನು ಕೇಳಿಸಿಕೊಳ್ಳುತ್ತಲೇ ಇದ್ದ ಪರಮಶಿವಯ್ಯನವರು ಕೋಪದಿಂದ, "ಲೇ, ನಿನಗೆ ಎಷ್ಟು ಸಲ ಹೇಳ್ತಿದ್ದೀನಿ ಅವನ ಮದುವೆ ಸುದ್ದಿ ಈ ಮನೆಯಲ್ಲಿ ಎತ್ತ ಬೇಡ ಎಂದು. ನಾನು ಅವನಿಗೆ ಮದುವೇನೂ ಮಾಡೋಲ್ಲ. ತಿಥೀನೂ ಮಾಡೋಲ್ಲ. ಈ ಮೂರ್ಖನಿಗೆ ಯಾವೋಳು ಗಂಟು ಬಿದ್ದಿದ್ದಾಳೋ, ಅವಳ ಜೊತೆಯೋ ನೇಣ್ ಎತ್ತಿಕೊಂಡು ಸಾಯಲಿ.... ನಾಲ್ಕು ಜನರ ಮಧ್ಯೆ ನಮ್ಮ ಬಾಳು ನಗೆಗೀಡಾಯಿತು ಈ ಪಾಪಿಯಿಂದ" ಎಂದು ಹಣೆ ಹಣೆ ಬಡಿದುಕೊಂಡು ಮನೆಯಿಂದ ಹೊರಗೆ ಹೊರಟು ಹೋದರು.

ತಂದೆ ಈ ರೀತಿ ಎಂದೂ ತನ್ನನ್ನು ಬೈದಿರಲಿಲ್ಲ. "ಯಾವೋಳು ಗಂಟು ಬಿದ್ದಿದ್ದಾಳೋ" ಎನ್ನುವ ಮಾತು ಸಾವಿರ ಚೇಳುಗಳು ಕುಟುಕಿದಷ್ಟು ನಾಗರಾಜನ ಮನಸ್ಸಿಗೆ ನೋವಾಯಿತು. ಒಂದೇ ಬಾರಿಗೆ ಬರಸಿಡಿಲು ಬಡಿದಂತಾಯಿತು. ಎರಡು ಕೈಗಳಿಂದಲೂ ತಲೆಯನ್ನು ಭದ್ರವಾಗಿ ಹಿಡಿದುಕೊಂಡು ಒಂದು ಬಾರಿ ತಲೆ ಕೊಡವಿದ. ಆ ವಾಗ್ಬಾಣವನ್ನು ಎದೆಯಲ್ಲಿ ನೆಟ್ಟು ನೋವನ್ನು ಸಹಿಸಿದ.

ಮನದಲ್ಲಿ, ದಹಿಸುವ ಜ್ವಾಲೆ ಮುಖದಲ್ಲಿ ಹೊರಬಿತ್ತು. ಅಮ್ಮಾ .... ಎಂದು ಚೀರಿ ಸುಮ್ಮನಾದ, ತಂದೆಗೆ ಏನೊಂದು ಉತ್ತರವನ್ನೂ ಹೇಳದೆ ಮೌನವಾಗಿ ತಲೆ ತಗ್ಗಿಸಿ ರೂಮಿನತ್ತ ನಡೆದ.

ಮಗನ ಗುಣದಲ್ಲಿ ನಂಬಿಕೆಯಿದ್ದ ಭಾಗೀರಥಮ್ಮ, ನಾಗರಾಜನ ಸಂಕಟವನ್ನು ಅರ್ಥಮಾಡಿಕೊಂಡರು. ಅವನ ಮನಸ್ಸಿಗೆ ತುಂಬಾ ನೋವಾಗಿದೆ ಎಂದು ತಾಯಿ ಹೃದಯ ತಳಮಳಿಸಿತು. ನಾಗರಾಜನ ಹಿಂದೆಯೇ ಅವನ ರೂಮಿಗೆ ಹೋಗಿ ಅವನನ್ನು ಸಂತೈಸುತ್ತಾ, "ಬಿಡೋ ನಾಗರಾಜ, ಅವರ ಕೋಪ ಈವತ್ತು ಹೊಸದೇ ? ಕೋಪದಲ್ಲಿ ಏನೋ ಒಂದು ಹೇಳಿ ಬಿಡುತ್ತಾರೆ. ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳ ಬೇಡಪ್ಪಾ" ಎಂದು ಸಮಾಧಾನ ಮಾಡುತ್ತಾ ಅಲ್ಲೇ ಕುರ್ಚಿಯ ಮೇಲೆ ಕುಳಿತು ಕೊಂಡರು.

ನಾಗರಾಜ ತನ್ನ ಮಂಚದ ಮೇಲೆ ಮೌನವಾಗಿ ತಲೆ ತಗ್ಗಿಸಿ ಕುಳಿತಿದ್ದ. ಅವನ ಮುಖದ ಭಾವನೆ ಏನೋ ವೇದನೆ ಪಡುವಂತಿತ್ತು. ಅವನ ಮುಖವನ್ನು ನೋಡಿ ಭಾಗೀರಥಮ್ಮನವರ ಕರುಳೇ ಕಿತ್ತುಬರುವಂತಾಯಿತು. ಅವರ ಕಣ್ಣಲ್ಲಿ ಬಳಬಳನೆ

ನೀರು ಹರಿಯಿತು. ಕುರ್ಚಿಯಿಂದ ಎದ್ದು ಮಗನ ಬೆನ್ನಿನ ಮೇಲೆ ಪ್ರೀತಿಯಿಂದ ನೇವರಿಸುತ್ತಾ "ರಾಜೂ ನಿನಗೆ ಏನಾಗಿದೆಯಪ್ಪಾ, ತಾಯಿಯ ಬಳಿಯಲ್ಲಿ ನಿನಗೆ ಸಂಕೋಚವೇ ? ನೀನಿನ್ನೂ ನನ್ನ ತೊಡೆಯಲ್ಲಾಡುವ ಮಗು ಎಂದು ನಾನು ತಿಳಿದಿದ್ದೇನೆ ಕಣೋ.... ಹೇಳು, ಹಾಗೆ ನಿನಗೆ ಯಾವ ಹುಡುಗಿಯ ಮೇಲಾದರೂ ಪ್ರೀತಿಯಿದ್ದರೆ ಖಂಡಿತ ಅವಳನ್ನೇ ತಂದು ನಿನಗೆ ಮದುವೆ ಮಾಡುತ್ತೇವೆ. ನನ್ನಲ್ಲಿ ಮುಚ್ಚು ಮರೆ ಮಾಡಬೇಡ" ಎಂದು ಗೋಗರೆದು ಕೇಳಿದರು ಭಾಗೀರಥಮ್ಮ.

ತಾಯಿಯ ಕಣ್ಣಲ್ಲಿ ಒಂದು ತೊಟ್ಟು ನೀರು ಬಂದರೂ ನೋಡಿ ಸಹಿಸದ ನಾಗರಾಜ ಈಗ ತನಗಾಗಿ ಅಮ್ಮ ಗೋಳಾಡುತ್ತಿರುವುದು ಅವನಿಗೆ ಅತೀವ ನೋವನ್ನುಂಟುಮಾಡಿತು.

ಅಮ್ಮಾ , ನೀನು ಅಳಬೇಡ. ಇದೋ ನೋಡು ನಿನ್ನ ಪಾದದಾಣೆಗೂ ನಾನು ಯಾವ ಹೆಣ್ಣನ್ನೂ ಪ್ರೀತಿಸಿಲ್ಲ, ಎಂದು ತಾಯಿಯ ಪಾದವನ್ನು ಮುಟ್ಟಿ ಕಣ್ಣಿಗೊತ್ತಿ ಕೊಂಡ.

ಭಾಗೀರಥಮ್ಮನವರ ದುಃಖ ಇನ್ನೂ ಉಕ್ಕಿಬಂತು. ಇಂಥ ಅಪರಂಜಿಯಂಥಾ ಮಗನನ್ನು ಅನ್ಯಾಯವಾಗಿ ಅಂದರಲ್ಲಾ ; ಎಂದು ಮಗನ ತಲೆ ನೇವರಿಸುತ್ತಾ "ಗೊತ್ತು ಕಣೋ ರಾಜಾ, ನನ್ನ ಮಗು ಅಪ್ಪಟ ಬಂಗಾರ ಎಂದು, ಅವರು ಅಂದಿದ್ದೆಲ್ಲಾ ನಾನು ನಂಬುತ್ತೇನೆಯೇನೋ ?" ಅಂದರು.

ನಾಗರಾಜನ ಮುಖದಲ್ಲಿ ಒಂದು ನಿರ್ಧಾರ ಮೂಡಿದಂತಿತ್ತು. ದೃಢವಾದ ಸ್ವರದಲ್ಲಿ ಅಮ್ಮಾ , ನಾನು ಮದುವೆಯಾಗುತ್ತೇನೆ, ನಿಮಗೆ ಇಷ್ಟಬಂದ ಹುಡುಗಿ ಯನ್ನು ತಂದು ಮದುವೆ ಮಾಡಿ ನಾನು ಖಂಡಿತ ಬೇಡ ಎನ್ನುವುದಿಲ್ಲವಮ್ಮಾ , ಎಂದ.

ಭಾಗೀರಥಮ್ಮನವರಿಗೆ ಸ್ವರ್ಗವೇ ಕೈಗೆ ಸಿಕ್ಕಿದಷ್ಟು ಸಂತೋಷವಾಯಿತು. ಕಣ್ಣೀರನ್ನು ಸೆರಗಿನಲ್ಲಿ ಒರೆಸಿಕೊಳ್ಳುತ್ತಾ, "ನನ್ನ ಕಂದಾ, ನೂರು ಕಾಲ ಚೆನ್ನಾಗಿ ಬಾಳೋ.... ಅದಕ್ಕೇನು ನೀನು ಒಪ್ಪಿದ ಹುಡುಗಿಯನ್ನೇ ಮಾಡೋಣ ಕಣೋ" ಎಂದವರೇ ಸಂತೋಷದಿಂದ ಹೊರಕ್ಕೆ ಬಂದರು. ಅವರ ಮೈಯಲ್ಲಿ ನವಚೈತನ್ಯ ಹರಿದಾಡಿತು. ಸೊರಗಿದ್ದ ಮುಖ ಅರಳಿದ ಹೂವಂತಾಯಿತು.

ಸಧ್ಯ ಮಗನ ಬಾಯಿಂದ "ಮದುವೆ ಆಗುತ್ತೇನೆ" ಎಂಬ ಮಾತು ಬಂತಲ್ಲಾ, ಸಾಕು ಮದುವೆಯಾಗಿ ಸಂಸಾರಿಯಾದರೆ ತಾನೇ ಸರಿಹೋಗುತ್ತಾನೆ" ಎಂದುಕೊಂಡರು.

ಇವತ್ತು ಭಾಗೀರಥಮ್ಮನವರಿಗೆ ಖುಷಿಯೋ ಖುಷಿ ಸಧ್ಯ ಯಜಮಾನರು ಸಿಟ್ಟಿನಿಂದ ಹೊರಗೆ ಹೋಗಿದ್ದಾರೆ ಅವರು ಬರುವ ವೇಳೆಗೆ ಅವರಿಗಿಷ್ಟವಾದ ತಿಂಡಿ ಯನ್ನು ಮಾಡೋಣ ಎಂದು ಅಡಿಗೆಮನೆಗೆ ಹೋದರು.

ಮನುಷ್ಯನಿಗೆ ಸಂತೋಷ ಎನ್ನುವುದು ಟಾನಿಕ್ ಇದ್ದ ಹಾಗೆ ಎಲ್ಲಿಲ್ಲದ ಶಕ್ತಿ ಭಾಗೀರಥಮ್ಮನಿಗೆ ಈ ದಿನ ಬಂದುಬಿಟ್ಟಿತು. ಬಾಳೇಕಾಯಿ ಬೋಂಡಾ ಕರಿದು, ಸಿಹಿಗಾಗಿ ಕೊಬ್ಬರಿ ಮಿಠಾಯಿ ಮಾಡಿಟ್ಟರು.

ಆ ವೇಳೆಗೆ ರವಿಯೂ ಕಾಲೇಜಿನಿಂದ ಬಂದ. ಹೊರಗಿನಿಂದ ಬರುತ್ತಿದ್ದಂತೆಯೇ ಅವನ ಮೂಗಿಗೆ ಬೋಂಡಾ ಘಮ–ಘಮ ವಾಸನೆ ಬರುತ್ತಿತ್ತು. ಈ ನಡುವೆ ಭಾಗೀರಥಮ್ಮನವರಿಗೆ ಕೈಲಾಗದ ದಿನಗಳಿಂದ ಮನೆಯಲ್ಲಿ ತಿಂಡಿಯೇ ಅಪರೂಪವಾಗಿ ಬಿಟ್ಟಿತ್ತು. ರವಿ ನೇರ ಅಡಿಗೆಮನೆವರೆಗೂ ಬಂದವನೇ "ಅಮ್ಮಾ, ಏನೂ ಇವತ್ತು ಘಮ–ಘಮ ತಿಂಡಿ ವಾಸನೆ ?" ಎಂದ.

ಬಾ ರವಿ ಕೈ ಕಾಲು ತೊಳೆದುಕೊಂಡು, ರಾಜೂನೂ ಕರಿ ತಿಂಡಿ ಕೊಡ್ತೀನಿ ಅಂದರು ಭಾಗೀರಥಮ್ಮ.

ರವಿ ಒಂದೇ ನೆಗೆತಕ್ಕೆ ಬಚ್ಚಲು ಮನೆಗೆ ಹೋಗಿ ಕೈಕಾಲು ತೊಳೆದುಕೊಂಡು ಬಂದ. ಆ ವೇಳೆಗೆ ನಾಗರಾಜನೇ ರೂಮಿನಿಂದ ಹೊರಕ್ಕೆ ಬಂದು "ಬಾ ರವಿ, ತಿಂಡಿ ತಿಂದು ಹಾಗೇ ಕಬ್ಬನ್ ಪಾರ್ಕಿನವರೆಗೆ ಹೋಗಿ ತಿರುಗಾಡಿಕೊಂಡು ಬರೋಣ" ಎಂದ.

ರವಿಗೆ ಆಶ್ಚರ್ಯವೋ ಆಶ್ಚರ್ಯ. "ಅಮ್ಮ ತಿಂಡಿ ಮಾಡಿದಾಳೆ" ಸಪ್ಪೆ ಯಾಗಿದ್ದ ಅಣ್ಣ ಈ ದಿನ ಸ್ವಲ್ಪ ಗೆಲುವಾಗಿದಾನೆ ಏನೋ ವಿಶೇಷ ಇರಬೇಕು ಎಂದು ಕೊಂಡ.

ಭಾಗೀರಥಮ್ಮನವರು ಎರಡು ತಟ್ಟೆಯಲ್ಲೂ ತುಂಬ ಬೋಂಡಾ ಮಿಠಾಯಿ ಯನ್ನು ಮಕ್ಕಳ ಕೈಗೆ ಕೊಟ್ಟರು. ಇಬ್ಬರೂ ಏನೇನೋ ಕಾಲೇಜು ವಿಷಯ ಮಾತನಾಡುತ್ತಾ ಖುಷಿಯಿಂದಲೇ ತಿಂಡಿ ತಿಂದರು. ಭಾಗೀರಥಮ್ಮನವರು ಮಕ್ಕಳು ಸಾಕು ಎನ್ನುವವರೆಗೂ ಮತ್ತೆ ಮತ್ತೆ ತಟ್ಟೆಗೆ ಹಾಕಿದರು.

ರಾಜು–ರವಿ ಇಬ್ಬರೂ ತಿರುಗಾಡಿಕೊಂಡು ಬರಲು ಹೊರಗೆ ಹೋದರು. ಭಾಗೀರಥಮ್ಮನವರು ದೇವರಿಗೆ ದೀಪ ಹಚ್ಚಿ ಕೈಮುಗಿದು ಯಜಮಾನರು ಬರುವು ದನ್ನೇ ಕಾಯುತ್ತಾ ಕುಳಿತುಕೊಂಡರು.

ಪರಮಶಿವಯ್ಯನವರು ಸಂಜೆ 7 ಗಂಟೆ ವೇಳೆಗೆ ಮನೆಗೆ ಬಂದರು. ಬಂದವರೇ ನೇರ ತಮ್ಮ ರೂಮಿಗೆ ಹೋಗಿ ಡ್ರೆಸ್ ಬಿಚ್ಚಿ ಪಂಚೆ ಉಟ್ಟು ಕೈಕಾಲು ತೊಳೆಯಲು ನೇರ ಬಚ್ಚಲು ಮನೆಗೆ ಹೋದರು. ಅವರ ಮುಖವನ್ನು ನೋಡಿಯೇ ಅವರು ಇನ್ನೂ ಗರಂ ಆಗಿದಾರೆ ಎಂದು ಭಾಗೀರಥಮ್ಮನವರಿಗೆ ಗೊತ್ತು.

ಅವರು ಬಚ್ಚಲ ಮನೆಯಿಂದ ಬರುತ್ತಿದ್ದಂತೆಯೇ ನಿಧಾನವಾಗಿ "ಬನ್ನೀಂದ್ರೇ ಇಲ್ಲೇ ಕುಳಿತುಕೊಳ್ಳಿ, ಇಲ್ಲಿಗೇ ಕಾಫಿ ತಿಂಡಿ ತರ್ತೀನಿ" ಎಂದರು ಭಾಗೀರಥಮ್ಮ.

ಹಾಲಿನಲ್ಲಿ ಹಾಕಿದ್ದ ಸೋಫಾ ಮೇಲೆ ಪರಮಶಿವಯ್ಯ ಕುಳಿತರು. ಭಾಗೀರಥಮ್ಮ ತಟ್ಟೆ ತುಂಬ ಬೋಂಡ, ಮಿಠಾಯಿ, ಬಿಸಿ–ಬಿಸಿ ಕಾಫಿ ತಂದು ಯಜಮಾನರಿಗೆ ಕೊಟ್ಟರು.

ಮೌನವಾಗಿ ಗರಿ–ಗರಿ ಬೋಂಡಾ ತಿಂದು ಬಿಸಿ ಕಾಫಿ ಕುಡಿದ ಮೇಲೆ ಪರಮಶಿವಯ್ಯನವರು ಸ್ವಲ್ಪ ತಣ್ಣಗಾಗಿ "ಇದೇನೇ ಭಾಗೂ ಇವತ್ತು ? ನಿನ್ನ ಕೈಲಾಗದೇ ಇದ್ದಾಗ ಇದೆಲ್ಲಾ ಯಾಕೆ ಮಾಡಿದೆ" ಎಂದರು.

ಅಯ್ಯೋ, ಬಿಡಿ, ಕೈಲಾಗದೆ ನನಗೇನಾಗಿದೆ ಹೇಳಿ, ಇವತ್ತು ಒಂದು ಸಂತೋಷದ ಸುದ್ದಿ ನಿಮಗೆ ಹೇಳಬೇಕೂ ಅಂತ ಕಾದಿದ್ದೆ, ಅಂದ್ರು ಭಾಗೀರಥಮ್ಮ.

ಇನ್ನೆಂಥಾದ್ದೇ ಸಂತೋಷದ ಸುದ್ದಿ ನಮ್ಮ ಬಾಳೇ ಗೋಳಾಗಿರುವಾಗ ಸಂತೋಷ ಎಲ್ಲಿ ಬಂತು ? ಅಂದರು.

ಇಲ್ಲಾಂದ್ರೇ, ದೇವರು ಕಣ್ಣು ತೆರೆದು ನೋಡಿದರೆ ಎಷ್ಟರಲ್ಲಿದೆ, ಕಷ್ಟ ಪರಿಹಾರ ಆಗೋದು, ಇಲ್ಲಿ ಕೇಳಿ ನಮ್ಮ ನಾಗರಾಜ– ಮದುವೆಗೆ ಒಪ್ಪಿದ್ದಾನೆ ಅಂದ್ರೇ, ಅಂದ್ರು ಸಂತೋಷದಿಂದ ಭಾಗೀರಥಮ್ಮ.

ಆ ಮಾತು ಕಿವಿಗೆ ಬಿದ್ದ ಕೂಡಲೇ ಪರಮಶಿವಯ್ಯನವರು ಕಣ್ಣಲ್ಲಿ ಕಿಡಿ ಕಾರುತ್ತಾ, ಕೋಪದಿಂದ ಲೇ, ಇನ್ನೊಂದು ಸಲ ನನ್ನ ಮುಂದೆ ಅವನ ಮದುವೆ ಸುದ್ದಿ ಎತ್ತಬೇಡ, ತಿಳೀತೋ ? ಎಂದರು.

ಭಾಗೀರಥಮ್ಮನವರಿಗೆ ಪತಿಯ ಕೋಪ ಎಂಥಾದ್ದು ಎಂದು ಚೆನ್ನಾಗಿ ಗೊತ್ತು. ಪೋಲೀಸ್ ಇಲಾಖೆಯಲ್ಲಿ ಇದ್ದ ಅವರು ಖೈದಿಗಳಿಗೆ ಕೊಡುವಂಥಾ ಶಿಕ್ಷೆಯನ್ನು ಮನೆಯವರಿಗೂ ಕೊಟ್ಟಿದ್ದುಂಟು. ಈಗಲೂ ಅವರಿಗೆ ಕೋಪ ಬಂದ ಸಮಯದಲ್ಲಿ ಭಾಗೀರಥಮ್ಮ ಎದುರಿಗೇ ನಿಲ್ಲುತ್ತಿರಲಿಲ್ಲ.

ಭಾಗೀರಥಮ್ಮ ಸ್ವಲ್ಪ ಹೊತ್ತು ಏನೂ ಮಾತಾಡಲಿಲ್ಲ ಸುಮ್ಮನಿದ್ದರು. ನಂತರ ನಿಧಾನವಾಗಿ "ಅಲ್ಲಾಂದ್ರೆ, ಅವನು ಮದುವೆ ಆಗ್ತೀನಿ ಅಂತ ಒಪ್ಪಿರೋದೇ ಕಷ್ಟ. ಅಂಥಾದ್ದರಲ್ಲಿ ಈಗ ನೀವು ಮನಸ್ಸು ಮಾಡದಿದ್ದರೆ ಹೇಗೇಂದ್ರೇ ?"

"ಲೇ ಭಾಗೂ.... ನಿನಗೆ ಸ್ವಲ್ಪವೂ ಬುದ್ಧಿ ಇಲ್ಲಾ ಕಣೇ. ಮಣ್ಣು ಕುಂಡೆ ನೆಚ್ಚಿಕೊಂಡು ಹೊಳೆ ಹಾರಿದ್ರೂ" ಅಂತಾರಲ್ಲ ಗಾದೆ ಅದರಂತೆ ಆಯ್ತು, ಅವನ ಮಾತು ಕಟ್ಟಿಕೊಂಡು ಯಾರಾದರೂ ಹೆಣ್ಣಿನವರನ್ನು ಕರೆಸಿ ಮುಖಕ್ಕೆ ಮಸಿ ಬಳಿಸಿ ಕೊಳ್ಳಬೇಕು ಅಷ್ಟೆ. ಒಂದು ಸಾರಿ ಆಗಿದ್ದು ಸಾಲ್ದಾ ? ಎಂದರು.

ಭಾಗೀರಥಮ್ಮನವರಿಗೆ ಸ್ವಲ್ಪ ಹೊತ್ತು ಏನೂ ತೋಚದಂತಾಯ್ತು. ನಿಜ ಅವರು ಹೇಳುವ ಮಾತೂ, ಈಗ್ಗೆ ಕೆಲವು ತಿಂಗಳ ಹಿಂದೆ ಪರಮಶಿವಯ್ಯನವರ

ಸ್ನೇಹಿತರು ಒಬ್ಬರು ಬಹಳ ಹಣವಂತರು, ಅಷ್ಟೇ ಗುಣವಂತರೂ ಕೂಡ. ಅವರಿಗೆ ಒಬ್ಬಳೇ ಮಗಳು 'ರಂಜಿನಿ'. ಹುಡುಗಿ ಎಲ್ಲಾ ವಿಷಯದಲ್ಲೂ ಮೆಚ್ಚುವಂತಿತ್ತು. ಅವರು ತಮ್ಮ ಮಗಳನ್ನು ನಿಮ್ಮ ಮಗನಿಗೆ ಮಾಡಿಕೊಂಡು ನಮ್ಮ ಸಂಬಂಧ ಬೆಳಸಿ ಎಂದು ಪರಮಶಿವಯ್ಯನವರನ್ನು ಕೇಳಿಕೊಂಡರು.

ಆಗಲಿ ನನಗೂ ಸಂತೋಷ, ನನ್ನ ಮಗ ನನಗೆ ಎಂದೂ ಎದುರು ಮಾತನಾಡಿದವನಲ್ಲ. ನಿಮ್ಮ ಮಗಳನ್ನು ಒಂದು ದಿನ ಕರೆದುಕೊಂಡು ಬಂದು ಅವನಿಗೆ ತೋರಿಸಿದರಾಯಿತು. ನಿಮ್ಮ ಹುಡುಗಿಯನ್ನು ಒಪ್ಪದೆ ಏನು ಮಾಡುತ್ತಾನೆ ನೀವು ಮದುವೆ ಸಿದ್ಧತೆ ಮಾಡಿಕೊಳ್ಳಿ ಎಂದು ಭರವಸೆ ಕೊಟ್ಟುಬಿಟ್ಟರು.

ಒಂದು ದಿನ ನಾಗರಾಜ ಬ್ಯಾಂಕಿನಿಂದ ಮನೆಗೆ ಬರುವ ವೇಳೆಗೆ ಹೆಣ್ಣಿನವರು ಹುಡುಗಿಯನ್ನು ಕರೆದುಕೊಂಡು ಬಂದಿದ್ದರು. ನಾಗರಾಜನಿಗೆ ಇದೊಂದೂ ಗೊತ್ತಿಲ್ಲ. ತನ್ನನ್ನು ಒಂದು ಮಾತೂ ಕೇಳದೆ ತಂದೆ ತಾಯಿ ಇದೆಲ್ಲಾ ಏರ್ಪಾಡು ಮಾಡುತ್ತಿರುವುದು ನೋಡಿ ನಾಗರಾಜ ಭೀತಿಯಿಂದ ತತ್ತರಿಸಿ ಹೋದ. ಅಮ್ಮನನ್ನು ಹತ್ತಿರ ಕರೆದು ಇದೆಲ್ಲಾ ಏನು ? "ನಾನು ಮದುವೆಯಾಗುವುದಿಲ್ಲ" ಎಂದು ಎಷ್ಟೋ ಸಾರಿ ನಿನ್ನ ಬಳಿ ಹೇಳಿದ್ದೇನೆ, ಆದರೂ ಹೆಣ್ಣಿನವರನ್ನು ಏಕೆ ಬರಮಾಡಿದಿರಿ ?

ತಾಯಿಗೆ ಜಂಘಾಬಲವೇ ಉಡುಗಿದಂತಾಯ್ತು. ಇದೇನೋ ರಾಜು ಮದುವೆಗೆ ಅವರು ಎಲ್ಲಾ ಏರ್ಪಾಡು ಮಾಡಿಕೊಂಡಿದ್ದಾರೆ, ನಿನ್ನ ಒಪ್ಪಿಗೆ ಆದ ಕೂಡಲೇ ಲಗ್ನ ಪತ್ರಿಕೆ ಮಾಡಬೇಕೆಂದಿದಾರಲ್ಲೋ"

ನಾನು ಒಪ್ಪಿಗೆ ಕೊಟ್ಟರೆ ತಾನೇ ? ನಾನು ಖಂಡಿತ ಮದುವೆ ಆಗೋಲ್ಲಾಮ್ಮ....

ಈ ಮಾತು ಪೂರ್ತಿಯಾಗುತ್ತಿದ್ದಂತೆಯೇ ಪರಮಶಿವಯ್ಯನವರು ಅಲ್ಲಿಗೆ ಬಂದರು. ಏನೋ ಅದು ರಾಜಾ.... ಹುಡುಗಿ ಒಪ್ಪಿಗೆ ಆಗಲಿಲ್ಲವೇನೋ ? ಎಂದರು.

"ಅದಲ್ಲಪ್ಪ.... ನನಗೆ.... ಈಗ ಮದುವೆ ಬೇಡ" ಎಂದು ತಲೆ ತಗ್ಗಿಸಿ ನಿಧಾನವಾಗಿ ಹೇಳಿದ.

ಈ ಮಾತನ್ನು ಕೇಳಿದ್ದೇ ಬೆಂಕಿಯ ಕಿಡಿಯಾದರು ಪರಮಶಿವಯ್ಯನವರು. ಏನೋ ಅದು ? ನನಗೆ ಎದುರು ಮಾತಾಡುವಂತಾದೆಯೋನೋ ? ನಾನು ಅವರಿಗೆ ಮಾತು ಕೊಟ್ಟಿದ್ದೇನೆ. ಮೂರ್ಖ.... ಈಗ ನೀನು ನನ್ನ ಗೌರವವನ್ನೇ ಹಾಳು ಮಾಡುತ್ತಿದ್ದೀಯಾ ? ಅಷ್ಟಕ್ಕೂ ಏತಕ್ಕಾಗಿ ಬೇಡಾ ಅಂತೀಯಾ ? ಅದನ್ನಾದರೂ ಹೇಳು" ಎಂದು ಗದರಿಸಿದರು.

ನಾಗರಾಜ ತಂದೆಗೆ ಎಂದೂ ಎದುರಾಡಿದವನಲ್ಲ. ಅವರ ಸಿಂಹ ಗರ್ಜನೆಗೆ ತತ್ತರಿಸಿ ಹೋದ. ಆದರೂ ಅಚಲನಾಗಿ ಅಪ್ಪಾ, ಯಾವ ಹೆಣ್ಣೂ ನನಗೆ ಬೇಡಪ್ಪಾ,

ನಾನು ಮದುವೆಯಾಗಲಾರೆ" ಎಂದು ಹೇಳಿದವನೇ ಬೇರೆ ಬಾಗಿಲಿನಿಂದ ಹೊರಕ್ಕೆ ಹೊರಟೇ ಹೋದ.

ಹಾಲಿನಲ್ಲಿ ಹೆಣ್ಣಿನ ಮನೆಯವರೆಲ್ಲರೂ ನಿರೀಕ್ಷಿಸುತ್ತಾ ಕುಳಿತಿದ್ದರು. ಪರಮ ಶಿವಯ್ಯನವರು ಅವರಿಗೆ ಮುಖ ತೋರಿಸಲಾರದೆ ತಲೆ ಮೇಲೆ ಕೈಹೊತ್ತು ಒಳಗೇ ಕುಳಿತುಬಿಟ್ಟರು.

ಸೂಕ್ಷ್ಮವಾಗಿ ವಿಷಯವನ್ನು ಅರಿತುಕೊಂಡ ಹೆಣ್ಣಿನ ತಂದೆ ಮನಸ್ಸಿನಲ್ಲಿ ನೊಂದುಕೊಂಡು ಸ್ನೇಹಿತನನ್ನೇ ಸಮಾಧಾನ ಮಾಡಿದರು. "ಹೋಗಲಿ ಬಿಡು ಪರಮಶಿವ, ಋಣಾನುಬಂಧವಿಲ್ಲ, ನೀನು ವ್ಯಸನಪಡಬೇಡ" ಎಂದು ಹೇಳಿ ಹೊರಟು ಹೋದರು.

ಅಂದಿನಿಂದ ಪರಮಶಿವಯ್ಯನವರು ಮಗನನ್ನು ಮಾತನಾಡಿಸುವುದನ್ನೇ ಬಿಟ್ಟರು. ಈಗ ಹೆಂಡತಿ ಬಂದು ಅವನ ಮದುವೆ ವಿಚಾರ ಮತ್ತೆ ಮಾತೆತ್ತಿದಾಗ ಅವರಿಗೆ ಹಿಂದಿನ ಅವಮಾನ ಕಣ್ಣೆದುರಿಗೆ ಕಟ್ಟಿದಂತಾಯ್ತು. ಮತ್ತೆ ಅವರ ಮುಖ ಗಂಟಿಕ್ಕಿತು. "ಲೇ, ಅವನ ಮದುವೆ ಸುದ್ದಿ ನನ್ನೊಂದಿಗೆ ಎತ್ತಬೇಡ ಕಣೇ, ಹೆಣ್ಣಿನವರ ಕಾಟ ತಪ್ಪಿಸಿಕೊಳ್ಳಲಾರದೆ ತಲೆ ಮರೆಸಿಕೊಂಡು ತಿರುಗುತ್ತಿದ್ದೇನೆ. ಇವನನ್ನು ನೆಚ್ಚಿಕೊಂಡು ಯಾರಿಗೆ ಮಾತು ಕೊಡಲಿ ?" ಎಂದು ಅವರ ದರ್ಪ ತುಂಬಿದ ಧ್ವನಿಯಿಂದ ಹೇಳಿದರು.

ಮೊದಲೇ ಕೆಂಪಗೆ ದಪ್ಪಗಾಗಿದ್ದ ಮುಖ. ಅದು ತುಂಬಿದಂತೆ ದಪ್ಪ ಮೀಸೆ, ಅವರು ನೇರ ದೃಷ್ಟಿಯಿಂದ ನೋಡಿದಾಗ ಎದುರಿನ ವ್ಯಕ್ತಿ ಆ ದೃಷ್ಟಿಯನ್ನು ಎದುರಿಸ ಲಾರದೇ ತಲೆ ತಗ್ಗಿಸುವಂತಹ ಹೊಳಪಿನ ಕಣ್ಣುಗಳು, ಭೀಮಕಾಯ, ಪೋಲೀಸ್ ಉಡುಪಿನಲ್ಲಿದ್ದಾಗ ಅವರ ಕೈ ಕೆಳಗಿನ ಪೇದೆಗಳು ನಿಂತಲ್ಲಿ ನಡುಗುತ್ತಿದ್ದರು. ಅಂತಹ ವ್ಯಕ್ತಿತ್ವ ಅವರದು.

ಭಾಗೀರಥಮ್ಮನೂ ಕೂಡ ಅವರು ಸಮಾಧಾನವಾಗಿರುವ ಸಮಯವನ್ನು ನೋಡಿ ಸಂಸಾರದ ಬೇಕು ಬೇಡವಾದ ಮಾತುಗಳನ್ನು ಆಡುತ್ತಿದ್ದರು. ಈಗ ಪರಮ ಶಿವಯ್ಯನವರು ನಿವೃತ್ತಿ ಆಗಿ ಮನೆಯಲ್ಲಿದ್ದರೂ ಕೂಡ ಹಳೆಯ ವಾಸನೆ ಅವರ ದರ್ಪವೇನೂ ಕಮ್ಮಿಯಾಗಿರಲಿಲ್ಲ.

ಇಂತಹ ಕೋಪಿಷ್ಟ ಪತಿಯೊಂದಿಗೆ 30 ವರ್ಷ ಹೆಣಗಿದ್ದ ಭಾಗೀರಥಮ್ಮನವರು ಈಗ ಮಗನ ಮದುವೆ ಮಾತನ್ನು ಹೇಳಿ ಒಪ್ಪಿಸುವುದು ಹೇಗಪ್ಪಾ, ಎಂದು ತಳಮಳಿಸು ತ್ತಿದ್ದರು. ಅದಕ್ಕೆ ಸರಿಯಾಗಿ ಮದುವೆ ಮಾತು ಎತ್ತಿದ್ದೇ ಪರಮಶಿವಯ್ಯನವರು ಕಿಡಿಕಿಡಿಯಾದರು. ಮಗನ ಮೇಲಿನ ಕೋಪ ಇನ್ನೂ ಆರಿರಲಿಲ್ಲ.

ಅವರ ಕೋಪದ ಕಿಡಿಗೆ ಭಾಗೀರಥಮ್ಮನವರು ಹೆದರಿದರೂ ಈ ಸಮಯವನ್ನು ಬಿಡದೆ ಹೇಗಾದರೂ ಕೆಲಸವನ್ನು ಸಾಧಿಸಿಯೇ ತೀರಬೇಕೆಂಬ ತೀರ್ಮಾನದಿಂದ

"ಅಲ್ಲಾಂದ್ರೇ ಈಗ ಅವನು ಒಪ್ಪಿರುವಾಗ ಬಿಟ್ಟುಬಿಟ್ಟರೆ ಆಮೇಲೆ ಅವನ ಮನಸ್ಸು ಹೇಗೆ ತಿರುಗುತ್ತೋ ಯಾರು ಕಂಡಿದಾರೆ ? ನೋಡಿ ನಿಮ್ಮ ಮನಸ್ಸಿಗೆ ಬಂದ ಯಾವ ಸಂಬಂಧ ಒಳ್ಳೆಯದೋ ಅದಕ್ಕೆ ಪ್ರಯತ್ನ ಮಾಡಿ ಅಂದ್ರೆ" ಎಂದು ಅಂಗಲಾಚಿ ಕೇಳಿಕೊಂಡರು.

ಹೆಂಡತಿಯ ಕರುಣಾರ್ದ್ರ ಮುಖವನ್ನು ನೋಡಿ ಅವರ ಕೋಪ ಇಳಿಯಿತು. ಶಾಂತವಾದ ಧ್ವನಿಯಲ್ಲಿ ಅಲ್ಲಾ ಕಣೇ ಭಾಗೂ, ಮತ್ತೆ ಹೆಣ್ಣಿನವರನ್ನು ಕರೆಸಿ ಅವಮಾನ ಎಂದರೆ ನಾನೇನಾದರೂ ಭೂಮಿ ಮೇಲೆ ತಲೆ ಎತ್ತಿ ತಿರುಗುವುದಕ್ಕಾಗುತ್ತೇನೇ ? ಎಂದರು.

ಭಾಗೀರಥಮ್ಮನವರಿಗೆ ಎಷ್ಟೋ ಧೈರ್ಯ ಬಂದಂತಾಯಿತು. "ಇಲ್ಲಾಂದ್ರೇ ಈ ಸಲ ಹಾಗೆ ಮಾಡೋಲ್ಲ. ನಿಮಗಿಷ್ಟವಾದ ಹೆಣ್ಣನ್ನು ನಾನು ಮದುವೆ ಆಗುತ್ತೇನೆ" ಎಂದು ಹೇಳಿದಾನೆ ರೀ....

ಸರಿ ಹಾಗಾದ್ರೆ ನಮ್ಮ ದೂರದ ಸಂಬಂಧ ನಾಗಭೂಷಣಯ್ಯನ ಮಗಳು ವಾಸಂತಿ ಏನಾಗಿದ್ದಾಳೆ ? ಸಂಪ್ರದಾಯದ ಮನೆ ಹುಡುಗಿ, ಲಕ್ಷಣವಾಗಿ ಚೆನ್ನಾಗಿದ್ದಾಳೆ. ನಾಗಭೂಷಣ ನನ್ನನ್ನು ಕಂಡಾಗಲೆಲ್ಲಾ ಏನು ಇನ್ಸ್‌ಪೆಕ್ಟರೇ ಇನ್ನೂ ನಮ್ಮ ಮೇಲೆ ಕೃಪೆ ಬರಲಿಲ್ಲವೇ ? ಎಂದು ಕೇಳುತ್ತಿದ್ದಾರೆ. ನಿನಗೂ ಸಮಾಧಾನವಿದ್ದರೆ ನಾಳೆಯೇ ಅವರಿಗೆ ಹೇಳಿ ಕಳುಹಿಸೋಣ. ಕಾದಿದಾರೆ ಕೂಡಲೇ ಹೆಣ್ಣನ್ನು ಕರೆದುಕೊಂಡು ಬರುತ್ತಾರೆ ಎಂದರು.

ಸಧ್ಯ ಬದುಕಿದೆಯಾ ಬಡಜೀವವೇ ಎಂದುಕೊಂಡು ಭಾಗೀರಥಮ್ಮನವರು ಉತ್ಸಾಹದಿಂದ ಹಾಗೇ ಮಾಡೀಂದ್ರೆ, ಮೊದಲು ಹೇಳಿ ಕಳುಹಿಸಿ ಬಿಡಿ. ಜಾತಕ ಕೂಡಿಬಂದರೆ ಹುಡುಗೀನ ಕರೆದುಕೊಂಡು ಬರಲಿ, ಅಂದರು.

ಈಗಾಗಲೇ ಅವರು ಎರಡು ವರ್ಷದಿಂದ ಜಾತಕ ನೋಡಿಸಿ ಇಟ್ಟುಕೊಂಡಿದ್ದಾರೆ ಕಣೇ, ಪ್ರಶಸ್ತವಾಗಿದೆಯಂತೆ. ನಮ್ಮ ಒಪ್ಪಿಗೆಗಾಗಿ ನಿರೀಕ್ಷಿಸುತ್ತಿದ್ದಾರೆ ಅಷ್ಟೆ.

ಹಾಗಾದರೆ ಅವರು ಇದೇ ಊರಿನಲ್ಲೇ ಇದಾರಲ್ಲಾ ನಾಳೆ ಭಾನುವಾರ ಹೇಗಿದ್ದರೂ ರಾಜು ಮನೆಯಲ್ಲೇ ಇರುತ್ತಾನೆ, ಹೆಣ್ಣನ್ನು ಕರೆದುಕೊಂಡೇ ಬರುವಂತೆ ಹೇಳಿ ಕಳುಹಿಸಿ ಬಿಡಿ" ಎಂದರು ಭಾಗೀರಥಮ್ಮ.

ಈಗಲೇ ಹೇಳಿದೀನಿ ನಿನ್ನ ಮಗನನ್ನು ಒಪ್ಪಿಸುವ ಜವಾಬ್ದಾರಿ ನಿಂದೇ ನೋಡಿಕೋ ಮತ್ತೇನಾದರೂ ಅವನು ಒಪ್ಪಲಿಲ್ಲ ಅಂದ್ರೇ ಈ ಊರಿನಲ್ಲೇ ನಾನಿರೋಲ್ಲ ನೋಡು" ಎಂದು ಗಟ್ಟಿಯಾಗಿಯೇ ಹೇಳಿದರು ಪರಮಶಿವಯ್ಯ.

ರೂಮಿನಲ್ಲಿ ಕುಳಿತು ಯೋಚನೆಯಲ್ಲಿ ಮುಳುಗಿದ್ದ ನಾಗರಾಜನಿಗೆ ತಂದೆ ಗುಡುಗಿದ್ದು ಕಿವಿಗೆ ಅಪ್ಪಳಿಸಿತು, ವಾಸ್ತವತೆ ಅವನನ್ನು ಎಚ್ಚರಿಸಿತು. ರೂಮಿನಿಂದ

ಹೊರಗೆ ಬಂದು ತಂದೆಯ ಬಳಿ ತಲೆ ತಗ್ಗಿಸಿಯೇ ನಿಂತು "ಇಲ್ಲಪ್ಪ ನಾನು ಬದಲು ಮಾತೇ ಆಡೋಲ್ಲ, ನೀವು ಒಪ್ಪಿದ್ದಕ್ಕೆ ನನ್ನ ಒಪ್ಪಿಗೆ ಅಷ್ಟೆ" ಎಂದು ಹೇಳಿ ಹೊರಗಡೆ ಹೊರಟು ಹೋದ.

ಈಗ ಪರಮಶಿವಯ್ಯನವರಿಗೆ ಮಗನ ವರ್ತನೆ ನೋಡಿ ವ್ಯಸನವಾಯಿತು. ಅವನು ಯಾವುದೋ ವೇದನೆಯಿಂದ ಕೊರಗುತ್ತಿದ್ದಾನೆ ಎನ್ನಿಸಿತು. ಆ ಬಗ್ಗೆ ಅವರ ಕಲ್ಪನೆ "ಅವನು ಯಾವುದೋ ಹೆಣ್ಣಿನ ಪ್ರೇಮದಲ್ಲಿ ಸಿಲುಕಿ ಅವಳಿಂದ ವಂಚಿತನಾಗಿ ಹೆಣ್ಣಿನ ಬಗ್ಗೆಯೇ ಜಿಗುಪ್ಸೆಗೊಂಡಿದ್ದಾನೆ" ಎಂಬುದು. ಭಾಗೀರಥಮ್ಮನವರು ಇದನ್ನು ಎಂದಿಗೂ ಒಪ್ಪರು. ತನ್ನ ಮಗ ಅಪ್ಪಟ ಬಂಗಾರ ಎಂದು ಅವರ ತೀರ್ಮಾನ. ಗಂಡ ಹೆಂಡತಿ ಇಬ್ಬರೂ ಅವನ ವಿಷಯ ಇದೆಲ್ಲಾ ಏನೇನೋ ಮಾತನಾಡಿಕೊಂಡರು. ಕಡೆಗೆ ಸಧ್ಯ ಮಗ ಮದುವೆ ಆಗುತ್ತೇನೆಂದು ಒಪ್ಪಿರುವುದೇ ಒಂದು ಸುಯೋಗ. ಆಮೇಲೆ ಸರಿಹೋಗುತ್ತಾನೆ. ನಾಳೆಯೇ ಹೆಣ್ಣಿನವರನ್ನು ಕರೆಸುವುದು" ಎಂದು ತೀರ್ಮಾನಿಸಿದರು.

ಆದಿನ ಭಾನುವಾರ, ನಾಗರಾಜ ಮನೆಯಲ್ಲಿಯೇ ಇದ್ದ. ಭಾನುವಾರ ಸಂಜೆ ಎಲ್ಲಾದರೂ ಸುತ್ತಿಕೊಂಡು ಬರುವ ವಾಡಿಕೆ, ಆದರೆ ಈದಿನ ಹೆಣ್ಣಿನ ಮನೆಯವರು ಬರುವುದು ಅವನಿಗೆ ಗೊತ್ತಿತ್ತು. ತಂದೆ ತಾಯಿಯರಿಗೇಕೆ ಆತಂಕಪಡಿಸಬೇಕು ಎಂದು ಎಲ್ಲಿಯೂ ಹೋಗಲಿಲ್ಲ.

ಭಾಗೀರಥಮ್ಮನವರಿಗೆ ಈ ದಿನ ತುಂಬಾ ಸಂತಸ. ತಮ್ಮ ಕನಸು ನನಸಾಗುವ ದಿನ. ನಾಗರಾಜನಿಗೆ ಎಷ್ಟು ಉಪಚರಿಸಿದರೂ ಸಾಲದು. ತಮ್ಮ ಮಗ ಯಾವ ಅಲಂಕಾರ ಮಾಡಿಕೊಳ್ಳದಿದ್ದರೂ ಅವನ ನಿಲುವು ಚೆಲುವು ಎಲ್ಲರ ಮನ ಸೆಳೆಯುತ್ತೆ ಎಂದು ಅವರಿಗೆ ಗೊತ್ತು.

ಮಧ್ಯಾಹ್ನ ಊಟವಾದ ನಂತರ ನಾಗರಾಜ ಅವನ ರೂಮಿನಲ್ಲಿ ವಿಶ್ರಾಂತಿಗಾಗಿ ಮಲಗಿದ್ದ. ಭಾಗೀರಥಮ್ಮ ಮಗನ ಬಳಿ ಬಂದು ಲೋ ನಾಗರಾಜ, ಹಾಯಾಗಿ ಸ್ವಲ್ಪ ಹೊತ್ತು ಮಲಗಪ್ಪ, ಸಾಯಂಕಾಲ ಹೆಣ್ಣಿನ ಮನೆಯವರು ಬರುತ್ತಾರೆ. ಆ ವೇಳೆಗೆ ಮನೆಯಲ್ಲೇ ಇರಪ್ಪ, ಎಂದರು. ನಾಗರಾಜ ಯಾವ ಆತಂಕವೂ ಇಲ್ಲದೆ 'ಅಮ್ಮ ನೀನು ಯಾವುದಕ್ಕೂ ಯೋಚಿಸಬೇಡಮ್ಮಾ, ನಾನು ಇವತ್ತು ಎಲ್ಲಿಯೂ ಹೋಗುವುದಿಲ್ಲ ಮನೆಯಲ್ಲೇ ಇರುತ್ತೇನೆ, ಎಂದ.

ಭಾಗೀರಥಮ್ಮ ಸಂತೋಷದಿಂದ "ಸಧ್ಯ ದೇವರು ಒಳ್ಳೆಯದು ಮಾಡಲಪ್ಪಾ" ಎಂದು ಅಲ್ಲಿಂದ ಮುಂದೆ ತಮ್ಮ ಕೆಲಸದಲ್ಲಿ ಆಸಕ್ತರಾದರು. ಮನೆಯೆಲ್ಲಾ ಒಪ್ಪ ಓರಣ ಮಾಡತೊಡಗಿದರು. ರವಿಗಂತೂ ಎಲ್ಲರಿಗಿಂತ ಹೆಚ್ಚು ಖುಷಿ. ಅಣ್ಣ

ಮದುವೆಗೆ ಒಪ್ಪಿಬಿಟ್ಟನಲ್ಲಾ, ತನಗೆ ಒಬ್ಬಳು ಅತ್ತಿಗೆ ಬಂದುಬಿಡುತ್ತಾಳೆ, ಮನೆಯಲ್ಲಿ ಒಂದು ಹೊಸ ವಾತಾವರಣ ಮೂಡುತ್ತದೆ ಎಂದೆನ್ನುತ್ತಾ ಯೋಚಿಸಿ ಕುಣಿದಾಡಿಬಿಟ್ಟ.

ಭಾಗೀರಥಮ್ಮನವರಿಗೆ ಮನೆಯಲ್ಲಿ ಮದುವೆ ಲಕ್ಷಣ ನಡೆಯುವಂತೆ ದೇವರು ಕರುಣಿಸಿದನಲ್ಲಾ, ಎಂಬ ಮನಸ್ಸಿನ ಸಂತೋಷ ಮೈಯ್ಯಲ್ಲಿ ಹೊರಹೊಮ್ಮಿತು. ಹೆಣ್ಣಿನವರು ಬರುವ ವೇಳೆಗೆ ಅಲ್ಲಿಗೂ ಇಲ್ಲಿಗೂ ಓಡಾಡುತ್ತಾ ಉತ್ಸಾಹದಿಂದ ಎಲ್ಲಾ ಅಣಿ ಮಾಡತೊಡಗಿದರು.

ವಿಘ್ನೇಶ್ವರ ಸಧ್ಯ ನಿನ್ನ ಕೃಪೆಯಿಂದ ಕೆಲಸ ನಿರ್ವಿಘ್ನವಾಗಿ ನೆರವೇರಲಪ್ಪಾ, ಎಂದು ನಡುಮನೆಯಲ್ಲಿದ್ದ ವಿಘ್ನೇಶ್ವರನ ಫೋಟೋಕ್ಕೆ ಮಲ್ಲಿಗೆ ಹೂವಿನ ಹಾರ ಹಾಕಿ ದೀಪ ಹಚ್ಚಿಟ್ಟರು. ಹಾಲಿನಲ್ಲಿ ರತ್ನಗಂಬಳಿ ಹಾಕಿ, ತಟ್ಟೆಯಲ್ಲಿ ಲಕ್ಷಣವಾಗಿ ಹರಿದ್ರಾ ಕುಂಕುಮ, ಹೂವು ಗಂಧವನ್ನಿಟ್ಟರು. ಪರಿಮಳ ಊದುಗಡ್ಡಿಯ ಸುವಾಸನೆ ಮನೆಯೆಲ್ಲಾ ಘಂ.... ಎಂದು ಸುವಾಸನೆ ಬೀರುತ್ತಿತ್ತು.

ಹೆಣ್ಣಿನವರು ಬರುವ ವೇಳೆಗೆ ತಾವು ಲಕ್ಷಣವಾಗಿ ತಲೆಬಾಚಿ ಹೂ ಮುಡಿದು ರೇಷ್ಮೆ ಸೀರೆಯನ್ನುಟ್ಟು ಸಿದ್ಧವಾಗಿ ಕುಳಿತರು.

ಪರಮಶಿವಯ್ಯನವರು ಇವೆಲ್ಲಾ ಗಮನಿಸುತ್ತಾ ಅತ್ತಿಂದಿತ್ತಾ ಓಡಾಡುತ್ತಿದ್ದರು. ಅವರಿಗೂ ಎಷ್ಟೋ ನೆಮ್ಮದಿಯಾಗಿತ್ತು. ಎಷ್ಟೋ ದಿನಗಳಿಂದ ಮಂಕಾಗಿ ಕುಳಿತಿದ್ದ ಹೆಂಡತಿ ಈ ದಿನ ಹೊಸ ಹುರುಪಿನಿಂದ ಓಡಾಡುತ್ತಿರುವುದನ್ನು ನೋಡಿ "ಏನೇ ಭಾಗೂ, ಇವತ್ತು ನೀನೇ ಮದುವೆ ಹೆಣ್ಣಾಗಿಬಿಟ್ಟಿದ್ದೀಯಲ್ಲಾ" ಎಂದು ಹಾಸ್ಯ ಮಾಡಿದರು.

ಭಾಗೀರಥಮ್ಮನವರು ಯಜಮಾನರ ಮುಖವನ್ನು ನೋಡುತ್ತಾ ನಕ್ಕು "ಮತ್ತೆ ಮನೆಯಲ್ಲಿ ಓಡಾಡುವ ಚಿಕ್ಕ-ಪುಟ್ಟ ಹೆಣ್ಣು ಮಕ್ಕಳಿದ್ದಾರೇನು ? ಎಲ್ಲಾದಕ್ಕೂ ನಾನೇ ಓಡಾಡಬೇಕಲ್ಲ" ಎಂದರು.

ಸಂತೋಷ.... ಸಧ್ಯ ಮಹರಾಯಳಾಗಿ ಓಡಾಡು, ಹೀಗೆ ನಿನ್ನ ಸಂತೋಷದ ಮುಖ ನೋಡಿ ಯಾವುದೋ ಕಾಲವಾಗಿತ್ತಲ್ಲೇ ಭಾಗೂ.... ಇವತ್ತು ನೀನು ಹೇಗೆ ಕಾಣುತ್ತೀ ಗೊತ್ತೇ ? ಅಂದರು.

ಯಜಮಾನರು ಇಷ್ಟು ಸರಸವಾಗಿರುವುದು ನೋಡಿ ಭಾಗೀರಥಮ್ಮನವರಿಗೆ ಸ್ವರ್ಗವೇ ಮೂರು ಗೇಣು ಇದೆ ಅನ್ನಿಸಿತು. ಹೇಗೆ ಕಾಣಿಸುತ್ತೇನೆ ಹೇಳಿ ಎಂದರು ಸಂತೋಷದಿಂದ.

ಪರಮಶಿವಯ್ಯನವರು ಹೆಂಡತಿಯ ಹತ್ತಿರ ಬಂದು ಅವರ ಭುಜದ ಮೇಲೆ ಕೈಯಿಟ್ಟು ಅವರ ಕಿವಿಯ ಹತ್ತಿರ "ನಮ್ಮ ಮೊದಲನೇ ರಾತ್ರಿ" ಅಷ್ಟು ಅನ್ನು

ತ್ತಿದ್ದಂತೆಯೇ ಭಾಗೀರಥಮ್ಮನವರು ಪತಿಯ ಬಾಯಿ ಮೇಲೆ ಕೈಯಿಟ್ಟು "ಉಶ್ ಮಕ್ಕಳು ಇಲ್ಲೇ ಹೊರಗಡೆ ಇದಾರೇಂದ್ರೇ.... ಕೇಳಿಸಿಕೋಡಾರು ಸಾಕು ಸುಮ್ಮನಿರಿ" ಅಂದರು ನಾಚಿಕೆಯಿಂದ.

ಪರಮಶಿವಯ್ಯನವರು ತಮ್ಮ ಗತಕಾಲದ ರಸಿಕತನವನ್ನು ನೆನಸಿಕೊಂಡು ಮತ್ತೆ ನವೋತ್ಸಾಹ ಮೂಡಿದಂತೆ ಮನದಲ್ಲೇ ನಕ್ಕರು.

ರವಿ ತಾಯಿಯ ಜೊತೆ ಉತ್ಸಾಹದಿಂದ ಕೆಲಸ ಮಾಡಿದ, ತಾನೂ ಮದುಮಗ ನಂತೆ ನೀಟಾದ ಸೂಟು ಹಾಕಿಕೊಂಡು ಓರಣವಾಗಿ ಕ್ರಾಪು ಬಾಚಿ ಕನ್ನಡಿಯಲ್ಲಿ ತನ್ನ ಅಂದ ನೋಡಿ ನೋಡಿ ಮೆಚ್ಚಿದ.

ಅಣ್ಣನ ಅಲಂಕಾರದಲ್ಲಿಯೂ ಆಸಕ್ತಿ ವಹಿಸಿದ. ಅವನ ಬೀರುವನ್ನು ತೆರೆದು ಅದರಲ್ಲಿ ಮಡಿಸಿಟ್ಟಿದ್ದ ಸೂಟುಗಳಲ್ಲಿ ಆರಿಸಿ ಅವನಿಗೆ ಒಪ್ಪುವ ಬಣ್ಣದ ಸೂಟನ್ನು ಆರಿಸಿ ಕೊಟ್ಟ. ನಿಲವು ಕನ್ನಡಿಯ ಮುಂದೆ ಅವನನ್ನು ನಿಲ್ಲಿಸಿ ಕ್ರಾಪ್ ತೀಡಿ ಬಾಚಿ ಸೂಟಿನ ಸುಕ್ಕನ್ನು ಸರಿಪಡಿಸಿದ. ನಂತರ ಅಣ್ಣನ ಮುಖವನ್ನು ತೃಪ್ತಿಯಿಂದ ನೋಡಿ, "ರಾಜು, ನೀನು ನಿಜವಾಗಿಯೂ, ನವಮನ್ಮಥ ಇದ್ದ ಹಾಗೆ ಇದ್ದೀ ಕಣೋ ನಾನು ಈಗಲೇ ಹೇಳ್ತೀನಪ್ಪ, ಬರೋ ಹೆಣ್ಣು ನಿನಗೆ ಸರಿಯಾಗಿಲ್ಲದಿದ್ದರೆ ನಾನಂತೂ ಖಂಡಿತ ಒಪ್ಪೋಲ್ಲ. ನನ್ನ ಅತ್ತಿಗೆ ಸುರ ಸುಂದರಿಯಂತಿರಬೇಕು" ಎಂದು ಅಣ್ಣನ ಭುಜವನ್ನು ಹಿಡಿದು ಅಲುಗಿಸಿದ.

ನಾಗರಾಜ ಮುಗುಳ್ನಕ್ಕು, "ರವಿ ನೀನ್ ಬೇಕಾದ್ರೆ ಸುರ ಸುಂದರಿಯನ್ನೇ ಮದುವೆಯಾಗು, ನನಗೇನಪ್ಪಾ, ಅವಳು ಹೇಗಾದರೂ ಇರಲಿ, ಅಮ್ಮ ಅಪ್ಪ ಒಪ್ಪಿದರೆ ಆಯ್ತು. ನನಗೂ ಒಪ್ಪಿಗೆ, ಎಂದ.

ಇವರೆಲ್ಲಾ ಇಷ್ಟು ಸಂಭ್ರಮಪಡುತ್ತಿದ್ದಂತೆಯೇ, ಟ್ಯಾಕ್ಸಿ ಬಂದು ಮನೆಯ ಮುಂದೆ ನಿಂತಿತು. ಹೆಣ್ಣಿನ ಮನೆಯವರು ಒಬ್ಬೊಬ್ಬರೇ ಇಳಿಯತೊಡಗಿದರು. ಹೆಣ್ಣು ಹೇಗಿದೆ ನೋಡಬೇಕೆಂದು ಆತುರದಿಂದ ಮೊದಲು ಬಾಗಿಲ ಬಳಿ ಬಂದು ನಿಂತವನು ರವಿ.

ಟ್ಯಾಕ್ಸಿಯಿಂದ 5–6 ಜನ ಇಳಿದರು. ಹುಡುಗಿಯ ತಂದೆ, ತಾಯಿ, ಒಬ್ಬ ಹುಡುಗ ತಮ್ಮ ಇರಬಹುದು, ಮತ್ತೊಬ್ಬರು ಮುತ್ತೈದೆ ದೊಡ್ಡವರು ಅವರು ಯಾರೋ.... ಆದರೆ ಇಬ್ಬರು ಹುಡುಗಿಯರು ಒಟ್ಟಿಗೆ ಇಳಿದರು.

ಅವರಿಬ್ಬರಲ್ಲಿ ಯಾರು ಮದುವೆ ಹೆಣ್ಣೆಂದು ಊಹಿಸಲು ರವಿಗೆ ಸಾಧ್ಯವಾಗ ಲಿಲ್ಲ. ಇಬ್ಬರೂ ಸಾಧಾರಣವಾದ ಉಡಿಗೆ ತೊಡಿಗೆಗಳನ್ನು ತೊಟ್ಟಿದ್ದರು. ಇಬ್ಬರಲ್ಲಿ ಒಬ್ಬರೂ ಒಡವೆಗಳನ್ನು ಅಡಕಿಕೊಂಡು ಸರ–ಬರ ಎನ್ನುವ ರೇಷ್ಮೆ ಸೀರೆಯುಟ್ಟು

ಮದುವೆ ಹೆಣ್ಣಿನಂತೆ ಸಿಂಗರಿಸಿಕೊಂಡು ಬಂದಿರಲಿಲ್ಲವಾದ್ದರಿಂದ ಇಬ್ಬರಲ್ಲಿ ಯಾರು ಮದುವೆ ಹೆಣ್ಣು ಎನ್ನುವುದೇ ರವಿಗೆ ಅರ್ಥವಾಗಲಿಲ್ಲ.

ಒಬ್ಬಳು ಕಪ್ಪು ಕುರುಳಿನ ನೀಳ ಜಡೆಯ ದಂತದ ಮೈ ಬಣ್ಣದವಳು. ಅವಳ ವಿಶಾಲ ನಯನಗಳು ಅವಳು ಸುರ ಸುಂದರಿ ಎಂಬುದಕ್ಕೆ ಗುರುತಾಗಿದ್ದವು. ತಿಳಿ ಬಾದಾಮಿ ಬಣ್ಣದ ವಾಯಿಲ್ ಸೀರೆ, ಕಪ್ಪು ರವಿಕೆ ಅವಳ ಮೈ ಬಣ್ಣಕ್ಕೆ ತುಂಬಾ ಒಪ್ಪುತ್ತಿತ್ತು. ಕಪ್ಪು ಕೂದಲಿನ ನೀಳ ಜಡೆಯ ಮೇಲೆ ಕನಕಾಂಬರ ಹೂ ದಂಡೆ ಮುಡಿದಿದ್ದಳು. ಅವಳು ಟ್ಯಾಕ್ಸಿ ಇಳಿದು ಸೀರೆ ನೆರಿಗೆ ಸರಿಪಡಿಸಿಕೊಂಡು ತಲೆ ಎತ್ತಿ ನೋಡಿದ ಕೂಡಲೇ ಶೀವಿಯಿಂದ ತಲೆ ಬಾಗಿಲಲ್ಲಿ ನಿಂತಿದ್ದ ಸುಂದರ ಯುವಕ ರವಿ ಅವಳ ಕಣ್ಣಿಗೆ ಬಿದ್ದ. ರವಿ ತದೇಕವಾಗಿ ತನ್ನನ್ನೇ ನೋಡುತ್ತಿದ್ದುದನ್ನು ಕಂಡು ನಾಚಿಕೆಯಿಂದ ತಲೆ ತಗ್ಗಿಸಿ ನಿಂತಳು.

ಮತ್ತೊಬ್ಬ ಹುಡುಗಿ ಗುಂಗುರು ಕೂದಲಿನ ಮೋಟಕು ಜಡೆಯವಳು. ಒಳ್ಳೆ ನಿಲುವಿನ ಚೆಲುವೆ. ಅವಳ ಕೆನ್ನೆಗಳು ಗುಲಾಬಿ ಬಣ್ಣಕ್ಕಿದ್ದವು. ಅವಳೂ ತಿಳಿ ಗುಲಾಬಿ ಬಣ್ಣದ ವಾಯಿಲ್ ಸೀರೆಯುಟ್ಟು ಒಂದೇ ಒಂದು ಗುಲಾಬಿ ಹೂವನ್ನು ಜಡೆಯ ಪಕ್ಕಕ್ಕೆ ಪಿನ್ನಿನಲ್ಲಿ ಸಿಕ್ಕಿಸಿದ್ದಳು. ಇಬ್ಬರೂ ಕೂಡ ಚೆಲುವಿನಲ್ಲಿ ಪೈಪೋಟಿ ಮಾಡುವಂತಿತ್ತು.

ಅವಳೂ ಕೂಡ ರವಿಯತ್ತ ನೋಟ ಬೀರಿ ನಂತರ "ಲೇ.... ವಾಸೀ.... ಯಾಕೇ ಇಲ್ಲೇ ನಿಂತುಬಿಟ್ಟೆ ? ನೀನು ಮುಂದೆ ನಡೀ ಎಂದು ಅವಳ ಬೆನ್ನಿನ ಮೇಲೆ ಮೆಲ್ಲನೆ ಗುದ್ದಿದಳು. ರವಿ ಇವೆಲ್ಲಾ ನೋಡುತ್ತಾ ಒಳಗೆ ನಡೆದ.

ಆ ವೇಳೆಗೆ ಒಳಗಿನಿಂದ ಪರಮಶಿವಯ್ಯನವರೂ – ಭಾಗೀರಥಮ್ಮನವರೂ ಹೊರ ಬಾಗಿಲಿಗೆ ಬಂದು ಅವರನ್ನು ಆದರಿಸಿ ಒಳಕ್ಕೆ ಬರಮಾಡಿಕೊಂಡರು. ಹಾಲಿನಲ್ಲಿ ರತ್ನಗಂಬಳಿಯನ್ನು ವಿಶಾಲವಾಗಿ ಹಾಸಲಾಗಿತ್ತು. ಯೋಗಕ್ಷೇಮದ ಮಾತುಕತೆಗಳಾದ ನಂತರ ಎಲ್ಲರೂ ಕುಳಿತುಕೊಂಡರು.

ನಾಗಭೂಷಣರಾಯರ ಮನೆಯಲ್ಲಿ ಮದುವೆಗೆ ಹುಡುಗಿಯರು ಇರುವುದೇನೋ ಭಾಗೀರಥಮ್ಮನವರಿಗೂ ಪರಮಶಿವಯ್ಯನವರಿಗೂ ಗೊತ್ತಿತ್ತು. ಆದರೆ ಹುಡುಗಿಯರನ್ನು ಅವರು ನೋಡಿರಲಿಲ್ಲ. ಇಬ್ಬರು ಹುಡುಗಿಯರೂ ಲಕ್ಷಣವಾಗಿದ್ದಾರೆ ಎಂದು ಯಾರ ಯಾರ ಬಾಯಲ್ಲೋ ಕೇಳಿದ್ದರು. ಈಗ ಎದುರಿಗೆ ನೋಡಿದ ಮೇಲೆ ಅವರ ಕಲ್ಪನೆಗೂ ಮೀರಿದ ಅಂದ ಚಂದದ ಹುಡುಗಿಯರಾಗಿದ್ದರು ಅವರು.

ಈಗ ಎಲ್ಲರೂ ಕುಳಿತ ಮೇಲೆ ನಾಗಭೂಷಣರಾಯರು "ಇವಳೇ ನೋಡಿ ನನ್ನ ದೊಡ್ಡ ಮಗಳು 'ವಾಸಂತಿ' ನಿಮ್ಮ ಮನೆಗೆ ಸೊಸೆಯಾಗುವವಳು ಎಂದು ನೀಳ ಜಡೆಯ ಹುಡುಗಿಯನ್ನು ತೋರಿಸಿದರು. ಗುಂಗುರು ಕೂದಲಿನ ಮತ್ತೊಬ್ಬ

ಹುಡುಗಿಯನ್ನು ತೋರಿಸಿ "ನೋಡೀ ಇವಳು ನನ್ನ ಎರಡನೆಯ ಮಗಳು 'ಇಂದಿರ' ಇಬ್ಬರೂ ಒಂದೇ ಸಮ ಬೆಳೆದುಬಿಟ್ಟಿದ್ದಾರಪ್ಪಾ, ವಾಸಂತಿ ಹಿರಿಯರಿಗೆ ನಮಸ್ಕರಿಸಮ್ಮ" ಎಂದರು.

ವಾಸಂತಿ ಯಾವ ಸಂಕೋಚ ಬೆಡಗು ಬಿನ್ನಾಣವೂ ಇಲ್ಲದೆ ಎದ್ದು ಬಂದು ಪರಮಶಿವಯ್ಯನವರಿಗೂ ಭಾಗೀರಥಮ್ಮನವರಿಗೂ ನಮಸ್ಕರಿಸಿದಳು. ಅಲ್ಲಿಯೇ ಟೀವಿಯಿಂದ ಎದೆಯ ಮೇಲೆ ಕೈಕಟ್ಟಿ ನಿಂತಿದ್ದ ರವಿ ವಾಸಂತಿಯ ನಡೆ, ನಿಲುವು, ಚೆಲುವನ್ನು ನೋಡಿ ಹಿಗ್ಗಿಹೋದ. ನಿಜವಾಗಿಯೂ, ರೂಪರಾಣಿ, ಘನತೆ ಗಂಭೀರದ ಈ ಹೆಣ್ಣು ನನಗೆ ಅತ್ತಿಗೆಯಾಗಿ, ನಮ್ಮ ಮನೆಯ ಗೃಹಲಕ್ಷ್ಮಿಯಾಗಿ ಬರುವಳೇ ? ಎಂದು ಹಾರೈಸಿದ. ಕೂಡಲೇ ಅಣ್ಣ ಇರುವ ರೂಮಿಗೆ ಓಡಿಹೋಗಿ, "ಏಯ್ ನೀನು ವೆರಿ ಲಕ್ಕಿಕಣೋ, ನಿನ್ನನ್ನು ಹುಡುಕಿಕೊಂಡು ಭಾಗ್ಯಲಕ್ಷ್ಮಿಯೇ ಬಾಗಿಲಿಗೆ ಬಂದಿದ್ದಾಳೆ ಕಣೋ....ದೂಸರಾ ಮಾತೇ ಬೇಡ ಒಪ್ಪಿಕೊಂಡುಬಿಡು" ಎಂದು ಅವನ ಕಿವಿಯಲ್ಲಿ ಪಿಸುಗುಟ್ಟಿದ.

"ನಾಗರಾಜ ಮದುವೆಯಾಗುತ್ತೇನೆ" ಎಂದು ಒಪ್ಪಿಕೊಂಡ ದಿನದಿಂದ ಹೆಣ್ಣಿನ ವಿಷಯವಾಗಿ ಕುತೂಹಲಕಾರಿಯಾಗಿದ್ದ. ಅವನಿಗರಿವಿಲ್ಲದಂತೆಯೇ ಅನೇಕ ಹುಡುಗಿಯರ ರೂಪುರೇಖೆಗಳು ಅವನ ಮನದ ಹಾಳೆಗಳ ಮೇಲೆ ಮೂಡಿ ಅಳಿಸಿ ಹೋದವು.

ತನಗಾಗಿ ಬರುವವಳು ತನ್ನ ಮನೆ ತುಂಬಿ, ಮನ ತುಂಬಿ, ಎಲ್ಲರ ಅಚ್ಚುಮೆಚ್ಚಿನವಳಾಗಬೇಕೆಂದು ಬಯಸಿದ. ಎಲ್ಲರಿಗಿಂತ ರವಿ ಎಂದರೆ ಅವನಿಗೆ ಪ್ರಾಣ. ಪ್ರೀತಿಯ ತಮ್ಮನಿಗಾಗಿ ಏನು ಮಾಡಲೂ ಸಿದ್ಧ. ಆದರೆ ಮದುವೆಯ ಮಾತು ಬಂದಾಗ ಮಾತ್ರ ತಮ್ಮನ ಮಾತನ್ನೂ ತೇಲಿಸಿ "ನನಗಿಂತ ನಿನಗೆ ಮೊದಲು ಮದುವೆ ಮಾಡೋಣ ರವಿ" ಎನ್ನುತ್ತಿದ್ದ.

ಈಗ ಹೆಣ್ಣಿನ ಬಗ್ಗೆ ರವಿ ವರ್ಣನೆ ಮಾಡಿ ಖುಷಿಯಿಂದ ಕುಣಿದಾಡಿದಾಗ ತಾನೂ ಬೇಗ ಆ ಹೆಣ್ಣನ್ನು ನೋಡಬೇಕೆಂಬ ಕುತೂಹಲವುಂಟಾಯಿತು.

ಅಷ್ಟರಲ್ಲಿ ಪರಮಶಿವಯ್ಯನವರು, ನಮಸ್ಕರಿಸಿ ಎದ್ದು ನಿಂತ ವಾಸಂತಿಯ ಸರಳ ಸೌಂದರ್ಯ ಗಾಂಭೀರ್ಯವನ್ನು ಒಂದೇ ನೋಟದಲ್ಲಿ ಅಳೆದು ಮೆಚ್ಚಿಗೆಯ ತೃಪ್ತಿಯನ್ನು ಮುಖದಲ್ಲಿ ತುಂಬಿ "ಕುಳಿತುಕೋಮ್ಮ" ಎಂದು ನಯವಾಗಿ ಹೇಳಿದರು.

ಭಾಗೀರಥಮ್ಮನವರಿಗಂತೂ ಸಂತೋಷ ಹೇಳತೀರದು, "ಸಧ್ಯ ದೇವರೇ, ಈ ಹುಡುಗಿ ಮನೆಯ ಸೊಸೆಯಾಗಿ ಬರುವಂತೆ ಕರುಣಿಸಪ್ಪಾ, ನಾಗರಾಜನ ಮನಸ್ಸು ಒಪ್ಪುವಂತೆ ಮಾಡಪ್ಪಾ" ಎಂದು ಪ್ರಾರ್ಥಿಸಿದರು.

ಹೆಣ್ಣಿನ ಮನೆಯವರಿಗೆಲ್ಲಾ ಇನ್ನೂ ಗಂಡು ಯಾರು ಎಂದು ನೋಡಲಿಲ್ಲವಲ್ಲಾ ಎಂಬ ಕಾತುರ. ಅಷ್ಟರಲ್ಲಿ ಪರಮಶಿವಯ್ಯನವರು ಲೋಕಾಭಿರಾಮವಾಗಿ ಅದೂ

ಇದೂ ಒಂದೆರಡು ಮಾತನಾಡಿ ನಂತರ ಲೋ.... ರವಿ... ರಾಜ ಬನ್ನೀಪ್ಪಾ, ಹೊರಕ್ಕೆ ಎಂದು ಕರೆದರು.

ವಾಸಂತಿಗೂ ಇಂದಿರಾಗೂ ಬಂದ ಹೊತ್ತಿನಿಂದ ಕುತೂಹಲ. ಮದುವೆಯಾಗುವ ಹುಡುಗ ನಿಂತಿದ್ದವನೋ ಅಥವಾ ಬೇರೊಬ್ಬನೋ ? ಎಂದು ಅವರಿಬ್ಬರೂ ಪಿಸು ಮಾತಿನಲ್ಲಿ ಏನೇನೋ ಹೇಳಿಕೊಳ್ಳುತ್ತಿದ್ದರು. ಮನೆಯೇನೋ ಸ್ವಂತ ಮನೆ ಕಣೇ ವಾಸೀ....ತುಂಬಾ ಚೆನ್ನಾಗಿದೆ ಇನ್ನು ಹುಡುಗ ಹೇಗಿದ್ದಾನೋ ನೋಡಬೇಕಲ್ಲಾ! ಎಂದು ವಾಸಂತಿಯ ಕಿವಿಯಲ್ಲಿ ಇಂದಿರಾ ಪಿಸುಗುಟ್ಟಿದಳು.

ಇವರ ಗಮನವೆಲ್ಲಾ ರೂಮಿನ ಬಾಗಿಲಿನ ಕಡೆಗೇ ಇತ್ತು. ನಾಗರಾಜ ರವಿ ಇಬ್ಬರೂ ಒಟ್ಟಿಗೇ ಹೊರಕ್ಕೆ ಬಂದರು. ಊದುಬತ್ತಿಯ ಹಿತಕರವಾದ ವಾಸನೆ ಮನೆಯನ್ನೆಲ್ಲಾ ತುಂಬಿತ್ತು. ದೇವರ ಪಟಕ್ಕೆ ಹಾಕಿದ್ದ ಮಲ್ಲಿಗೆ ಹಾರದ ಪರಿಮಳ ಘಂ... ಎಂದು ಮತ್ತು ಬರಿಸುವಂತಿತ್ತು. ನಾಗರಾಜ ಅಲ್ಲಿ ಕುಳಿತಿದ್ದವರ ಕಡೆ ಒಂದು ಬಾರಿ ಕಣ್ಣು ಹಾಯಿಸಿದ. ಅಲ್ಲಿಯ ವಾತಾವರಣ, ಕುಳಿತಿದ್ದವರ ಕುತೂಹಲ ನೋಟ, ಆ ಹೆಣ್ಣುಗಳ ಸೌಂದರ್ಯ ಎಲ್ಲವೂ ಅವನನ್ನು ಯಾವುದೋ ಲೋಕಕ್ಕೆ ಕೊಂಡೊಯ್ದಂತೆ ಮಾಡಿದ್ದುವು.

ಪರಮಶಿವಯ್ಯನವರು “ಕೂತುಕೊಳ್ಳೀಪ್ಪಾ, ಇಲ್ಲೇನೇ” ಎಂದರು. ನಾಗರಾಜ ರವಿ ಇಬ್ಬರೂ ಅಲ್ಲಿಯೇ ಸೋಫಾ ಮೇಲೆ ಕುಳಿತರು.

ಪರಮಶಿವಯ್ಯನವರು ನಾಗರಾಜನ ಕಡೆ ತೋರಿಸಿ ನೋಡಿ ರಾಯರೇ... ಇವನೇ ನನ್ನ ದೊಡ್ಡ ಮಗ ನಾಗರಾಜ, ಇವನು ನನ್ನ ಎರಡನೆಯ ಮಗ ರವಿ ಎಂದು ಇಬ್ಬರು ಮಕ್ಕಳನ್ನೂ ತೋರಿಸಿ ಪರಿಚಯ ಮಾಡಿಸಿದರು.

ರವಿ ಸ್ನಫ್ ಕಲರ್ ಸೂಟು ಹಾಕಿ ಬಿಳೀ ಟೆರ್ಲಿನ್ ಬುಷ್ ಕೋಟು ಹಾಕಿದ್ದ ದಷ್ಟ ಪುಷ್ಟವಾಗಿ ಬೆಳೆದಿದ್ದ ಅವನು ಸುಂದರ ಯುವಕನೆನ್ನುವುದಕ್ಕೆ ಸಂದೇಹವೇ ಇಲ್ಲ.

ನಾಗರಾಜನದು ಇನ್ನೊಂದು ಬಗೆಯ ಚೆಲುವು, ಒಳ್ಳೆಯ ಮೈಕಟ್ಟು, ಅದಕ್ಕೆ ತಕ್ಕ ನಿಲುವು, ಕಣ್ಣು ಮೂಗು ತುಂಬಾ ಲಕ್ಷಣ ಬಿಳುಪಿನ ಮುಖದಲ್ಲಿ ತಿದ್ದಿದಂತೆ ಚಿಗುರು ಮೀಸೆ. ಕಪ್ಪು ಕುರುಳಿನ ಕ್ರಾಪು. ಹುಡುಗಿಯರು ನೋಡಿದ ಕೂಡಲೇ ಕಣ್ಣು ಗಳಲ್ಲಿ ತುಂಬಿಕೊಳ್ಳುವ ಚೆಲುವು ನಾಗರಾಜನದು. ವಾಸಂತಿ ಮೊದಲ ನೋಟಕ್ಕೆ ಮಾರು ಹೋದಳು.

ಯಾರನ್ನೂ ಮೆಚ್ಚದೆ, ಮದುವೆಯಾಗದೆ ಕಾದಿದ್ದಕ್ಕೆ ಸಾರ್ಥಕವಾಯಿತು ಎಂದಿತು ಅವಳ ಮನಸ್ಸು. ಇಂದಿರಾ ಮೆಲ್ಲನೆ ಅವಳ ಬೆನ್ನಿನ ಮೇಲೆ ಜಿಗುಟಿ ‘ಲೇ ವಾಸೀ ನಿನಗಾಗಿಯೇ ಗಂಧರ್ವ ರಾಜ ಇಳಿದು ಬಂದಂತಿದೆಯಲ್ಲೇ, ಸರಿಯಾಗಿ ನೋಡು’ ಎಂದು ಕಿವಿಯಲ್ಲಿ ಪಿಸುಗುಟ್ಟಿದಳು.

ವಾಸಂತಿ ಏನೂ ಸಂಕೋಚ ಪಟ್ಟುಕೊಳ್ಳದೆ ನೇರವಾಗಿ ನಾಗರಾಜನ ಮುಖವನ್ನು ನೋಡಿದಳು. ಅದೇ ಸಮಯದಲ್ಲಿ ನಾಗರಾಜನೂ ವಾಸಂತಿಯ ಮುಖವನ್ನೇ ನೋಡುತ್ತಿದ್ದ. ಕಣ್ಣು ಕಣ್ಣುಗಳು ಕೂಡಿದವು. ಏನೋ ಮೋಡಿ ಮಾಡಿದವು. ಇಬ್ಬರ ಮುಖದಲ್ಲೂ ಕಿರುನಗೆ ಸೂಸಿತು.

ಹಿರಿಯರೂ ಅವರವರ ಮಾತಿನಲ್ಲಿ ತಲ್ಲೀನರಾಗಿದ್ದರು. ಇವರ ಈ ಸಂಕೇತವನ್ನು ಕದ್ದು ನೋಡುತ್ತಿದ್ದವಳೆಂದರೆ ಇಂದಿರಾ, ಅವಳಿಗೆ ಅರ್ಥವಾಗಿಬಿಟ್ಟಿತು ಒಬ್ಬರಿಗೊಬ್ಬರು ಮನ ಸೋತಿದ್ದಾರೆಂದು. ರವಿಯಂತೂ ಅತ್ತಿತ್ತ ಓಡಾಡುತ್ತಾ ತನಗೆ ಅತ್ತಿಗೆಯಾಗುವ ಅದೃಷ್ಟವಂತೆಯನ್ನು ನೋಡಿದ್ದೂ ನೋಡಿದ್ದೇ... ಸಾಂಪ್ರದಾಯಕವಾಗಿ ವಾಂಗಿಭಾತ್, ಕೇಸರಿಭಾತ್, ಬೋಂಡಾ, ಕಾಫಿ ಈ ಸಮಾರಾಧನೆಯಾದ ನಂತರ ನಾಗಭೂಷಣರಾಯರು ಇಂಥಾ ಒಳ್ಳೆಯ ವರನನ್ನು ಏನೇ ಆದರೂ ಬಿಟ್ಟುಕೊಡಬಾರದು ಎಂಬ ಧೃಢ ಮನಸ್ಸಿನಿಂದ "ಪರಮಶಿವಯ್ಯನವರೆ, ನಾವು ಈ ಸಂಬಂಧವನ್ನು ಬೆಳೆಸಲು ನಾಲ್ಕು ವರ್ಷದಿಂದ ಕಾದಿದ್ದೇವೆ. ನಿಮ್ಮ ಹುಡುಗ ಒಪ್ಪಿದರೆ ಮುಂದಿನ ಮಾತುಕತೆ ನಡೆಸಬಹುದು. ತಾವು ಯಾವಾಗ ಬರಹೇಳಿದರೆ ಆಗ ನಾನು ಬರುತ್ತೇನೆ" ಎಂದರು.

ಪರಮಶಿವಯ್ಯನವರ ಸ್ವಭಾವ ಕಡ್ಡಿ ಎರಡು ತುಂಡಾದಂತೆ ಮಾತು, "ಯಾವಾಗ ಬರುವುದೇನು ರಾಯರೇ, ನನಗೆ ಹೆಣ್ಣಿನ ಮನೆಯವರನ್ನು ಅಲೆಸುವುದು ಆಮೇಲೆ ತಿಳಿಸುತ್ತೇನೆ ಎನ್ನುವುದು ಇದೆಲ್ಲಾ ಇಷ್ಟವಿಲ್ಲ. ನಮಗೇನೋ ಹೆಣ್ಣು ಒಪ್ಪಿಗೆಯಾದಂತೆಯೇ," "ಏನೇ ಭಾಗೂ, ನಿನ್ನ ಅಭಿಪ್ರಾಯ ಹೇಳು" ಎಂದು ನೇರ ಅವರೆದುರಿಗೇ ಕೇಳಿದರು.

ನನ್ನನ್ನು ಏನು ಕೇಳುತ್ತೀರೀಂದ್ರೆ, ನೀವು ಒಪ್ಪಿದರೆ ಆಯಿತು ಎಂದರು ಭಾಗೀರಥಮ್ಮ. ರವಿಯೂ, ನಾಗರಾಜನೂ ಸೋಫಾ ಮೇಲೆ ಕುಳಿತು ಏನೇನೋ ಮಾತಾಡಿಕೊಳ್ಳುತ್ತಿದ್ದರು.

ಪರಮಶಿವಯ್ಯನವರು ನಾಗರಾಜನತ್ತ ತಿರುಗಿ ಏನಪ್ಪಾ, ರಾಜ ? ನಿನಗೆ ಒಪ್ಪಿಗೆ ತಾನೆ ? ಆಮೇಲೆ ಎಲ್ಲಾ ಮಾತುಕತೆ ಆದ ಮೇಲೆ "ನಾನು ಮದುವೆ ಆಗೋಲ್ಲ" ಎಂದು ಎಲ್ಲಾದ್ರೂ ಗುಂಡು ಹಾರಿಸಿ ಬಿಟ್ಟೀಯೇ ? ಎಂದರು.

ಕೆಲವು ಗಂಡಿನ ಮನೆಯವರು ಪಿಸು... ಪಿಸು ಮಾತನಾಡಿಕೊಂಡು ಹೊರಗೆ ಬಂದು ಬಿಂಕ ಬಿನ್ನಾಣದಿಂದ ಹೆಣ್ಣಿನವರಿಗೆ ಆಸೆ, ನಿರಾಸೆ, ಎರಡೂ ಅರ್ಥ ಬರುವ ಮಾತನಾಡಿ " ಆಮೇಲೆ ನಮ್ಮ ಹುಡುಗನನ್ನು ಕೇಳಿ ತಿಳಿಸುತ್ತೇವೆ " ಎಂದು ಹೇಳಿ ಕಳುಹಿಸುವುದನ್ನು ಅನೇಕ ಕಡೆ ನೋಡಿದ್ದ ನಾಗಭೂಷಣರಾಯರಿಗೆ ಪರಮಶಿವಯ್ಯನವರ ನಿರ್ವಂಚನೆಯ ನೇರ ಮಾತುಗಳು ಬಹಳ ಆಶ್ಚರ್ಯವನ್ನುಂಟು ಮಾಡಿದವು.

ತಂದೆಯ ಮಾತಿಗೆ ನಾಗರಾಜ ಒಂದು ಸಲ ವಾಸಂತಿಯ ಕಡೆ ಓರೆ ನೋಟ ದಿಂದ ನೋಡಿ ತಲೆ ತಗ್ಗಿಸಿ, "ಅಮ್ಮಾ ನೀವು ಒಪ್ಪಿದರೆ ಆಯಿತು ನನ್ನದೇನೂ ಅಡ್ಡಿಯಿಲ್ಲ" ಎಂದ.

ನಾಗರಾಜನ ಒಂದೊಂದು ನೋಟಕ್ಕೂ ವಾಸಂತಿ ಹಿಗ್ಗಿ ಹೋಗುತ್ತಿದ್ದಳು. ನಾಗರಾಜನ ಒಪ್ಪಿಗೆ ಸಿಕ್ಕ ಮೇಲೆ ಅವಳಿಗೆ ಗಾಳಿಯಲ್ಲಿ ಹಗುರವಾಗಿ ತೇಲಾಡು ವಂತಾಯಿತು. ಇಂದಿರಾ ಖುಷಿಯಿಂದ ವಾಸಂತಿಯ ತೋಳನ್ನು ಮೆಲ್ಲನೆ ಚಿವುಟಿ "ಲೇ ವಾಸೀ ನಿನ್ನ ಗಂಡ ಹೇಳಿದ್ದಕ್ಕೆಲ್ಲಾ ಒಪ್ಪಿಕೊಳ್ಳುವ ಬಸವ ಎಂದು ಕಾಣುತ್ತೆ" ಎಂದು ಅವಳ ಕಿವಿಯಲ್ಲಿ ಹೇಳಿದಳು.

ವಾಸಂತಿ ಸಾಕು ಸುಮ್ಮನಿರೇ ಎಂದು ಗದರಿಸಿದಳು. "ಓಹೋ ಆಗಲೇ ವಕಾಲತ್ತು ವಹಿಸಿಬಿಟ್ಟೆಯಲ್ಲಾ, ತಪ್ಪಾಯ್ತಮ್ಮಾ" ಎಂದು ಹಾಸ್ಯ ಮಾಡಿದಳು ಇಂದಿರಾ.

ರಾಜನ ಒಪ್ಪಿಗೆಯಿಂದ ತುಂಬಾ ಖುಷಿಯಾದವರು ಎಂದರೆ ಹೆಣ್ಣಿನವರಿಗಿಂತ ಪರಮಶಿವಯ್ಯನವರು, ಭಾಗೀರಥಮ್ಮನವರು. ಕುಳಿತಿದ್ದ ಕಡೆಯಿಂದಲೇ ಕಣ್ಮುಚ್ಚಿ ದೇವರ ಪಟಕ್ಕೆ ಕೈ ಮುಗಿದರು ಭಾಗೀರಥಮ್ಮ.

ಪರಮಶಿವಯ್ಯನವರು ತಾವೇ ಮೊದಲು ಮಾತು ತೆಗೆದರು, "ಆಯಿತು ರಾಯರೇ........ನಾವೆಲ್ಲಾ ಒಪ್ಪಿದ್ದಾಯಿತು. ನಿಮ್ಮ ಮಗಳ ಒಪ್ಪಿಗೆ ಕೇಳಿಬಿಡಿ, ಹೆಣ್ಣಾದ ಮಾತ್ರಕ್ಕೆ ಅವಳು ಒಪ್ಪಬೇಡವೇ" ? ಅಂದರು.

ಹುಡುಗಿಯ ಕಡೆ ತಿರುಗಿ ಏನಮ್ಮಾ ವಸಂತಾ, ಮುಚ್ಚುಮರೆ ಇಲ್ಲದೆ ನಿನ್ನ ಇಷ್ಟವನ್ನು ಹೇಳಿಬಿಡು, "ನಮ್ಮ ಹುಡುಗ ನಿನಗೆ ಒಪ್ಪಿಗೆ ಆದನೇ"? ಎಂದು ಕೇಳಿದರು.

ಅವರ ಭೀಮಕಾಯವೂ ಅದಕ್ಕೆ ತಕ್ಕ ದರ್ಪದ ಮಾತು ವಾಸಂತಿಯ ಮನಸ್ಸಿನಲ್ಲಿ ತುಸು ನಡುಕವನ್ನು ಹುಟ್ಟಿಸಿತು. ಅದನ್ನು ತೋರಿಸಿಕೊಳ್ಳದೆ ತಲೆ ತಗ್ಗಿಸಿಯೇ ವಾಸಂತಿ "ನನಗೂ ಒಪ್ಪಿಗೆ" ಎಂದು ಹೇಳಿದಳು.

ಏಕೆಂದರೆ ಅವರೆಲ್ಲರೂ ಮುಚ್ಚುಮರೆಯಿಲ್ಲದೆ ಎದುರೆದುರಿಗೇ ಎಲ್ಲಾ ತೀರ್ಮಾನ ಮಾಡಿದಾಗ ತಾನು ಮಾತ್ರ ಬಿಂಕ ತೋರಿಸುವುದು ಸರಿಯಲ್ಲವೆಂದು ನಾಚಿಕೆ ಯಾದರೂ ವಾಸಂತಿ ಹೇಳಿಬಿಟ್ಟಳು.

"ಸರಿ ಆಯಿತಲ್ಲಾ ರಾಯರೇ, ಇನ್ನು ಲಗ್ನಪತ್ರಿಕೆಯಾಗಲಿ, ಶುಭ ಕೆಲಸಕ್ಕೆ ಏರ್ಪಾಡು ಮಾಡಿಕೊಳ್ಳಿ" ಎಂದರು ಪರಮಶಿವಯ್ಯನವರು.

ನಾಗಭೂಷಣರಾಯರು ತುಂಬಾ ಹಿಗ್ಗಿನಿಂದ "ತಾವು ಹೇಗೆ ಹೇಳಿದರೆ ಹಾಗೆ ಮದುವೆ ಮಾಡಿಕೊಳ್ಳಲು ಸಿದ್ಧ" ಎಂದರು.

ರಾಯರೇ, ಗಂಡಿನವರು, ಎಂದರೆ ಹೆಣ್ಣಿನವರ ರಕ್ತವನ್ನು ಹೀರುವ ಜಿಗಣೆ ಎಂಬ ಒಂದು ಪ್ರತೀತಿ ಈ ಕಾಲದಲ್ಲಿ ಬಂದು ಬಿಟ್ಟಿದೆ. ವರದಕ್ಷಿಣೆಯಾಗಿ ಹತ್ತು ಸಾವಿರ ಹಣ ಕೊಡದಿದ್ದರೆ ಒಂದು ಸ್ಕೂಟರನ್ನು ತೆಗೆದುಕೊಡಿ, ಅಥವಾ ಒಂದು ಮನೆಯನ್ನು ಅಳಿಯನ ಹೆಸರಿಗೆ ಬರೆದುಬಿಡಿ, ಎಂದು ಉದಾರವಾಗಿ ಹೇಳುವ ಗಂಡಿನ ಮನೆಯವರೂ ಇದ್ದಾರೆ.

ಇದ್ದವರಂತೂ ಕೊಡುವುದಕ್ಕೆ ಸಿದ್ಧವಾಗಿಯೇ ಇದ್ದಾರೆ. ಕೊಡಲು ಶಕ್ತಿಯಿಲ್ಲದವರ ಮನೆಯ ಹೆಣ್ಣು ಹಾಗೆಯೇ ಉಳಿಯಬೇಕೇನು ? ಹೀಗಾಗಿ ಅನೇಕ ಬಡವರ ಮನೆಯ ಹೆಣ್ಣುಮಕ್ಕಳು ಆಜೀವಪರ್ಯಂತ ಮದುವೆಯಿಲ್ಲದೆಯೇ ಮನ ನೋಯುತ್ತಿವೆ. ಹಣ ಕೊಟ್ಟುಬಿಟ್ಟರೆ ಮಾತ್ರ ಹೆಣ್ಣಿನಲ್ಲಿ ಗುಣ ತುಂಬಿಬಿಡುತ್ತದೆಯೇ ?

ನಮ್ಮ ಬಾಳಿನಲ್ಲಿ ಹೊಂದಿಕೊಂಡು ಹೋಗುವ ಗುಣವತಿಯಾದ ಹೆಣ್ಣು ಮುಖ್ಯವೇ ಹೊರತು, ಹಣವಲ್ಲ ಎಂಬುದು ನಮ್ಮ ಜನ ಎಲ್ಲಿಯವರೆಗೆ ಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಸರ್ಕಾರ ಏನೇನು ಸುಧಾರಣೆ ತಂದರೂ ಈ ವರದಕ್ಷಿಣೆಯ ಭೂತ ತೊಲಗಲೊಲ್ಲದು. ಮದುವೆಯಾಗದೇ ನಿಂತ ಹೆಣ್ಣುಮಕ್ಕಳು ಸುರಿಸುವ ಒಂದೊಂದು ತೊಟ್ಟು ಕಣ್ಣೀರೂ ಸಮಾಜದ್ರೋಹಿಗಳಿಗೆ ಶಾಪವಾಗಿ ತಟ್ಟುತ್ತದೆ.

ರಾಯರೇ ನನ್ನ ಎರಡು ಗಂಡು ಮಕ್ಕಳಿಗೂ ಒಂದು ಪೈಸಾ ವರದಕ್ಷಿಣೆಯನ್ನೂ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದೇನೆ. ನಿಮಗೆ ಸಂತೋಷವಿದ್ದ ರೀತಿಯಲ್ಲಿ ಮದುವೆ ಮಾಡಿಕೊಟ್ಟುಬಿಡಿ ಎಂದು ವರದಕ್ಷಿಣೆ ನಿಷೇಧದ ಬಗ್ಗೆ ಒಂದು ಭಾಷಣವನ್ನೇ ಬಿಗಿದರು ಪರಮಶಿವಯ್ಯನವರು.

ಅವರು ಹೇಳಿದ ಒಂದೊಂದು ಮಾತನ್ನೂ ತಟಸ್ಥರಾಗಿ ಕುಳಿತು ಕೇಳುತ್ತಿದ್ದ ಹೆಣ್ಣಿನ ಮನೆಯವರಿಗೆ ಆಶ್ಚರ್ಯವೂ ಸಂತೋಷವೂ ಒಟ್ಟಿಗೇ ಆಯಿತು.

ವಾಸಂತಿಗಂತೂ ತನ್ನ ಮಾವನವರು ಬಹಳ ದರ್ಪದವರು ಎಂಬ ಒಂದು ವಿಧವಾದ ಭಯಭಕ್ತಿ ಇತ್ತು. ಈಗ ಅವರ ಮಾತು ಮತ್ತು ಅವರ ಆದರ್ಶ ಗುಣ ತಿಳಿದು ಅವರಲ್ಲಿ ಗೌರವ ಭಾವನೆ ಮೂಡಿತು.

ನಾಗಭೂಷಣರಾಯರು ತಮಗಾದ ಸಂತೋಷವನ್ನು ಹತ್ತಿಕ್ಕಲಾರದೇ ಎದ್ದು ಹೋಗಿ ಅವರ ಪಾದಕ್ಕೆ ಬಗ್ಗಿ ನಮಸ್ಕರಿಸಿ ಅವರ ಕೈ ಕುಲುಕಿ " ನೀವು ಪುಣ್ಯಾತ್ಮರು ನಿಮ್ಮಂತೆ ಎಲ್ಲಾ ಗಂಡಿನವರೂ ಉದಾರವಾಗಿದ್ದರೆ ನಮ್ಮ ಸಮಾಜ ಉದ್ಧಾರವಾಗುತ್ತಿತ್ತು " ಶುಭಸ್ಯ ಶೀಘ್ರಂ " ಎಂದು ಇನ್ನೊಂದು ವಾರದಲ್ಲಿಯೇ ಲಗ್ನ ನೆರವೇರಿಸಿ ಬಿಡೋಣ, ಇನ್ನು ನಾವು ಹೊರಡಲು ಅಪ್ಪಣೆಯೇ ? " ಎಂದು ವಿನಯವಾಗಿ ಕೇಳಿದರು.

ಭಾಗೀರಥಮ್ಮನವರು ಅರಿಶಿನ, ಕುಂಕುಮ ಫಲ–ತಾಂಬೂಲಗಳನ್ನು ಕೊಟ್ಟರು. ಈ ವೇಳೆಗೆ ನಾಗರಾಜ ರೂಮಿನೊಳಕ್ಕೆ ಹೋಗಿ ಕುಳಿತಿದ್ದ, ರವಿ ತಾಯಿಗೆ ಸಹಾಯವಾಗಿ ಅದು ಇದು ತೆಗೆದುಕೊಡುತ್ತಾ ಒಳಕ್ಕೂ ಹೊರಕ್ಕೂ ಓಡಾಡುತ್ತಿದ್ದ.

ವಾಸಂತಿಗಂತೂ ಆ ಮನೆಯವರೆಲ್ಲಾ ಆಗಲೇ ಆತ್ಮೀಯರಾದಂತೆ ಭಾಸವಾಯಿತು. ಕಡೆಗೆ ಆ ಮನೆಯ ಗೋಡೆ, ಕಿಟಕಿ, ಬಾಗಿಲುಗಳು ಕೂಡ ಏನೋ ಒಂದು ಪ್ರೇಮದ ಕುರುಹಾಗಿ ಅವಳಲ್ಲಿ ಅಭಿಮಾನ ಮೂಡಿ ಬಂತು.

ಹೊರಡುವ ಮುನ್ನ ವಾಸಂತಿಯ ಕಣ್ಣುಗಳು ಅತ್ತಿತ್ತ ದೃಷ್ಟಿ ಹಾಯಿಸಿದುವು. ತನ್ನ ಇನಿಯನ ರೂಪರಾಶಿಯನ್ನು ಕಣ್ಣುಗಳಲ್ಲಿ ತುಂಬಿಕೊಳ್ಳಲು ಕಾತುರಪಟ್ಟಳು. ಸುತ್ತಲೂ ಕಾಣದಿದ್ದಾಗ ಅಯ್ಯೋ....ಕುಳಿತಿದ್ದಾಗಲೇ ಇನ್ನೂ ಸ್ವಲ್ಪ ಸರಿಯಾಗಿ ನೋಡಬಾರದಾಗಿತ್ತೇ ? ಥೂ....ಹಾಳು ನಾಚಿಕೆ, ಎಂದು ಕಸಿ–ವಿಸಿಗೊಂಡಳು.

ಎಲ್ಲರೂ ಹೊರಟು ನಿಂತರು. ಭಾಗೀರಥಮ್ಮನವರು ವಾತ್ಸಲ್ಯದಿಂದ ವಾಸಂತಿಯ ತಲೆ ನೇವರಿಸಿ " ಹೋಗಿ ಬರುತ್ತೀಯ ? " ಎಂದು ಹೇಳುತ್ತಾ ತಲೆಬಾಗಿಲವರೆಗೂ ಅವಳ ಜೊತೆಯಲ್ಲಿ ಬಂದರು.

ಎಲ್ಲರೂ ಟ್ಯಾಕ್ಸಿ ಹತ್ತುವ ವೇಳೆಗೆ ರವಿ ನಾಗರಾಜನನ್ನು ಕೈ ಹಿಡಿದು ಎಳೆದುಕೊಂಡೇ ಹೊರಕ್ಕೆ ಕರೆತಂದ.

ವಾಸಂತಿಯ ಮನದಾಸೆ ನೆರವೇರಿತು. ಮೆಟ್ಟಿಲ ಮೇಲೆ ಕ್ರೋಟನ್ ಗಿಡದ ಪಕ್ಕದಲ್ಲಿ ನಿಂತಿದ್ದ ನಾಗರಾಜನನ್ನು ಕಣ್ಣರಳಿಸಿ ನೋಡಿದಳು. ಏಕೋ ಅವನ ಮುಖದಲ್ಲಿ ಉತ್ಸಾಹ ಮೂಡಿದಂತಿರಲಿಲ್ಲ. ಮತ್ತೂ ನೋಡಿದಳು. ಅವಳ ಚುರುಕಿನ ಕಣ್ಣುಗಳಿಗೆ ಅವನು ಸಪ್ಪೆಯಾಗಿರುವಂತೆ ಕಂಡಿತು.

ಅವನ ಪಕ್ಕದಲ್ಲಿಯೇ ನಿಂತಿದ್ದ ರವಿಯೇನೋ ನೆಪದಲ್ಲಿ ಕಣ್ಣರಳಿಸಿ ಉತ್ಸಾಹದಿಂದ ನಗುತ್ತಿದ್ದ. ಎರಡು ಮುಖಗಳು ವಾಸಂತಿಯ ಕಣ್ಣಲ್ಲಿ ಕಟ್ಟಿದಂತಾಯಿತು.

ಅವಳ ಮನದಾಳದಲ್ಲಿ ಕಿಂಚಿತ್ ಚಿಂತೆಯ ಚಿಲುಮೆ ಕಾಣಿಸಿಕೊಂಡಂತಾಯಿತು. ಏಕೋ ಏನೋ ಅಂದುಕೊಂಡಳು.

ಇಂದಿರಾ ವಾಸಂತಿಯ ಗಮನವನ್ನು ತನ್ನತ್ತ ಸೆಳೆದು ಆಮೇಲೆ ಸದಾ ನೋಡುತ್ತಿರುವೆಯಂತೆ, ಈಗ ಟ್ಯಾಕ್ಸಿ ಹತ್ತಮ್ಮಾ ಹೊತ್ತಾಯಿತು ಎಂದಳು.

ಪಕ್ಕದ ಮನೆಯ ಪದ್ಮ ಗೇಟಿನ ಬಳಿ ನಿಂತು ಹೆಣ್ಣಿನ ಮನೆಯವರ ಟ್ಯಾಕ್ಸಿ ಹೋಗುವವರೆಗೂ ನೋಡುತ್ತಿದ್ದಳು. ಪದ್ಮ ಆ ಮನೆಯ ಸೊಸೆ. ಪಕ್ಕದ ಮನೆಗೆ ಬರುವ ಸೊಸೆ ಹೇಗಿದ್ದಾಳೋ ಎಂದು ಕುತೂಹಲ ಅವಳಿಗೆ.

ಟ್ಯಾಕ್ಸಿ ಕಣ್ಮರೆಯಾಗಿ ಹೊರಟು ಹೋದ ನಂತರ ರವಿ ನಾಗರಾಜನನ್ನು

ಹಿಡಿದಲುಗಿಸಿ, ಯಾಕೋ ರಾಜ ? ಕಲ್ಲುಬೊಂಬೆಯಂತೆ ನಿಂತುಬಿಟ್ಟೆ ? ನಿನ್ನ ರಾಣಿ ನಿನ್ನ ಮನಸ್ಸನ್ನೇ ಕದ್ದುಕೊಂಡು ಹೋಗಿಬಿಟ್ಟಳೇನು ? ಬಾ, ಬಾ.... ದೂರ ಎಲ್ಲೂ ಹೋಗಿಲ್ಲ, ಇದೇ ಊರಿನಲ್ಲಿಯೇ ಇದ್ದಾಳೆ" ಎಂದು ಏನೇನೋ ತಮಾಷಿ ಮಾಡಿದ. ಆದರೆ ನಾಗರಾಜನ ಮುಖ ಮಾತ್ರ ಗೆಲುವಾಗಲಿಲ್ಲ. ಏನೋ ಚಿಂತೆಯಲ್ಲಿ ಮುಳುಗಿದಂತಿತ್ತು.

ನಾಗಭೂಷಣರಾಯರು ಒಳ್ಳೆಯ ಹಣವಂತರೇ, ಅವರಿಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ ಅಷ್ಟೆ. ಅವರು ಬೆಂಗಳೂರಿನಲ್ಲಿ ಒಂದು ಸಣ್ಣ ಸೋಪು ಫ್ಯಾಕ್ಟರಿಯನ್ನೇ ನಡೆಸುತ್ತಿದ್ದರು. ವರಮಾನಕ್ಕೇನೂ ಕಮ್ಮಿ ಇರಲಿಲ್ಲ. ವರೋಪಚಾರ, ಹೆಣ್ಣಿಗೆ ಒಡವೆ ಅಣಿಯಾಗಿ ಸಂಸಾರಕ್ಕೆ ಸಾಮಾನುಗಳು ಎಲ್ಲಾ ಕೊಟ್ಟು ವೈಭವದಿಂದ ಮದುವೆ ಮಾಡಿಕೊಟ್ಟರು.

ಗಂಡು ಹೆಣ್ಣು ಜೋಡಿ ತುಂಬಾ ಸುಂದರವಾಗಿದ್ದುದರಿಂದ ವಿವಿಧ ಭಂಗಿಯಲ್ಲಿ ಫೋಟೋ ತೆಗೆದುಕೊಂಡರು. ವಾರಪತ್ರಿಕೆ, ದಿನಪತ್ರಿಕೆಗಳಲ್ಲಿಯೂ ಕೂಡ ಈ ಮುದ್ದಾದ ಜೋಡಿ ಪ್ರಕಟವಾಗಿ ನೋಡುವವರ ಮನ ಸೆಳೆಯುವಂತಿತ್ತು.

ಭಾಗೀರಥಮ್ಮನವರು ಹೊಸ ಚೈತನ್ಯವನ್ನು ಹೊಂದಿ ಸೊಸೆಯನ್ನು ಮನೆ ತುಂಬಿಸಿಕೊಳ್ಳುವ ಸಂಭ್ರಮದಲ್ಲಿ ಸಡಗರದಿಂದ ಓಡಾಡಿದರು. ಅವರ ವಿಶಾಲವಾದ ಮನೆಯಲ್ಲಿ ಮಹಡಿಯ ಮೇಲೆ ಮಗ ಸೊಸೆಗೆಂದೇ ಒಂದು ಕೊಠಡಿಯನ್ನು ಬಿಟ್ಟು ಕೊಟ್ಟು ಅದರಲ್ಲಿ ವಿವಿಧ ಆಧುನಿಕ ಅಲಂಕರಣ ವಸ್ತುಗಳನ್ನು ಜೋಡಿಸಿಟ್ಟರು. ಮಂಚ,ಸುಪ್ಪತ್ತಿಗೆ, ಫ್ಯಾನು,ನಿಲುವುಗನ್ನಡಿ, ಸೋಫಾ, ಸುಗಂಧ ದ್ರವ್ಯಗಳನ್ನೂ ಅಲಂಕರಣ ವಸ್ತುಗಳನ್ನೂ ಇಟ್ಟುಕೊಳ್ಳಲು ನಾಜೂಕಾದ ಸ್ಟ್ಯಾಂಡುಗಳು ಇವೆಲ್ಲಾ ಸೌಕರ್ಯಗಳನ್ನು ಏರ್ಪಡಿಸಿದ್ದರು. ಅಟ್ಯಾಚ್ ಬಾತ್ ರೂಂ, ನಲ್ಲಿ ಅವೆಲ್ಲಾ ಮೊದಲೇ ಇತ್ತು. ಅತ್ತಿಗೆಯನ್ನು ಆಹ್ವಾನಿಸಲು ರವಿ ಬಲು ಮುತುವರ್ಜಿಯಿಂದ ಮನೆಯನ್ನೆಲ್ಲಾ ಅಲಂಕರಿಸಿದ.

ನಾಗರಾಜನಿಗೆ ಇದೆಲ್ಲಾ ನೋಡಿ ಬಲು ಸಂಕೋಚ, " ಲೋ ರವಿ ; ನಿನಗೇನು ಹುಚ್ಚೇನೋ ? ಏನೂ ಸೀಮೆಗಿಲ್ಲದ ಸೊಸೆ ಈ ಮನೆಗೆ ಬರುತ್ತಾಳೇನೋ ? ಯಾವುದೂ ಅತೀ ಆಗಬಾರದು ಸುಮ್ಮನಿರೋ " ಎಂದು ಗದರಿದ.

ಲೋ ರಾಜ ; ಈಗ ಯಾವುದು ಅತೀ ಆಗಿದೆ ಅಂತ ನಿನ್ನ ಅಭಿಪ್ರಾಯ ? ಅಮ್ಮ ಒಬ್ಬಳನ್ನ ಬಿಟ್ರೆ ಈ ಮನೆ ಬರೀ ಗಂಡು ಬೀಡೇ ಆಗಿತ್ತು, ಈಗ ತಾನೆ ಸಧ್ಯ ಈ ಮನೆಗೆ ಇನ್ನೊಂದು ಹೆಣ್ಣು ಅಂತ ಬರ್ತಿರೋದು ? ಪಾಪ ; ಹೊಸದಾಗಿ ಬರುವ ಹೆಣ್ಣಿಗೆ ನಾಚಿಕೆ ಸಂಕೋಚ ಅಂತ ಇರೋಲ್ವೇ ? ಅದಕ್ಕಾಗಿ ಅವಳಿಗೆಂದೇ ಒಂದು ಕೊಠಡಿ ಅಣಿ ಮಾಡಿದೆನಪ್ಪ ; ಇದರಲ್ಲೇನು ? ಅತೀ ? ಎಂದು ವಾದಿಸಿದ.

" ಏನೋ ಅವಳಿಗಾಗಿಯೇ ಆ ಕೊಠಡಿ ಅಂದುಬಿಟ್ಟೆಯಲ್ಲ ; ನನಗೆಲ್ಲಪ್ಪಾ ಜಾಗ ? ಎಂದು ತಮಾಷೆಯಾಗಿ ಕೇಳಿದ ನಾಗರಾಜ.

" ನಾನೇನೋ ನಿನಗೆ ಬೇರೆ ಕೊಠಡೀನೇ ಕೊಡ್ತೀನಿ. ಆದರೆ ನೀನು ಅತ್ತಿಗೆ ಕೊಠಡೀಗೇ ಹೋಗಕೂಡದು, ಒಪ್ಕೋತೀಯೋ ಎಂದು ಮರು ಸವಾಲು ಹಾಕಿದ ರವಿ.

ನೋಡ್ತಿರೋ ನಾನು ಹೋಗೋದೇ ಇಲ್ಲ ಎಂದ ರಾಜ.

ಆ ಹಾ....... ಹಾ : ಮದುವೇಲೇ ನೋಡಿದ್ದಾಯ್ತಲ್ಲಾ, ಅತ್ತಿಗೆ ಒಂದು ಕ್ಷಣ ಕಣ್ ಮರೆಯಾಗೋಕಿಲ್ಲ ಛತ್ರದಲ್ಲೆಲ್ಲಾ ಹುಡುಕಾಡಿಬಿಟ್ಟೆ, ಈಗ ಬರೋ ದಿನವನ್ನ ಎಣಿಸ್ತಾ ಅದೇ ಜ್ಞಾನದಲ್ಲಿದ್ದೀಯಪ್ಪಾ ; ನೀನು ನಿಜವಾಗಿ " ಅರ್ಜುನ ಸನ್ಯಾಸಿ " ಕಣೋ, ಎಂದು ಗೇಲಿ ಮಾಡಿದ ರವಿ.

ಆ ವೇಳೆಗೆ ತಾಯಿ ರವಿಯನ್ನು ಕೂಗಿದ್ದರಿಂದ ಅವನು ಏನೋ ಸಾಮಾನು ತರಲು ಪೇಟೆಗೆ ಹೊರಟು ಹೋದ.

ನಾಗರಾಜನಿಗೆ ರವಿ ಗೇಲಿ ಮಾಡಿದ ಒಂದೊಂದು ಮಾತು ಜ್ಞಾಪಕಕ್ಕೆ ಬಂದು ಮನದಲ್ಲಿಯೇ ನಕ್ಕ, " ಅರ್ಜುನ ಸನ್ಯಾಸಿ" ಅಂದದ್ದು ಎಷ್ಟು ಸಹಜ ?

ಹೆಣ್ಣಿನ ವಿಚಾರವಾಗಿ ಆಸೆ-ಆಕಾಂಕ್ಷೆ ಇಲ್ಲದಿದ್ದ ತನ್ನನ್ನು ವಾಸಂತಿ ಆಕರ್ಷಿಸಿದಳು. ಮದುವೆಯ ಮಂಟಪದಲ್ಲಿ ಸರ್ವಾಲಂಕಾರ ಭೂಷಿತಳಾಗಿ ಪೀತಾಂಬರವನ್ನುಟ್ಟು ನೀಳ ಜಡೆಗೆ ಮಲ್ಲಿಗೆ ದಂಡೆ ಮುಡಿದು ಕಮಲದ ದಳದಂತಿದ್ದ ಕಣ್ಣಿಗೆ ಕಾಡಿಗೆ ತೀಡಿ ಸುಲಕ್ಷಣ ವಾಗಿ ಲಕ್ಷ್ಮಿಯಂತೆ ಕಂಗೊಳಿಸುತ್ತಿದ್ದ ವಾಸಂತಿಯನ್ನು ಕಂಡ ತಕ್ಷಣ ನಾಗರಾಜ ಚಕಿತ ನಾದ, ಮತ್ತೂ ಮತ್ತೂ ಅವಳನ್ನು ನೋಡಬೇಕೆಂಬ ಆಸೆ ಅಂಕುರಿಸಿತು.

ಮೊದಲಬಾರಿಗೆ ಅವಳ ಕೈ ಹಿಡಿದಾಗಲಂತೂ ಮೈ ರೋಮಾಂಚನವಾಯಿತು, ಹಿಡಿದಿದ್ದ ಕೈ ಹಾಗೇ ಬಿಗಿ ಹಿಡಿದ.

ವಾಸಂತಿ ನಾಚಿಕೆಯಿಂದ ಮತ್ತೂ ತಲೆ ತಗ್ಗಿಸಿದಳು. ಧಾರೆ ಮುಗಿದು ಸಪ್ತಪದಿ ಮೆಟ್ಟಿ ಅಗ್ನಿ ಪ್ರದಕ್ಷಿಣೆ ಮಾಡುವ ವೇಳೆಗೆ ವಾಸಂತಿ ತನ್ನ ಅನೇಕ ಜನ್ಮಗಳ ಆತ್ಮೀಯ ಳಂತೆ ಆದಳು.

ವಾಸಂತಿಗಂತೂ ತನ್ನ ಪ್ರಿಯತಮನನ್ನು ಕದ್ದು ಕದ್ದು ಎಷ್ಟು ನೋಡಿದರೂ ತೃಪ್ತಿಯಿಲ್ಲ. ಇಂದಿರಳ ಕಣ್ಣು ತಪ್ಪಿಸಿ ಒಂದೊಂದು ಮಾತು, ಅಗ್ನಿಯ ಹೊಗೆಯಿಂದ ಕಣ್ಣು ಕೆಂಪಾಗಿ ಕಣ್ಣು ಮೂಗಿನಲ್ಲಿ ನೀರು ಸುರಿದಾಗ ತನ್ನಲ್ಲಿದ್ದ ಕರ್ಚೀಫನ್ನು ಗಂಡನ ಕೈಗೆ ಕೊಡುತ್ತಿದ್ದಳು. ಅವನು ಮೂಗೊರೆಸಿಕೊಂಡು ಮತ್ತೆ ಅವಳ ಕೈಗೆ ಕೊಡುತ್ತಿದ್ದ.

ಹೀಗೆ ಒಬ್ಬರಿಗೊಬ್ಬರು ಊಟಮಾಡಿ ಕೈ ತೊಳೆಯುವ ವೇಳೆಗೆ ಹಳಬರಾಗಿದ್ದರು. ಇಂದಿರ ಅಕ್ಕನನ್ನು ಕೀಟಲೆ ಮಾಡಿ ಹಾಸ್ಯ ಮಾಡಿದರೆ ರವಿ ಅಣ್ಣನನ್ನು ಛೇಡಿಸುತ್ತಿದ್ದ.

ಹೀಗಾಗಿ ವಾಸಂತಿಯ ಮೇಲೆ ಮೋಹ, ನಾಗರಾಜನಿಗೆ ಅರಿವಿಲ್ಲದಂತೆಯೇ ಆಳವಾಗಿ ಬೇರೂರಿತು.

ಮದುವೆಯಾದ ಒಂದು ವಾರದೊಳಗಾಗಿ ಸೊಸೆಯನ್ನು ಮನೆ ತುಂಬಿಕೊಳ್ಳುವ ಶಾಸ್ತ್ರವನ್ನು ಇಟ್ಟುಕೊಂಡಿದ್ದರು. ಆ ಒಂದು ವಾರದೊಳಗೆ ಅಳಿಯನನ್ನು ತಮ್ಮ ಮನೆಗೆ ಎರಡು ಮೂರು ಬಾರಿ ಬರಮಾಡಿಕೊಂಡಿದ್ದರು ನಾಗಭೂಷಣರಾಯರು.

ಹೋದಾಗಲೆಲ್ಲಾ ವಾಸಂತಿಯೇ ತನ್ನ ಇನಿಯನನ್ನು ಆದರಿಸಿ ಕಾಫಿ ತಿಂಡಿ ತಂದು ಕೊಟ್ಟು ಉಪಚರಿಸಿದ್ದಳು. ಅವಳಿಗೆ ಸಂಕೋಚವಾದರೂ ಅವನ ಸನಿಹ ನಿಂತು ಮಾತನಾಡಲು ಆಶಿಸಿದ್ದಳು.

ವಾಸಂತಿಗಿಂತ ಹೆಚ್ಚು ಸಂಕೋಚ ಪಡುತ್ತಿದ್ದವನು ನಾಗರಾಜ. ಅಷ್ಟಕ್ಕೇ ವಾಸಂತಿಗೆ ಗಾಬರಿಯಾಗುತ್ತಿತ್ತು. ಏಕೋ ತನ್ನಲ್ಲಿ ಅಕ್ಕರೆ ತೋರಿಸುತ್ತಿಲ್ಲವಲ್ಲಾ ? ಏನು ಕಾರಣ ಎಂದು ಒಂದು ಘಳಿಗೆ ಪೆಚ್ಚಾಗುತ್ತಿದ್ದಳು.

ಆ ದಿನ ನಾಗರಾಜ ಬಂದಾಗ ವಾಸಂತಿ ಉತ್ಸಾಹದಿಂದ ತನ್ನ ಕೊಠಡಿಗೆ ತಂದು ಮಂಚದ ಮೇಲೆ ಕುಳ್ಳಿರಿಸಿದಳು. ಒಳಕ್ಕೆ ಓಡಿ ಹೋಗಿ ಎರಡು ತಟ್ಟೆಯಲ್ಲಿ ಉಪ್ಪಿಟ್ಟು ಬೋಂಡ, ಇಟ್ಟುಕೊಂಡು ರೂಮಿನೊಳಕ್ಕೆ ಬಂದಳು.

ನಾಗರಾಜ ಎತ್ತಲೋ ನೋಡುತ್ತ ಇತ್ತ ಗಮನವಿಲ್ಲದಂತೆ ಕುಳಿತಿದ್ದ.

ಇದೇನು ತನ್ನ ಪ್ರೀತಿಯ ಪತಿ ತನ್ನನ್ನು ಬರಮಾಡಿಕೊಳ್ಳುವ ರೀತಿ ಇದೇನಾ ? ಅನ್ನಿಸಿತು ವಾಸಂತಿಗೆ. ಒಂದು ತಟ್ಟೆಯನ್ನು ಟೇಬಲ್ ಮೇಲೆ ಇಟ್ಟು ಇನ್ನೊಂದನ್ನು ನಾಗರಾಜನ ಮುಂದೆ ನೀಡಿದಳು.

ಈ ದಿನವಂತೂ ಅಲಕ್ಷ್ಯವಾಗಿರುವ ತನ್ನ ಪತಿಯನ್ನು ಆಕರ್ಷಿಸಬೇಕು, ತನ್ನತ್ತ ಸೆಳೆಯಬೇಕು, ಅವನೊಂದಿಗೆ ಏನೇನೋ ಪ್ರೇಮಲಾಪಗೈಯಬೇಕು. ಅವನು ತನ್ನನ್ನು ಸೆಳೆದಪ್ಪಿದಾಗ ಅವನ ವಿಶಾಲ ಎದೆಯಲ್ಲಿ ಮುಖ ಮುಚ್ಚಿ ಸುಖಸಾಗರದಲ್ಲಿ ತೇಲಾಡಬೇಕು ಎಂದೆಲ್ಲಾ ಆಶಾ ಕೋಟೆಯನ್ನು ಕಟ್ಟಿಕೊಂಡೇ ಬಂದಿದ್ದಳು.

ಇಂದು ಅವಳ ಅಲಂಕಾರವೂ ಆಕರ್ಷಣೀಯವಾಗಿತ್ತು. ಕಪ್ಪು ಕುರುಳಿನ ನೀಳ ಕೂದಲನ್ನು ಮುಡಿಕಟ್ಟಿದ್ದಳು. ಮುಡಿಗೆ ಮುತ್ತಿನ ಮಾಲೆಯನ್ನು ಸಿಕ್ಕಿಸಿದ್ದಳು. ಅದು ಕಿವಿಯ ಹಿಂಭಾಗ ಜೋತಾಡುತ್ತಿತ್ತು. ಕಿವಿಗೆ ಕೆಂಪಿನ ರಿಂಗ್ ತಗುಲಿಸಿದ್ದಳು. ಒಂದೆಳೆ ಮುತ್ತಿನ ಸರ ಉಬ್ಬಿದ ಎದೆಯ ಮಧ್ಯದಲ್ಲಿ ಸಂಗಮವಾಗಿ ಹೊಕ್ಕಳಿನವರೆಗೂ ತೂಗಾಡುತ್ತಿತ್ತು. ಹಸಿರು ರವಿಕೆ ತೊಟ್ಟು ವನ ರಾಣಿಯಂತೆ ಶೋಭಿಸುತ್ತಿದ್ದಳು.

ನಾಗರಾಜ ತಟ್ಟೆ ಹಿಡಿದು ತನ್ನ ಮುಂದೆ ನಿಂತ ಮನಮೋಹಕ ಮಡದಿಯನ್ನು ಕಣ್ಣರಳಿಸಿ ನೆಟ್ಟ ನೋಟದಿಂದ ನೋಡಿದ.

ವಾಸಂತಿ ತಲೆ ತಗ್ಗಿಸಿ " ತಿಂಡಿ ಆರಿಹೋಗುತ್ತೆ, ತೆಗೆದುಕೊಳ್ಳಿ " ಎಂದು ಮಧುರವಾಗಿ ಹೇಳಿದಳು.

ನಾಗರಾಜ ತಿಂಡಿ ತಟ್ಟೆಯನ್ನು ಅವಳ ಕೈಯಿಂದ ತೆಗೆದುಕೊಂಡ. ಅಂದು ಅವನ ಕಣ್ಣಿಗೆ ಸುರಸುಂದರಿಯಾಗಿ ಕಂಡಳು ಹೆಂಡತಿ. ಆ ರೂಪವನ್ನು ಕಣ್ಣಿನಲ್ಲಿ ತುಂಬಿಕೊಳ್ಳುತ್ತಿದ್ದಂತೆಯೇ ಅವನ ಮೈ ಪುಳಕಿತವಾಯಿತು. ಮನಸ್ಸು ಉಲ್ಲಾಸ ಗೊಂಡಿತು. ಪ್ರೀತಿಯ ಧ್ವನಿಯಿಂದ " ಬಾ ವಾಸಂತೀ ಇಲ್ಲೇ ಕುಳಿತು ನೀನೂ ತಿಂಡಿ ತಿನ್ನು " ಎಂದು ಅವಳ ಕೈ ಹಿಡಿದ.

ವಾಸಂತಿಗೆ ಅಷ್ಟೇ ಬೇಕಾಗಿತ್ತು. ಸಂಕೋಚವಾದರೂ ಹಿಂತೆಗೆಯದೆ ತಿಂಡಿ ತಟ್ಟೆ ತೆಗೆದುಕೊಂಡು ಗಂಡನ ಪಕ್ಕದಲ್ಲಿ ಕುಳಿತಳು. ನಾಗರಾಜ ತನ್ನ ತಟ್ಟೆಯಿಂದ ಉಪ್ಪಿಟ್ಟನ್ನು ತೆಗೆದುಕೊಂಡು ಅವಳ ಬಾಯೊಳಕ್ಕೆ ಇಟ್ಟ. ವಾಸಂತಿಯೂ ತನ್ನ ಕೈಯಿಂದ ನಾಗರಾಜನಿಗೆ ತಿನ್ನಿಸಿದಳು. ಇಬ್ಬರೂ ಮುಸಿ ಮುಸಿ ನಕ್ಕರು.

ವಾಸಂತಿಗೆ ಎಷ್ಟೋ ಧೈರ್ಯ ಬಂದಂತಾಯಿತು. ಇನ್ನೂ ಹತ್ತಿರ ಸರಿದು ಅವನ ಕೈಯನ್ನು ತನ್ನ ಕೈಗೆ ತೆಗೆದುಕೊಂಡು ನೇರವಾಗಿ ಅವನನ್ನು ನೋಡುತ್ತಾ " ನಿಮಗೆ ಇನ್ನೂ ಎಷ್ಟು ದಿನ ರಜ ಇದೆ ? " ಎಂದು ಕೇಳಿದಳು.

ನಾಗರಾಜ ಅವಳ ಕೈಯನ್ನು ಒತ್ತಿ ಹಿಡಿದು " ಎರಡು ವಾರ ಹಾಕಿದ್ದೆ. ಒಂದು ವಾರ ಕಳೆಯಿತು. ಇನ್ನೊಂದು ವಾರ ಇದೆ ಅಷ್ಟೇ. " ಏಕೆ ? ಎಂದ.

ಅವನ ಸ್ಪಷ್ಟ ಉತ್ತರ ವಾಸಂತಿಗೆ ಹಿಡಿಸಿತು, " ಎಲ್ಲಾದರೂ ಎರಡು ದಿನ ಟ್ರಿಪ್ ಹೋಗಿ ಬರೋಣವಾ ? " ಎಂದು ಆಸೆ ತುಂಬಿದ ಧ್ವನಿಯಲ್ಲಿ ಕೇಳಿದಳು.

ನಾಗರಾಜ ಹಿಡಿದಿದ್ದ ಹೆಂಡತಿಯ ಕೈ ಬಿಟ್ಟು "ಟ್ರಿಪ್‌ಗೆ ಈಗೇನು ಅವಸರ ವಾಸಂತೀ. ಇನ್ನೂ ಮುಂದೆ ಬೇಕಾದಷ್ಟು ಅವಕಾಶ ಇದೆಯಲ್ಲಾ ಎಂದು ಹೇಳುತ್ತಾ ಅವಳ ಬೆನ್ನು ನೇವರಿಸಿದ.

ವಾಸಂತಿ ತಕ್ಷಣ ಪೆಚ್ಚಾದಳು, ತನ್ನ ಗಂಡನಿಂದ ಈ ಉತ್ತರ ಬರಬಹುದೆಂದು ನಿರೀಕ್ಷಿಸಿರಲಿಲ್ಲ. ಅವನೂ ತನ್ನಷ್ಟೇ ಉತ್ಸಾಹದಿಂದ "ಹೂಂ.... ಎಲ್ಲಿಗೆ ಹೋಗೋಣ?" ಎಂದು ಕೇಳುತ್ತಾನೆಂದು ಭಾವಿಸಿದ್ದಳು.

ಅವಳು ತಕ್ಷಣ ಬೇಸರದಿಂದ "ಸಧ್ಯ ಮುಂದಿನ ಮಾತು ಈಗ್ಯಾಕೆ ? ಈಗಂತೂ ಇಲ್ಲವಲ್ಲಾ !" ಎಂದು ಎದ್ದು ನಿಂತಳು. ಅವಳ ಸಾನ್ನಿಧ್ಯ, ಸಾಮೀಪ್ಯ ಅವನಿಗೆ ಏನೋ ಒಂದು ವಿಧವಾದ ನೆಮ್ಮದಿಯನ್ನು ನೀಡಿತ್ತು.

ಅವನ ಸನ್ಯಾಸಿ ಬಾಳಿನಲ್ಲಿ ಉತ್ಸಾಹದ ಬುಗ್ಗೆ ಉಕ್ಕಲು ಪ್ರಾರಂಭಿಸಿತ್ತು. ತನಗೂ ಹೆಣ್ಣಿನ ಸಹವಾಸ ಹಿತವನ್ನು ನೀಡಬಲ್ಲದು ಎಂದು ಕಂಡು ಕೊಂಡ. ವಾಸಂತಿ ಎಲ್ಲಿ ಹೊರಟು ಹೋಗುವಳೋ ಎಂದು ಕಾತುರದಿಂದ ಅವಳ ಕೈ ಹಿಡಿದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅವಳ ಮೈ ಸುತ್ತ ತೋಳು ಬಳಸಿ " ಎಲ್ಲಿ ನನ್ನ ರಾಣಿಗೆ ಕೋಪ ಬಂತಾ ? " ಎಂದು ಗಲ್ಲ ಹಿಡಿದು ಮುಖ ಎತ್ತಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದ.

ವಾಸಂತಿಗೆ ಎಷ್ಟೋ ನೆಮ್ಮದಿಯಾಯಿತು. ತನ್ನ ಪತಿ ತನ್ನಲ್ಲಿ ಪ್ರೇಮ ಪೂರಿತನಾಗಿದ್ದಾನೆ. ತನಗೆ ಯಾವ ಕೊರತೆಯೂ ಆಗಲಿಕ್ಕಿಲ್ಲ ಎಂದು ಹಿಗ್ಗಿದಳು. ಅವನ ತೋಳಿನ ಆಸರೆಯಲ್ಲಿ ಹುದುಗಿ ಕುಳಿತಳು.

ನಾಗರಾಜ ತನ್ನ ಒರಟು ಕೆನ್ನೆಯನ್ನು ಅವಳ ಮೃದು ಕಪೋಲಕ್ಕೆ ತೀಡಿದ. ನಾಚಿಕೆಯಿಂದ ವಾಸಂತಿ ರಾಗರಂಜಿತಳಾದಳು. ಈ ಲೋಕವನ್ನೇ ಮರೆತು ಪತಿಯ ಸಾನ್ನಿಧ್ಯ ಸುಖದಲ್ಲಿ ಮೈ ಮರೆತಳು.

ಅಷ್ಟರಲ್ಲಿ ಇಂದಿರ ರೂಮಿನ ಬಾಗಿಲ ಬಳಿ ಬಂದು " ಏಯ್ ವಾಸೀ ! ಕಾಫಿ ಆರಿ ಹೋಗುತ್ತಿದೆಯಲ್ಲೇ ತಿಂಡಿ ತೆಗೆದುಕೊಂಡು ಹೋದವಳು ಕಾಫಿ ಕೊಡುವುದನ್ನೇ ಮರೆತು ಕೂತುಬಿಟ್ಟೆಯಾ ? " ಎಂದು ಮೆಲ್ಲನೆ ಕೂಗಿದಳು.

ವಾಸಂತಿ ಗಡಿಬಿಡಿಯಿಂದ " ಥೂ....ಬಿಡ್ರೀ....ಎಷ್ಟೊತ್ತಾಯ್ತು ನಾ ಬಂದು " ಎಂದು ಪಿಸುಗುಟ್ಟಿದಳು.

ಅಷ್ಟಕ್ಕೂ ಬಿಡದೆ ನಾಗರಾಜ ಅವಳ ಕೆನ್ನೆಯನ್ನು ಕೆಂಪಗೆ ಮಾಡಿ ಕಳುಹಿಸಿದ. ವಾಸಂತಿ ರೂಮಿನಿಂದ ಹೊರಗೆ ಬಂದು ತಂಗಿ ತಂದಿದ್ದ ಕಾಫಿ ಲೋಟಗಳನ್ನು ಕೈಗೆ ತೆಗೆದುಕೊಂಡಳು ತಲೆಯೆತ್ತಿ ಇಂದಿರಾಳನ್ನು ನೋಡಲು ನಾಚಿದಳು.

ಅಕ್ಕ ತಲೆ ತಗ್ಗಿಸಿ ಕಾಫಿ ತೆಗೆದುಕೊಂಡು ಒಳಕ್ಕೆ ಹೋದುದಕ್ಕೆ ಅರ್ಥವಾದವಳಂತೆ ಇಂದಿರಾ ಮುಸಿ ಮುಸಿ ನಗುತ್ತಾ ಅಲ್ಲಿಂದ ಓಡಿ ಹೊರಟುಹೋದಳು.

ಕಾಫಿ ಲೋಟವನ್ನು ಗಂಡನ ಕೈಗಿತ್ತು ಓರೆ ನೋಟದಿಂದ ನೋಡುತ್ತಾ ಕಾಫಿ ಹೀರುತ್ತಿದ್ದಳು ವಾಸಂತಿ. ಅವನೂ ಅದೇ ಮಾಡುತ್ತಿದ್ದ. ಇಬ್ಬರು ಪಕ್ಕನೆ ನಕ್ಕರು. ಆ ನಗುವಿನಲ್ಲಿ ಬ್ರಹ್ಮಾಂಡದ ಭಾಷೆಯೇ ಅಡಗಿತ್ತೋ... ಏನೋ ?

ಈ ಎಲ್ಲಾ ಸವಿ ನೆನಪೂ ನಾಗರಾಜನಿಗೆ ರವಿ ಹಾಸ್ಯಮಾಡಿದ " ಅರ್ಜುನ ಸನ್ಯಾಸಿ " ಎಂಬ ಮಾತಿನಿಂದ ಮರುಕಳಿಸಿತು.

ಇಷ್ಟು ಉತ್ಸಾಹವಿದ್ದರೂ ತಾನೇಕೆ ಒಂದೊಂದು ಸಲ ಭಯಭೀತನಾಗಬೇಕು? ಆ ಭಯದಿಂದಾಗಿ ತನ್ನ ಚೈತನ್ಯವೇ ಉಡುಗಿದಂತಾಗುತ್ತದೆಯಲ್ಲಾ ; ದೇವರೇ !....

ನನ್ನ ಪ್ರೇಮಪುತ್ಥಳಿ ವಾಸಂತಿಗೆ ಯಾವ ಅನ್ಯಾಯವೂ ಆಗದಂತೆ ನನಗೆ ರಕ್ಷಣೆ ಕೊಡು ಎಂದು ದೇವರಲ್ಲಿ ಮೊರೆಯಿಟ್ಟ ನಾಗರಾಜ.

ವಾಸಂತಿಯ ತಾಯಿ ಅನಸೂಯಮ್ಮ ಮಗಳನ್ನು ಅತ್ತೆಯ ಮನೆಗೆ ಕಳುಹಿಸಿ ಕೊಡುವ ಸಿದ್ಧತೆಗಳನ್ನು ಮಾಡತೊಡಗಿದರು. ಮಗಳಿಗೆ ಯಾವುದರಲ್ಲಿಯೂ ಕೊರತೆಯಾಗಬಾರದೆಂದು ಹಬ್ಬ ಹರಿದಿನಗಳಲ್ಲಿ ಉಪಯೋಗಿಸಲು ಬೆಳ್ಳಿಯ ಪೂಜಾ ಸಾಮಾನುಗಳು ತಟ್ಟೆ-ಬಟ್ಟಲುಗಳು, ಹಾಸಿಗೆ, ಟ್ರಂಕು, ನಿಲುಗನ್ನಡಿ, ಬೀರು, ಸ್ಟೀಲ್ ಸೆಟ್ ಪಾತ್ರೆ, ಎಲ್ಲಾ ಹೊಸ ಹೊಸದಾಗಿ ಮನೆಗೆ ಬಂದು ಒಂದು ಕಡೆ ಜೋಡಿಸಲ್ಪಟ್ಟವು.

ಮಗಳಿಗೆ ಇಷ್ಟವಾದ ತಿಂಡಿ ಒಂದೊಂದು ದಿನ ಒಂದೊಂದು ಬಗೆ ಮಾಡಿ ಕೊಡುತ್ತಿದ್ದರು. ಮಗಳಿಗೆ ಎಷ್ಟು ಬಗೆ ಉಪಚಾರ, ಮುದ್ದು ಮಾಡಿದರೂ ಸಾಲದು ತಾಯಿಯ ಪ್ರೇಮ.

ಹೀಗೆ ತಾಯಿಯ ಬಿಡುವಿಲ್ಲದ ದುಡಿತವನ್ನು ನೋಡಿ ವಾಸಂತಿ "ಇದೇನಮ್ಮಾ ! ನಾನೇನಾದ್ರೂ ಡೆಲ್ಲಿ ದ್ವೀಪಾಂತರ ಹೋಗಿಬಿಡುತ್ತೇನೆಯೇ ? ಇದೇ ಊರಿನಲ್ಲಿ ತಾನೇ ಇರುತ್ತೇನೆ ಬೇಕಾದಾಗ ಬಂದರಾಯಿತು. ನೀನು ಹಾಯಾಗಿ ಇರಮ್ಮ" ಎನ್ನುತ್ತಿದ್ದಳು.

ಅಲ್ಲಾ ಕಣೇ ವಾಸೀ ! " ಕೊಟ್ಟ ಹೆಣ್ಣು ಕುಲಕ್ಕೆ ಹೊರಗು " ಎನ್ನುವ ಗಾದೆ ಮಾತು ಸುಮ್ಮನಲ್ಲಮ್ಮ. ಅಲ್ಲಿ ಹೋದ ಮೇಲೆ ಅಲ್ಲಿಯ ಸಂಸಾರ ನಿನಗೆ ಹೆಚ್ಚು. ನಾವು ಕರೆದರೂ ನಿನಗೆ ಬರುವುದಕ್ಕೆ ಪುರಸೊತ್ತಾಗುವುದಿಲ್ಲ. ಇಲ್ಲಿರುವಾಗ ನಿನಗೆ ತೃಪ್ತಿಯಾಗುವಂತೆ ಮಾಡಿಬಿಟ್ಟರೆ ನೆಮ್ಮದಿ ಅನ್ನುತ್ತಿದ್ದರು.

ಇಂದಿರಾ ವಾಸಂತಿ ಅಕ್ಕತಂಗಿಯರಾದರೂ ಎರಡು ದೇಹ, ಒಂದು ಪ್ರಾಣ ಎನ್ನುವಂತಿದ್ದರು. ಇಂದಿರ ಸ್ವಲ್ಪ ತುಂಟಿ, ಮಕ್ಕಳಂತೆ ಆಡಿಕೊಂಡು ಅಕ್ಕನನ್ನು ಕೀಟಲೆ ಮಾಡುತ್ತಾ ಅವಳ ಹಿಂದೂ ಮುಂದೂ ಓಡಾಡಿಕೊಂಡಿರುತ್ತಿದ್ದಳು.

ಇನ್ನೇನು ಅಕ್ಕ ಗಂಡನ ಮನೆಗೆ ಹೊರಟು ಹೋಗುತ್ತಾಳೆಂದಾಗ ಇಂದಿರಾ ಪೂರಾ ಮಂಕಾಗಿ ಬಿಟ್ಟಳು. ಅಕ್ಕನನ್ನು ಅಗಲಿರಬೇಕೆಂಬ ಯೋಚನೆಯೇ ಅವಳಿಗೆ ದುಃಖವನ್ನುಂಟುಮಾಡುತ್ತಿತ್ತು.

ವಾಸಂತಿಯಾದರೂ ತನ್ನ ಮುದ್ದು ತಂಗಿಯನ್ನು ಎಷ್ಟು ಪ್ರೀತಿಸಿದರೂ ಸಾಲದು. ಅವಳು ಓದುವ ಹುಡುಗಿ ಎಂದು ಅವಳಿಗೆ ಒಂದು ಕೆಲಸವನ್ನೂ ಬಿಡುತ್ತಿರಲಿಲ್ಲ.

ಅವಳ ಬಟ್ಟೆ, ಸೀರೆ ಎಲ್ಲವನ್ನೂ ತಾನೇ ಮಡಿಸಿ ಓರಣವಾಗಿ ಇಡುತ್ತಿದ್ದಳು. ಇಬ್ಬರ ಸೀರೆ ಬಟ್ಟೆಗಳೂ ಒಂದೇ ಬೀರುನಲ್ಲಿ ತುಂಬಿದ್ದರು. ಈಗ ಹೊರ

ಡುವ ದಿನ ಹತ್ತಿರ ಬಂದಾಗ ವಾಸಂತಿ ಇಬ್ಬರ ಸೀರೆಯನ್ನೂ ಬೇರೆ ಬೇರೆ ವಿಂಗಡಿಸಿ ಇಡುತ್ತಿದ್ದಳು.

ಇಂದಿರಾಗೆ ಇಷ್ಟವಾಗಿದ್ದ ಒಳ್ಳೊಳ್ಳೆ ಸೀರೆಗಳನ್ನೇ ಅವಳಿಗೇ ಇಟ್ಟು ತಾನು ನಾಲ್ಕಾರು ಸೀರೆಗಳನ್ನು ಮಾತ್ರ ತೆಗೆದಿಟ್ಟುಕೊಂಡಳು. ಇಂದಿರಾ ತನಗಾಗಿ ಅಕ್ಕ ಎಲ್ಲವನ್ನೂ ಬಿಟ್ಟು ಹೋಗುತ್ತಿರುವುದು ತಿಳಿಯಿತು. ಅಕ್ಕನ ಪ್ರೀತಿಗೆ ಮಿತಿಯೇ ಇಲ್ಲ ಎಂದು ಅವಳಿಗೆ ದುಃಖ ಒತ್ತರಿಸಿ ಬಂತು.

ಕಣ್ಣಿನಲ್ಲಿ ನೀರು ತುಂಬಿಕೊಂಡು "ಇದೇನೇ ವಾಸೀ; ನಿನಗೆ ಹುಚ್ಚೋ ಗಿಚ್ಚೋ; ನಿನ್ನ ಸೀರೆಯಲ್ಲಾ ನನಗ್ಯಾಕೆ ತುಂಬಿಡುತ್ತಿದ್ದೀ; ಸೀರೆ ಅಂದ್ರೆ ನನಗೆ ಅಷ್ಟೊಂದು ದುರಾಸೇನೇ ಈಗ ನೋಡು ಎಲ್ಲಾದನ್ನೂ ನಿನ್ನ ಪೆಟ್ಟಿಗೆಗೆ ತುಂಬಿ ಬಿಡ್ತೀನಿ" ಎಂದು ಗಲ್ಲ ಉಬ್ಬಿಸಿ ಹೇಳಿದಳು.

ವಾಸಂತಿ ತಂಗಿಯನ್ನು ತಬ್ಬಿ ಹಿಡಿದು ನನ್ನ ಮುದ್ದು ಅಷ್ಟೊಂದು ಸಿಟ್ಟು ಬೇಡ ಮರೀ ನನಗೂ ಬೇಕಾದಷ್ಟು ಸೀರೆ ಇದೆ ನೋಡು, ಮದುವೆ ಸೀರೇನೇ ಒಂದು 25 ಸೀರೆ ಇದೆ. ನೀನು ಕಾಲೇಜಿಗೆ ಹೋಗುವ ಹುಡುಗಿ. ಲಕ್ಷಣವಾಗಿ ಇದೊಂದು ನಾಲ್ಕು ಸೀರೆ ನಿನಗಿರಲಿ ಎಂದು ಇಟ್ಟೆ ಎಂದು ಅವಳ ಗಲ್ಲ ಹಿಡಿದು ಮುದ್ದು ಮಾಡಿದಳು.

ಅಕ್ಕನ ಸೌಜನ್ಯ, ಇಂದಿರಾಗೆ ತಡೆ ಹಿಡಿದಿದ್ದ ದುಃಖ ಉಕ್ಕಿ ಬಂತು. ಅಕ್ಕನ ಭುಜದ ಮೇಲೆ ಮುಖವಿಟ್ಟು ಬಿಕ್ಕುತ್ತಾ "ಹೋಗೆ ವಾಸೀ ನನ್ನನ್ನು ನೀನು ಇಷ್ಟು ಪ್ರೀತಿ ಮಾಡಬೇಡ, ನಾವಿಬ್ರೂ ಕಚ್ಚಾಡ್ತಾ ಇದ್ರೇನೇ ಚೆನ್ನಾಗಿತ್ತು. ಈಗ ನೀನಿಲ್ಲದೇ ಈ ಮನೆಯಲ್ಲಿ ನಾನು ಹೇಗೆ ಇರಲೀ ? ಎಂದು ಅತ್ತಳು"

ಅವಳನ್ನು ಸಮಾಧಾನ ಮಾಡುವ ಹೊತ್ತಿಗೆ ವಾಸಂತಿಗೆ ಸಾಕು ಸಾಕಾಗಿ ಹೋಯಿತು. ಮಕ್ಕಳು ಒಬ್ಬರನ್ನೊಬ್ಬರು ಬಿಟ್ಟಿರಲಾರದೇ ತೊಳಲಾಡುವುದು ಅನಸೂಯಮ್ಮನವರಿಗೂ ಗೊತ್ತು. ಆದರೂ ಅನಿವಾರ್ಯ, ಅಗಲುವುದರಲ್ಲಿ ಒಂದು ನೆಮ್ಮದಿಯಿದೆ ಅಲ್ಲವೇ.

ಹೆಣ್ಣು ಮಕ್ಕಳಿಗೆ ಮದುವೆ ಆಗಲಿಲ್ಲವಲ್ಲಾ ಎಂದು ಹೆತ್ತವರು ಪರದಾಡು ತ್ತಿರುತ್ತಾರೆ. ಒಂದುಸಲ ಮದುವೆಯಾಯಿತೆಂದರೆ ಆಯಿತು, ಹುಟ್ಟಿ ಬೆಳೆದ ಮನೆಗೆ ಸಹಾಯಕವಾಗಿ. ತೌರುಮನೆಗೆ ತಂಪನ್ನೆರೆದು ತಾಯಿಯ ಕೆಲಸ ಕಾರ್ಯಗಳಲ್ಲಿ ಪಾಲುಗೊಂಡು ತಂದೆಯ ದುಡಿಮೆಯ ಕಷ್ಟವನ್ನರಿತು ಸಾಧ್ಯವಿದ್ದರೆ ತಾವೂ ದುಡಿದು ಸಂಸಾರವನ್ನು ಸರಿದೂಗಿಸಿ ಮನೆಗೆ ಕಾಮಧೇನುವಂತಿರುವ ಹೆಣ್ಣು ಮಕ್ಕಳನ್ನು ತೌರುಮನೆಯಿಂದ ಗಂಡನ ಮನೆಗೆ ಕಳುಹಿಸಿ ಕೊಡುವುದು ಸಾಮಾನ್ಯ ದುಃಖವಲ್ಲ.

ಸನ್ಯಾಸಿಯಾಗಿದ್ದ ಕಣ್ವಋಷಿಗಳೇ ತಮ್ಮ ಸಾಕುಮಗಳು ಶಕುಂತಳೆಯನ್ನು ಗಂಡನ ಮನೆಗೆ ಕಳುಹಿಸಬೇಕಾದರೆ ದುಃಖದಿಂದ " ಸಾಕು ಮಗಳನ್ನು ಕಳುಹಿಸಲು ಸನ್ಯಾಸಿಯಾದ ನನಗೇ ಇಷ್ಟು ದುಃಖವಾದರೆ ಇನ್ನು ಪ್ರಪಂಚದಲ್ಲಿ ಹೊತ್ತು ಹೆತ್ತು ಸಾಕಿ ಸಲಹಿದ ತಂದೆ ತಾಯಿಯರು ಹೆಣ್ಣು ಮಕ್ಕಳನ್ನು ಕಳುಹಿಸುವಾಗ ಇನ್ನೆಷ್ಟು ದುಃಖವನ್ನು ಸಹಿಸುವರೋ ! ಹೆತ್ತವರಿಗೆ ಮಾತ್ರ ಗೊತ್ತು " ಎಂದಿದ್ದಾರೆ.

ಹೆತ್ತವರ ಇಷ್ಟು ತ್ಯಾಗ ತಮ್ಮ ಹೆಣ್ಣು ಮಕ್ಕಳು ಗಂಡನೊಂದಿಗೆ ಸುಖ ವಾಗಿ ಬಾಳಿ ಬದುಕಲಿ, ಎಂಬ ಒಂದೇ ಗುರಿ. ಅದಕ್ಕಾಗಿ ತಮ್ಮ ಜೀವಿತವನ್ನೇ ಮುಡುಪಾಗಿಡುತ್ತಾರೆ. ಗಂಡಿನವರನ್ನು ತೃಪ್ತಿಪಡಿಸಲು ಸಾಲ–ಸೋಲಕ್ಕೆ ತಲೆಬಾಗು ತ್ತಾರೆ. ಕಡೆಗೆ ಋಣಮುಕ್ತರಾಗಲು ದಾರಿ ಕಾಣದೆ ಚಿಂತೆಯಿಂದ ಚಿತೆಗೂ ಹೋದವರುಂಟು.

ಅನಸೂಯಮ್ಮ–ನಾಗಭೂಷಣರಾಯರಿಗೆ ದುಡ್ಡಿನ ದಾಹವಿಲ್ಲದ ಉತ್ತಮ ಸಂಬಂಧ ದೊರಕಿತ್ತು. ಅಳಿಯನಂತೂ ಸರ್ವ ವಿಧದಲ್ಲೂ ಮೆಚ್ಚುವಂಥ ಗುಣ, ರೂಪ, ವಿದ್ಯೆ ಎಲ್ಲದರಲ್ಲಿಯೂ ಶ್ರೇಷ್ಠ ವರ. ಅದೇ ಊರಿನಲ್ಲಿಯೇ ಮಗಳು ಇರುತ್ತಾಳೆ. ಇಷ್ಟೆಲ್ಲಾ ತೃಪ್ತಿ ಇದ್ದರೂ ವಾಸಂತಿಯನ್ನು ಕಳುಹಿಸುವ ದಿನ ಹತ್ತಿರ ವಾದಂತೆಲ್ಲಾ ಅನಸೂಯಮ್ಮ ತಮ್ಮ ಬಲಗೈಯಂತಿದ್ದ ವಾಸಿಯನ್ನು ಕಳುಹಿಸಿ ಈ ಮನೆಯಲ್ಲಿ ನಾನು ಹೇಗೆ ನಿಭಾಯಿಸುವುದು ಎಂದು ಆಗಾಗ ಹೇಳುತ್ತಾ ಕೊರಗುತ್ತಿದ್ದರು.

ಭಾಗೀರಥಮ್ಮನವರು ಒಂದು ವಾರದೊಳಗೆ 2 – 3 ಸಾರಿ ಸೊಸೆಯನ್ನು ಯಾವುದೋ ನೆಪದಲ್ಲಿ ಬರಮಾಡಿಕೊಂಡು ಮನದಣಿಯ ನೋಡಿ ಸೊಸೆಯ ನಯ ವಿನಯವನ್ನು ಹೊಗಳಿ ಹಿಗ್ಗುತ್ತಿದ್ದರು.

ಒಂದು ಶುಭ ದಿವಸದಲ್ಲಿ ಯಾವ ಆಡಂಬರವೂ ಇಲ್ಲದೆ ಆ ನವದಂಪತಿಗಳನ್ನು ಸಜ್ಜುಗೊಳಿಸಿದ ಕೊಠಡಿಗೆ ಬಿಟ್ಟರು. ವಾಸಂತಿಯ ತಂದೆ ತಾಯಿ ಮನೆಯವರು ಮಗಳು ಅಳಿಯನಿಗೆ ಬೇಕಾದಷ್ಟು ಉಡುಗೊರೆ, ಬಳುವಳಿಯೊಂದಿಗೆ ಕೊಟ್ಟರು. ಭಾಗೀರಥಮ್ಮ, ಬೀಗರಿಗೆ ಉಡುಗೊರೆ ಫಲ ತಾಂಬೂಲ ಎಲ್ಲಾ ಕೊಟ್ಟು ಗೌರವಿಸಿದರು

ಮಗಳನ್ನು ಒಪ್ಪಿಸಿ ತಮ್ಮ ಮನೆಗೆ ಹೊರಟರು ವಾಸಂತಿಯ ಮನೆಯವರು, ಇಂದಿರಾ ಅಕ್ಕ ಭಾವನಿಗೆ ಗುಡ್‌ನೈಟ್ ಹೇಳಿ ಹೊರಟಳು.

ಮೊದಲ ರಾತ್ರಿ, ವಾಸಂತಿಗೆ ಭಯ–ಸಂಕೋಚ–ಸಂತೋಷ ಎಲ್ಲಾ ಒಟ್ಟಿಗೇ ಸೇರಿತು.

ತನ್ನ ಪತಿಯ ಆದರ, ಆಸರೆ, ಸಹವಾಸ ದೊರಕಿತೆಂಬ ಸಂತೋಷ ಆದರೆ ತಾಯಿ ಮನೆಯಲ್ಲಿದ್ದ ಸ್ವಾತಂತ್ರ್ಯ ಇನ್ನಿಲ್ಲ, ಪಂಜರದ ಗಿಣಿಯಂತೆ ತಾನು ಎನ್ನಿಸಿತು,

ತಂಗಿಯ ಅಕ್ಕರೆಯಂತೂ ನೆನೆಸಿಕೊಂಡಷ್ಟೂ ದುಃಖ ಉಕ್ಕಿ ಬರುವಂತಾಯಿತು. ಮನಸ್ಸಿನ ತಳಮಳ, ಹೀಗಿದ್ದರೆ ಆ ಕ್ಷಣದ ಅಲ್ಲಿಯ ವಾತಾವರಣವೇ ಬೇರೆ. ಸ್ವರ್ಗ ಸಮಾನವಾದ ಸುಖ ಸಾಮ್ರಾಜ್ಯವೇ ತನಗಾಗಿ ಸಜ್ಜುಗೊಂಡಿತ್ತು.

ಸುಗಂಧ ದ್ರವ್ಯಗಳ ಊದುಬತ್ತಿಯ ವಾಸನೆ ಘಂ-ಎಂದು ಮತ್ತು ಬರಿಸುತ್ತಿತ್ತು.

ಸುತ್ತ ಕಣ್ಣು ಹಾಯಿಸಿದರೆ ಶೃಂಗಾರ ಭಂಗಿಯ ವಿವಿಧ ಚಿತ್ರಪಟಗಳು ನಾಚಿ ತಲೆ ತಗ್ಗಿಸುವಂತೆ ಗೋಡೆಯ ಮೇಲೆ ವಿಜೃಂಭಿಸುತ್ತಿದ್ದವು. ಹಂಸ ತೂಲಿಕಾ ತಲ್ಪದ ಮೆತ್ತನೆಯ ಮಂಚವು ನಿಮಗಾಗಿ ಕಾದಿದ್ದೇನೆ, ಎಂದು ಆಹ್ವಾನಿಸುವಂತಿತ್ತು.

ಮಂಚದ ಸುತ್ತ ಮಲ್ಲಿಗೆ ಮೊಗ್ಗಿನ ಮಾಲೆ ನೀವೇಕೆ ನಾಚುವಿರಿ ? ನಿಮಗಿಂತ ಮೊದಲು ನಾನೇ ಬಿರಿದಿದ್ದೇನೆ ನೋಡಿ ಎಂದು ಹಾಸ್ಯ ಮಾಡುವಂತಿತ್ತು.

ನಿಲುವುಗನ್ನಡಿಯಲ್ಲಿ ಇಬ್ಬರ ಪ್ರತಿಬಿಂಬವೂ ಮೂಡಿ ರತಿ–ಮನ್ಮಥರಂತೆ ಪೋಟಿಮಾಡುತ್ತಿದ್ದುವು.

ವಾಸಂತಿಗೆ ಮುಂದೇನೆಂದು ತೋಚದೆ ತಲೆ ತಗ್ಗಿಸಿ ಮಂಚದಿಂದ ದೂರ ಟೇಬಲ್ ಬಳಿ ನಿಂತಿದ್ದಳು.

ನಾಗರಾಜ ಈ ಒಂದು ಸಂದರ್ಭವನ್ನು ಎದುರಿಸಲು ವಿಪರೀತ ತಲೆ ಕೆಡಿಸಿ ಕೊಂಡಿದ್ದ. ಮೂರು ವರ್ಷದಿಂದ ಮದುವೆಯಾಗಲು ನಿರಾಕರಿಸಿ ತಾನು ಎಂದೂ ಮದುವೆಯಾಗಲೇಬಾರದೆಂದು ತೀರ್ಮಾನಿಸಿದ್ದ.

ಆದರೆ ವಿಧಿಲಿಖಿತ ಅವನಿಗೆ ಮದುವೆಯ ಯೋಗವಿತ್ತು. ಸುಂದರಳಾದ ಮಡದಿ ಮನೆತುಂಬಿ ಬಂದಿದ್ದಳು. ಅವಳ ಸಾನಿಧ್ಯ ಸಹವಾಸ ಅವನಿಗೆ ಹಿತವೆನಿಸಿತು. ಅವಳ ಒಲವು ಅವನಲ್ಲಿ ಗೆಲುವನ್ನು ತಂದಿತ್ತು. ಆ ಗೆಲುವೇ ಅವನಲ್ಲಿ ಈ ದಿನ ಚೈತನ್ಯವನ್ನು ತುಂಬಿತ್ತು.

ಹೆಣ್ಣಿನ ಆಕರ್ಷಣೆ ಅಯಸ್ಕಾಂತದಂತೆ ವಾಸಂತಿಯತ್ತ ಅವನನ್ನು ಸೆಳೆಯಿತು. ಬಯಕೆ ಭುಗಿಲೆದ್ದಿತು. ತನ್ನ ಮುಂದೆ ಮೋಹಿನಿಯಂತೆ ನಿಂತಿದ್ದ ಮಡದಿಯ ಬಳಿ ಸಾರಿ ಸೊಂಟದ ಸುತ್ತ ಕೈ ಬಳಸಿ ಮಾತಿಲ್ಲದೆ ಮಂಚದ ಬಳಿ ಕರೆತಂದು ಕುಳ್ಳಿರಿಸಿ ಕೊಂಡ. ವಿದ್ಯುತ್ ಹರಿದಂತೆ ಒಂದು ನಿಮಿಷ ಅವನ ಮೈಯೆಲ್ಲಾ ಕಂಪಿಸಿತು.

ವಾಸಂತಿ ಬೆಚ್ಚಿ ತನ್ನ ಸುತ್ತ ಬಳಸಿದ ಅವನ ಕೈಯನ್ನು ಒತ್ತಿ ಹಿಡಿದು " ಏಕೆ ? ಏನಾಯಿತು ? ಎಂದು ಕೇಳಿದಳು ".

ಸಾವರಿಸಿಕೊಂಡ ನಾಗರಾಜ, ಮತ್ತೂ ಅವಳನ್ನು ಹತ್ತಿರ ಎಳೆದುಕೊಂಡು ಕಿವಿಯಲ್ಲಿ ಪಿಸುಗುಟ್ಟಿದ " ಅದೇಕೆ ನನ್ನಿಂದ ಅಷ್ಟು ದೂರ ನಿಂತೆ ? ಹತ್ತಿರ ಬರಲು ಭಯವೇ ?

ಮೌನವಾಗಿ " ಇಲ್ಲ " ಎಂಬಂತೆ ತಲೆಯಾಡಿಸಿದಳು ವಾಸಂತಿ, ಗಂಡ ಮನೆಗೆ ಬಂದಾಗಲೆಲ್ಲಾ ಬೇಕಾದಷ್ಟು ಹರಟೆ ಕೊಚ್ಚುತ್ತಿದ್ದ ವಾಸಂತಿ ಈ ದಿನ ನಾಚಿ ಮೌನಗೌರಿಯಾಗಿಬಿಟ್ಟಿದ್ದಳು.

ನಾಗರಾಜ ತಾನೇ ಲೋಟಕ್ಕೆ ಹಾಲು ಬಗ್ಗಿಸಿ ಅವಳ ಕೈಗೆ ಕೊಟ್ಟ. ವಾಸಂತಿಗೆ ತಾನು ಸುಮ್ಮನೆ ಕುಳಿತಿದ್ದು ತಪ್ಪೆನಿಸಿತು. ತಟ್ಟನೆ ಎದ್ದು ಮತ್ತೊಂದು ಲೋಟಕ್ಕೆ ಹಾಲನ್ನು ಹಾಕಿ " ಮೊದಲು ನೀವು ಕುಡಿಯಿರಿ " ಎಂದಳು. ಹೀಗೆ ಒಬ್ಬರ ಒಲವು ಮತ್ತೊಬ್ಬರಿಗೆ ಗೆಲುವು ಮೂಡಿಸಿತು.

ನಾಗರಾಜನ ಮನಸ್ಸು ಎಷ್ಟೋ ಸಮಾಧಾನವನ್ನು ತಾಳಿತು. ಪ್ರಪಂಚವೇ ಸಂತೋಷ ಸಾಗರದಲ್ಲಿ ತೇಲುತ್ತಿರುವಂತೆ ತೋರಿತು. ತನ್ನ ಬಾಳಿಗೆ ಚೈತನ್ಯವನ್ನು ಮೂಡಿಸಿದ ಮಡದಿಯನ್ನು ಮನಸಾರೆ ವಂದಿಸಿದ. ಇನ್ನು ತನಗೆ ಒಂಟಿ ಬಾಳಿನ ಅಗತ್ಯವಿಲ್ಲ ಎನ್ನಿಸಿತು.

" ವಾಸಂತೀ ! ಮಂಚದ ಸುತ್ತ ಸುತ್ತಿರುವ ಮಲ್ಲಿಗೆಯ ಮಾಲೆ ಹೇಗೆ ಬಿರಿದು ಬಾಯಿ ಬಿಟ್ಟಿದೆ ನೋಡು. ನೀನು ಮಾತ್ರ ಬಾಯಿ ಬಿಗಿದು ಮಾತಿಲ್ಲದಿರುವೆ ಅದೇನು ತನ್ನ ರಾಣಿಗೆ ಇಷ್ಟೊಂದು ಬಿಗುಮಾನ ? ಎಂದು ಮುದ್ದಿಸಿದ.

ಥೂ....ಬಿಡಿ ನಾವು ಮಾಡುವುದೆಲ್ಲಾ ಆ ಕನ್ನಡಿಯಲ್ಲಿ ಮೂಡುತ್ತದೆ. ನೋಡಿ ನಾಚಿಕೆಯಾಗುವುದಿಲ್ಲವೇ ?" ಎಂದು ಸರಿದಳು ವಾಸಂತಿ.

ಕಾಣಲಿ ಎಂದೇ ನಿಲುವುಗನ್ನಡಿ ಕಟ್ಟಿರುವುದು. ಆ ರಾಧಾ ಕೃಷ್ಣರ ಚಿತ್ರ ನೋಡು, ಅವರು ಆಲಿಂಗನದಲ್ಲಿ ಹೇಗೆ ಮೈ ಮರೆತಿದ್ದಾರೆ? ನಾವು ನೋಡುತ್ತಿದ್ದೇವೆ ಎಂಬ ನಾಚಿಕೆಯೇ ಅವರಿಗಿಲ್ಲ ಎಂದು ಹಾಸ್ಯ ಮಾಡಿದ.

ನಾಗರಾಜ ಎಷ್ಟು ರಸಿಕನೆಂದು ವಾಸಂತಿಗೆ ಆನಂದವಾಯಿತು "ಸಾಕು ನಿಮ್ಮ ತಮಾಷಿ ಅದು ಚಿತ್ರ" ಎಂದಳು.

ನಮ್ಮದೂ ಜೀವಂತ ಚಿತ್ರ " ನಾವೂ ರಾಧಾ ಕೃಷ್ಣರಾಗೋಣ ಬಾ " ಎಂದು ಮೆಲ್ಲನೆ ಹೂವಿನಂತೆ ಎತ್ತಿ ಅವಳನ್ನು ಹಾಸಿಗೆಯಲ್ಲಿ ಮಲಗಿಸಿದ. ಆ ಶೃಂಗಾರ ಸ್ವರ್ಗದಲ್ಲಿ ಒಬ್ಬರಿಂದ ಒಬ್ಬರು ಮೋಹಿತರಾಗಿ ತಮ್ಮನ್ನು ತಾವು ಮರೆತರು. ಮೃದುತಲ್ಪವು ಅವರಿಗೆ ಆಸರೆಯನ್ನು ನೀಡಿತು.

ನಾಗರಾಜನ ಅಪ್ಪುಗೆಯಲ್ಲಿ ವಾಸಂತಿ ಪ್ರಪಂಚವನ್ನೇ ಮರೆತಳು. ನಿಶಾದೇವಿ ಆ ಪ್ರೇಮಿಗಳಿಗೆ ಕಪ್ಪು ತೆರೆಯನ್ನೆಳೆದು ಅಪ್ಪಿದಳು.

ವಾಸಂತಿ ಪವಾಡ ದೇವತೆಯೋ ಎಂಬಂತೆ ಮನೆಯ ಸ್ಥಿತಿಯೇ ಪರಿವರ್ತನೆಯಾಯಿತು. ನಾಗರಾಜ ಉತ್ಸಾಹಭರಿತನಾದ. ಅವನ ಮುಖವು ಗೆಲುವಾಗಿ ಅವನ ಚೆಲುವನ್ನು ಹೆಚ್ಚಿಸಿತು.

ಆಫೀಸು ಬಿಟ್ಟೊಡನೆಯೇ ಮನೆಗೆ ಓಡಿ ಬರುತ್ತಿದ್ದ. ಭಾಗೀರಥಮ್ಮನವರು ಈಗ ಮನೆಯ ಹೆಚ್ಚು ಜವಾಬ್ದಾರಿಯನ್ನು ಸೊಸೆಗೆ ವಹಿಸಿ ಹಾಯಾಗಿ ಇರ ತೊಡಗಿದರು.

ರವಿಗಂತೂ ಖುಷಿಯೋ ಖುಷಿ. ತಮ್ಮ ಮನೆಯಲ್ಲಿ ಇಷ್ಟರ ಮಟ್ಟಿಗೆ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ತಮ್ಮೆಲ್ಲರನ್ನೂ ಅಕ್ಕರೆಯಿಂದ ನೋಡಿಕೊಳ್ಳುವ ಭಾಗ್ಯ ದೇವತೆಯೇ ತನ್ನ ಅತ್ತಿಗೆಯೆಂದು ಹಿಗ್ಗಿದ. ಸೀತಾದೇವಿಗೆ ಲಕ್ಷ್ಮಣ ಇದ್ದಂತೆ ರವಿ ಅತ್ತಿಗೆಗೆ ವಿಧೇಯನಾಗಿದ್ದ. ಭಾಗೀರಥಮ್ಮನವರಿಗೆ ಆಶ್ಚರ್ಯ, ತನಗೆ ಬಗ್ಗದ ತುಂಟ ರವಿ ಅತ್ತಿಗೆಗೆ ಹೇಗೆ ವಿಧೇಯನಾಗಿದ್ದಾನೆ ? ಎಂದು ಆಗಾಗ ತಮ್ಮ ಪತಿಯೊಂದಿಗೆ ಹೇಳಿಕೊಳ್ಳುತ್ತಿದ್ದರು.

ಪರಮಶಿವಯ್ಯನವರು ಈಗ ನಿರಾಳವಾಗಿ ಉಸಿರಾಡಿದರು. ಅವರ ಸಂಸಾರ ಈಗ ಅದಲು ಬದಲಾಗಿತ್ತು. ಎಲ್ಲರೂ ಹಸನ್ಮುಖಿಗಳಾಗಿ ಒಬ್ಬರಿಗೊಬ್ಬರು ತಮಾಷಿ ಮಾಡುವವರೇ.

ಊಟಕ್ಕೆ ಎಲ್ಲರೂ ಒಟ್ಟಿಗೆ ಕೂತಾಗ ಅತ್ತೆ ಸೊಸೆಯರಲ್ಲಿ ಒಂದು ಚರ್ಚೆಯೇ ನಡೆಯುತ್ತಿತ್ತು. ಭಾಗೀರಥಮ್ಮನವರಿಗೆ ಗಂಡ ಮಕ್ಕಳು ಎಲ್ಲರೂ ಒಟ್ಟಿಗೆ ಕುಳಿತು ಹೀಗೆ ಊಟಮಾಡಿ ಯಾವುದೋ ಕಾಲವಾಗಿತ್ತು. ಎಲ್ಲರಿಗೂ ತಾನೇ ಕೈ ತುಂಬ ಬಡಿಸಿ ಕಣ್ಣು ತುಂಬ ನೋಡುವ ಆಸೆ.

ಅದಕ್ಕಾಗಿ "ವಾಸಂತೀ ನೀನೂ ಊಟಕ್ಕೆ ಕುಳಿತುಕೋ ನಾನೇ ಬಡಿಸುತ್ತೇನೆ" ಎನ್ನುವರು.

ಆದರೆ ವಾಸಂತಿ ಅದಕ್ಕೆ ಒಪ್ಪುತ್ತಿರಲಿಲ್ಲ, "ನೀವೇ ಕುಳಿತುಕೊಳ್ಳಿ ಅತ್ತೆ, ಬಿಸಿಯಾಗಿರುವಾಗಲೇ ಊಟಮಾಡಿ ಬಿಡಿ" ಎಂದು ಅವರ ತಟ್ಟೆಯನ್ನು ಪರಮ ಶಿವಯ್ಯನವರ ಪಕ್ಕ ಹಾಕುತ್ತಿದ್ದಳು.

ಪರಮಶಿವಯ್ಯನವರು ಖುಷಿಯಿಂದ "ಬಾರೇ ಭಾಗೂ ; ಇದುವರೆಗೂ ಒಂದು ದಿನವಾದರೂ ನನ್ನ ಪಕ್ಕ ಕುಳಿತು ನೀನು ಊಟ ಮಾಡಿದ್ದೀಯೇನೇ ? ನಾನು ಪೋಲೀಸ್ ಡ್ರೆಸ್ ಹಾಕ್ಕೊಂಡು ಹೊರಟು ಹೋದ ಮೇಲೆ ಅದ್ಯಾವಾಗ ಊಟ ಮಾಡುತ್ತಿದ್ದೆಯೋ ಬಿಡ್ತಾ ಇದ್ಕೋ ! ನಂಗೇ ಗೊತ್ತಿಲ್ಲ, ಈಗ ಸೊಸೆ ಬಂದ ಮೇಲೆ ನಾವೇ ನವ ದಂಪತಿಗಳು. ಬಾ....ಬಾ.... ಕೂತ್ಕೋ" ಅನ್ನುತ್ತಿದ್ದರು.

"ಸಾಕು ಸುಮ್ಮನಿರೀಂದ್ರೇ ; ಆ ಹುಡುಗಿ ಹಸ್ಕೊಂಡು ಮಾಡ್ತಾ ಇದ್ರೆ ನಾನು ಕೂತ್ಕೊಂಡು ಊಟ ಮಾಡೋದೇ ? ಚೆನ್ನಾಗಿದೆ.... ಬಾಮ್ಮಾ ವಾಸಂತಿ ನೀನು ಎಲ್ಲರ ಜೊತೆ ಕೂತ್ಕೊಂಡು ಊಟ ಮಾಡು" ಎನ್ನುತ್ತಿದ್ದರು.

ಕಡೆಗೆ ಗಂಡ. ಮೈದುನ, ಅತ್ತೆ, ಮಾವ, ಎಲ್ಲರ ಬಲವಂತಕ್ಕೆ ಒಪ್ಪಿ ವಾಸಂತಿ ಎಲ್ಲರ ಜೊತೆ ತಾನೂ ಕುಳಿತುಬಿಡುತ್ತಿದ್ದಳು.

ನಾಗರಾಜ ಆಫೀಸಿಗೆ ಹೋಗುವ ಮುನ್ನ ಮಡದಿಯನ್ನು ಒಂದು ಬಾರಿ ಮುದ್ದಿಸಿ ಹೋಗಲು ಕಾತುರನಾಗಿರುತ್ತಿದ್ದ. ರವಿ ಕಾಲೇಜಿಗೆ ಹೊರಟರೆ ಅತ್ತಿಗೆ ಬಾಗಿಲವರೆಗೆ ಬಂದು ಟಾ.... ಟಾ.... ಮಾಡಬೇಕೆಂದು ಅಪೇಕ್ಷಿಸುತ್ತಿದ್ದ.

ಊಟವಾದ ತಕ್ಷಣ ಮಾವನವರು ಎಲ್ಲಮ್ಮಾ ವಾಸಂತೀ ಒಂದೆರಡು ವಿಳ್ಳೇದೆಲೆಗೆ ಸುಣ್ಣ ಹಚ್ಚಿ ಅಡಕೇಪುಡಿ ಅದು ಕೊಟ್ಟು ಬಿಡಮ್ಮ ಊಟ ಆದ ಕೂಡಲೇ ನನಗೆ ಇದೊಂದು ದುರಭ್ಯಾಸ ಎನ್ನುತ್ತಿದ್ದರು.

ವಾಸಂತಿ ಜಾಣತನದಿಂದ ಎಲ್ಲರ ಅಪೇಕ್ಷೆಯನ್ನೂ ಸಲ್ಲಿಸುತ್ತಿದ್ದಳು.

ನಾಗರಾಜ ಏಕಾಂತದಲ್ಲಿ ಅವಳನ್ನು ಮುದ್ದುಗರೆದು ಪಿಸುಗುಟ್ಟುತ್ತಿದ್ದ. " ಏನೇ ಮಂತ್ರಗಾತಿ ? ನೀನು ಬಂದು ಒಂದು ತಿಂಗಳಿಲ್ಲ. ಎಲ್ಲರನ್ನೂ ಬುಟ್ಟಿಗೆ ಹಾಕಿಕೊಂಡು ಬಿಟ್ಟೆಯಲ್ಲಾ, ಈ ಮನೆಯಲ್ಲಿ ನೀನಿಲ್ಲದೆ ಒಂದು ಕಡ್ಡಿಯೂ ಅಲುಗುವುದಿಲ್ಲ " ಎನ್ನುವಂತಾಗಿದೆಯಲ್ಲಾ ! ನಮ್ಮಪ್ಪನ ಕೋಪ, ಹಾರಾಟ ಎಲ್ಲಾ ಮಂಗಳ ಮಾಯ ಮಾಡಿ ಬಿಟ್ಟೆಯಲ್ಲಾ ಎನ್ನುವನು.

ವಾಸಂತಿ ಕೊಂಕು ನೋಟವನ್ನು ಬೀರಿ " ಸಾಕು. ಸಾಕು ಹೊಗಳಿ–ಹೊಗಳಿ ಹೊತ್ತು ಕಳೆಯುವುದು ಗೊತ್ತಾಗದಂತೆ ನನ್ನ ಸೆರೆ ಹಾಕಬೇಕೂಂತಿದೀರೋ. ಹಾಗೆಲ್ಲಾ ಸಿಕ್ಕೋಲ್ಲ ನಾನು " ಎಂದು ಅವನ ಕೈಯಿಂದ ಬಿಡಿಸಿಕೊಂಡು ಅಡಿಗೆ ಮನೆಗ ಓಡುತ್ತಿದ್ದಳು.

ಹೀಗೆ ದಿನ ನಿತ್ಯ ಮಧುರವಾಗಿ ಅವರ ಸಂಸಾರ ಆನಂದ ಸಾಗರದಲ್ಲಿ ತೇಲುತ್ತಿತ್ತು.

ಎಲ್ಲರಿಗಿಂತ ನಾಗರಾಜ ಪೂರ್ಣ ಬದಲಾವಣೆ ಹೊಂದಿದ್ದ. ಅವನ ಮಂಕು, ಉದಾಸೀನ, ವೈರಾಗ್ಯ ಇವೆಲ್ಲಾ ಮಾಯವಾಗಿ ಗೆಲುವಾಗಿ ಓಡಾಡುತ್ತಿದ್ದ.

ಇಂತಹ ಒಂದು ಭಾಗ್ಯಕ್ಕೆ ಕಾರಣಳಾದ ವಾಸಂತಿಯನ್ನು ಭಾಗೀರಥಮ್ಮ ಕಣ್ಣಲ್ಲಿಟ್ಟು ಮುಚ್ಚಿಕೊಳ್ಳುವಷ್ಟು ಪ್ರೀತಿಸುತ್ತಿದ್ದರು. ಅವಳ ಮನಸ್ಸಿಗೆ ಎಳ್ಳಷ್ಟೂ ನೋವು ಮಾಡುತ್ತಿರಲಿಲ್ಲ. ಮನೆಯವರಿಗೆಲ್ಲಾ ವಾಸಂತಿ ಅಚ್ಚು – ಮೆಚ್ಚು.

ವಾಸಂತಿ ಬಂದ ಹೊಸತರಲ್ಲಿ ತನ್ನ ಓರಿಗೆಯವನೇ ಆದ ರವಿಯನ್ನು ಕಂಡರೆ ಸಂಕೋಚ ಪಟ್ಟುಕೊಂಡು ಅವನೊಂದಿಗೆ ನೇರ ಮಾತನಾಡುತ್ತಿರಲಿಲ್ಲ. ತನ್ನ ಗಂಡನಷ್ಟೇ ಎತ್ತರವಾಗಿ ಧೃಢಕಾಯನಾಗಿ ಸುಂದರ ಯುವಕನಾಗಿದ್ದ ರವಿಯನ್ನು ನೇರ ನೋಡುವುದಕ್ಕೂ ಅವಳು ಸಂಕೋಚ ಪಟ್ಟುಕೊಳ್ಳುತ್ತಿದ್ದಳು.

ಅವನ ದಟ್ಟ ಕ್ರಾಪು ಎಷ್ಟು ಬಾಚಿದರೂ ಹದಕ್ಕೆ ಬರದೆ ಸುರುಳಿ ಸುರುಳಿಯಾಗಿ ತಲೆತುಂಬಾ ಹರಡಿ ಹಾರಾಡುತ್ತಿದ್ದರೆ ಅವನಷ್ಟೇ ಅವನ ಕೂದಲೂ ತುಂಟು, ತುಡುಕು ಎಂದುಕೊಳ್ಳುವಳು.

ದಿನ ಕಳೆದಂತೆ ರವಿ ಅತ್ತಿಗೆಯ ಹಿಂದೂ ಮುಂದೂ ಓಡಾಡಿಕೊಂಡು ಮುಗ್ಧ ಮಗುವಿನಂತೆ ಎಲ್ಲದಕ್ಕೂ ಅತ್ತಿಗೆಯನ್ನೇ ಕೇಳುತ್ತಿದ್ದ ವಾಸಂತಿ ಅವನ ಸರಳ ಸ್ವಭಾವವನ್ನು ತಿಳಿದು ಸಂಕೋಚ ಬಿಟ್ಟು ಸಲೀಸಾಗಿ ಮಾತಾಡತೊಡಗಿದಳು.

ನಾಗರಾಜ ಒಂಟಿಯಾಗಿದ್ದಾಗ ಒಂದೊಂದು ಸಲ ಏನೋ ಒಂದು ಚಿಂತೆ ಅವನನ್ನು ಬಾಧಿಸುತ್ತಿತ್ತು. ಮಂಕಾಗಿ ಕುಳಿತು ಬಿಡುತ್ತಿದ್ದ. ಆದರೆ ವಾಸಂತಿಯ ಬಳಿ ಬಂದನೆಂದರೆ ಅವಳ ಸಾಮೀಪ್ಯ ಸಹವಾಸದಲ್ಲಿ ಗೆಲುವಾಗುತ್ತಿದ್ದ. ತನ್ನ ಕೊರತೆಯನ್ನು ಎಂದೂ ಹೆಂಡತಿ ಎದುರು ತೋರ್ಪಡಿಸಿಕೊಳ್ಳುತ್ತಿರಲಿಲ್ಲ.

ಆಫೀಸು ಬಿಟ್ಟಕೂಡಲೇ ಮನೆಗೆ ಓಡಿಬರುತ್ತಿದ್ದ. ಅಂದು ಆಫೀಸಿನಿಂದ ಬಂದವನು ಹೆಂಡತಿಯನ್ನು ನಿರೀಕ್ಷಿಸುತ್ತಾ ರೂಮಿನಲ್ಲಿ ಕುಳಿತ.

ವಾಸಂತಿ ಸ್ವಲ್ಪ ತಡವಾಗಿಯೇ ಕಾಫಿ ತಿಂಡಿ ತೆಗೆದುಕೊಂಡು ರೂಮಿಗೆ ಬಂದಳು, ಬಿಸಿ ...ಬಿಸಿ ಕಾಫಿ ಹೀರಿ ಗೆಲುವಾದ. ತಿಂಡಿ ತಿನ್ನುತ್ತಾ ಅವಳನ್ನು ಕೀಟಲೆ ಮಾಡಿದ.

"ಏನು ? ಇವತ್ತು ಅಮ್ಮಾವರ ಪ್ರೋಗ್ರಾಂ" ಎಲ್ಲಿಗೋ ಹೊರಟಂತಿದೆಯಲ್ಲಾ ; ಎಂದು ಕಣ್ಣು ಮಿಟುಕಿಸಿದ.

ಆ....ಹಾ....ಹಾ....ಸಾಕು ನಿಮ್ಮ ಮಾತು. ನಾನೆಲ್ಲಿಗೆ ಹೋಗ್ತೀನಿ ಅಂತ ನಿಮಗೆ ಹೇಳಿದ್ದೆ ?

ನೀನು ಹೇಳಬೇಕೇ ನಿನ್ನ ಶೃಂಗಾರವೇ ಹೇಳುತ್ತಿದೆಯಲ್ಲಾ. ಅವಳು ಆಶ್ಚರ್ಯ ಪಟ್ಟು ಇದೇನ್ರೀ ನಿಮಗೇನಾದ್ರೂ ಕಣ್ಣಿಗೆ ಕನ್ನಡಕ ಬೇಕೇನೂ ? ನಾನೇನು ಶೃಂಗಾರ ಮಾಡಿಕೊಂಡಿದೀನಿ ? ಸರಿಯಾಗಿ ನೋಡಿ ಎಂದಳು....

ಅವನು ಅವಳ ಕೈ ಹಿಡಿದು ಎಳೆದು ತನ್ನ ಪಕ್ಕ ಕೂರಿಸಿಕೊಂಡು ಅವಳ ತಲೆ ಕೂದಲಲ್ಲಿ ಬೆರಳಾಡಿಸುತ್ತಾ "ನೋಡು ; ಈ ಕೂದಲನ್ನು ಕರಿ ದುಂಬಿಯಂತೆ ಮಾಡಿಕೊಂಡಿದ್ದೀ....ಮೂಗು.... ಮುದ್ದಿಸುವಂತೆ ನೇರವಾಗಿ ಎಸಳಂತೆ ಮಾಡಿಕೊಂಡಿದ್ದೀ. ಕಣ್ಣಂತೂ ಜಿಂಕೆಯಂತೆ ಚಂಚಲವಾಗಿ ಬಿಡುತ್ತೀ.... ಈ ರೋಜಾ ಸೀರೆಯು ನಡುವೆ ಗಂಧದ ಬೊಂಬೆ ಎದ್ದು ನಿಂತಂತೆ ಕಾಣುತ್ತೀ." ಇವೆಲ್ಲಾ ಶೃಂಗಾರ ಸಾಲದೇ ? ಎಂದು ಅವಳ ಬೆನ್ನನ್ನು ಬಳಸಿದ.

ವಾಸಂತಿ ಅವನ ಕೈಯಿಂದ ಬಿಡಿಸಿಕೊಂಡು ಬಿದ್ದು–ಬಿದ್ದು ನಕ್ಕಳು, ಅಲ್ಲಾರೀ? ; ನೀವೇನು ಕವಿ ಕಾಳಿದಾಸನೇನು ? ನಿಮಗೆ ಇಷ್ಟೊಂದು ಕವಿತ್ವ ಬರುತ್ತೇಂತ ನನಗೆ ಗೊತ್ತೇ ಇರಲಿಲ್ಲ.

ಇದು ಕವಿಯ ಕಲ್ಪನೆಯಲ್ಲವಲ್ಲಾ ; ನನ್ನ ಎದುರಿಗಿರುವ ನಿಜ ರೂಪದ ಸೌಂದರ್ಯ ಸಾಮ್ರಾಜ್ಞಿಯ ವರ್ಣನೆ ಅಷ್ಟೇ....

ಸಾಕು.... ಸಾಕು.... ನಿಮ್ಮ ಕಣ್ಣಿಗೆ ನಾನು ಹೇಗಿದ್ದರೂ ದೇವಲೋಕದ ರಂಭೆ ಯಂತೆಯೇ ಕಾಣುತ್ತೇನೋ ಏನೋ ? ಇದೇನಪ್ಪಾ ; ನಾನೇನು ಶೃಂಗಾರ ಮಾಡಿ ಕೊಂಡಿದೀನಿ ? ಅಂತ ಗಾಬರಿಯಾದೆ.

ಇತ್ತ ನನ್ನ ಸರಿಯಾಗಿ ನೋಡಿ ; ನನ್ನ ಮುಖವೆಲ್ಲಾ ಬೆವರು ಹನಿಯಿಂದ ತುಂಬಿದೆ. ಕಾಣುತ್ತದೆಯೇ ? ಎಂದು ಅವನ ಮುಖದ ಹತ್ತಿರ ಮುಖವಿಟ್ಟಳು.

ಅವಳ ಕೆನ್ನೆಗೆ ತುಟಿಯೊತ್ತಿ, ಓಹೋ.... ಕಾಣದೇ ಏನು ? ಕೆಂಪಿನ ಮುಖಕ್ಕೆ ಮುತ್ತಿನ ಸಾಲು ಕಟ್ಟಿದಂತಿದೆಯಲ್ಲಾ ;

ಎಲ್ಲಿ ಬಿಡಿ.... ಬಿಡಿ.... ತಲೆ ಸಹ ಬಾಚಿಲ್ಲ. ಬೆಳಿಗ್ಗೆ ಸ್ನಾನ ಮಾಡಿ ಉಟ್ಟಸೀರೆ ಬದಲಿಸಿಲ್ಲ, ಬೆವರಿನ ಮುಖ ತೊಳೆದಿಲ್ಲ, ಇಷ್ಟು ಹೊತ್ತೂ ಕೆಲಸವೇ ಸರಿಹೋಯ್ತು, ಆದರೂ ನನ್ನ ಶೃಂಗಾರ ಮಾಡಿಕೊಂಡಿದ್ದೀ..ಅಂತ ತಮಾಷಿ ಮಾಡ್ತೀರಿ ಅಂದು, ಅಲ್ಲೇ ಇದ್ದ ಕನ್ನಡಿ ಮುಂದೆ ಬಂದು ನಿಂತು ಒಂದು ಬಾರಿ ಮುಖ ನೋಡಿಕೊಂಡಳು.

ಹೌದು ತನ್ನ ಗಂಡ ಹೇಳಿದಂತೆ ತಾನು ಹೇಗಿದ್ದರೂ ಚೆನ್ನಾಗಿಯೇ ಕಾಣುತ್ತೇನೆ. ದೈವದತ್ತವಾದ ಸೌಂದರ್ಯಕ್ಕೆ ಯಾವ ಮೆರಗೂ ಬೇಡ ಅನ್ನಿಸಿತು. ಆ ಹಿಗ್ಗಿನಿಂದ ಗಂಡನ ಕಡೆ ಒಂದು ಕುಡಿ ನೋಟ ಬೀರಿ ಮುಸಿ ನಕ್ಕಳು.

ನಾಗರಾಜ ಅವಳನ್ನು ಅಣಕಿಸುತ್ತಾ, "ಕನ್ನಡಿ ಏನು ಹೇಳಿತು ? ನೀನು ಜಂಭದ ಕೋಳಿ ಎಂದಿರಬಹುದು ಅಲ್ಲವೇ ?" ಎಂದ

ಅವನ ಕಡೆ ತಿರುಗಿ "ನನಗೆಲ್ಲಿಯ ಜಂಭ ? ಎಲ್ಲಾ ಜಂಭವೂ ನಿಮಗೇ ಬಂದಿರುವುದು. ನಾನು ಮನೆಗೆ ಬರುವುದಕ್ಕೆ ಮೊದಲು ಯಾವಾಗಲೂ ರವಿ – ರವಿ ಎಂದು ಅವನ ಹಿಂದೆ ಮುಂದೆ ಓಡಾಡುತ್ತಿದ್ದಿರಂತೆ. ಈಗ ಅವನನ್ನು ದಿನಕ್ಕೆ ಒಂದು ಸಲವಾದರೂ ಮಾತಾಡಿಸುವುದೇ ಇಲ್ಲವಂತೆ, ನಿಮಗೆ ಜಂಭವೋ ? ನನಗೆ ಜಂಭವೋ ? " ಎಂದಳು ವಾಸಂತಿ.

ರವಿಯ ಸುದ್ದಿ ಎತ್ತಿದ ಕೂಡಲೇ ನಾಗರಾಜನಿಗೆ ಸ್ವಲ್ಪ ಕಸಿ–ವಿಸಿಯಾಯಿತು. ತಾನು ಪ್ರೇಮಸಾಗರದಲ್ಲಿ ಮುಳುಗಿ ತಮ್ಮನನ್ನು ಕಡೆಗಣಿಸಿದ್ದೇನೆ ಎನ್ನಿಸಿತು,

ತನ್ನ ಹುಡುಗಾಟವನ್ನು ನಿಲ್ಲಿಸಿ ಗಂಭೀರವಾಗಿ ವಾಸೀ ;.... ರವಿ ಹಾಗಂದನೇ ?. ಎಂದು ಕಾತುರದಿಂದ ಕೇಳಿದ ನಾಗರಾಜ.

ಹೌದು ರೀ....ಮಧ್ಯಾಹ್ನ ಕಾಲೇಜಿನಿಂದ ಬಂದ ಮೇಲೆ ಊಟ ಮಾಡೋದಕ್ಕೇ ಬೇಜಾರು ಮಾಡಿಕೊಂಡ, ಬಲವಂತವಾಡಿ ಬಡಿಸಿದೆ. "ಅತ್ತಿಗೇ ಅಣ್ಣಾ ಅಂತೂ ದೂರ ಆದ, ಸಧ್ಯ ನೀವಾದರೂ ನನ್ನನ್ನು ಮಾತಾಡಸ್ತಾ ಇದ್ದೀರಲ್ಲಾ ಅಷ್ಟೆಸಾಕು", ಎಂದು ಗೊಣಗಿದ..., ಎಂದಳು.

ಛೆ...ಛೆ.... ಪಾಪ ; ರವಿ ಎಷ್ಟು ಬೇಜಾರು ಪಟ್ಟುಕೊಂಡಿದ್ದಾನೋ ? ಈ ನಡುವೆ ನಾನು ಮೈ ಮರೆತೆ ; ನೀನಾದ್ರೂ ಹೇಳಬೇಡವೇನೇ ವಾಸಂತಿ ?

ಸರಿಹೋಯ್ತು.... ನೀವು ಅಣ್ಣಾ ತಮ್ಮ ಮಾತಾಡಬೇಡಿ ಅಂತ ನಾನು ಹೇಳಿದ್ದೇನೆಯೇ ? ಮಹರಾಯ್ರಾಗಿ ಈಗಲೇ ಹೋಗಿ ಮಾತಾಡ್ಸಿ, ಎಂದು ದಡ – ದಡ ಮಹಡಿ ಮೆಟ್ಟಿಲಿಳಿದು ಬಂದಳು ವಾಸಂತಿ.

ಹಿಂದೆಯೇ ನಾಗರಾಜನೂ ಬಂದ. ರವಿ ತನ್ನ ರೂಮಿನಲ್ಲಿ ಓದುತ್ತಾ ಕುಳಿತಿದ್ದ. ನಾಗರಾಜ ಅವನ ಬಳಿ ಬಂದು "ಏಕೆ ರವಿ ಇವತ್ತು ಎಲ್ಲೂ ಸುತ್ತಾಡಲು ಹೋಗ ಲಿಲ್ಲವೇ ? " ಎಂದ.

ಅಣ್ಣ ಹೀಗೆ ತನ್ನ ರೂಮಿಗೆ ಬಂದು ಕುಳಿತು ಎಷ್ಟೋ ದಿನಗಳಾಗಿತ್ತು. ಅಣ್ಣನಲ್ಲಿದ್ದ ಸಲಿಗೆ ಕಮ್ಮಿಯಾಗಿದೆಯೇನೋ ಅನ್ನಿಸಿತು ರವಿಗೆ.

ಇಲ್ಲ ಅಣ್ಣಾ; ಸ್ವಲ್ಪ ಓದಬೇಕಾಗಿತ್ತು. ಅದಕ್ಕಾಗಿ ಎಲ್ಲೂ ಹೋಗಲಿಲ್ಲ ಎಂದ ನಿರುತ್ಸಾಹದಿಂದ.

ತನ್ನ ಪ್ರೀತಿಯ ತಮ್ಮ ತಾನು ಮಾಡಿದ ಅಲಕ್ಷ್ಯದಿಂದ ತುಂಬಾ ನೊಂದಿದ್ದಾನೆ ಅನ್ನಿಸಿತು ನಾಗರಾಜನಿಗೆ. ಪ್ರೀತಿಯಿಂದ ಅವನ ಬೆನ್ನು ನೇವರಿಸುತ್ತಾ, ನಾಳೆ ಭಾನುವಾರ ಓದಿಕೊಂಡರಾಯ್ತು, ಏಳೋ ಯಾವುದಾದರೂ ಪಿಕ್ಚರ್‌ಗೆ ಹೋಗಿಬರೋಣ ಎಂದ.

ಅತ್ತಿಗೇನೂ ನೀನೂ ಹೋಗಿ ಅಣ್ಣಾ, ನಾನು ಬರೋಲ್ಲ ಅಂದ ರವಿ.

ಬಾರೋ ನಿನ್ನ ಅತ್ತಿಗೇನೂ ಬರ್ತಾಳೆ, ಹುಂ ರೆಡಿಯಾಗು ಎಂದು ಅವನ ಉತ್ತರಕ್ಕೂ ಕಾಯದೆ ನಾಗರಾಜ ಹೆಂಡತಿಯನ್ನು ಹುಡುಕಿಕೊಂಡು ಬಂದ. ಅವಳು ಇನ್ನೂ ಅಡಿಗೆ ಮನೆಯಲ್ಲಿ ಏನೋ ಕೆಲಸ ಮಾಡುತ್ತಲೇ ಇದ್ದಳು.

ಭಾಗೀರಥಮ್ಮನವರು ಚಪಾತಿ ಹಿಟ್ಟು ಕಲೆಸುತ್ತಿದ್ದರು. ವಾಸಂತಿ "ಬಿಡಿ ಅಮ್ಮ ನಾನು ಮಾಡಿಕೊಳ್ಳುತ್ತೇನೆ ನೀವು ಹೋಗಿ " ಅಂದಳು.

ಭಾಗೀರಥಮ್ಮ ಸೊಸೆಯನ್ನು ಪ್ರೀತಿಯಿಂದ ಗದರುತ್ತಾ ಚೆನ್ನಾಯ್ತು ಬಿಡು ಬೆಳಗ್ಗೆಯಿಂದ ಅಡಿಗೆಮನೆಯಲ್ಲಿ ಸೇರಿದವಳು ಹೊರಕ್ಕೇ ಬಂದಿಲ್ಲ, ಹೋಗು ನೀನು ತಲೆ ಬಾಚಿ ಮುಖ ತೊಳೆದುಕೋ ಎಂದರು.

ನಾಗರಾಜ ಬಾಗಿಲಲ್ಲಿ ಇಣಕಿ ಅತ್ತೆ ಸೊಸೆಯರ ಸಂಭಾಷಣೆ ಕೇಳಿಸಿಕೊಂಡ, ತನ್ನ ಹೆಂಡತಿಗೆ ಅತ್ತೆ ಕಾಟಕ್ಕಿಂತ ಅತ್ತೆ ಮುದ್ದು ಜಾಸ್ತಿಯಾಗಿಬಿಟ್ಟಿದೆ. ಸೊಸೆಗೆ ಅತ್ತೇನೆ ಎಷ್ಟು ಸುಖವಾಗಿ ನೋಡಿಕೊಂಡರೂ ತೃಪ್ತಿ ಇಲ್ಲ. ಈ ಕಲಿಯುಗದಲ್ಲಿ ಇದೆಂಥ ಅತ್ತೆ ಸೊಸೆಯರಪ್ಪಾ; ಇವರು ! ಎಂದು ಮನದಲ್ಲೇ ಹಿಗ್ಗಿದ.

ನಾಗರಾಜ ಕಣ್ಸನ್ನೆ ಮಾಡಿ ಹೆಂಡತಿಯನ್ನು ಕರೆದ. ವಾಸಂತಿ ಪಾತ್ರೆಯೆಲ್ಲಾ ಒರೆಸಿಡುತ್ತಿದ್ದಳು; ಏನು ? ಅಂದಳು, ಗಟ್ಟಿಯಾಗೇ.

ನಿನ್ನ ಕೆಲಸವೆಲ್ಲಾ ಆಗಿದ್ರೆ ಬರ್ತೀಯಾ ಪಿಕ್ಚರಿಗೆ ಹೋಗೋಣ ಅಂದ.

ವಾಸಂತಿ ಹುಸಿ ಮುನಿಸಿನಿಂದ ಸಧ್ಯ ; ನನ್ನ ಕೆಲಸ ಇನ್ನೂ ಮುಗಿದಿಲ್ಲ. ನೀವು ಬೇಕಾದ್ರೆ ಹೋಗಿಬನ್ನಿ ಅಂದಳು.

ನನಗೇನು ಹೋಗಲೇಬೇಕೆಂದೇನೂ ಇಲ್ಲ ಕಣೇ, ಇವತ್ತು ರವಿ ಅಪರೂಪವಾಗಿ ಬರುತ್ತೇನೆಂದು ಒಪ್ಪಿದಾನೆ ಅದಕ್ಕೆ ಅಂದ.

ಸರಿ ಮತ್ತೆ ನೀವಿಬ್ರೂ ಹೋಗಿ ಬನ್ನಿ ಅಂದಳು ವಾಸಂತಿ. ಲೇ-ಲೇ-ಏನೇ ನೀನು ! ಬಲು ಜಂಭ ಮಾಡ್ತೀಯಾ ! ನೀನು ಬರದೇ ಇದ್ದರೆ ರವೀನೂ ಹೊರಡೋಲ್ಲ ಅಂದ.

ಇವರ ಚರ್ಚೆಯನ್ನು ಕೇಳಿಸಿಕೊಳ್ಳುತ್ತಲೇ ಇದ್ದ ಭಾಗೀರಥಮ್ಮ,

"ಏನಮ್ಮ ವಾಸಂತೀ ; ಅವನು ಕರೀತಾ ಇದ್ರೆ ಹಾಗಂತೀಯ ಕೆಲಸ ಏನು ? ಯಾವಾಗಲೂ ಇದ್ದೇ ಇರುತ್ತೆ ನಾನು ಮಾಡ್ಕೋಳ್ತೀನೀ. ಹೋಗು ಬೇಗ ತಲೆ ಬಾಚ್ಕೊಂಡು ಹೊರಡು ಎಂದರು.

ವಾಸಂತಿಗೆ ತನ್ನ ಮೇಲೆ ಅತ್ತೆಗೆ ಎಷ್ಟು ಮಮತೆ ಇದೆ ಎಂದು ಗೊತ್ತು. ಹಾಗಂತ ಎಲ್ಲಾ ಕೆಲಸವನ್ನೂ ಅತ್ತೆಯಮೇಲೆ ಒರಗಿಸಿ ತಾನು ಓಡುವುದು ಅವಳಿಗೆ ಸರಿಕಾಣಲಿಲ್ಲ. "ಅಯ್ಯೋ ಬಿಡೀ ಅಮ್ಮ ಇನ್ನೊಂದು ದಿನ ಸಿನಿಮಾಗೆ ಹೋದರಾಯ್ತು ಇವತ್ತು ರಾತ್ರಿ ಅಡಿಗೆ ಕೂಡ ಆಗಿಲ್ಲ. ಇನ್ನೂ ಬೇಕಾದಷ್ಟು ಕೆಲಸವಿದೆ ಎಂದು ಹೇಳುತ್ತಿರುವಾಗಲೇ ರವಿ ಆ ಮಾತು ಕೇಳಿಸಿಕೊಂಡು ಬಂದ.

" ಈ ಅತ್ತಿಗೆಗೆ ಯಾವಾಗಲೂ ಕೆಲಸ–ಕೆಲಸ. ಏನೋ ಅಣ್ಣ ಆಸೆಯಿಂದ ಸಿನಿಮಾಗೆ ಹೋಗೋಣ ಬಾಅಂದರೆ; ಏನೇನೋ ನೆಪ ಹೇಳ್ತಾ ಇದ್ದೀರಲ್ಲ, ಇವತ್ತು ನಾನು ಮನೇಲೇ ಇದ್ದು ಅಮ್ಮನಿಗೆ ಕೆಲಸ ಮಾಡಿಕೊಡ್ತೀನಿ. ಹೋಗಿ ಅತ್ತಿಗೆ ನೀವಿಬ್ರೂ ಹೋಗ್ಬನ್ನಿ ಅಂದ.

ತಮ್ಮ ಮಕ್ಕಳು ಸೊಸೆ ಒಬ್ಬರಿಗೊಬ್ಬರು ಅನ್ಯೋನ್ಯತೆಯಿಂದ ಇಷ್ಟರಮಟ್ಟಿ ಪ್ರೀತಿಯಿಂದಿರುವುದನ್ನು ನೋಡಿ ಭಾಗೀರಥಮ್ಮನವರಿಗೆ ಹಿಡಿಸಲಾರದ ಹಿಗ್ಗು. ತಮ್ಮ ಸೊಸೆ ಬಂಗಾರದಂಥಾ ಹುಡುಗಿ, ಅವಳು ಬಂದೇ ಬಂದಳು, ಮನೆಯೇ ನಂದಗೋಕುಲ

ದಂತೆ ಬೆಳಗಿತು. ಸಧ್ಯ ಯಾವಾಗಲೂ ಹೀಗೇ ಸಂತೋಷವಾಗಿರಲಪ್ಪಾ ದೇವರೇ ಎಂದು ಮನಸ್ಸಿನಲ್ಲಿಯೇ ಹಾರೈಸಿ " ಎಲ್ಲಿ ನನ್ನ ಮಾತು ಕೇಳಿ ಅವನೂ ಇರೋದು ಬೇಡ ನೀನೂ ಇರೋದೂ ಬೇಡ ಮೂರು ಜನವೂ ಒಟ್ಟಿಗೆ ಹೋಗಿಬನ್ನಿ" ಎಂದು ಗದರಿದರು.

ಅತ್ತೆ ಹೇಳಿದ ಮೇಲೆ ಆಯಿತು. ವಾಸಂತಿ ಅಷ್ಟಕ್ಕೇ ಬಿಟ್ಟು ಕೈ ತೊಳೆದು ಸರಿ ನಡೀರಿ ನಾನು ಎರಡು ನಿಮಿಷದಲ್ಲಿ ರೆಡಿ ಅಂದಳು.

ರವಿಯೂ ಈ ದಿನ ಖುಷಿಯಾಗಿ ಅಣ್ಣ ಅತ್ತಿಗೆಯರೊಂದಿಗೆ ಸಿನಿಮಾ ನೋಡಲು ಹೊರಟ. ಮೂರು ಜನವೂ ನೀಟಾಗಿ ಅಲಂಕಾರ ಮಾಡಿಕೊಂಡು ನಗು ನಗುತ್ತಾ ಹೊರಟಿದ್ದನ್ನು ಬಾಗಿಲವರೆಗೂ ಬಂದ ಭಾಗೀರಥಮ್ಮ ನೋಡುತ್ತಲೇ ನಿಂತರು. ತಮ್ಮ ಮಕ್ಕಳು ನಿಜವಾಗಿ ರಾಮ, ಸೀತೆ, ಲಕ್ಷ್ಮಣರಂತೆಯೇ ಇದ್ದಾರೆ. ಯಾರ ಕಣ್ಣೂ ತಾಕದಿರಲಪ್ಪಾ ದೇವರೇ ; ಎಂದು ಹಾರೈಸಿ ಒಳಕ್ಕೆ ಹೋದರು.

ಇವರ ಸಂಸಾರ, ಹೀಗೆಯೇ ಏನೂ ಏರು–ಪೇರು ಇಲ್ಲದೆ ಪ್ರಶಾಂತವಾಗಿ ಜುಳು ಜುಳನೇ ಹರಿಯುವ ಗಂಭೀರ ನದಿಯಂತೆ ಸುಖ ಸಂತೋಷದಿಂದ ದಿನಗಳು ಮುಂದೆ ಸಾಗಿದವು. ವಾಸಂತಿಯ ಮದುವೆಯಾಗಿ 5 ವರ್ಷವಾಗುತ್ತಾ ಬಂತು.

ಭಾಗೀರಥಮ್ಮನವರಿಗೆ ಈಗ ಏಕೋ ಮನೆ ಬಿಂ-ಎನ್ನುತ್ತದೆ ಎನ್ನುವಂತಾಯಿತು. ಈಗ-ಆಗ, ಸೊಸೆಯಿಂದ ಒಂದು ಮುದ್ದು ಮೊಮ್ಮಗುವನ್ನು ಕಾಣುತ್ತೇನೆ ಎಂಬ ಅವರ ಹಂಬಲ ನಿರಾಸೆಗೆ ತಿರುಗಿತು. ಸೊಸೆಯನ್ನು ಕಂಡರೆ ಅಪಾರ ಪ್ರೇಮವಿದ್ದರೂ ತಮ್ಮ ವಂಶದ ಕುಡಿಯನ್ನು ಬೆಳೆಸದ ಹೆಣ್ಣು ಎಷ್ಟು ದುಡಿದೇನು ಪ್ರಯೋಜನ ? ಎಂದು ಬೇಸರಗೊಳ್ಳುವರು.

ಪಕ್ಕದ ಮನೆ ಗೌರಮ್ಮನವರ ಸೊಸೆ ಪದ್ಮ, ಕಾಂಪೌಂಡಿನಲ್ಲಿ ಮಲ್ಲಿಗೆ ಮೊಗ್ಗು ಬಿಡಿಸುತ್ತಿದ್ದಳು. ಅವಳು ಸ್ವಲ್ಪ ಕುಳ್ಳು, ಸಾಲದ್ದಕ್ಕೆ ತುಂಬು ಗರ್ಭಿಣಿ, ಮೇಲಿರುವ ಮೊಗ್ಗನ್ನು ಎಟುಕಿಸಲಾರದೆ ಕಾಲಿನ ಹೆಬ್ಬೆರಳಿನ ಮೇಲೆ ಮೆಟ್ಟಿ ನಿಂತು ಕೈಗೆ ಎಟುಕಿದಷ್ಟು ಬಿಡಿಸುತ್ತಿದ್ದಳು.

ವಾಸಂತಿ ತಮ್ಮ ಮನೆಯ ಕಾಂಪೌಂಡಿನಲ್ಲಿ ನಿಂತು ಪದ್ಮ ಪಡುತ್ತಿದ್ದ ಕಷ್ಟವನ್ನು ನೋಡಿದಳು, ವಾಸಂತಿ ಸೊಸೆಯಾಗಿ ಬಂದು 5 ವರ್ಷದ ಅವಧಿಯಲ್ಲಿ ಇಬ್ಬರೂ ಆತ್ಮೀಯ ಗೆಳತಿಯರಾಗಿದ್ದರು.

ಮೂಗೆತ್ತಿನಂತೆ ದುಡಿಯುತ್ತಿದ್ದ ಪದ್ಮಾ ಬಗ್ಗೆ ವಾಸಂತಿಗೆ ಅಪಾರ ಅನುಕಂಪ, ತನ್ನ ಕೈಲಾದ ಯಾವ ಸಹಾಯ ಮಾಡುವುದಕ್ಕೂ ವಾಸಂತಿ ಸಿದ್ಧ. ಆದರೆ ಪದ್ಮಾಗೆ ಅತ್ತೆಯ ಕಡಿವಾಣ ಜೋರಾಗಿತ್ತು.

ವಾಸಂತಿ ನಿಂತಿದ್ದ ಕಡೆಯಿಂದಲೇ ಕೂಗಿದಳು..,ಲೇ ; ಪದ್ಮಾ ಸಧ್ಯ ಆ ಮೊಗ್ಗು

ಬಿಡಿಸುವ ಹೊತ್ತಿಗೆ ಸುಸ್ತು ಹೊಡೆದು ಹೋಗ್ತೀಯಲ್ಲೇ, ತಾಳು ನಾನು ಬಂದು ಬಿಡಿಸಿ ಕೊಡ್ತೀನಿ ಅಂದಳು.

ಪದ್ಮಾ ಸೋತು ಉ....ಸ್ಸ್....ಅಂದು ಅಲ್ಲೇ ಕಲ್ಲು ಬೆಂಚಿನ ಮೇಲೆ ಕುಳಿತಳು. ವಾಸಂತಿ, ಅವರ ಮನೆ ಕಾಂಪೌಂಡು ಒಳಕ್ಕೆ ಹೋಗಿ ಪದ್ಮಳ ಪಕ್ಕದಲ್ಲಿ ಕುಳಿತು ಏನೇ ಪದ್ಮಾ ; ತೀರ ಸುಸ್ತಾಗಿದ್ದೀಯ ಆಗಲೇ ದಿನ ತುಂಬಿತೇ ? ಎಂದಳು.

ಪದ್ಮ ಬೇಸರದಿಂದ ದಿನ ತುಂಬೋದಿಕ್ಕೇನು ಹೇಳೇ, ಶುರು ಆಯ್ತೂ ಅಂದ್ರೆ ಆಯ್ತು ದಿನ – ದಿನ ತುಂಬಿಯೇ ಹೋಗುತ್ತೆ ನನ್ನ ಕರ್ಮ ಕಣೆ, ವಾಸಂತೀ.... ನೀನು ನೋಡು ಪುಣ್ಯ ಮಾಡಿದ್ದೀ ಎಷ್ಟು ಹಾಯಾಗಿದ್ದೀ ?

ವಾಸಂತಿಗೆ ಬಹಳ ದುಃಖವಾಯಿತು. ಸಾಕು ಪದ್ಮ ನನ್ನ ಪುಣ್ಯ ಯಾವ ಹೆಣ್ಣಿಗೂ ಬೇಡ. ಮನೆಯವರ ಆಸೆಗೆ ಆತಂಕವಾಗಿದ್ದೇನೆ ಪದ್ಮ ನಾನು ಪಾಪಿ; ಒಂದು ಮುದ್ದು ಮಗುವಿಗೆ ತಾಯಿಯಾಗುವ ಭಾಗ್ಯವಿಲ್ಲದೆ ಬರಡು ಬಾಳಾಗಿದೆ ನನ್ನ ಬಾಳು ಅನ್ನುವ ಹೊತ್ತಿಗೆ ವಾಸಂತಿ ಕಣ್ಣಲ್ಲಿ ನೀರು ಬಂದು ಬಿಟ್ಟಿತು.

ಪದ್ಮ ಆತ್ಮೀಯತೆಯಿಂದ ಅವಳ ಬೆನ್ನನ್ನು ನೇವರಿಸುತ್ತಾ ಬಿಡೇ ವಾಸಂತಿ.... "ನೀನೇನು ಮುದುಕಿ ಆಗ್ಹೋಗಿ ಬಿಟ್ಟೆಯಾ ಸ್ವಲ್ಪ ನಿಧಾನ ಇರಬಹುದು ಆಗಿಯೇ ಆಗುತ್ತೆ" ನನಗೇನೋ ಈ ಬಸುರಿ ತಪ್ಪ ಬಾಣಂತಿ, ಇಲ್ಲದೆ ಹಾಯಾಗಿ ನಾಲ್ಕು ದಿನ ಇದ್ದರೆ ಸಾಕು ಅನ್ನಿಸಿ ಹಾಗಂದು ಬಿಟ್ಟೆ ಕಣೆ, ನಿನ್ನ ಮನಸ್ಸಿಗೆ ನೋವಾಗುತ್ತೆ ಅಂತ ನಾನು ಯೋಚಿಸಲೇ ಇಲ್ಲ ಎಂದಳು.

ಆ ವೇಳೆಗೆ ಪದ್ಮಳ ಮಗು ಕಿಶೋರ 2 ವರ್ಷದವನು ಮೈಯೆಲ್ಲಾ ಕೊಚ್ಚೆ ಮೆತ್ತಿಕೊಂಡು ಅಳುತ್ತಾ ಬಂದ. ಅವರ ಅತ್ತೆ ಒಳಗಿನಿಂದ ಕೂಗಿಕೊಂಡರು. ಲೇ ಪದ್ಮಾ ; ನೋಡು ಮಗು ಹಸು ಕೊಟ್ಟಿಗೇಲಿ ಜಾರಿ ಬಿತ್ತು. ಮೈಯೆಲ್ಲಾ ಕೊಚ್ಚೆ ಮೆತ್ತಿಕೊಳ್ಳೇ.... ಅಂದರು.

ಹೇಮ ನಾಲ್ಕು ವರ್ಷದ ಮಗಳು "ಅಮ್ಮಾ ನಾನು ಕರೆಯೋಕ್ಕೆ ಹೋದ್ರೆ ಓಡೋಡಿ ಹೋಗಿ ಬಿದ್ದು ಬಿತ್ತ" ಎಂದು ಮುದ್ದಾಗಿ ಮಾತಾಡ್ತಾ ಬಂದಳು.

ಪದ್ಮಾಗೆ ಮೊದಲೇ ಕೈಲಾಗದು. ಮನೆಯಲ್ಲಿ ಹಸು–ಕರು ಬಿಡುವಿಲ್ಲದ ಕೆಲಸ ಸಾಲದ್ದಕ್ಕೆ ಆರು ವರ್ಷಕ್ಕೆ ಮೂರು ಮಕ್ಕಳು, ಮತ್ತೆ ಬಸುರಿ. ತನ್ನ ಕೈಲಾಗದ ಕೋಪ ವನ್ನು ಹೇಮಳ ಮೇಲೆ ತೀರಿಸಿಕೊಂಡಳು. "ಆ ಹಾಳು ಲೌಡಿ ಲಲಿತಾ ಎಲ್ಲೇ ಹೋದ್ಲು ಮಗೂನ ಕರ್ಕೊಂಡು ಮೈ ತೊಳಿಸಿ ಬೇರೆ ಬಟ್ಟೆ ಹಾಕೋಕೆ ಹೇಳು" ಎಂದು ಹೇಮಾ ಬೆನ್ನಿನ ಮೇಲೆ ನಾಲ್ಕೇಟು ಬಿಗಿದಳು.

ಪಾಪ ; ತನ್ನದೇನೂ ತಪ್ಪಿಲ್ಲದಿದ್ದರೂ ಅಮ್ಮ ಬಡಿದಳಲ್ಲಾ ಎಂದು ದುಃಖಿಸಿ ಕೊಂಡು ಹೇಮಾ ಅಜ್ಜಿ ಹತ್ರ ದೂರು ಹೇಳಲು ಅಳುತ್ತಾ ಹೋದಳು. ಬೀದೀಲಿ

ಕುಂಟೇಬಿಲ್ಲೆ ಆಡುತ್ತಾ ಇದ್ದ 6 ವರ್ಷದ ಲಲಿತಾ ತನಗೂ ಇನ್ನು ಒದೆ ಬೀಳುತ್ತದೆಂದು ಓಡಿ ಬಂದು ಕಿಶೋರನನ್ನೆತ್ತಿಕೊಂಡಳು.

ಪದ್ಮಳ ಅತ್ತೆ ಒಳಗಿನಿಂದಲೇ ಕಿರುಚುತ್ತಾ ಬಂದರು. ನಿನಗೇನು ಕೇಡು ; ಮಕ್ಕಳನ್ನು ಹಾಗೆ ಬಡೀತೀಯಲ್ಲ ಹೇಳೋವ್ರು ಕೇಳೋವ್ರು ಯಾರೂ ಇಲ್ವೇನೇ ನಿನಗೇ ? ಎಂದು ಸೊಸೇನ ಮನಸ್ವೇಚ್ಛೆ ಬೈದು ಹೇಮಾನ ಎತ್ತಿಕೊಂಡು ಹೊರಕ್ಕೆ ಎಲ್ಲೋ ಹೋದರು.

ವಾಸಂತಿ ನೋಡುತ್ತಿದ್ದಂತೆಯೇ ಐದು ನಿಮಿಷಕ್ಕೆಲ್ಲಾ ಇಷ್ಟು ಹಗರಣವಾಯಿತು.

ಪದ್ಮಾ ಮನ ನೊಂದು ನುಡಿದಳು. ನೋಡಿದ್ಯೇನಮ್ಮಾ ವಾಸಂತಿ ; ನನ್ನ ಸೌಭಾಗ್ಯ ಹೇಗಿದೆ ? ಕೈಲಾಗೋಲ್ಲ ಅಂತ ಒಂದು ನಿಮಿಷ ಕುಳಿತುಕೊಳ್ಳೋ ಹಾಗಿಲ್ಲ, ಕೆಲಸ ಎಲ್ಲಾ ಮುಗೀತಪ್ಪಾ ; ತಣ್ಣಗೆ ಒಂದು ನಿಮಿಷ ಹೊರಗೆ ಕೂತು ಕೊಳ್ಳೋಣಾಂದ್ರೆ ಈ ಪೀಡೆಗಳ ಕಾಟ. ನನಗ್ಯಾಕೋ ಬಾಳೇ ಬೇಸರವಾಗಿ ಬಿಟ್ಟಿದೆ ಕಣೇ ವಾಸಂತೀ ಎಂದು ನಿಟ್ಟುಸಿರು ಬಿಟ್ಟಳು.

ವಾಸಂತಿ ಮನೆಗೆ ವಿರುದ್ಧ ಪಕ್ಷ ಅನ್ನಬೇಕು ಪದ್ಮಳ ಮನೆ ಸಂಸಾರ, ವಾಸಂತಿಗೆ ಅತ್ತೆಮನೆ ಕಾಟ ಏನು ಅನ್ನೋದೇ ಗೊತ್ತಿಲ್ಲ. ಮನೆಯವರೆಲ್ಲಾ ಅವಳನ್ನು ಕೊಂಡಾಡುವವರೇ.

ಆದರೆ ಪದ್ಮಾಗೆ ಹಾಗಿಲ್ಲ, ಅತ್ತೆ ಮಾತು ಮಾತಿಗೆ ಸೊಸೆಯನ್ನು ದಂಡಿಸುತ್ತಿದ್ದರು

ವಾಸಂತಿಯು ವ್ಳ ಒಂದು – ಬಸುರಿ ಬಾಣಂತಿ ಎಂದು ನಲುಗದೆ ಇನ್ನೂ ನವ ವಧುವಿನಂತೆ ಮೋಹಕವಾಗಿದ್ದಳು. ಆದರೆ ಪದ್ಮ ಪಾಪ ; ಆರು ವರ್ಷದಲ್ಲಿ ನಾಲ್ಕು ಮಕ್ಕಳ ತಾಯಿ, ತುಂಬು ಬಸುರಿ ರಕ್ತ ಪುಷ್ಟಿಯಿಲ್ಲದೆ ಬಿಳಿಚಿಕೊಂಡು ನಿತ್ರಾಣಳಾಗಿದ್ದಾಳೆ.

ವಾಸಂತಿಗೆ ಪದ್ಮಳ ಬಗ್ಗೆ ಯಾವಾಗಲೂ ಕನಿಕರ, ಈಗಂತೂ ಅವಳಿಗಾಗಿ ಪ್ರಾಣ ಬಿಡುತ್ತಿದ್ದಳು. ಮನೆಯಲ್ಲಿ ಏನೊಂದು ತಿಂಡಿ ಪದಾರ್ಥ ಮಾಡಿದರೂ ಪದ್ಮಾಗೆ ಮುಚ್ಚಿ ಕೊಡುತ್ತಿದ್ದಳು. ಅವಳ ಮಕ್ಕಳನ್ನು ಎತ್ತಿ ಆಡಿಸಿ ಸಾಕಷ್ಟು ಸುಧಾರಿಸುತ್ತಿದ್ದಳು.

ಈ ಅತ್ತೆಯಕಾಟ ಮಕ್ಕಳ ಕಾಟದ ಮಧ್ಯೆ ಪದ್ಮ ಜೀವಶ್ರವದಂತೆ ದುಡಿಯುವುದು ನೋಡಿ ವಾಸಂತಿಗೆ ಅಯ್ಯೋ ಎನಿಸುತ್ತಿತ್ತು.

ಅಲ್ಲಾ ; ಕಣೇ ಪದ್ಮಾ ನಿನಗೆ ಸ್ವಲ್ಪವೂ ಬುದ್ಧಿ ಬೇಡವೇ ? ಈಗೇನು ? ಕುಟುಂಬ ಯೋಜನೆ ಅಂಥಾ ಚೆನ್ನಾಗಿ ಮಾಡಿಸಿಕೊಂಡು ಎರಡೇ ಮಕ್ಕಳು ಸಾಕು. "ಒಂದಕ್ಕೆ ಅಂತರ, ಎರಡಾದ ನಂತರ ಇನ್ನಿಲ್ಲ" ಎಂದೆಲ್ಲಾ ರೇಡಿಯೋದಲ್ಲಿ ಪ್ರಸಾರ ಮಾಡುವ ಪ್ರಕಾರ ಎರಡು ಮಕ್ಕಳಿಗೆ ಸಾಕುಮಾಡಿ ಹಾಯಾಗಿ ಇರ್ತಾರೆ. ನೀನು ಎರಡು ಮಕ್ಕಳಾದ ಮೇಲೆ ನಿಲ್ಲಿಸೋದಕ್ಕೆ, ಏನಾಗಿತ್ತೇ ನಿಂಗೆ ?

ಆ.... ಹಾ.... ಹಾ.... ವಾಸಂತೀ ನಮ್ಮ ಮನೆ ಸಂಸಾರದಲ್ಲಿ ನಿನ್ನಷ್ಟು ಫ್ರೀ ನನಗಿಲ್ಲವಮ್ಮಾ ; ನೀ ಕಂಡ ಹಾಗೆ ಅವರು ಮಂಡೀ ವ್ಯಾಪಾರದವರು, ಬೆಳಿಗ್ಗೆ ಮನೆ ಬಿಟ್ಟು ಹೋದರೆ ಇನ್ನು ರಾತ್ರಿ 10 ಗಂಟೆಗೆ ಮನೆಗೆ ಬರೋದು.

ನಮ್ಮತ್ತೆಗಂತೂ ಒಬ್ಬ ಮಗ, ಅವರಿಗೆ ಕೈತುಂಬ ಸಂಪಾದನೆ ಇದೆ. ಮನೆ ತುಂಬಾ ಮಕ್ಕಳಾಗಲಿ ಸುಮ್ಮನಿರೋ ಅನ್ನುತ್ತಾರೆ.

ಇಲ್ಲಿ, ಬಸುರಿ – ತಪ್ಪ ಬಾಣಂತಿ ಆಗಿ ಜೀವ ಸವಸೋಳು ನಾನು ತಾನೆ ಎಂದಳು ಪದ್ಮ.

ಅಲ್ಲ ಪದ್ಮ ; ನೀನು ನಿನ್ನ ಗಂಡ ಫ್ಯಾಮಿಲೀ ಪ್ಲಾನಿಂಗಿಗೆ ಒಪ್ಪಿದರೆ ಆಯ್ತು ನಿಮ್ಮತ್ತೇನೆ ಏನ್ ಕೇಳ್ತೀರ ?

ನೋಡು ವಾಸಂತಿ.... ಈ ಮನೇಲಿ ನಂದು ಏನೂ ನಡೆಯೋಲ್ಲ, ಈಗ ಎರಡು ಹೆಣ್ಣು ಒಂದು ಗಂಡು ಇದೆ. ಇನ್ನೂ ಎರಡು ಗಂಡು ಆಗಲಿ ಅಂತಾರೆ.

ವಾಸಂತಿಗೆ ಹೀಗೂ ಉಂಟೇ ? ಜನಾ ಅನ್ನಿಸಿತು. ಏನು ಸ್ವಾರ್ಥಿಗಳಪ್ಪಾ ; ನಿಮ್ಮ ಮನೆಯವರು ? ನೀನು ಒಳ್ಳೆ ಜೀವಶ್ರವ ಆಗಿದ್ದೀಯ. ಇನ್ನೇಳಾದ್ರೇ ನಿನ್ನ ಪ್ರಾಣ ತಿಂತಾರೆ ? ಈ ಸಲಾನೂ ಹೆಣ್ಣಾದ್ರೆ ಏನ್ ಮಾಡ್ತಾರಂತೆ ? ಅಂದಳು ವಾಸಂತಿ.

ವಾಸಂತೀ ಸಧ್ಯ ಈ ಸಲ ವ್ಯೆ ಬಿಟ್ಟು ಕಳೆದು ನಾನು ಮಗು ಬೇರೆಯಾಗಿ ಬದುಕಿ ಉಳಿದ ಕಾಲಕ್ಕೆ ನೊಡ್ಕೋಳೋಣ, ಯಾಕೋ ತುಂಬ ಸೋತು ಹೋಗಿದ್ದೀನಿ ಕಣೇ.

ಹೌದು ಪದ್ಮಾ ; ಏನಾದ್ರೂ ಟಾನಿಕ್ ತಗೋಬೇಕಾಗಿತ್ತು. ಡಾಕ್ಟ್ರು ಬೇಕಾದಷ್ಟು ಟಾನಿಕ್ ಬರೆದುಕೊಟ್ಟಿದ್ದಾರೆ. ಮನೆ ತುಂಬಾ ಟಾನಿಕ್ ಬಾಟ್ಲೇ ಇದೆ. ಟಾನಿಕ್ ಕುಡಿದಷ್ಟೂ ಹೊಟ್ಟೇಲಿ ಮಗು ಬೆಳೆಯುತ್ತೆ, ನಾನು ನಿಶ್ಶಕ್ತಿ ಆಗ್ತಾ ಇದೀನಿ. ಈ ಸಲ ಅಂತೂ ನನ್ನ ಹೊಟ್ಟೇಲಿ ಅದೆಷ್ಟು ದಪ್ಪ ಮಗು ಇದ್ಯೋ ; ನನ್ನನ್ನ ತಿಂದ್ಕೊಳ್ಳೋಕೆ ಹೀಗೆ ಬೆಳೀತಾ ಇದ್ಯೋ ಏನೋ ? ಅನ್ನಿಸುತ್ತೆ ವಾಸಂತೀ.

ಥೂ.... ಬಿಡ್ತೂ ಅನ್ನು ಪದ್ಮಾ ; ನಿನ್ನ ಗೋಳು ನಾನು ನೋಡ್ಲಾರೆ ಕಣೇ. ಈ ಸಲ ಬಾಣಂತೀಲಿ ಖಂಡಿತ ಆಪರೇಷನ್ ಮಾಡಿಸಿಕೊಂಡು ಬಿಡು. ಯಾರ ಮಾತೂ ಕೇಳ್ಬೇಡ.

ಎಂದು ವಾಸಂತಿ ಪದ್ಮಾಗೆ ಎಷ್ಟೋ ಸಮಾಧಾನದ ಒಳ್ಳೆ ಮಾತಾಡಿದಳು. ಹಾಗೇ ಮಲ್ಲಿಗೆ ಬಳ್ಳಿ ತುಂಬಾ ಬೆಳ್ಳಿ ಗೆಜ್ಜೆ ಪೋಣಿಸಿದಂತಿದ್ದ ಮೊಗ್ಗನ್ನು ಒಂದು ಬುಟ್ಟಿ ತುಂಬಾ ಬಿಡಿಸಿದಳು.

ಅರೆ ಬಿರಿದ ಮೊಗ್ಗಿನ ವಾಸನೆ ಘಂ.... ಎಂದು ಕಂಪನ್ನು ಬೀರುತ್ತಿತ್ತು. ಪದ್ಮ ವಾಸಂತಿಗೆ ಅರ್ಧ ಬುಟ್ಟಿ ಹೂ ಕೊಟ್ಟಳು. ಇನ್ನು ರಾತ್ರಿ ಅಡಿಗೆ ಆಗಬೇಕು ವಾಸಂತೀ ಹೋಗ್ತೇನಮ್ಮ ಎಂದು ಎದ್ದು ಒಳಕ್ಕೆ ಹೋದಳು ಪದ್ಮ.

ವಾಸಂತಿ ಒಂದು ನಿಟ್ಟುಸಿರು ಬಿಟ್ಟು ಮನೆಗೆ ಬಂದಳು. ಅವಳ ತಲೆ ತುಂಬಾ ಯೋಚನೆ, ಇದೇನು ವಿಚಿತ್ರ, ದೈವಲೀಲೆ ? ನಾನು ಹಂಬಲಿಸಿ ಹಾತೊರೆದರೂ ಒಂದು ಸಲವಾದರೂ ಗರ್ಭ ನಿಲ್ಲುವುದಿಲ್ಲ ನನಗೆ. ಆದರೆ ಪಾಪದ ಹುಡುಗಿ ಪದ್ಮ, ಮಗೂಗೆ ಒಂದು ವರ್ಷ ಆಗುವಾಗ್ಗೇ ಪುನಃ ಬಸುರಿ, ಹೀಗೆ " ಹಲ್ಲಿದ್ದವರಿಗೆ ಕಡಲೆ ಇಲ್ಲ ; ಕಡಲೆ ಇದ್ದವರಿಗೆ ಹಲ್ಲಿಲ್ಲ " ಎನ್ನುವುದು ಸರಿಯಾಗಿದೆ ಎಂದು ಚಿಂತಿಸುತ್ತಲೇ ಮಲ್ಲಿಗೆ ದಂಡೆ ಕಟ್ಟಿ ದೇವರ ಪಟಕ್ಕೆ ಹಾಕಿದಳು. ಅತ್ತೆಗೆ ಒಂದು ದಂಡೆ ಕೊಟ್ಟು ತಾನೂ ಮುಡಿದುಕೊಂಡಳು.

ಭಾಗೀರಥಮ್ಮನವರು ಇತ್ತೀಚೆಗೆ ಪುರಾಣ ಪುಣ್ಯ ಕಥೆ ಎಂದು ಸಂಜೆ ಹೊತ್ತು ದೇವಸ್ಥಾನ ಮಂದಿರಗಳಿಗೆ ಹೊರಟು ಹೋಗುತ್ತಿದ್ದರು. ಯಾವುದೇ ಪುರಾಣ ಕೇಳಿದರೂ ಅದರಲ್ಲಿ ಮಕ್ಕಳ ಭಾಗ್ಯವೇ ಭಾಗ್ಯ, ಮಕ್ಕಳಿಲ್ಲದ ಮನೆ ಮಸಣಕ್ಕೆ ಸಮ, ಮಕ್ಕಳನ್ನು ಎತ್ತಿ ಆಡಿಸುವ ಭಾಗ್ಯ ಏನು ಸಾಮಾನ್ಯವೇ ? ಎಂದೆಲ್ಲಾ ಹೇಳುವರು.

ಮನೆಯಲ್ಲಿ ಒಂದು ಕಂದನನ್ನು ಕಂಡೇನೇ ; ಎಂದು ಕಾತರಿಸುವ ಭಾಗೀರಥಮ್ಮ ನವರಿಗೆ ಈ ಮಾತುಗಳು ಇನ್ನೂ ಕಳವಳವನ್ನುಂಟು ಮಾಡುತ್ತಿತ್ತು.

ಇನ್ನು ಸುಮ್ಮನಿರುವುದು ಸರಿಯಲ್ಲ. ಮನೆಯಲ್ಲಿ ಹಿರಿಯಳಾಗಿದ್ದುಕೊಂಡು, ನಾನು ಆ ಹುಡುಗಿ ಕೈಲಿ ಒಂದು ವ್ರತ, ಒಂದು ಪೂಜೆ, ಅಂತ ಏನಾದ್ರೂ ಮಾಡಿಸ ಬೇಕಾಗಿತ್ತು, ಈ ವೇಳೆಗೆ ನಮ್ಮ ವಂಶದ ಕುಡಿ ಒಂದು ಮನೆಯಲ್ಲಿ ಬೆಳೆಯಬಹುದಾ ಗಿತ್ತು, ಎಂದುಕೊಂಡು ಪುರಾಣದಿಂದ ಮನೆಗೆ ಬಂದರು ಭಾಗೀರಥಮ್ಮ.

ರವಿ ಆಗ ತಾನೇ ಹೊರಗಿನಿಂದ ಬಂದಿದ್ದ. ವಾಸಂತಿ ಅವನಿಗೆ ಚಪಾತಿ, ಪಲ್ಯ ಕೊಡುತ್ತಿದ್ದಳು,

ತಟ್ಟೆಯಲ್ಲಿದ್ದ 3–4 ಚಪಾತಿ ಪಲ್ಯ ನೋಡಿ ರವಿ "ಇದೇನು ಅತ್ತಿಗೇ ನಾನೇನು ಬಂಡೀ ಬಕಾಸುರನೇ ? ಇಷ್ಟು ರಾಶಿ ಹಾಕಿದ್ದೀರಲ್ಲಾ" ತೆಗೀರಿ–ತೆಗೀರಿ ಅನ್ನುತ್ತಿದ್ದ.

ವಾಸಂತಿ " ಸಾಕು ಕಣೋ ಅವತಾರ ಆಡಬೇಡ, ಪ್ರಾಯದ ಹುಡುಗ ಸುಮ್ಮನೆ ತಿನ್ನು." ಎಂದು ಅಭಿಮಾನದಿಂದ ಹೇಳಿದಳು.

ಆ....ಹಾ....ಹಾ.... ನೀವೂ ಪ್ರಾಯದ ಹುಡುಗಿ, ಹಾಗಾದ್ರೆ ಇಷ್ಟನ್ನೂ ನೀವು ತಿನ್ನಿ ನೋಡ್ತೀನಿ ಎಂದು ಹಾಸ್ಯ ಮಾಡಿದ ರವಿ.

ನೋಡು ರವಿ, ನಾನು ಮನೇಲೇ ಕೂತಿರೋವ್ಳು ನೀನಾದ್ರೆ ಹೊರಗಡೆ ಸುತ್ತಿ ಆಡಿ ದಣಿದು ಬರ್ತೀಯಾ, ನೀನು ತಿನ್ನಬಹುದು ಎಂದು ರವಿಯ ಕಡೆ ವಾತ್ಸಲ್ಯದಿಂದ ನೋಡಿದಳು. ಆದರೆ ಅವನಾಡಿದ ಪ್ರಾಯ ಎಂಬ ಪದ ಮೈಯ್ಯಲ್ಲೆಲ್ಲೋ ಕಚಗುಳಿ ಇಟ್ಟಂತಾಯಿತು ವಾಸಂತಿಗೆ.

ತನ್ನೆತ್ತರಕ್ಕೂ ಮೇಲೆ, ತನ್ನ ಗಂಡನಿಗಿಂತ ದಷ್ಟ–ಪುಷ್ಟವಾಗಿ ಬೆಳೆದು ನಿಂತಿರುವ ಪ್ರಾಯದ ಮುದ್ದು ಮೈದುನನನ್ನು ತಾನು ಯಾವ ರೀತಿಯ ಸಲಿಗೆಯಿಂದ ನೋಡು ತ್ತಿದ್ದೇನೆ ? ಉಪಚರಿಸುತ್ತಿದ್ದೇನೆ ? ಎಂದು ವಾಸಂತಿಗೆ ಒಂದು ಘಳಿಗೆ ಸಂಕೋಚ ವೆನಿಸಿತು.

ಮತ್ತೆ ಕಳ್ಳ–ಕಪಟವರಿಯದ ಹಸುಕೂಸಿನಂತಹ ಮನಸ್ಸಿನ ಹುಡುಗ, ತನ್ನ ತಾಯಿಗಿಂತಲೂ ಹೆಚ್ಚು ಮಮತೆಯನ್ನು ನನ್ನಲ್ಲಿಟ್ಟಿದ್ದಾನೆ. ಅದರಿಂದಲ್ಲವೇ ನಾನೂ ಅಷ್ಟು ಸಲಿಗೆಯಿಂದಿರುವುದು ಎಂದು ಮನಸ್ಸಿನಲ್ಲಿಯೇ ಹೆಮ್ಮೆಪಟ್ಟಳು.

ಹುಂ....ಬೇಗ ತಿಂದುಬಿಡು, ಕಾಫಿ ಆರಿಹೋಗುತ್ತೆ ಎಂದಳು ವಾಸಂತಿ ಅಕ್ಕರೆ ಯಿಂದ.

ಒಳ್ಳೆ ಅತ್ತಿಗೆ, ಯಾವಾಗ್ಲೂ ಒಂದೊಂದು ಹೇಳಿ ನಿಮ್ಮ ಹಟವೇ ಗೆಲ್ಲುವಂತೆ ಮಾಡ್ತೀರಾ, ಇವತ್ತು ಆಟದಲ್ಲಿ ನಾನು ಗೆದ್ದುಬಿಟ್ಟೆ ಅತ್ತಿಗೆ. ಅದಕ್ಕೆ ನನ್ನ ಫ್ರೆಂಡ್ಸ್ ಎಲ್ಲರೂ ಪಾರ್ಟಿ ಕೊಡೋಲ್ವೇನೋ ? ಅಂತ ಮುತ್ತಿಗೆ ಹಾಕ್ ಬಿಟ್ರು ಅದಕ್ಕೆ ನಾಳೆ ನಮ್ಮನೇಗೆ ಬನ್ನೀ ಅಂತ ನನ್ನ ಸ್ನೇಹಿತರು 5–6 ಜನಾನ ಕರೆದು ಬಿಟ್ಟಿದ್ದೀನಿ ಅತ್ತಿಗೆ ಅಂದ, ದೈನ್ಯತೆಯಿಂದ ವಾಸಂತಿ ಮುಖ ನೋಡುತ್ತಾ ರವಿ.

ಸರಿ ರವಿ ಅದಕ್ಕೆ ನಾನೇನ್ ಮಾಡಬೇಕೂ ಅಂತ ?

ಪ್ಲೀಸ್ ಅತ್ತಿಗೆ, ಒಂದಿಷ್ಟು ಬಿಸಿಬೇಳೆಭಾತು, ಜೋಂಡ, ಮೈಸೂರುಪಾಕು. ಮಾಡಿಬಿಡಿ.

ಸರಿ ಅಮ್ಮನಿಗೆ ಹೇಳಿದ್ಯೇನೋ ?

ನೀವು ಒಪ್ಪಿಕೊಂಡು ಬಿಟ್ರೆ ಆಯ್ತು ಆಮೇಲೆ ಅಮ್ಮನಿಗೆ ಹೇಳೋದೂ.

ಇಷ್ಟು ಮಾತನ್ನು ಭಾಗೀರಥಮ್ಮ ಕೇಳಿಸಿಕೊಂಡೇ ಒಳಕ್ಕೆ ಬಂದರು. ಪಾಪ; ಹುಡುಗಿ ಗಂಡನಿಗೊಂದು ಮೈದುನಿಗೊಂದು ಅಂತ ಚೂರೂ ಭೇದ ಮಾಡೋಲ್ಲ. ನನ್ನ ಎರಡು ಮಕ್ಕಳನ್ನೂ ಎರಡು ಕಣ್ಣಾಗಿ ನೋಡ್ಕೋತಾಳೆ. ಇಂಥಾ ಹುಡುಗಿಗೆ ದೇವರು ಒಂದು ಕಂದನನ್ನು ಕರುಣಿಸಬಾರದೇ ? ಎಂದುಕೊಂಡರು ಮನಸ್ಸಿನಲ್ಲಿ.

ಲೋ ರವಿ; ಏನೋ ಅದು ಅವಳ ಹತ್ರ ಒಳ್ಳೆ ಪೊಂಡು ಮಗು ಆಡಿದ ಹಾಗೆ ಆಡ್ತೀಯಲ್ಲೋ ಎಂದು ಗದರಿದರು.

ಹೌದಮ್ಮಾ; ಅತ್ತಿಗೆಗೆ ಒಂದು ಮಗು ಆಗೋವರ್ಗೂ ನಾನು ಅವರ ಮಗೂನೇ ಅಲ್ವೇ ಅತ್ತಿಗೆ ? ಎಂದು ಮುದ್ದಾಗಿ ಹೇಳಿದ.

ಆ ಮಾತು ವಾಸಂತಿಯ ಮನಸ್ಸನ್ನು ಹೊಕ್ಕು ಇದ್ದ ನೋವನ್ನು ಇನ್ನೂ ಹೆಚ್ಚಿ ಸಿತು. ಮುಖ ಕಳೆಗುಂದಿದಂತಾಯಿತು. ರವಿಗೆ ಏನೂ ಉತ್ತರ ಹೇಳದೆ ಕೆಲಸದ ನೆಪದಲ್ಲಿ

ಒಳಕ್ಕೆ ಹೊರಟು ಹೋದಳು.

ಭಾಗೀರಥಮ್ಮನವರು ಸೊಸೆಯ ನೋವಿನಿಂದ ಕಿವುಚಿದ ಮುಖವನ್ನು ನೋಡಿ ತಾವೂ ವ್ಯಥೆ ಪಟ್ಟರು.

ವಾಸಂತೀ ಇಲ್ಲಿ ಬಾಮ್ಮ ; ಎಂದು ಅಕ್ಕರೆಯಿಂದ ಸೊಸೆಯನ್ನು ಕರೆದರು.

ವಾಸಂತಿಗೆ ಇದೇನು ಅತ್ತೆ ವಿಶೇಷ ರೀತಿಯಲ್ಲಿ ಕರೆಯುತ್ತಾರಲ್ಲಾ ಎಂದು ಅಡಿಗೆ ಮನೆ ಸ್ವಚ್ಛ ಮಾಡುತ್ತಿದ್ದವಳು ಹಾಗೇಯೇ ಬಿಟ್ಟು ಅವರ ಬಳಿ ಬಂದು ಏನತ್ತೇ ? ಎಂದಳು.

ನಿನ್ನ ಮನಸ್ಸಿನ ಕೊರಗು ನನಗೂ ಅರ್ಥವಾಗುತ್ತೆ ವಾಸಂತೀ, ಈಗೇನು ನಿನಗೆ ಮಕ್ಕಳಾಗದಷ್ಟು ವಯಸ್ಸು ಮೀರಿ ಹೋಗಿದೆಯೇ ? ನೋಡು ಆ ಶಾಸ್ತ್ರಿಗಳು ಆ ದಿನವೇ ಹೇಳಿದರು, ನಿಮ್ಮ ಸೊಸೆ ಕೈಲಿ ಒಂದು ಮಂಡಲ ಅಶ್ವತ್ಥ ಕಟ್ಟೆ ಪ್ರದಕ್ಷಿಣೆ ಮಾಡಿಸಿರಿ ಒಳ್ಳೆಯದಾಗುತ್ತೆ ಎಂದು. ನಾಳೆಯಿಂದಲೇ ಮಾಘಮಾಸ ಪ್ರಾರಂಭ. ಒಂದು 24 ದಿವಸ ಅಶ್ವತ್ಥ ಪ್ರದಕ್ಷಿಣೆ ಪೂಜೆ ಮಾಡಮ್ಮಾ. ನೋಡೋಣ ದೇವರಿದ್ದಾನೆ ಎಂದರು.

ಅಲ್ಲೇ ಇದ್ದ ರವಿ ಅವರ ಮಾತು ಕೇಳಿ ಗಟ್ಟಿಯಾಗಿ ನಗಲು ಶುರು ಮಾಡಿದ.

ಯಾಕೋ ನಗ್ತೀಯಾ ಎಂದು ಗದರಿದರು ಭಾಗೀರಥಮ್ಮ.

ನಗು ಬರೋಲ್ವೇ ಮತ್ತೆ ? ಅಶ್ವತ್ಥ ಪ್ರದಕ್ಷಿಣೇಗೆಲ್ಲಾ ಒಂದೊಂದು ಮಗು ಹುಟ್ಟೋದಾದ್ರೆ, ನೀನೂ ನಾಳೆಯಿಂದ ಮಾಡಮ್ಮಾ ನಿಂಗೂ ಒಂದು ಮಗು ಆಗ್ಲಿ ಅಂದ.

ಹೋಗೋ ತಲೆ ಹರಟೆ, ಈಗಿನ ಕಾಲದ ಹುಡುಗರಿಗೆ ದೇವರಲ್ಲಿ ಭಕ್ತಿ ಇಲ್ಲ, ಪೂಜೇಲಿ ಶ್ರದ್ಧೆ ಇಲ್ಲ ನಡಿಯೋ ಆಚೆ, ಎಂದು ಗದರಿದರು ಭಾಗೀರಥಮ್ಮ.

ವಾಸಂತಿಗಂತೂ ಈ ಮನೆಯವರಿಗೆಲ್ಲಾ ನನ್ನಿಂದ ಎಷ್ಟು ಆತಂಕ ? ನನ್ನ ಯತ್ನದಲ್ಲಿದ್ದರೆ ನಾನು ಏನು ಬೇಕಾದರೂ ಮಾಡೇನು, ಎಂದು ತಲ್ಲಣಿಸಿದಳು. ತನಗೆ ಪೂಜೆಯಲ್ಲಿ ಭಕ್ತಿ ಶ್ರದ್ಧೆಯಿದ್ದರೂ ಅದರಿಂದ ಮಕ್ಕಳಾಗುತ್ತೆ ಅನ್ನೋ ನಂಬಿಕೆ ಮಾತ್ರ ಇಲ್ಲ. ಅತ್ತೆಯವರು ಹೇಳಿದ ಮಾತಿಗೆ ಏನು ಉತ್ತರ ಹೇಳಲಿ ? ಎಂದು ಯೋಚಿಸುತ್ತಾ ಸುಮ್ಮನಿದ್ದಳು.

ಭಾಗೀರಥಮ್ಮನವರು ಪುನಃ ಏನಮ್ಮಾ ; ನಿನಗೆ ಇಷ್ಟವಿಲ್ಲವೇ ? ಎಂದರು.

ವಾಸಂತಿ ಎಂದೂ ಅತ್ತೆ ಮನಸ್ಸಿಗೆ ಬೇಸರವಾಗುವಂತೆ ನಡೆದವಳಲ್ಲ. ಅಷ್ಟೇಕೆ ಆ ಮನೆಯಲ್ಲಿ ಎಲ್ಲರಿಗೂ ವಾಸಂತಿ ಅಂದರೆ ಒಂದು ಕಣ್ಣು, ತಾನೇಕೆ ಅವರು ಹೇಳಿದ್ದಕ್ಕೆ ಬೇಡವೆನ್ನಲಿ ? ಎಂದುಕೊಂಡು ಸರಿ ಅತ್ತೆ, ದೊಡ್ಡೋವ್ರು ನೀವು ಹೇಳಿದಂತೆ ಮಾಡು ತ್ತೇನೆ ಎಂದಳು.

ಸರಿ ನಾಳೆಯಿಂದಲೇ ಪ್ರಾರಂಭಿಸಿ ಬಿಡು, ಬೆಳಗಿನ ಜಾವವೇ ಎದ್ದು ಸ್ನಾನಮಾಡಿ

ಸೂರ್ಯೋದಯದ ವೇಳೆಗೆ ಪೂಜೆ, ಪ್ರದಕ್ಷಿಣೆ ಮುಗಿದಿರಬೇಕಮ್ಮ.

ಈ ರಾತ್ರೀನೇ ಪೂಜೆಗೆಲ್ಲಾ ಅಣಿ ಮಾಡಿಕೋ ಅಂದರು.

ತನ್ನ ಒಳ್ಳೆಯದಕ್ಕೇ ಅತ್ತೆ ಹೇಳುತ್ತಿದ್ದಾರೆ. ತನಗೆ ಎಷ್ಟೇ ಕಷ್ಟವಾದರೂ ಅವರ ಮನಸ್ಸಿನ ತೃಪ್ತಿಗಾದರೂ ಮಾಡುತ್ತೇನೆ. ಒಂದು ಫಲಪ್ರಾಪ್ತಿಗಾಗಿ ಏನು ಬೇಕಾದರೂ ಮಾಡಬಲ್ಲೆ ಆಗುವಂತಿದ್ದರೆ ? ಎಂದು ಮನಸ್ಸಿನಲ್ಲಿ ಅಂದುಕೊಂಡು, ವಾಸಂತಿ ಆಗಲಿ ಅತ್ತೆ ! ಈಗಲೇ ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತೇನೆ ಎಂದಳು.

ಎಲ್ಲರ ಊಟ ಆಗಿ ಎಷ್ಟು ಹೊತ್ತಾದರೂ ಇನ್ನೂ ವಾಸಂತಿಯು ಕೆಲಸ ಮುಗಿದಂತೆ ಕಾಣಲಿಲ್ಲ. ನಾಗರಾಜ ತನ್ನ ರೂಮಿನಲ್ಲಿ ನೆಪಕ್ಕೆ ಪೇಪರ್ ಓದುತ್ತಾ ಹೆಂಡತಿ ನಿರೀಕ್ಷಣೆಯಲ್ಲಿದ್ದ.

ಎಷ್ಟು ಹೊತ್ತಾದರೂ ಹೆಂಡತಿ ಬರದಿರುವುದನ್ನು ನೋಡಿ ಬೇಸರದಿಂದ ಮಹಡಿ ಇಳಿದು ಬಂದ. ಅಡಿಗೆಮನೆ ಹೊಸ್ತಿಲ ಬಳಿ ನಿಂತು ನೋಡಿದ. ಅತ್ತೆ, ಸೊಸೆ ಇಬ್ಬರೂ ಏನೋ ಸಡಗರದಿಂದ ದೀಪ, ಎಣ್ಣೆ, ಬತ್ತಿ, ತಟ್ಟೆ, ಬಟ್ಟಲು ಏನೇನೋ ಅಣಿ ಮಾಡುತ್ತಿದ್ದಾರೆ.

ನಾಳೆ ಏನು ಹಬ್ಬ ? ವಿಶೇಷ ? ಅಂದುಕೊಂಡ. ಏನು ? ಅನ್ನುವಂತೆ ಅವನ ಕಡೆ ನೋಡಿ ವಾಸಂತಿ ಕಣ್ಣು ಮಿಟುಕಿಸಿದಳು.

ಭಾಗೀರಥಮ್ಮನವರು ಮಗನ ಮನಸ್ಸನ್ನು ಅರ್ಥಮಾಡಿಕೊಂಡವರಂತೆ ಏನೋ ರಾಜು; ಹೆಂಡತಿ ಇನ್ನೂ ಬರಲಿಲ್ಲವಲ್ಲಾ ಅಂತ ಬಂದ್ಯಾ ? ಆಯ್ತು ಬರ್ತಾಳೆ ನಡ್ಯೋ ಅಂದರು.

ನಾಗರಾಜ ತನ್ನ ಮನಸ್ಸಿನ ತೊಳಲಾಟವನ್ನು ತೋರ್ಪಡಿಸದೆ " ಅದಕ್ಕಲ್ಲ ಅಮ್ಮಾ ಒಂದು ಲೋಟ ನೀರು ಬೇಕಾಗಿತ್ತು " ಎಂದ.

ವಾಸಂತಿ ತನ್ನ ಹೊಳಪು ಕಣ್ಣುಗಳ ಕುಡಿನೋಟ ಅವನತ್ತ ಬೀರಿ ಮನದಲ್ಲೇ ನಕ್ಕು " ಅಲ್ಲಾ... ನೀರಿಗೋಸ್ಕರ ಮಹಡಿ ಇಳಿದು ಬರಬೇಕಾಗಿತ್ತಾ ? ಜಗ್‌ನಲ್ಲಿ ಇರಲಿಲ್ಲವೇ ?" ಎಂದು ಒಂದು ಲೋಟ ನೀರು ತುಂಬಿ ಕೊಟ್ಟಳು.

ಅದರಲ್ಲೇನೋ ಧೂಳು ಬಿದ್ದಿತ್ತು ಕಣೇ ಎಂದು ಲೋಟ ಕೈಗೆತ್ತಿಕೊಂಡು ಮೆಲ್ಲನೆ ಅವಳ ಕೈ ಚಿವುಟಿದ.

ವಾಸಂತಿಗೆ ಗಂಡನ ತೊಳಲಾಟ ಗೊತ್ತು. ಹೆಚ್ಚುಹೊತ್ತು ನಿರೀಕ್ಷಿಸಲಾರ ಎಂದು.

ನಾಗರಾಜ ಮೇಲೆ ಹೋಗಿ ಹಾಸಿಗೆಯಲ್ಲಿ ಉರುಳಿದ, ಏನೇನೋ ಜ್ಞಾಪಿಸಿಕೊಂಡು ನಸುನಕ್ಕ.

"ವಾಸಂತಿ ತನ್ನ ಮೇಲೆ ಎಂತಹ ಮೋಡಿ ಮಾಡಿದಳು. ಮದುವೆಯೇ ಬೇಡವೆಂದಿದ್ದ ತನ್ನನ್ನು ಎಂತಹ ಸುಖದ ಸ್ವರ್ಗಕ್ಕೆ ಕರೆದೊಯ್ದಳು. ಒಂದು ಘಳಿಗೆ ಅವಳಿಲ್ಲದಿದ್ದರೆ ನೀರಿನ ಮೀನು ನೆಲಕ್ಕೆ ಬಿದ್ದಂತೆ ಚಡಪಡಿಸುತ್ತೇನಲ್ಲಾ; ಅಂತಹ ಹೆಣ್ಣಿಗೆ ನನ್ನಿಂದ ಅನ್ಯಾಯವಾಗಬಾರದು" ಎಂದುಕೊಂಡ.

ವಾಸಂತಿ ಸದ್ದಿಲ್ಲದೆ ಮಹಡಿ ಮೆಟ್ಟಿಲನ್ನು ಒಂದೊಂದೇ ಹೆಜ್ಜೆ ಬೆಕ್ಕಿನಂತೆ ಇಡುತ್ತಾ ಹತ್ತಿ ಬಂದಳು. ಕೋಣೆಯ ಹೊಸ್ತಿಲ ಮೇಲೆ ನಿಂತು ಶಬ್ದ ಮಾಡದೆ ನಾಗರಾಜನನ್ನೇ ಕಣ್ಣರಳಿಸಿ ನೋಡುತ್ತಿದ್ದಳು.

ನಾಗರಾಜ ವಿಶಾಲವಾಗಿ ಕಣ್ಣು ಬಿಟ್ಟು, ಕಟ್ಟಿದ್ದ ಸೊಳ್ಳೆ ಪರದೆಯ ಮೇಲು ಕಟ್ಟನ್ನು ದಿಟ್ಟಿಸುತ್ತಾ ತದೇಕವಾಗಿ ಯಾವುದೋ ವಿಚಾರದಲ್ಲಿ ಮುಳುಗಿದ್ದಂತೆ ಕಂಡಿತು.

ಎರಡು ಕೈ ಬೆರಳನ್ನೂ ತೆಕ್ಕೆ ಮಾಡಿ ತಲೆ ಕೆಳಗಿಟ್ಟು ಹಾಸಿಗೆ ಪೂರಾ ಕಾಲುಚಾಚಿ ಚಿತ್ರದಲ್ಲಿ ಬರೆದ ಸುಂದರ ಯುವಕನಂತೆ ಕಾಣುವ ನಾಗರಾಜ ವಾಸಂತಿಗೆ ಬಲು ಮೋಹಕವಾಗಿ ಕಂಡ.

ಅಲ್ಲಿ ನಿಂತಿದ್ದಂತೆಯೇ ವಾಸಂತಿ ಒಂದು ಸಲ ಮೆಲ್ಲನೆ ಕೆಮ್ಮಿದಳು. ನಾಗರಾಜ ಸರಕ್ಕನೆ ಅತ್ತ ತಿರುಗಿ ನೋಡಿದ.

ವಾಸಂತಿ ಕುಲು–ಕುಲು ನಕ್ಕಳು. ನಾಗರಾಜ ಕೋಪವನ್ನು ನಟಿಸುತ್ತಾ ಪಕ್ಕಕ್ಕೆ ತಿರುಗಿ ಅವಳ ಕಡೆ ಬೆನ್ನು ಮಾಡಿ ಮಲಗಿದ.

ವಾಸಂತಿ ಬಾಗಿಲು ಮುಂದೆ ಮಾಡಿ ಅವನ ಬಳಿ ಬಂದು ಅವನ ಮುಖವನ್ನು ತನ್ನತ್ತ ತಿರುಗಿಸಿದಳು.

ನಾಗರಾಜ ಕಣ್ಣು ಮುಚ್ಚಿದಂತೆಯೇ ಅವಳ ಕೈಯನ್ನು ದೂರ ತಳ್ಳಿ ಅತ್ತ ತಿರುಗಿದ.

ವಾಸಂತಿಗೆ ಈ ಮಾರ್ಜಾಲ ಸನ್ಯಾಸಿ ಬುದ್ಧಿ ಗೊತ್ತು. "ಅ....ಹಾ....ಹಾ ನಮ್ಮ ಮುದ್ದು ಪಾಪಾಗೆ ಎಷ್ಟು ದಪ್ಪ ಕೋಪ ಬಂದಿದೆ ? ಎಲ್ಲಿ ತೋರಿಸು ಪಾಪಾ ; ಎಂದು ತಮಾಷಿಯಾಗಿ ಅವನ ಕೆನ್ನೆ ಹಿಂಡಿದಳು.

ಆದರೂ ಮುಚ್ಚಿದ ಕಣ್ಣು ತೆರೆಯಲಿಲ್ಲ. ಬಿಗಿದಿದ್ದ ಮುಖ ಸಡಿಲವಾಗಲಿಲ್ಲ. ವಾಸಂತಿ ಸ್ವಲ್ಪ ತಡವಾಗಿ ಬಂದರೂ ನಾಗರಾಜ ಮುನಿಸಿಕೊಳ್ಳುತ್ತಿದ್ದುದು ಮಾಮೂಲಿ. ಆಗೆಲ್ಲಾ ವಾಸಂತಿ ಒಂದಕ್ಕೆ ಡಬ್ಬಲ್ ಮುದ್ದು ಮಾಡಿ ಅವನ ಮನ ಒಲಿಸಿ, ಪ್ರೇಮದ ಪ್ರವಾಹದಲ್ಲಿ ಇಬ್ಬರೂ ಕೊಚ್ಚಿ ಹೋಗುತ್ತಿದ್ದರು.

ಇವತ್ತೂ ವಾಸಂತಿಯಿಂದ ತನಗೆ ಅದೇ ಒಲವು ಸಿಕ್ಕುತ್ತದೆಂದು ನಾಗರಾಜ ಬಿಗುಮಾನ ಬಿಡದೆ ಮುಸುಕೆಳೆದು ಮಲಗಿದ.

ವಾಸಂತಿಗೆ ಈ ದಿನ ಯಾವ ಹುಡುಗಾಟ, ಪ್ರೇಮಾಲಾಪನೆಯೂ ಬೇಕಿರಲಿಲ್ಲ. ಅವಳಿಗೆ ತಲೆ ತುಂಬಾ ಯೋಚನೆ. ಪತಿ–ಪತ್ನಿಯರ ಪ್ರೇಮ–ಮಿಲನಕ್ಕೆ ಪ್ರತಿಫಲ ಒಂದುಂಟಲ್ಲವೇ ? ಬರೀ ಈ ಕಾಮಕೇಳಿಗಾಗಿಯೇ ದಾಂಪತ್ಯ ಜೀವನವೇ ? ಫಲ ಬಿಟ್ಟ ಮರಕ್ಕೆ ಇರುವ ಆದರಣೆ ಗೊಡ್ಡು ಮರಕ್ಕೆ ಎಲ್ಲುಂಟು ?

ತಾನು ಒಂದು ಫಲ ಬಿಡದ ಮರವಾದೆನಲ್ಲಾ ! ಗೆಲುವಿಲ್ಲದ ಒಲವು ಏಕೆ ವ್ಯರ್ಥ ಎಂದು ಮನಸ್ಸು ನೂರಾರು ಚಿಂತೆಯಿಂದ ಚುಚ್ಚುತ್ತಿತ್ತು.

ಗಂಡನನ್ನು ಮುದ್ದು ಮಾಡಿ ಒಲಿಸುವ ಸುದ್ದಿಗೆ ಹೋಗದೆ ಅವನನ್ನು ಅಷ್ಟಕ್ಕೇ ಬಿಟ್ಟು ದೀಪವಾರಿಸಿ ತನ್ನಷ್ಟಕ್ಕೆ ತಾನು ಅವನ ಪಕ್ಕದಲ್ಲಿ ಹೊದ್ದು ಮಲಗಿದಳು.

ನಾಗರಾಜನಿಗೆ ಗಾಬರಿಯಿಂದ ತಲೆಯ ನರವೆಲ್ಲಾ ಪಟ–ಪಟನೆ ಹೊಡೆದು ಕೊಂಡಂತಾಯಿತು. ತಾನು ಹಾಕಿದ ಯೋಜನೆ ಏರು–ಪೇರಾಯಿತಲ್ಲ, ವಾಸಂತಿ ಸದ್ದಿಲ್ಲದೆ ಮಲಗಿಯೇ ಬಿಟ್ಟಳು.

ಅವಳು ಎಂದೂ ಹೀಗೆ ತನ್ನನ್ನು ಕಡೆಗಾಣಿಸಿದವಳಲ್ಲ, ಇವತ್ತೇನಾಗಿದೆ ? ಅವಳಿಗೆ ! ಚಡಪಡಿಸಿದ, ತನ್ನ ಮೇಲೆಯೇ ಅವನಿಗೆ ಸಿಟ್ಟು ಬಂತು. ಪಾಪ ; ಕೆಲಸ ಮಾಡಿ ದಣಿದು ಬಂದವಳನ್ನು ತಾನಲ್ಲವೇ ಆದರಿಸಬೇಕಾದುದು ! ಇನ್ನು ಒಂದು ಘಳಿಗೆಯೂ ಸುಮ್ಮನಿರಲು ಅವನಿಂದಾಗಲಿಲ್ಲ.

ಅವನು ಎದ್ದು ಕುಳಿತು ಅವಳ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಮೌನವಾಗಿ ತಲೆ ನೇವರಿಸಿದ.

ಆದರೂ ವಾಸಂತಿ ಕಣ್ಣು ತೆರೆಯಲಿಲ್ಲ, ಮಾತಾಡಲಿಲ್ಲ. ಎಚ್ಚರದಲ್ಲಿದ್ದೂ ಅವಳ ಮೌನ ನಾಗರಾಜನಿಗೆ ಅಸಹನೀಯವಾಯಿತು. ಅವಳ ಕೆನ್ನೆಯನ್ನು ಮೆಲ್ಲನೆ ಚಿವುಟಿ,

"ಲೇ....ವಾಸೀ....ನಾನು ಮಾಡಿದ್ದಕ್ಕೆ ಮುಯ್ಯಿ ತೀರಿಸುತ್ತಿದ್ದೀಯಾ ?"

ವಾಸಂತಿ ಕಣ್ಣನ್ನು ತೆರೆಯದೆಯೇ "ಅಯ್ಯೋ ! ಸಧ್ಯ ! ನನಗೆ ಸಾಕಾಗಿದೆ, ಇನ್ನು ಬೆಳಗಿನ ಜಾವವೇ ಏಳಬೇಕು. ನನ್ನನ್ನು ಸುಮ್ಮನೆ ಮಲಗಲು ಬಿಡಿ". ಎಂದು ದಿಂಬಿಗೆ ತಲೆ ಇಟ್ಟು ಮಲಗಿದಳು.

ನಾಗರಾಜ ಹೆಂಡತಿಯನ್ನು ಎಂದೂ ಹಿಂಸಿಸಿದವನಲ್ಲ. ಅವಳಿಗೆ ಆಯಾಸವಾಗಿ ಬೇಸರವಾಗಿದ್ದ ದಿನ ಅವಳನ್ನು ನಲುಗಿಸದೆ ಹೂವಿನಂತೆ ಮೆಲ್ಲನೆ ಮಲಗಿಸಿ ಹೊದ್ದಿಸುತ್ತಿದ್ದ.

ಆದರೆ ಈ ದಿನ ಅವಳ ಬಾಡಿದ ಮುಖ, ಚಿಂತೆಯ ಗೆರೆ, ಅವಳಿಗೆ ಆಯಾಸಕ್ಕಿಂತ ಏನೋ ಮನಸ್ಸಿಗೆ ನೋವಾಗಿದೆ ಎನ್ನಿಸಿತು.

ನ್ನ ಮುದ್ದಿನ ಮಡದಿಗೆ ಏನೊಂದು ಕೊರತೆಯಾದರೂ ಸಹಿಸಲಾರ. ಅವಳನ್ನು ಸುಮ್ಮನೆ ಮಲಗಲು ಬಿಡಲಿಲ್ಲ.

ಅವಳನ್ನು ಎಬ್ಬಿಸಿ ಕೂರಿಸಿ ಅವಳ ಮುಖವನ್ನು ಒತ್ತಿ ಹಿಡಿದು "ನಿಜ ಹೇಳು ವಾಸೀ ; ನಿನಗೇನು ಬೇಸರ ? ನಾನೇನಾದರೂ ತಪ್ಪು ಮಾಡಿದನೇ ? " ಎಂದ. ಗೋಗರೆದ. ಅಷ್ಟಕ್ಕೇ ಅವನ ಧ್ವನಿ ನಡುಗುವಂತಾಗಿ ದುಃಖ ಒತ್ತರಿಸಿ ಬಂತು.

ಈಗ ವಾಸಂತಿಯ ಹೃದಯ ದಡ-ಬಡಿಸಿತು. ಕಣ್ಣನ್ನು ದೊಡ್ಡದಾಗಿ ಬಿಟ್ಟು ಗಂಡನ ಮುಖವನ್ನು ನೋಡಿದಳು. ಬೆಡ್ ಲೈಟಿನ ಮಂದ ಬೆಳಕಿನಲ್ಲಿ ಅವನ ಮುಖ ಸರಿಯಾಗಿ ಕಾಣಿಸಲಿಲ್ಲ. ಎದ್ದು ಸ್ವಿಚ್ ಒತ್ತಿದಳು. ಪ್ರಕಾಶವಾದ ಬೆಳಕಿನಲ್ಲಿ ಗಂಡನ ಕಣ್ಣಾಲಿಗಳು ತುಂಬಿರುವುದು ಕಾಣಿಸಿತು.

ಕಳ್ಳ-ಕಪಟವರಿಯದ ಹಸು ಮಗುವಿನಂತಹ ಸುಂದರ ಮುಖ, ಹೃದಯ ಕಲಶ ದಲ್ಲಿ ತುಂಬಿ ತುಳುಕುತ್ತಿರುವ ಪ್ರೇಮಾಮೃತ ಧಾರೆಯನ್ನೆಲ್ಲಾ ತನ್ನ ಮೇಲೆ ಸುರಿದಿ ದ್ದಾನೆ. ಇಂತಹ ಪತಿಯನ್ನು ನೋಯಿಸಿದ ಪಾಪಿ ನಾನು, ಎಂದುಕೊಂಡಳು. ಅವಳ ಬೇಸರವೆಲ್ಲ ಕ್ಷಣದಲ್ಲಿ ಮಾಯವಾಯಿತು.

ಅವನ ಕುರುಳಿನಲ್ಲಿ ಬೆರಳಾಡಿಸುತ್ತಾ "ಅಲ್ಲಾ; ಇದೇಕೆ ಇಷ್ಟು ನೊಂದುಕೊಳ್ಳು ತ್ತೀರಿ ? ನನಗೆ ನಿಮ್ಮ ಮೇಲೆ ಏನೂ ಸಿಟ್ಟಿಲ್ಲ. ನಾಳೆ ಹೊತ್ತಿಗೆ ಮುಂಚೆ ಏಳಬೇಕು, ಅದಕ್ಕಾಗಿ ಸುಮ್ಮನೆ ಮಲಗಿದೆ" ಎಂದು ತನ್ನ ತುಟಿಯಿಂದ ಅವನ ಕಣ್ಣನ್ನು ಮುಚ್ಚಿ ಪ್ರೀತಿಯಿಂದ ಅವನನ್ನು ಓಲೈಸಿದಳು.

ಅವಳ ಮಾತು ಅವನಿಗೆ ಜೇನಿಗಿಂತ ಸವಿ. ಅವನು ಸಮಾಧಾನದ ಉಸಿರು ಬಿಟ್ಟ. ಅವಳ ತಲೆಯನ್ನು ಹಾಗೇ ಭುಜಕ್ಕೆ ಒರಗಿಸಿಕೊಂಡು "ಅದೇನು ವಾಸೀ ನಾಳೆ?" ಎಂದ.

"ನಾಳೆಯಿಂದ ಅಶ್ವತ್ಥ ಪ್ರದಕ್ಷಿಣೆ ಮಾಡಬೇಕಂತೆ. 24 ದಿನ ಬೆಳಗಿನ ಜಾವ ಎದ್ದು ಸ್ನಾನ ಮಾಡಿ ಹೋಗಬೇಕು. ಇದೊಂದು ವ್ರತ, ಅದುವರೆಗೂ ನೀವೂ ನನ್ನನ್ನು ಬಿಟ್ಟು ವ್ರತದಲ್ಲಿರಬೇಕು" ಎಂದಳು ಮೋಹಕವಾಗಿ.

"ಏನು ? ಇಪ್ಪತ್ನಾಲ್ಕು ದಿನ! ನೀನು ಬೆಳಗಿನ ಜಾವ ಚಳಿಯಲ್ಲಿ ಏಳಬೇಕೇ?" ಎಂದು ಗಾಬರಿಯಿಂದ ಕೇಳಿದ.

"ಹೌದು! ಒಂದು ವ್ರತ-ಪೂಜೆ, ಅಂದರೆ ಕಷ್ಟಪಡಬೇಕಪ್ಪಾ; ಅದಕ್ಕೆಲ್ಲಾ ಗಾಬರಿ ಪಟ್ಟರೆ ಆದೀತೇ ?" ಎಂದಳು ಮೋಹಕವಾಗಿ.

"ಅಲ್ಲಾ ವಾಸೀ....ಒಂದು ದಿನ ಅಲ್ಲ, ಎರಡು ದಿನ ಅಲ್ಲ, 24 ದಿನ ಬೆಳಗಿನ ಜಾವ ಚಳೀ ಹೊತ್ನಲ್ಲೀ ನೀನು ನನ್ನ ಪಕ್ಕದಲ್ಲಿ ಇಲ್ಲದಿದ್ದರೆ ನಿದ್ದೇನೇ ಬರೋಲ್ಲ ರಾಣೀ....

"ಒಳ್ಳೇ ಎಳೆ ಮಗು ಹಾಗೆ ಆಡ್ಬೇಡಿ! ಮಲಕ್ಕೊಳ್ಳೀ" ಎಂದು ಅವನಿಗೆ ಹೊದಿಸಿ ಮಲಗಿಸಿ ಲೈಟಾರಿಸಿ ಬಂದು ತಾನೂ ಮಲಗಿದಳು.

"ಅದು ಸರಿ....ಇಷ್ಟು ಚಳೀಲಿ ನಡುಗುತ್ತಾ ಎದ್ದು ಅದೇನಪ್ಪಾ; ಅಂಥಾ ವ್ರತ? ಅಂಥಾ ಪೂಜೆ ?" ಅಂತ ಹೆಂಡತಿಯ ಮುಖದ ಬಳಿ ಮುಖವಿಟ್ಟು ಕೇಳಿದ ನಾಗರಾಜ.

"ನೀವಿನ್ನೂ ಮಗು ಥರಾನೇ ಅಡ್ತೀರ ! ನಿಮಗೊಂದೂ ಗೊತ್ತಾಗೋಲ್ಲ, ಅತ್ತೆ ಮಾವ ಎಷ್ಟು ಕೊರಗ್ತಾ ಇದಾರೆ ಗೊತ್ತಾ ?"

"ಅಲ್ಲಾ ನಾನು ಕೇಳಿದ್ದೇನು ? ನೀನು ಹೇಳ್ತಾ ಇರೋದೇನು ? ಏತಕ್ಕೆ ಪೂಜೆ? ಎಂದೆ !"

"ಅಯ್ಯೋ....ಹೋಗ್ರಿ ನಿಮಗೆಲ್ಲ ಬಿಡಿಸಿ–ಬಿಡಿಸಿ ಹೇಳಬೇಕು. ಐದು ವರ್ಷ ಆದ್ರೂ ಒಂದು ಮಗು ಆಗಲಿಲ್ಲಾಂತ."

ತಕ್ಷಣ ನಾಗರಾಜ ಬೆಚ್ಚಿದ. ಹೆಂಡತಿಯನ್ನಪ್ಪಿದ್ದ ಕೈ ಹಾಗೆಯೇ ಸಡಲಿತು. ಉತ್ಸಾಹ ತಣ್ಣಗಾಯಿತು. ಮುಂದೆ ಮಾತನ್ನೆ ಆಡದೆ ಸುಮ್ಮನೆ ಮಲಗಿದ.

"ಏನ್ರೀ....ಯಾಕ್ರೀ ಸುಮ್ಮನಾದ್ರೀ ? ನಿಮಗೆ ಮಗು ಆಗುವುದು ಇಷ್ಟವಿಲ್ಲವೇ?" ಎಂದಳು ವಾಸಂತಿ.

ಮುಗ್ಧ ಹೆಂಡತಿಯನ್ನು ಏನೆಂದು ಸಂತೈಸುವುದು ? ಹೇಳಿ ಅವಳ ಮನಸ್ಸನ್ನು ಹೇಗೆ ನೋಯಿಸುವುದು? ಹೆಣ್ಣಿಗೆ ತಾಯಿಯಾಗುವ ಬಯಕೆ ಎಷ್ಟು ಅದಮ್ಯ ? ಎಂದೆಲ್ಲ ಚಿಂತಿಸುತ್ತಿದ್ದ ನಾಗರಾಜ.

"ಯಾಕೆ ರಾಜಾ ! ನಾನು ಪೂಜೆ ಮಾಡೋದು ನಿಮಗೆ ಇಷ್ಟವಿಲ್ಲವೇ ? ಹೇಳಿ, ನಿಮಗಿಷ್ಟವಿಲ್ಲದ ಕೆಲಸ ನಾನು ಮಾಡುವುದಿಲ್ಲ" ಎಂದಳು ವಾಸಂತಿ.

ಅಶ್ವತ್ಥ ಪೂಜೆಗೆಲ್ಲಾ ಮಕ್ಕಳಾಗುತ್ತದೆಯೇ ವಾಸೀ ?" ಎಂದು ನೊಂದ ಧ್ವನಿಯಲ್ಲಿ ಕೇಳಿದ.

"ಯಾಕೆ ಆಗಬಾರದು ? ಪೂಜಾ–ಫಲಕ್ಕೆ ಏನೋ ಅಡ್ಡಿ ಇದ್ದರೆ ಇದರಿಂದ ಪರಿಹಾರವಾಗಿ ಆಗಬಹುದು. ನಿಮ್ಮ ತಂದೆ ತಾಯಿ ಎಷ್ಟು ಹಂಬಲಿಸುತ್ತಾರೆ ಗೊತ್ತೆ ? ನಮ್ಮ ಮನೆಯಲ್ಲೂ ಒಂದು ಎಳೆಕಂದನನ್ನು ಕಂಡೇವೇ ? ಎಂದು ನಮ್ಮಿಂದ ಆ ನಿರೀಕ್ಷೆಯಲ್ಲಿದ್ದಾರೆ. ನಾವು ಅವರ ಆಸೆಯನ್ನು ತುಂಬಬೇಡವೇ ?" ಎಂದಳು ವಾಸಂತಿ.

ತನ್ನಿಂದ ಯಾರಿಗೂ ಯಾವ ವಿಧವಾದ ನೋವೂ ಆಗಬಾರದು, ಅಮ್ಮನಿಗೂ ಸಮಾಧಾನವಾಗಲಿ ಎಂದು ಮನಸ್ಸನ್ನು ಧೃಡ ಮಾಡಿಕೊಂಡು ನಾಗರಾಜ ವಾಸಂತಿಯ ಕೆನ್ನೆಯನ್ನು ಮೃದುವಾಗಿ ತಟ್ಟಿ, "ಆಯಿತು ವಾಸಂತಿ, ಅಮ್ಮ ಹೇಳಿದಂತೆ ಅಶ್ವತ್ಥ ಪೂಜೆಯನ್ನೂ ಮಾಡು ; ಅದಕ್ಕೇನು ?" ಚಳಿಯಲ್ಲಿ ಏಳಬೇಕಲ್ಲಾ ನೀನು ಅಂತ

ಹೇಳಿದೆ ಅಷ್ಟೇ ಸಾಕು, ತುಂಬಾ ಹೊತ್ತಾಯಿತು ನೀನು ಬೇಗ ಏಳಬೇಕು, ಮಲಗಿಕೋ ಎಂದು ಮಾತು ನಿಲ್ಲಿಸಿ ಮಲಗಿದ ನಾಗರಾಜ.

ವಾಸಂತಿಗೇನೋ ಸ್ವಲ್ಪ ಹೊತ್ತಿಗೆಲ್ಲಾ ನಿದ್ರೆ ಬಂದು ಬಿಟ್ಟಿತು. ಆದರೆ ನಾಗರಾಜನಿಗೆ ಚಿಂತೆಯ ಬೆಟ್ಟವೇ ತಲೆ ಮೇಲೆ ಬಿದ್ದಂತೆ ಭಾಸವಾಯಿತು.

ನಾಗರಾಜನಿಗೆ ನಡೆದು ಹೋದ ಘಟನೆ ಮತ್ತೆ ಕಣ್ಣು ಮುಂದೆ ಕಟ್ಟಿದಂತಾಯಿತು

ನಾಗರಾಜ ಬೆಂಗಳೂರಿನಲ್ಲಿ ಬಿ.ಕಾಂ., ಎಂ.ಕಾಂ., ಪರೀಕ್ಷೆಗಳಲ್ಲಿ ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿದ. ಇಷ್ಟು ಚಿಕ್ಕ ವಯಸ್ಸಿಗೇ ಕೆಲಸ ಎಲ್ಲಿ ಸಿಗುತ್ತೇ ? ಎಂದು ಪರಮಶಿವಯ್ಯನವರು ಏನೋ ನೆಪಕ್ಕೆ ಇರಲಿ, ಒಂದೆರಡು ಮೂರು ಕಡೆಗೆ ಕೆಲಸಕ್ಕೆ ಅಪ್ಲಿಕೇಷನ್ ಹಾಕಿಸಿದರು. ಒಂದೆರಡು ತಿಂಗಳೊಳಗಾಗಿ ಬ್ಯಾಂಕಿನಲ್ಲಿ ಕೆಲಸಕ್ಕೆ ಇಂಟರ್‌ವ್ಯೂ ಬಂತು. ನಾಗರಾಜ ಹೋಗಿದ್ದು ಬಂದ.

ಒಂದು ವಾರದೊಳಗಾಗಿ ಸ್ಟೇಟ್ ಬ್ಯಾಂಕಿನ ಕೆಲಸಕ್ಕೆ ಆರ್ಡರೂ ಬಂತು. ಮಂಗಳೂರಿನ ಬಳಿ ಒಂದು ಸಣ್ಣ ಊರಿಗೆ ಕೊಟ್ಟಿದ್ದರು. ಈಗ ಮನೆಯವರಿಗೆಲ್ಲಾ ಸಂತೋಷಕ್ಕೆ ಬದಲು ಚಿಂತೆಗೆ ಶುರುವಾಯಿತು. ಭಾಗೀರಥಮ್ಮನವರಂತೂ "ಇದೇನೋಂದ್ರೇ ಮಗೂನ ಅಷ್ಟು ದೂರ ಕೆಲಸಕ್ಕೆ ಕಳಿಸೋಕಾಗುತ್ತೇಂದ್ರೇ ?" ಎಂದು ಪೇಚಾಡಿದರು. ಅವರ ಅಭಿಪ್ರಾಯದಲ್ಲಿ 22 ವರ್ಷದ ನಾಗರಾಜ ಇನ್ನೂ ಮಗುವಿನಂತೆ.

ಪರಮಶಿವಯ್ಯನವರು ಹೆಂಡತಿಯನ್ನು ಗದರಿದರು "ಲೇ ; ಭಾಗೂ.... ನಿನಗೆ ಪ್ರಪಂಚದ ವ್ಯವಹಾರನೇ ಗೊತ್ತಿಲ್ಲ. ಸುಮ್ಮನಿರು ಅವನೆಲ್ಲಿ ದ್ವೀಪಾಂತರಕ್ಕೆ ಹೋಗಿಬಿಡ್ತಾನ್ಯೇ ? ಬೆಂಗಳೂರು - ಮಂಗಳೂರು ಒಂದು ದಿನದ ಪ್ರಯಾಣ, ಸಧ್ಯ ನಾನು ಈ ಪೋಲೀಸ್ ಇಲಾಖೆಗೆ ಸೇರಿ ಅರ್ಧರಾತ್ರಿ ಸರಿಹೊತ್ತು ಎನ್ನದೆ ಹೆಣಗಾಡಿದು ಸಾಕಾದೆ ನನ್ನ ಮಗನಾದ್ರೂ ನೆಮ್ಮದಿಯಾಗಿ ಬಾಳಲಿ. ಸಿಕ್ಕಿರೋ ಕೆಲಸ ಬಿಟ್ಟು ಆಮೇಲೆ ಎಲ್ಲಿ ಅಲೆಯೋದು" ? ಎಂದರು.

ನಾಗರಾಜನೂ ಧೈರ್ಯವಾಗಿ "ನೀನು ಏನೂ ಯೋಚಿಸಬೇಡಾಮ್ಮ ನಾನು ಕೆಲಸಕ್ಕೆ ಹೋಗ್ತೀನಿ" ಅಂದ.

ಮನೆಯಲ್ಲಿ ನಾಗರಾಜ ಹೊರಡುವ ಸಿದ್ಧತೆಗಳು ಆಯಿತು. ರವಿಗಂತೂ ಅಣ್ಣನನ್ನು ಅಗಲಿರುವುದು ತುಂಬಾ ವ್ಯಥೆ. ಅಣ್ಣನಿಗೆ ಎಲ್ಲಾ ಸಾಮಾನು ಜೋಡಿಸುವುದರಲ್ಲಿ ಸಹಾಯ ಮಾಡಿದ.

"ರಾಜು ನೀನು ಅಲ್ಲಿ ಹೆಚ್ಚು ಕಾಫಿ ಕುಡೀಬೇಡ. ಇದೋ ನಿನ್ನ ಸೂಟ್‌ಕೇಸಿನಲ್ಲಿ ಫ್ಲಾಸ್ಕ್ ಇಟ್ಟಿದೀನಿ. ಅದರಲ್ಲಿ ಹಾಲೋ ಹಾರ್ಲಿಕ್ಸೋ ಹಾಕಿಕೊಂಡು ಆಫೀಸಿಗೆ ತೆಗೆದುಕೊಂಡು ಹೋಗು. ಅಲ್ಲಿ ಸಮುದ್ರತೀರ ಹತ್ತಿರ. ಛಳಿ ಜಾಸ್ತಿ. ಕೋಟು ಮಫ್ಲರ್ ಹಾಕಿಕೊಂಡು ಓಡಾಡು. ಬ್ಯಾಟ್ರಿ ಇಟ್ಟಿದ್ದೇನೆ ನೋಡು, ಕತ್ತಲೆಯಲ್ಲಿ ತಿರುಗಾಡಬೇಡ" ಎಂದೆಲ್ಲಾ ಅಣ್ಣನಿಗೆ ಎಚ್ಚರಿಕೆ ಹೇಳುತ್ತಾ ಅವನ ಹಿಂದೆ ಮುಂದೆ ತಿರುಗುತ್ತಲೇ ಇದ್ದ,

ನಾಗರಾಜನಿಗೂ ತಮ್ಮನನ್ನು ಬಿಟ್ಟಿರುವುದೆಂದರೆ ತನ್ನ ಅರ್ಧ ಶರೀರವನ್ನೇ ಬಿಟ್ಟು ಹೋದಷ್ಟು ಸಂಕಟ. ಆದರೂ ಮೇಲೆ ಸಮಾಧಾನವಾಗಿ "ಲೋ.... ರವಿ ; ಯಾಕೋ ಹೀಗೆ ಒದ್ದಾಡ್ತೀಯಾ ಏನೋ ಮಹಾ ದೂರ, ನಾನು ತಿಂಗಳಿಗೆ ಒಂದು ಸಲ ಬರುತ್ತಿರುತ್ತೇನೆ. ನಿನಗೆ ರಜಾ ಸಿಕ್ಕಿದಾಗ ಬಾ" ಎಂದು ತಮ್ಮನಿಗೆ ಸಮಾಧಾನ ಹೇಳಿದ.

ಮಕ್ಕಳಿಬ್ಬರ ಅಗಲಿಕೆಯ ನೋವು ಪರಮಶಿವಯ್ಯನವರಿಗೂ ಅರ್ಥವಾಗುತ್ತಿತ್ತು. ಹುಟ್ಟಿದಾರಭ್ಯ ಒಂದು ದಿನ ಸಹ ಅವರು ಅಗಲಿದ್ದಿಲ್ಲ. ಈಗ ಹೇಗೆ ಬೇರೆ ಬೇರೆ ಇದ್ದಾರು ?

ನಾಗರಾಜ ಹೊರಡುವ ದಿನ ಭಾಗೀರಥಮ್ಮನವರು ಸಿಹಿ ಅಡಿಗೆ ಮಾಡಿ ಎಲ್ಲರನ್ನೂ ಒಟ್ಟಿಗೆ ಕೂರಿಸಿ ಬಡಿಸಿದರು. ನಾಗರಾಜನಿಗೆ ಬಡಿಸುವಾಗ ಅವರಿಗೆ ದುಃಖ ಒತ್ತರಿಸಿ ಬಂತು. "ಲೋ! ನಾಗರಾಜ ನೀನಾಗಿ ಒಂದು ದಿನವಾದರೂ ಬಡಿಸಿಕೊಂಡು ಊಟ ಮಾಡಿದ್ದಿಲ್ಲ. ನಿನ್ನ ಹೊಟ್ಟೆ ತುಂಬಲು ಎಷ್ಟು ಊಟ ಮಾಡಬೇಕೂ ಅನ್ನೋದು ಸಹ ನಿನಗೆ ಗೊತ್ತಾಗೋದಿಲ್ಲವಲ್ಲೋ ! ಪರಸ್ಥಳದಲ್ಲಿ ನಿನಗೆ ಯಾರು ಬಲವಂತ ಮಾಡಿ ಊಟ ಬಡಿಸುವವರು?" ಎಂದು ಹೇಳುವ ಹೊತ್ತಿಗೆ ಭಾಗೀರಥಮ್ಮನವರಿಗೆ ಕಣ್ಣಲ್ಲಿ ನೀರು ತುಂಬಿ ಬಂತು.

ಇದುವರೆಗೂ ನಾಗರಾಜ ಅಮ್ಮನ ಆರೈಕೆಯಲ್ಲಿ ಮಗುವಿನಂತೆಯೇ ಇದ್ದುಬಿಟ್ಟ "ಈಗ ಅಮ್ಮ ಹೇಳುವ ಮಾತು ಎಷ್ಟು ನಿಜ ? ಇವರೆಲ್ಲರನ್ನೂ ಬಿಟ್ಟು ನಾನೊಬ್ಬನೇ ಅಲ್ಲಿ ಇರಬಲ್ಲೆನೇ ?" ಅನ್ನಿಸಿತು. ಅವನೂ ದುಃಖದಿಂದ ಬಿಕ್ಕುತ್ತಲೇ "ನೀನು ಯೋಚಿಸ ಬೇಡಮ್ಮಾ ನಾನೆಲ್ಲಾ ಸರಿಯಾಗಿ ಊಟ ಮಾಡ್ತೀನಿ" ಅಂದ.

ಪರಮಶಿವಯ್ಯನವರಿಗೆ ಎರಡು ಮಕ್ಕಳೂ ಎರಡು ಕಣ್ಣು ಇದ್ದಹಾಗೆ. ಅವರು ತಾನೆ ಮಕ್ಕಳನ್ನು ಅಗಲಿ ಇರಬಲ್ಲರೇ ? ಅವರಿಗೂ ಮಗನ ಅಗಲಿಕೆಯ ನೋವು ಮನಸ್ಸಿನಲ್ಲಿದ್ದರೂ ಮೇಲಕ್ಕೆ ಧೈರ್ಯಮಾಡಿ "ಲೇ ಭಾಗೂ ; ಏನೇ ಇಲ್ಲದ್ದೊಂದು ಯೋಚನೆ ಮಾಡ್ತಿ, ಜೊತೇಲಿ ನಾನೂ ಹೋಗೋಲ್ವೇ ? ಅಲ್ಲೇ ವಾಸಕ್ಕೆ ಸರಿಯಾದ ಒಂದು ರೂಮು ನೋಡಿ ಊಟಕ್ಕೂ ಒಳ್ಳೆ ಹೋಟೆಲ್‌ನಲ್ಲಿ ಏರ್ಪಾಡು ಮಾಡಿ ಬರ್ತೀನಿ ಯಾಕ್ ಸುಮ್ಮನೆ ತಲೆ ಕೆಡಿಸಿ ಕೊಳ್ತೀರಾ ?" ಎಂದು ಹೇಳಿದರು.

ರವಿಗಂತೂ ಅವತ್ತು ಊಟಾನೇ ಬೇಕಾಗಲಿಲ್ಲ. ಹೀಗೆ ಮುದ್ದು ಮಗನಾಗಿ ಬೆಳೆದ ನಾಗರಾಜ ಮಂಗಳೂರಿನ ಬಳಿ ಊರಿನಲ್ಲಿ ಕೆಲಸಕ್ಕೆ ಸೇರಿ ಒಬ್ಬನೇ ಇರುತ್ತಿದ್ದ.

ಆಕರ್ಷಕ ಚೆಲುವು, ಚಟುವಟಿಕೆ, ಚೂಟಿಯಾಗಿ ಕೆಲಸ ಮಾಡುತ್ತಿದ್ದ ನಾಗರಾಜ -ನನ್ನು ಕಂಡರೆ ಬ್ಯಾಂಕಿನ ಕೆಲಸದವರೆಲ್ಲರಿಗೂ ಬಲು ಇಷ್ಟವಾಯಿತು. ನಾಗರಾಜನೂ ಎಲ್ಲರೊಂದಿಗೆ ಹೊಂದಿಕೊಂಡು ಮನೆಯ ಗೀಳನ್ನು ಸ್ವಲ್ಪ ಮರೆತಿದ್ದ.

ಬ್ಯಾಂಕಿನ ಲಂಚವರ್‌ನಲ್ಲಿ ಕೆಲವರು ಉದ್ಯೋಗಿಗಳು ಒಂದು ರೂಮಿನಲ್ಲಿ ಕುಳಿತು ಟಿಫನ್ ತಿನ್ನುತ್ತಿದ್ದರು. ಕೆಲವರು ಸಂಸಾರೊಂದಿಗರು ಹೊಟೇಲಿಗೆ ಹೋದರೆ ಹೆಚ್ಚು ಖರ್ಚು ಎಂದು ಡಬ್ಬಿಗಳಲ್ಲಿ ಊಟವನ್ನೋ ತಿಂಡಿಯನ್ನೋ ತರುತ್ತಿದ್ದರು.

ಎಲ್ಲರೂ ಒಂದೆಡೆ ಸೇರಿದಾಗ ನಾಗರಾಜನನ್ನೂ ಬಲವಂತ ಮಾಡಿ ತಮ್ಮ ಜೊತೆ ಟಿಫನ್ ತೆಗೆದುಕೊಳ್ಳಲು ಬರಮಾಡಿಕೊಳ್ಳುತ್ತಿದ್ದರು.

ಆ ದಿನ ಎಲ್ಲರೂ ಒಟ್ಟಿಗೆ ಸೇರಿದಾಗ ಮನೋಹರ ಎನ್ನುವವರು "ಏನ್ರಪ್ಪಾ ; ಈವತ್ತಿನ ಸರ್ಕಾರದ ಸುತ್ತೋಲೆ ನೋಡಿದ್ರಾ ?" ಎಂದರು.

ದಾಮೋದರ ಭಟ್ "ಹೌದು ನೋಡಿದೆ, ಬಹಳ ಕಟ್ಟುನಿಟ್ಟಾಗಿದೆ ಸರ್ಕಾರದ ಆಜ್ಞೆ" ಎಂದರು.

ದೇವದಾಸ್ ಅಕೌಂಟೆಂಟರು ಕುತೂಹಲದಿಂದ "ಏನು ಇವತ್ತು ಅಂತಹ ಆಜ್ಞೆ ಬಂದಿದೆ ? ನಾನು ಮೆಮೋ ನೋಡಲಿಲ್ಲ" ಎಂದರು.

"ಅಯ್ಯೋ ; ನಿಮಗೇನಪ್ಪ, ಅದರ ಬಗ್ಗೆ ಚಿಂತೆ ಇಲ್ಲ. ಇಲ್ಲಿರೋವ್ರಲ್ಲೆಲ್ಲಾ ನನಗೇ ಕಷ್ಟಕ್ಕೆ ಬಂದಿರೋದು" ಅಂತ ಮೋಹನ್ ವ್ಯಸನದಿಂದ ಹೇಳಿದರು.

"ಹೌದು ರೀ ! ಪಾಪ ; ಮೋಹನ್ ಸಂಸಾರೊಂದಿಗರು, ಹಾಂ....ಅದು ಸರಿ. ರೀ....ಮೋಹನ್, ಈಗ ನಿಮಗೆ ಮೂರು ಮಕ್ಕಳು ಇವೇ ಅಲ್ಲವೇನ್ರೀ ?" ಎಂದರು ದಾಮೋದರ್.

ಮೋಹನ್ ನಾಚಿಕೆಯಿಂದ "ಹೌದಪ್ಪಾ ; ಮೂರು....ಮೇಲೊಂದು ಕೊಸರೂ ಇದೆ. ಈಗ ನನ್ನ ಹೆಂಡತಿ ಮತ್ತೆ ಪ್ರಗ್ನೆಂಟು".

"ಅಲ್ಲಾ ; ನಾನು ಮೆಮೋ ವಿಚಾರ ಏನೂ ಅಂತ ಕೇಳಿದ್ರೆ ನೀವೆಲ್ಲ ಒಳ್ಳೆ ಒಗಟಿನ ತರಾ ಮಾತಾಡ್ತಿದ್ದೀರಲ್ಲಾ ; ಏನಪ್ಪಾ ಅದು ಮೆಮೋ ?" ಅಂದರು ದೇವದಾಸ್.

"ಇವತ್ತು ಒಂದು ಕಟ್ಟುನಿಟ್ಟಾದ ಸುಗ್ರೀವಾಜ್ಞೆ ಬಂದಿದೆ. 'ಸರ್ಕಾರೀ ಉದ್ಯೋಗಸ್ಥರೆಲ್ಲಾ ಕುಟುಂಬ ಯೋಜನೆಗೆ ಒಳಪಡಬೇಕು. ಎರಡು ಮಕ್ಕಳು ಸಾಕು. ಮೂರು ಮಕ್ಕಳ ಮೇಲಿದ್ದರೆ ಅಂತಹವರು ಕೂಡಲೇ ನಿಯಂತ್ರಣಕ್ಕೆ ಒಳಪಡಬೇಕು. ಇಲ್ಲದಿದ್ದರೆ ಬಡ್ತಿ ನಿಲ್ಲಿಸಲಾಗುತ್ತೆ. ಎರಡು ಮಕ್ಕಳಿಗಿಂತ ಹೆಚ್ಚಿದ್ದವರಿಗೆ ಯಾವ ಸಾಲ ಸೌಲಭ್ಯಗಳನ್ನೂ ಕೊಡಕೂಡದು. ಅಂತಹವರ ಮಕ್ಕಳಿಗೆ ಯಾವ ವಿದ್ಯಾರ್ಥಿ ವೇತನವಿಲ್ಲ.' ಎಂದು ಸರ್ಕಾರದ ಸುತ್ತೋಲೆ ಬಂದಿದೇರೀ ದೇವದಾಸ್ ; ಮೆಮೋ ನೋಡಿ ರುಜು ಮಾಡಿ".

ಎಲ್ಲರೂ ಗಟ್ಟಿಯಾಗಿ ಕೇಕೆ ಹಾಕಿ ನಕ್ಕರು. ಮೋಹನ್ ಮಾತ್ರ ಪೆಚ್ಚಾದರು.

"ಇಲ್ಲಾ ಸರ್ಕಾರ ಇನ್ನೇನು ಮಾಡುತ್ತೆ ಹೇಳಿ ? ನಮ್ಮ ದೇಶದಲ್ಲಿ ನಿಮಿಷಕ್ಕೆ ಲಕ್ಷ ಹುಟ್ಟುತ್ವೆ, ಸಾಯೋದು ಮಾತ್ರ ಸಾವಿರಾನೂ ಇಲ್ಲ. ಇನ್ನು ಜನಸಂಖ್ಯೆಯ ಒತ್ತಡವನ್ನು ಸರ್ಕಾರ ಹೇಗೆ ಸುಧಾರಿಸಬೇಕು ಹೇಳಿ".

"ಇಲ್ಲಾರೀ ! ಮೋಹನ್, ಮಿತ ಸಂತಾನ ಯೋಜನೆ ಎಲ್ಲೆಲ್ಲೂ ಪ್ರಚಾರದಲ್ಲಿ ಇರುವಾಗ ನೀವೇಕೆ ಹೀಗೆ ಬೇಸ್ತು ಬಿದ್ರೀ ?" ಎಂದರು ದೇವದಾಸ್.

ಮೋಹನ್ ಒಂದು ವಿಧವಾದ ಸಂಕೋಚದಿಂದ "ಥತ್....ಏನು ಕರ್ಮವೋ ? ಮದುವೆ ಆಗಿ ಐದು ವರ್ಷಕ್ಕೇ ನನಗೆ ಮೂರು ಮಕ್ಕಳಾಯ್ತು. ಆಮೇಲೆ ಫ್ಯಾಮಿಲಿ ಪ್ಲಾನಿಂಗ್ ಅನುಸರಿಸಿ ಎಚ್ಚರಿಕೆಯಾಗೇ ಇದ್ದೆವು. ಏನೋ ಸ್ವಲ್ಪ ಹೆಚ್ಚು ಕಡಿಮೆ ಆಗೋಯ್ತಪ್ಪಾ ; ಈಗ ನಾಲ್ಕನೇದು ಇನ್ನು ಒಂದು ವಾರದೊಳಗಾಗಿ ದಾಖಲೆ ಆಗುತ್ತೆ.ಮೂರು ಮಕ್ಕಳನ್ನು ಸುಧಾರಿಸೊ ಹೊತ್ತಿಗೇ ಸಾಕು ಸಾಕಾಗಿ ಹೋಗಿದೆ ರೀ."

"ಏನ್ರೀ ಮೋಹನ್ ! ನೀವು ವಿದ್ಯಾವಂತರಾಗಿ ತಿಳಿದೂ ತಿಳಿದೂ ಹೀಗೆ ಮಕ್ಕಳನ್ನು ಹೆಚ್ಚಿಸಿಕೊಳ್ಳೋದೇನ್ರೀ ?" ದೇವದಾಸ್ ವ್ಯಂಗ್ಯವಾಗಿ ಹೇಳಿದರು.

"ಏನ್ರಿ ಮಾಡೋದು? ಹುಟ್ಟಿದ ಮಕ್ಕಳ ಕತ್ತು ಹಿಸುಕಿ ಹಾಕೋಕಾಗುತ್ತೇನ್ರಿ?" ಅಂದರು ಮೋಹನ್.

"ಬಿಡಿ–ಬಿಡಿ ನಾನು ಈ ಮಾತನ್ನು ಒಪ್ಪೋಲ್ಲ. ಎರಡಾದ ಕೂಡಲೇ ನಿಮ್ಮ ಮನೆಯವರಿಗೆ ಆಪರೇಷನ್ ಮಾಡಿಸಬೇಕಾಗಿತ್ತು. ಅಥವಾ ಹಾಗೆ ತಿಳಿದ ಕೂಡಲೇ ಅಬಾರ್ಷನ್ನಾದ್ರೂ ಮಾಡಿಸಬೇಕಾಗಿತ್ತು. ಈಗ ಪೇಚಾಡಿದರೆ ಏನ್ರೀ ಪ್ರಯೋಜನ"? ಎಂದರು ದಾಮೋದರ್.

"ನಾವು ಹೇಳಬಹುದು, ಮನೆಯವರು ಒಪ್ಪಬೇಕಲ್ಲಾ. ಅದಕ್ಕೆಲ್ಲಾ ಅವಳು ತುಂಬ ಹೆದರ್ತಾಳಪ್ಪಾ."

"ಛೆ....ಛೆ....ಒಳ್ಳೇ ಹಳ್ಳಿ ಜನ ಆಡ್ತಾರಲ್ಲಾ ಹಾಗೇ ಆಡ್ತೀರಲ್ರೀ....ಯಾವುದೋ ವಿಧದಲ್ಲಿ ಕಂಟ್ರೋಲ್ ಮಾಡ್ಕೋಬೇಕಿತ್ತಪ್ಪಾ ; ಈಗ ಬಡ್ತಿ ಸಿಕ್ಕಿದ್ರೆ ನಿಮ್ಮ ಸಂಸಾರ ತೂಗೋರ್ಯಾರೂ ?" ಎಂದರು ದಾಮೋದರ್.

"ಏನಪ್ಪಾ ; ನೀವೆಲ್ಲಾ ಸೇರ್ಕೊಂಡು ಆ ಏನೂ ಅರಿಯದ ನಮ್ಮ ನಾಗರಾಜನ ಮುಂದೆ ಸಿಕ್ಕಾಪಟ್ಟೆ ಮಾತಾಡ್ತೀರ, ಸಾಕು ಸುಮ್ಮನಿರ್ರೀಪ್ಪ" ಎಂದರು ಮೋಹನ್.

"ಏನ್ರೀ ನೀವು ಹೇಳೋದು ಚೆನ್ನಾಗಿದೆ. ಅವನೇನು ಎಳೆ ಮಗೂನೇ ? ನಾಳೆ ಮದುವೆ ಆದಮೇಲೆ ಎರಡೇ ಮಕ್ಕಳು ಸಾಕು ಅಂತ ಎಚ್ಚರಿಕೆಯಾಗಿರೋದಿಕ್ಕೆ ಈಗ್ಲಿಂದ ತಿಳಿದುಕೊಂಡಿದ್ದರೆ ಒಳ್ಳೇದಲ್ಲವೇ ? ಇನ್ನು ಮೇಲೆ ವಿದ್ಯಾರ್ಥಿಗಳಿಗೇ ಮಿತಸಂತಾನದ ಪಾಠ ಪ್ರಾರಂಭಿಸಬೇಕಾಗುತ್ತೆ" ಎಂದರು ದೇವದಾಸ್.

ಇದುವರೆಗೂ ಇವರ ಚರ್ಚೆ ಕೇಳ್ತಾ ಮೌನವಾಗಿ ತಿಂಡಿ ತಿನ್ನುತ್ತಾ ಇದ್ದ ದಯಾನಂದ "ಏನ್ರಪ್ಪ ಒಂದೇ ಸಮ ಹೆಂಡ್ತಿ ಮಕ್ಕಳ ಮಾತೇ ಆಡ್ತಾ ಇದ್ದೀರಲ್ಲ. ಬೇರೆ ಇನ್ನೇನಾದ್ರೂ ವಿಚಾರಾನೇ ನಿಮ್ಮ ತಲೇಲಿ ಹೊರೋಲ್ವೋ ಏನೋ? ಈಗ ನಮ್ಮ ದೇಶ ಯಾವ ಸ್ಥಿತೀಲಿ ಇದೆ ನೋಡಿ. ಬಡವರ ಗೋಳು ಗಗನ ಮುಟ್ಟುತ್ತೆ. ಈ ಮಿತಿ ಮೀರಿದ ಜನಸಂಖ್ಯೆಯಿಂದ ಆಹಾರ ಪದಾರ್ಥಗಳನ್ನು ಒದಗಿಸಲಾರದೇ ಕಂಗಾಲಾಗಿದೆ ಸರ್ಕಾರ. ಹತ್ತು ಪಟ್ಟು ಬೆಳೆ ಬೆಳೆದರೆ ನೂರು ಪಟ್ಟು ತಿನ್ನುವವರಿದ್ದಾರೆ. ಹಣದಿಂದ ಕೊಬ್ಬಿದ್ಧ ಶ್ರೀಮಂತರು ಎಷ್ಟೇ ಬೆಲೆ ಏರಿದರೂ ಲಕ್ಷ್ಯವಿಲ್ಲದೆ ಹಣ ಎರಚಿಕೊಂಡು ತಿಂದು ಆರಾಮವಾಗಿದ್ದಾರೆ. ದುಡಿಯುವವನಿಗೆ ಹೊಟ್ಟೆಗಿಲ್ಲ. ಇದಕ್ಕೆಲ್ಲಾ ಸರ್ಕಾರವೇ ಹೊಣೆ, ಎಂದು ನಮ್ಮ ಜವಾಬ್ದಾರಿಯನ್ನು ಕಳಚಿಕೊಳ್ಳುವುದು ಸರಿಯಲ್ಲ. ಭಾರತದ ಪ್ರತಿಯೊಬ್ಬ ಪ್ರಜೆಯೂ ನಿಷ್ಠಾವಂತನಾಗಬೇಕು" ಎಂದು ಒಂದೇ ಸಮ ಭಾಷಣವನ್ನೇ ಬಿಗಿದ.

ದಯಾನಂದನನ್ನು ಕಂಡರೆ ಆ ಬ್ಯಾಂಕಿನವರಿಗಷ್ಟೇ ಅಲ್ಲ ಆ ಊರಿನವರಿಗೇ ತುಂಬಾ ಗೌರವ. ಏಕೆಂದರೆ 40 ವರ್ಷ ಪ್ರಾಯ ಮೀರಿದ್ದರೂ ತಾನೂ ಬ್ರಹ್ಮಚಾರಿಯಾಗಿಯೇ ಉಳಿದು ತನ್ನ ಸಂಪಾದನೆಯಲ್ಲಿ ಹೆಚ್ಚು ಭಾಗವನ್ನು ಬಡ–ಬಗ್ಗರ, ಅಂಗ ವಿಕಲರ ಸಂಘ ಸಂಸ್ಥೆಗಳಿಗೆ ದಾನಮಾಡುತ್ತಿದ್ದ. ಅವನಿಗೆ ಯಾವಾಗಲೂ ಕಷ್ಟಪಡುವವರನ್ನು ಕಂಡರೆ ಕಳ–ಕಳಿ.

ಅವನ ಸ್ವಭಾವವನ್ನರಿತಿದ್ದ ಮೋಹನ್ ಏನೋಪ್ಪ ನಿಮ್ಮಂಥಾ ತ್ಯಾಗಿಗಳು ಸ್ಥಾಪಿಸಿಕೊಳ್ಳುವರೂ ಸಿಕ್ಕೋಲ್ಲ. ನೀವೊಬ್ಬರು ಬ್ರಹ್ಮಚಾರಿಯಾಗಿ ಉಳಿದರೆ ಭಾರತದ ಜನಸಂಖ್ಯೆ ಕಡಿಮೆ ಮಾಡಿದಂತಾಗುತ್ತದೆಯೇ ?

"ಹಾಗಲ್ಲ ಮೋಹನ್, ನಾವು ಒಬ್ಬರಿಗೆ ಹೇಳಬೇಕಾದರೆ ನಾವು ಸರಿಯಾಗಿ ನಡೆದುಕೊಂಡರಲ್ಲವೆ ಇನ್ನೊಬ್ಬರಿಗೆ ಹೇಳಬಹುದು ; ಇದು ನನ್ನೊಬ್ಬನ ಪ್ರಶ್ನೆಯಲ್ಲ! ಭಾರತದ ಮುಂದಿನ ಪೀಳಿಗೆಯ ಪ್ರಶ್ನೆ. ಹೀಗೆಯೇ ಜನಸಂಖ್ಯೆ ಸ್ಫೋಟನವಾಗುತ್ತಿದ್ದರೆ ಆಹಾರ ಇರಲಿ ಕಡೆಗೆ ಪ್ರಕೃತಿದತ್ತವಾದ ಗಾಳಿ, ನೀರಿಗೂ ಮನುಷ್ಯ ಕಂಗಾಲು ಆಗುತ್ತಾನೆ" ಎಂದು ದಯಾನಂದ ಪರಿತಾಪದಿಂದ ನುಡಿದ.

"ಅಲ್ಲಾ ದಯಾನಂದ! ಈಗ ಆಗಿಲ್ಲವೇನು ? ಹಳ್ಳಿಗಳಲ್ಲಿ ಬೆಳೆ ಬೆಳೆಯಲು ಮಳೆ ಇಲ್ಲ. ಭಾವಿಗಳು ಒಣಗಿ ಕುಡಿಯಲೂ ನೀರಿಲ್ಲದೆ ಕಂಗಾಲಾಗಿದ್ದಾರೆ. ರೈತರ ಜೀವಾಳವಾಗಿದ್ದ ದನ ಮೇಕೆಗಳನ್ನು ಹೊಡೆದಟ್ಟಿದ್ದಾರೆ. ಆದರೂ ಹಳ್ಳಿಗರು ವಿವೇಕದಿಂದ ಮಿತಸಂತಾನ ಯೋಜನೆಯನ್ನಂತೂ ಅನುಸರಿಸುವುದಿಲ್ಲ. ಬಡತನವಿದ್ದರೂ ಬಹಳ ಮಕ್ಕಳಿರಲಿ" ಎನ್ನುತ್ತಾರೆ.

"ನೋಡಪ್ಪಾ ; ಹಳ್ಳಿಗರು ಕಷ್ಟಜೀವಿಗಳು. ಅವರಿಗೆ ಈ ಆಪರೇಷನ್ ಅದೆಲ್ಲಾ ಭಯ. ಶರೀರಕ್ಕೆ ಏನಾದರೂ ಐಬಾದರೆ ನಾವು ಹೇಗೆ ದುಡಿಮೆ ಮಾಡೋಣ ?

ಎನ್ನುತ್ತಾರೆ. ಅದಕ್ಕೆ ಸರಿಯಾಗಿ ವೈದ್ಯಾಧಿಕಾರಿಗಳು ಹಳ್ಳಿ ಜನರೆಂದರೆ ನಿರ್ಲಕ್ಷ್ಯವಾಗಿ ಆಪರೇಷನ್ ಮಾಡಿ ಕಳುಹಿಸಿ ಬಿಡುತ್ತಾರೆ. ಹೆಚ್ಚು ವಿಶ್ರಾಂತಿ ಪೋಷಣೆ ಮಾಡಿಕೊಳ್ಳಲಾರದ ಆ ಜನರಿಗೆ ಏನಾದರೂ ತೊಂದರೆಯಾದರೆ ಹಳ್ಳಿಗೆ ಹಳ್ಳಿಯೇ ಹೆದರಿ ಬಿಡುತ್ತದೆ ಎಂದು ಕರುಣೆಯಿಂದ ನುಡಿದ ದಯಾನಂದ.

"ನೋಡು ದಯಾನಂದ, ನೀನು ಎರಡು ತಲೆ ಹಾವು ಇದ್ದಹಾಗೆ. ಅವರಿಗೆ ಅಯ್ಯೋ ಪಾಪ ! ಅಂತಾನೂ ಅಂತೀಯ. ಎಲ್ಲರೂ ಮಿತಸಂತಾನ ಪಡೆಯಲೇ ಬೇಕು, ಭಾರತದ ಜನಸಂಖ್ಯೆ ಅಸಾಧ್ಯವಾಗುತ್ತಿದೆ, ಅಂತಾನೂ ಹೇಳ್ತೀಯ. ನಿನ್ನ ಹಾಗೆ ಎಲ್ಲರಿಗೂ ಬ್ರಹ್ಮಚರ್ಯ ದೀಕ್ಷೆ ಕೊಟ್ಟು ಬಿಡಪ್ಪ ಹೋಗಲಿ. ಮದುವೇನೇ ಬೇಡ" ಎಂದ ದೇವದಾಸ್.

ಎಲ್ಲರೂ ಘೊಳ್ಳೆಂದು ನಕ್ಕರು. ದಯಾನಂದ್"ಆ....ಹಾ....ಹಾ ಏನ್ರೀ ಹಾಗ್ ನಗ್ತೀರಾ ? ಮದುವೆ ಆದ್ರೂ ಬ್ರಹ್ಮಚರ್ಯವನ್ನು ಪಾಲಿಸಬೇಕು ಅಂತಾನೇ ಗಾಂಧೀಜೀ ಹೇಳಿರೋದು. ಈ ಎಲ್ಲಾ ಪ್ರಚಾರ ಚಿಕಿತ್ಸೆಗಳಿಗಿಂತ ಮಿತಸಂತಾನ ಪಡೆಯಲು ಇಂದ್ರಿಯ ನಿಗ್ರಹವೇ ರಾಜಮಾರ್ಗ. ಸಂತಾನ ಪ್ರಾಪ್ತಿಗೆ ಮಾತ್ರ ಇಂದ್ರಿಯ ಭೋಗ. ಆಗ ಸಂತಾನವನ್ನು ತಡೆಯುವ ಶಕ್ತಿ ಅವನಲ್ಲಿಯೇ ಇರುತ್ತದೆ. ಮಿತ ಸಂತಾನವನ್ನು ಪಡೆದು ಭೋಗ ಲಾಲಸೆಯನ್ನು ಬಿಡಬೇಕು. ಇದು ಜನ ನಿಯಂತ್ರಣಕ್ಕೂ, ಮಾನವ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳುವುದಕ್ಕೂ ಗಾಂಧೀಜಿ ಸೂಚಿಸಿರುವ ಮಾರ್ಗದರ್ಶನ" ಎಂದು ದಯಾನಂದ ತತ್ವ ಬೋಧನೆಯನ್ನೇ ಮಾಡಿದ.

"ಸರಿ....ಸರಿ....ನೀನೊಬ್ಬ ಹೆಣ್ಣನ್ನೇ ಕಾಣದ ಋಷ್ಯಶೃಂಗ, ಅಂದರೆ ಎಲ್ಲರೂ ನಿನ್ನಂತೆಯೇ ಇರುವುದಕ್ಕೆ ಸಾಧ್ಯವೇ ? ಎದ್ದೇಳಿ, ಟೈಂ ಆಯಿತು. 'ಅಂತೂ ಒಂದು ಸಾಕು, ಎರಡು ಬೇಕು.' ಇಷ್ಟನ್ನು ಎಲ್ಲರೂ ಗಟ್ಟಿ ಮಾಡಿ ಎಂದ ದೇವದಾಸ್. ಎಲ್ಲರೂ ನಗುತ್ತಾ ಕೆಲಸಕ್ಕೆ ಅವರವರ ಜಾಗಕ್ಕೆ ಹೋದರು.

ಆಗ ತುರ್ತು ಪರಿಸ್ಥಿತಿ. ಸರ್ಕಾರದ ನೌಕರರು ಹಿಡಿ ಜೀವ ಮಾಡಿಕೊಂಡು ಬಾಯಿ ಬಿಡದೆ ದುಡಿಯುವ ಪರಿಸ್ಥಿತಿ. ಮೇಲಿನ ಅಧಿಕಾರಿಯೊಂದಿಗೆ ಒಂದು ಹೆಚ್ಚು ಮಾತಾಡುವಂತಿಲ್ಲ. ಸರ್ಕಾರದ ಆಜ್ಞೆ, ಅರ್ಥ ಚೇದ್ಯ ಪ್ರಯೋಗ.

ಸರ್ಕಾರದಿಂದ ಗಂಟೆಗೊಂದು ಘಳಿಗೆಗೊಂದು ಸುಗ್ರೀವಾಜ್ಞೆ ಬರುತ್ತಿತ್ತು. ಸಂತಾನ ನಿಯಂತ್ರಣವಂತೂ ಬಲು ಕಟ್ಟು–ನಿಟ್ಟಾಗಿ ನೆರವೇರಬೇಕಾಗಿತ್ತು. ಸರ್ಕಾರಿ ನೌಕರರು ಎರಡು ಮಕ್ಕಳಿಗಿಂತ ಹೆಚ್ಚು ಪಡೆದರೆ ಅವರಿಗೆ ಯಾವ ಸೌಲಭ್ಯವನ್ನೂ ಸರ್ಕಾರ ಕೊಡುವುದಿಲ್ಲ.

ಸರ್ಕಾರಿ ನೌಕರರೂ, ವೈದ್ಯಾಧಿಕಾರಿಗಳೂ, ದಾದಿಯರೂ, ಹೆಚ್ಚು ಸಂಖ್ಯೆಯಲ್ಲಿ ಜನಗಳನ್ನು ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿ ಅಂಕಿ–ಅಂಶಗಳನ್ನು ಪ್ರತಿ ತಿಂಗಳೂ ಸರ್ಕಾರಕ್ಕೆ ಕೊಡಬೇಕು.

ಕುಟುಂಬ ಯೋಜನಾ ಕೇಂದ್ರದ ನೌಕರರು ಕಟ್ಟುನಿಟ್ಟಾಗಿ ತಮ್ಮ ಕರ್ತವ್ಯವನ್ನು ಮಾಡಬೇಕು. ಹೆಚ್ಚು ಶಸ್ತ್ರ ಚಿಕಿತ್ಸೆ ಮಾಡಿ ದಾಖಲೆ ತೋರಿದವರಿಗೆ ಸರ್ಕಾರ ಬಹುಮಾನ ನೀಡುತ್ತದೆ. ಅಂಕಿ ಅಂಶಗಳನ್ನು ಕೊಡದಿದ್ದರೆ ಬಡ್ತಿ ನಿಲ್ಲಿಸಲಾಗುತ್ತದೆ.

ಇವೆಲ್ಲಾ ಸರ್ಕಾರದ ಸುಗ್ರೀವಾಜ್ಞೆಯ ವೈಖರಿಗಳು. ಹೀಗಾಗಿ ಯಾವುದೇ ಆಸ್ಪತ್ರೆಗಳಲ್ಲಿ ನೋಡಲಿ, ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆಗೆ ಬಲೆಬೀಸಿ ಮೀನು ಹಿಡಿಯುವಂತೆ ಜನರನ್ನು ಹಿಡಿಯುತ್ತಿದ್ದರು. ಬೆದರಿಕೆ, ಮೋಸ, ಬಲವಂತ, ಆಸೆ ತೋರಿಸುವುದು, ಈ ಚತುರೋಪಾಯಗಳಿಂದಲೂ ಜನಗಳನ್ನು ಹಿಡಿದು ತರುತ್ತಿದ್ದರು.

ಸರ್ಕಾರದ ಆಜ್ಞೆ ಒಂದು ರೀತಿಯಲ್ಲಿ ಕ್ಷೇಮ ಚಿಂತನೆಯಲ್ಲಿದ್ದರೆ ಅಧಿಕಾರಿಗಳೂ ನೌಕರರೂ ಇನ್ನಷ್ಟು ಬಲಪ್ರಯೋಗ ಮಾಡಿ ತಮ್ಮ ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಿದ್ದರು.

ಈ ಪರಿಸ್ಥಿತಿಯಲ್ಲಿ ಅನೇಕ ವಿಧದಲ್ಲಿ ಆಘಾತಕ್ಕೊಳಗಾದ ಜನ, ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಂಡವರೆಷ್ಟೋ ?

ಇಂತಹ ಆಕ್ರಮಣಕ್ಕೊಳಗಾದವರಲ್ಲಿ ನಾಗರಾಜನೂ ಒಬ್ಬ. ನಾಗರಾಜ ಬ್ಯಾಂಕಿನ ಕೆಲಸದಲ್ಲಿ ಹೊಂದಿಕೊಂಡು ಜೊತೆಯವರೊಂದಿಗೆ ಕಾಲ ಕಳೆಯುತ್ತಾ ಖುಷಿಯಾಗಿಯೇ ಇರುತ್ತಿದ್ದ. ಒಂದು ಸಲ ಹವಾ ವ್ಯತ್ಯಾಸದಿಂದಲೋ ಏನೋ ವಿಪರೀತ ಜ್ವರ ಬಂದು ಬಿಟ್ಟಿತು. ರೂಮಿನಲ್ಲಿ ಒಬ್ಬನೇ ನರಳುತ್ತಾ ಮಲಗಿದ್ದ.

ಬ್ಯಾಂಕಿಗೆ ರಜಾ ಚೀಟಿ ಕಳುಹಿಸಲೂ ಆಗದೆ ಜ್ಞಾನಾ-ಜ್ಞಾನವಾಗಿ ಮಲಗಿಬಿಟ್ಟ. ನಾಗರಾಜ ಎಷ್ಟು ಹೊತ್ತಾದರೂ ಬ್ಯಾಂಕಿಗೆ ಬರದಿರುವುದನ್ನು ನೋಡಿ ಅವನ ಸ್ನೇಹಿತ ದೇವದಾಸ್ ಬಂದು ನೋಡಿದ.

ನಾಗರಾಜನಿಗೆ ನೂರಾ ಐದು ಡಿಗ್ರಿ ಜ್ವರ ಕಾಯ್ತಾ ಇದೆ. ಮೈಮೇಲೆ ಜ್ಞಾನವೇ ಇಲ್ಲ. "ಅಮ್ಮಾ !....ರವೀ !...." ಎಂದು ಆಗಾಗ ಕನವರಿಸುತ್ತಿದ್ದ. ದೇವದಾಸ್‌ಗೆ ಗಾಬರಿಯಾಯಿತು. ಈಗೇನು ಮಾಡುವುದು ? ಇವನನ್ನು ಇಲ್ಲಿ ನೋಡಿಕೊಳ್ಳುವವರು ಯಾರು ? ಕೂಡಲೇ ಒಂದು ಆಟೋ ತಂದು ಅದರಲ್ಲಿ ನಾಗರಾಜನನ್ನು ಮೆಲ್ಲನೆ ಕೂರಿಸಿಕೊಂಡು ಹತ್ತಿರದ ಒಂದು ಆಸ್ಪತ್ರೆಗೆ ಅಡ್ಮಿಟ್ ಮಾಡಿದ. ಡಾಕ್ಟರನ್ನು ಕಂಡು ಮಾತನಾಡಿ ಔಷಧಿ, ಇಂಜಕ್ಷನ್ ಎಲ್ಲಾ ಕೊಡಿಸಿದ. ಸ್ಪೆಷಲ್ ವಾರ್ಡ್ ಒಂದಕ್ಕೆ ಬದಲಾಯಿಸಿ ಕೊಡಿ ಎಂದು ಡಾಕ್ಟರನ್ನು ಕೇಳಿದ.

ಡಾಕ್ಟರು "ಸಧ್ಯಕ್ಕೆ ಯಾವುದೂ ಖಾಲಿ ಇಲ್ಲ. ಖಾಲಿಯಾದ ಕೂಡಲೇ ಬದಲಾಯಿಸಿ ಕೊಡುತ್ತೇವೆ" ಎಂದರು.

ದೇವದಾಸ್ ಹಣ್ಣು, ಗ್ಲೂಕೋಸ್ ಎಲ್ಲಾ ಅವನ ಬಳಿ ಇಟ್ಟು ದಾದಿಗೆ ಹೇಳಿ ಹೋದ.

ನೈಟ್ ಡ್ಯೂಟಿಗೆ ಬಂದ ನರ್ಸ್ ಖಾಲಿಯಾಗಿದ್ದ ಸ್ಪೆಷಲ್ ವಾರ್ಡಿನ ಒಂದು ಹಾಸಿಗೆಗೆ ಬದಲಾಯಿಸಿದರು. ಇಂಜಕ್ಷನ್, ಔಷಧಿ ಎಲ್ಲಾ ಕೊಟ್ಟಿದ್ದರಿಂದ ನಾಗರಾಜನಿಗೆ ಸ್ವಲ್ಪ ಹಾಯಾಗಿ ನಿದ್ರೆ ಬಂತು.

ಮಾರನೇ ದಿನ ಬೆಳಿಗ್ಗೆ ಆ ಬೆಡ್ಡಿನಲ್ಲಿ ಮೊದಲು ಮಲಗಿದ್ದ ಬೇರೆ ನಾಗರಾಜನಿಗೆ ಆಗಬೇಕಾಗಿದ್ದ ವ್ಯಾಸೆಕ್ಟಮಿ ಶಸ್ತ್ರಚಿಕಿತ್ಸೆ ಈ ನಾಗರಾಜನಿಗೆ ಆಗಿಹೋಯಿತು.

ಕಾರಣ ಮೊದಲನೇ ದಿನ ಆ ಬೆಡ್ಡಿನಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೆಸರು ಕೊಟ್ಟಿದ್ದ ನಾಗರಾಜ ಮನಸ್ಸು ಬದಲಾಯಿಸಿ ಯಾರಿಗೂ ಹೇಳದೆ ಕೇಳದೆ ಮನೆಗೆ ಹೊರಟು ಹೋಗಿದ್ದ.

ಆ ನಂಬರಿನ ಹಾಸಿಗೆಯಲ್ಲಿದ್ದ ಈ ನಾಗರಾಜನಿಗೆ ಅಚಾತುರ್ಯದಿಂದ ಸಂತಾನ ಹರಣ ಚಿಕಿತ್ಸೆ ಆಗಿಹೋಯಿತು. ಇವನಿಗೆ ನಿದ್ದೆ ಬರುವ ಮಾತ್ರೆ ಕೊಟ್ಟಿದ್ದರಿಂದ ತನಗೆ ಏನು ಮಾಡುತ್ತಿದ್ದಾರೆ ಎಂಬುದು ಸರಿಯಾಗಿ ಗೊತ್ತಾಗಲಿಲ್ಲ. ಮದುವೆಯೇ ಆಗದ ನಾಗರಾಜನಿಗೆ ಸಂತಾನ ಶಕ್ತಿಯು ಹರಣವಾಗಿತ್ತು.

ಜನನ ನಿಯಂತ್ರಣ ಒಂದೇ ಗುರಿಯಾಗಿದ್ದ ಕುಟುಂಬ ಯೋಜನಾ ಅಧಿಕಾರಿ ವೈದ್ಯರುಗಳಿಗೆ ಮದುವೆಯಾದವರೋ ಆಗದವರೋ ಯಾರಾದರೇನು, ಒಂದು ಸಂಖ್ಯೆ ಹೆಚ್ಚಿದುದು ಮುಖ್ಯ.

ನಾಗರಾಜನಿಗೆ ಸರಿಯಾಗಿ ಎಚ್ಚರವಾದ ಮೇಲೆ ತನಗಾಗಿರುವ ಅನ್ಯಾಯ ತನ್ನ ಜೀವಮಾನದಲ್ಲೇ ಸರಿಪಡಿಸಲಾರದ ಅಪಾರ ನಷ್ಟ ! ಎಂದು ತಿಳಿಯಿತು.

ಆ ಡಾಕ್ಟರನ್ನು ಕೇಳಿದಾಗ "ಐ ಆಮ್ ಸಾರಿ, ಬೈ ಮಿಸ್ಟೇಕ್, ಡೋಂಟ್ ವರಿ ಮುಂದೆ ಸರಿಪಡಿಸಬಹುದು" ಎಂದು ಏನೋ ಒಂದು ಸಮಾಧಾನ ಹೇಳಿ ಕೈ ತೊಳೆದು ಕೊಂಡರು.

ಮೇಲಿನ ಅಧಿಕಾರಿಗಳಿಗೆ ದೂರಿತ್ತರೂ "ಛೆ...ಪಾಪ ! ಅನ್ಯಾಯವಾಯಿತು ಹೋಗಲಿ ಬಿಡಿ, ಮುಂದೆ ನೋಡೋಣ" ಎಂದು ತಲೆ ತಪ್ಪಿಸಿಕೊಂಡರು. ಆ ತುರ್ತು ಪರಿಸ್ಥಿತಿಯಲ್ಲಿ ಇವನ ದೂರು ಅಷ್ಟಕ್ಕೇ ನಿಂತಿತು.

ಅಂದಿನಿಂದ ನಾಗರಾಜ ಮಂಕಾಗಿಬಿಟ್ಟ. ಅವನಿಗೆ ಜೀವಮಾನದಲ್ಲಿಯೇ ಜಿಗುಪ್ಸೆ ಹುಟ್ಟಿತು. ಕೆಲಸಕ್ಕೆ ಹೋದ ಮೇಲೆಯೂ ಮಂಕಾಗಿರುತ್ತಿದ್ದ. ನಾಚಿಕೆಯಿಂದ ತನ್ನ ಸ್ನೇಹಿತರಲ್ಲಿಯೂ ತನಗಾದ ವಿಷಯವನ್ನು ಹೇಳಿಕೊಳ್ಳಲಾಗದೇ ಒಳೊಳಗೇ ಸಂಕಟ ಪಡುತ್ತಿದ್ದ.

ತನ್ನ ಜೀವಮಾನದಲ್ಲಿ ತಾನು ಯಾವ ಹೆಣ್ಣನ್ನೂ ಪ್ರೀತಿಸಲು ಯೋಗ್ಯನಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದ.

ಆದರೆ ವಿಧಿ ನಿಯಮ, ತಂದೆ–ತಾಯಿಯರ ಬಲವಂತಕ್ಕೆ ಮದುವೆಯಾದ. ಆದ ಮೇಲೆ ವಾಸಂತಿಯ ಸಹವಾಸ ಸೌಖ್ಯದಿಂದ ಎಷ್ಟೋ ನೆಮ್ಮದಿಯನ್ನು ಪಡೆದಿದ್ದ. ತನ್ನ ಬಾಳಿನಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದ್ದ.

ಆದರೆ ಈಗ ವಾಸಂತಿಯ ತಾಯ್ತನದ ಹಂಬಲವನ್ನು ತೀರಿಸಲು ನನಗೆ ಯೋಗ್ಯತೆ ಇಲ್ಲವಲ್ಲಾ ! ಎಂದು ಆಗಾಗ ತಲ್ಲಣಿಸಿ ನಾಗರಾಜ ಪೆಚ್ಚಾಗುತ್ತಿದ್ದ.

ಮದುವೆಗೆ ಮೊದಲು ಅನೇಕ ವೈದ್ಯರನ್ನು ಸಂಧಿಸಿ ಸಲಹೆ ಕೇಳಿದ್ದ. ಅವರು ಮದುವೆಯಾಗಬಹುದು. ಆದರೆ ಮಕ್ಕಳಾಗುವುದಿಲ್ಲ. ಎಂದು ಸಲಹೆ ಕೊಟ್ಟಿದ್ದರು.

ಆಗೆಲ್ಲಾ ಅವನು ನಿರಾಸೆಯಾಗುತ್ತಿದ್ದ. ಅವನ ಆಶಾಕೋಟೆ ಒಡೆದು ಪುಡಿ ಪುಡಿಯಾಗುತ್ತಿತ್ತು. ತಾನೊಂದು ಸತ್ವವಿಲ್ಲದ ಜೀವ ಎಂದು ಮಂಕಾಗಿ ಇರುತ್ತಿದ್ದ.

ಸಂತಾನ ನಿಯಂತ್ರಣ ಯೋಜನೆಯಲ್ಲಿ ಆತುರವಾಗಿ ವೈದ್ಯರುಗಳು ಸ್ವಲ್ಪ ಮುಡುಕಿದರೂ ಎಂತಹ ಅನ್ಯಾಯವಾಗುತ್ತದೆ ? ಒಂದು ಕುಟುಂಬವನ್ನೇ ಕಂದಕಕ್ಕೆ ತಳ್ಳಿದಂತಾಗುತ್ತದೆಯಲ್ಲಾ ; ಸರ್ಕಾರದ ಆಜ್ಞೆಯನ್ನು ಪಾಲಿಸುವಾಗ ಅಧಿಕಾರಿಗಳು ಎಷ್ಟು ಎಚ್ಚರಿಕೆಯನ್ನು ವಹಿಸಬೇಕು? ತನ್ನಂತೆ ಇನ್ನೂ ಎಷ್ಟು ಜನ ನೊಂದಿದ್ದಾರೋ? ಎಂದೆಲ್ಲಾ ನಾಗರಾಜ ಸಂಕಟ ಪಡುತ್ತಿದ್ದ.

ಮದುವೆಯಾದ ಹೊಸದರಲ್ಲಿ ವಾಸಂತಿ ಅನೇಕ ವಿಧದಲ್ಲಿ ಅವನಿಗೆ ಜೀವಕಳೆ ತುಂಬಿದ್ದಳು. ಯಾರನ್ನಾದರೂ ಆಕರ್ಷಿಸುವಂತಹ ತನ್ನ ಗಂಡನ ರೂಪವನ್ನು ವಾಸಂತಿ ಅತಿಯಾಗಿ ಮೋಹಿಸಿದ್ದಳು. ತನ್ನ ಗಂಡ ಎಲ್ಲ ವಿಧದಲ್ಲೂ ರಸಿಕನಾಗಿದ್ದಾನೆ ಎಂದು ಮೆಚ್ಚಿದ್ದಳು.

ಸತಿಯಾಗಿ ರತಿಯಾಗಿ ಬಂದ ವಾಸಂತಿಯನ್ನು ತಾನೂ ಅತಿ ಅಕ್ಕರೆಯಿಂದ ಓಲೈಸುತ್ತಿದ್ದ. ತನಗಾಗಿರುವ ಕೊರತೆಯನ್ನು ಅವಳಲ್ಲಿ ತೋರ್ಪಡಿಸಿಕೊಳ್ಳುತ್ತಿರಲಿಲ್ಲ.

5 ವರ್ಷ ಸತತವಾಗಿ ಸುಖದ ಸುಪ್ಪತ್ತಿಗೆಯಲ್ಲಿ ತೇಲಿಹೋದ ಇವರ ದಾಂಪತ್ಯ ಜೀವನದಲ್ಲಿ ಯಾವ ಕುಂದು–ಕೊರತೆಯೂ ಕಾಣಲಿಲ್ಲ.

ಆದರೆ ಆ ಜೀವನ ಹೊರ ಹೊಮ್ಮಿ ಅದರ ಫಲವಾಗಿ ಒಂದಾದರೂ ಕುಡಿ ಒಡೆಯದ ಮೇಲೆ ವ್ಯರ್ಥವೆನಿಸಿತು.

ಅಲ್ಲದೆ ವಾಸಂತಿಯ ತಾಯ್ತನದ ಹಂಬಲಿಕೆಯಂತೂ ಅವಳು ಎಷ್ಟೇ ಬಚ್ಚಿಟ್ಟರೂ ಬಯಲಾಗುತ್ತಿತ್ತು. ತನ್ನ ಪತಿಗೆ ಬೇಸರವಾಗದಂತೆ ತನ್ನ ನೋವನ್ನು ನುಂಗಿ ಅವಳು ನಡೆದುಕೊಳ್ಳುವ ರೀತಿ ನಾಗರಾಜನನ್ನು ಅಧೀರನನ್ನಾಗಿ ಮಾಡುತ್ತಿತ್ತು.

ಆ ಒಂದು ದಿನ ವಾಸಂತಿ ಮನೆಯ ಮುಂದಿನ ಜಾಜಿ ಬಳ್ಳಿಯಲ್ಲಿ ಹೂ ಬಿಡಿಸುತ್ತಿದ್ದಳು. ಇನ್ನೂ ಯಾರೂ ಎದ್ದಿರಲಿಲ್ಲ. ಪಕ್ಕದ ಮನೆಯಲ್ಲಿ ಹಸು ಹೂಂಕರಿಸುವ ಸದ್ದಾಯಿತು.

ವಾಸಂತಿ ಹೂ ಬಿಡಿಸುವುದನ್ನು ಬಿಟ್ಟು ಅವರ ಮನೆಗೂ, ತಮ್ಮ ಮನೆಗೂ ಇದ್ದ ಕಾಂಪೌಂಡು ಗೋಡೆಯ ಬಳಿ ನಿಂತು ಪಕ್ಕದ ಮನೆ ಕೊಟ್ಟಿಗೆಯ ಕಡೆ ನೋಡಿದಳು.

ಎಂತಹ ದೃಶ್ಯ ಅವಳ ಕಣ್ಣಿಗೆ ಬಿದ್ದಿತು ? ಅವರ ಮನೆ ಹಸು ಮುದ್ದಾದ ಕರುವನ್ನು ಹಾಕಿವೆ. ಆಗ ತಾನೇ ಹುಟ್ಟಿದ ಕರುವನ್ನು ತಾಯಿ ಹಸು ತನ್ನ ಪ್ರಸವ ನೋವನ್ನೂ ಲೆಕ್ಕಿಸದೆ ಅಕ್ಕರೆಯಿಂದ ನೆಕ್ಕುತ್ತಾ ಇದೆ.

ಕರು ಪುಟ್ಟ ಪುಟ್ಟ ಹೆಜ್ಜೆಯಿಟ್ಟು ಏಳುತ್ತಾ ಬೀಳುತ್ತಾ ತಾಯಿಯ ಮೊಲೆಗೆ ಬಾಯಿ ಹಾಕಿ ಕುಡಿಯುತ್ತಿದೆ.

ವಾಸಂತಿ ಅದನ್ನು ನೋಡುತ್ತಾ ನೋಡುತ್ತಾ ಮೈಮರೆತಳು. ಎಷ್ಟೋ ಹೊತ್ತು ಹಾಗೇ ನಿಂತಿದ್ದಳು. ನಾಗರಾಜ ಅವಳು ಎದ್ದಾಗಲೇ ಎದ್ದು ಬಂದು ಸುಮ್ಮನೆ ವರಾಂಡಾದಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ. ವಾಸಂತಿ ಎಷ್ಟು ಹೊತ್ತಾದರೂ ಒಳಕ್ಕೆ ಬರದಿದ್ದುದು ನೋಡಿ ತಾನೂ ಅವಳಿದ್ದಲ್ಲಿಗೆ ಬಂದ.

ಅವಳ ಹಿಂದೆ ಸುಮ್ಮನೆ ಸ್ವಲ್ಪ ಹೊತ್ತು ನಿಂತಿದ್ದ ನಾಗರಾಜ. ವಾಸಂತಿ ಆನಂದದಿಂದ ತನ್ನಷ್ಟಕ್ಕೆ ತಾನೇ ಆಹಾ ! ಎಷ್ಟು ಮುದ್ದಾಗಿದೆ ಕರು ? ಎಂದುಕೊಂಡಳು.

ನಾಗರಾಜ ಭುಜದ ಮೇಲೆ ಕೈಯಿಟ್ಟು ವಾಸೀ.... ಎಷ್ಟು ಹೊತ್ತು ಅದನ್ನು ನೋಡುತ್ತಾ ನಿಂತಿದ್ದೀ ? ಚಳಿ ಆಗೋಲ್ವೇ ? ಬಾ ಒಳಕ್ಕೆ ಹೋಗೋಣ ಎಂದ.

ಅದೋ ನೋಡ್ರೀ ; ಆ ತಾಯಿ ಪ್ರೇಮ ಅನ್ನೋದು ಎಂಥಾ ಮಹತ್ವದ್ದು ? ತನ್ನ ಕಂದನನ್ನು ಎಷ್ಟು ಪ್ರೀತಿಯಿಂದ ನೆಕ್ಕುತ್ತಿದೆ ಆ ಹಸು. ಪ್ರೀತಿಯುಕ್ಕಿ ಮೊಲೆಯಲ್ಲಿ ಹಾಲು ಸೋರುತ್ತಿದೆ. ಇದು ಎಂಥಾ ಭಾಗ್ಯ ! ಆ ಹಸುವಿಗೆ ಇರುವಂಥಾ ಅದೃಷ್ಟವೂ ನನಗಿಲ್ಲವಲ್ಲಾ; ಎನಿಸುತ್ತೆ. ತಾಯಿಯಾಗುವುದು ಸುಮ್ಮನೆ ಭಾಗ್ಯವೇನ್ರೀ? ಎಂದು ತನ್ನ ಮನಸ್ಸಿನ ಕಾತುರತೆಯನ್ನು ವಾಸಂತಿ ನೊಂದು ಹೇಳಿಕೊಂಡಳು.

ಅವಳಿಗೆ ನಾಗರಾಜ ಏನು ಉತ್ತರ ಕೊಟ್ಟಾನು ? ತನ್ನ ದೌರ್ಬಲ್ಯಕ್ಕಾಗಿ ಮರುಗುತ್ತಿದ್ದ.

ಇಷ್ಟಲ್ಲದೆ ವಂಶದ ಕುಡಿ ಬೆಳೆಯಲಿಲ್ಲವಲ್ಲಾ, ಎಂದು ವಂಶದ ಹಿರಿಯರಿಗೆ ಕೊರಗು. ಅದಕ್ಕಾಗಿ ವಾಸಂತಿಯಿಂದ ವ್ರತ, ಪೂಜೆ, ನಿಯಮ, ಛೆ....ಪಾಪ ! ಅವಳೇನು ಮಾಡಿಯಾಳು ? ಅವಳ ತಪ್ಪೇನಿದೆ ? ತನಗಾಗಿರುವ ಅನ್ಯಾಯವನ್ನು ಕಂಡೆ

ತಾಯಿಯರಿಗೂ ತಿಳಿಸಿಲ್ಲ. ಕಾರಣ ಲಜ್ಜೆ ಒಂದು ಕಡೆ, ಮತ್ತೊಂದು ಇಂಥ ಆಘಾತ ವನ್ನು ತಂದೆ ತಾಯಿಯರು ತಡೆಯಲಾರದೆ ತಮ್ಮ ಜೀವಕ್ಕೇ ಏನಾದರೂ ಅಪಾಯ ಮಾಡಿಕೊಂಡಾರು ! ಎಂಬ ಚಿಂತೆ. ಹೀಗಾಗಿ ನಾಗರಾಜ ಈ ರಹಸ್ಯವನ್ನು ತನ್ನೊಳಗೇ ಬಚ್ಚಿಟ್ಟು ಬೇಯುತ್ತಿದ್ದ.

ಹಾಗೆಯೇ ಮುಂದೂಡಿದ್ದಾಯಿತು. ಮದುವೆಯಾದ ನಂತರ ಹೆಂಡತಿಗೆ ತನ್ನ ವಿಷಯವನ್ನು ಹೇಳಿಬಿಡಬೇಕು, ಎಂದು ಎಷ್ಟೋ ಸಲ ನಿರ್ಧಾರ ಮಾಡಿಕೊಳ್ಳುತ್ತಿದ್ದ.

ಆದರೆ ವಾಸಂತಿಯ ಉಕ್ಕುವ ಉತ್ಸಾಹವನ್ನು ಈ ವಿಷಯದಿಂದ ನಂದಿಸಲು ಇಷ್ಟಪಡದೆ ಬಚ್ಚಿಟ್ಟ. ವಾಸಂತಿಗೆ ಅಷ್ಟಾಗಿ ಮಕ್ಕಳ ಅಪೇಕ್ಷೆ ಇಲ್ಲದಿದ್ದರೆ ಎಂದಾದರೂ ಈ ವಿಷಯ ಎತ್ತಿ ಹೇಳಿ ಬಿಡುತ್ತಿದ್ದನೋ ಏನೋ ?

ಆದರೆ ಮಗುವಿಗಾಗಿ ಹಾತೊರೆಯುವ ಅವಳನ್ನು ಈ ವಿಷಯದಿಂದ ನಿರಾಶೆ ಗೊಳಿಸುವುದು ಹೇಗೆ ? ಅವಳು ತನ್ನ ತಂದೆ–ತಾಯಿ, ಅತ್ತೆ–ಮಾವನಲ್ಲಿ ತನ್ನ ಗಂಡ ನಿಂದ ತನಗೆ ಮಕ್ಕಳಾಗುವುದಿಲ್ಲ, ಎಂದು ಹೇಗೆ ತಾನೇ ಹೇಳಿಕೊಂಡಾಳು ? ಹೆಂಡತಿ ಯನ್ನು ಹೇಗೂ ನೋಯಿಸಲಾರ ನಾಗರಾಜ.

ಆದರೆ ವಾಸಂತಿ ಈ ದಿನ ಮಕ್ಕಳಿಗಾಗಿ ಅಶ್ವತ್ಥ ಪ್ರದಕ್ಷಿಣೆ, ವ್ರತ ಮಾಡುತ್ತೇನೆ ಎಂದಾಗ ನಾಗರಾಜ ಕಂಗಾಲಾದ. ಸಾಧ್ವಿ ಸರಳ ಸ್ವಭಾವದ ವಾಸಂತಿಗೆ ನಾನು ಎಷ್ಟು ಅನ್ಯಾಯ ಮಾಡುತ್ತಿದ್ದೇನೆ ? ನಾನು ಸರಿಯಾದ ಗಂಡನೇ ? ಎನ್ನಿಸಿತು.

ದೀಪವಾರಿಸಿ ಮಲಗಿದ ಮೇಲೂ ವಾಸಂತಿ ಎಳೆ ಹಸುಳೆಯಂತೆ ತನ್ನ ಎದೆಯಲ್ಲಿ ಮುಖ ಹುದುಗಿಸಿ ಮಲಗಿದ್ದಾಳೆ. ವಾಸಂತಿಯನ್ನು ತಬ್ಬಿಕೊಂಡು ಕಣ್ಣೀರಿನಿಂದ ಅವಳ ಕಾಲು ತೊಳೆಯಬೇಕೆನಿಸಿತು.

ತನ್ನ ರಹಸ್ಯವನ್ನು ಇದುವರೆಗೂ ಅವಳಿಗೆ ಹೇಳದೆ ಮಾಡಿರುವ ಮೋಸಕ್ಕೆ ಏನು ಶಿಕ್ಷೆ ಬೇಕಾದರೂ ವಿಧಿಸು, ಅನುಭವಿಸುತ್ತೇನೆ, ಎಂದು ವಿಷಯ ತಿಳಿಸಿ ಅವಳಲ್ಲಿ ಕ್ಷಮೆ ಬೇಡಬೇಕೆಂದೆನಿಸಿತು.

ಈ ವಿಷಯ ತಿಳಿದು ವಾಸಂತಿ ಎಷ್ಟು ಕಂಗಾಲಾದಾಳು ? ಅಥವಾ ಒಂದು ಮಗುವಿಗೆ ಜನ್ಮ ಕೊಡಲಾರದ ನಿನ್ನ ಗಂಡಸುತನ ಏತಕ್ಕೆ ? ವ್ಯರ್ಥ, ಎಂದು ಮೂದಲಿಸಿ ತನ್ನನ್ನು ಕಡೆಗಣಿಸುವಳೋ ? ಎಂದೆಲ್ಲಾ ಯೋಚಿಸಿ ತಲೆ ಕೆಡಿಸಿಕೊಂಡ ನಾಗರಾಜ. ಅವನಿಗೆ ರಾತ್ರಿ ಪೂರಾ ನಿದ್ದೆ ಬರಲಿಲ್ಲ.

ವಾಸಂತಿಯ ಮನಸ್ಸಿನ ಮೇಲೆ ದೊಡ್ಡ ಆಘಾತವಾದದ್ದೆಂದರೆ ಅವಳ ಸ್ನೇಹಿತೆ ಪಕ್ಕದ ಮನೆ ಪದ್ಮ ಹೆರಿಗೆಯ ಸಮಯದಲ್ಲಿ ತುಂಬಾ ಕಷ್ಟವಾಗಿ ಗಂಡು ಮಗುವಿಗೆ ಜನ್ಮ ಕೊಟ್ಟು ಸತ್ತದ್ದು.

ಪದ್ಮ ಮೊದಲೇ ನಿಶ್ಶಕ್ತಿಯಾಗಿದ್ದಳು. ಹೆರಿಗೆ ಸಮಯಕ್ಕೆ ಆಸ್ಪತ್ರೆಗೆ ಕರೆದು ಕೊಂಡು ಹೋದರು. ಡಾಕ್ಟರು ಪರೀಕ್ಷಿಸಿ ಅಷ್ಟು ನಿಶ್ಶಕ್ತಿಯಾಗಿರುವ ಗರ್ಭಿಣಿಯನ್ನು ನೋಡಿ ಗಾಬರಿಗೊಂಡರು. ಅವರ ಮನೆಯವರನ್ನು ಚೆನ್ನಾಗಿ ಬೈದರು.

"ಬಹಳ ವೀಕಾಗಿದ್ದಾರೆ. ಸುಸೂತ್ರವಾಗಿ ಹೆರಿಗೆಯಾಗುವುದು ಕಷ್ಟ. ಒಂದು ಮಗುವಿಗೂ ಇನ್ನೊಂದು ಮಗುವಿಗೂ ಅಂತರ ಬೇಡವೇ ? ಕೈ ಮಗುವಿಗೆ ಇನ್ನೂ ಒಂದೂವರೆ ವರ್ಷ ಅಂತೀರಾ ಆಗಲೇ ಮತ್ತೊಂದು ಹೆರಿಗೆ. ನೀವೇನು ಮನುಷ್ಯರೇ? ಕುಟುಂಬ ಯೋಜನೆಗೆ ಎಷ್ಟು ಅವಕಾಶವಿದ್ದರೂ ನಿಮ್ಮಂತಹ ಅವಿವೇಕಿಗಳಿಗೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಆಕೆಯ ಜೀವಕ್ಕೇ ಅಪಾಯವಿದೆ".

ಎಂದು ಡಾಕ್ಟರುಗಳು ಮೊದಲೇ ಹೇಳಿದ್ದರು. ಸುಸ್ವಾದ ಜೀವ ಸಾವು–ಬದುಕು ಗಳ ನಡುವೆ ಹೋರಾಡಿ ಕಡೆಗೆ ಗಂಡು ಮಗುವಿಗೆ ಜನ್ಮ ಕೊಟ್ಟು ತಾನು ಅಸು ನೀಗಿತು, "ಮಗು ಉಳಿಯಿತು, ತಾಯಿ ಸತ್ತಳು. ನಮ್ಮ ಪ್ರಯತ್ನವೆಲ್ಲಾ ವ್ಯರ್ಥ ವಾಯಿತು" ಎಂದು ಡಾಕ್ಟರು ಹೇಳಿ ಕೈ ತೊಳೆದು ಹೋದರು.

ವಾಸಂತಿ ಆ ದಿನವೆಲ್ಲಾ ಆಸ್ಪತ್ರೆಯಲ್ಲಿಯೇ ಇದ್ದು ಈ ಸಂಕಟವನ್ನು ನೋಡಿದಳು. ಪದ್ಮಾ ಬಸುರಿಯಾಗಿದ್ದಾಗ ಹೇಳಿದ್ದ ಮಾತು "ಅವರಿಗೆ ಇನ್ನೂ ಒಂದು ಗಂಡು ಮಗು ಬೇಕಂತೆ ಕಣೇ ವಾಸಂತೀ ; ಇಲ್ಲಿ ನನ್ನ ದೇಹ ಮಣ್ಣಾದರೂ ಸರಿ" ಎಂದು ನೊಂದು ನುಡಿದಿದ್ದಳು. ಅವಳ ಹೆಣವನ್ನೂ ಆ ಗಂಡು ಮಗುವನ್ನೂ ನೋಡಿದಾಗ ವಾಸಂತಿಗೆ ಅವಳ ಮಾತು ಜ್ಞಾಪಕಕ್ಕೆ ಬಂದು ಬಿಕ್ಕಿ–ಬಿಕ್ಕಿ ಅತ್ತಳು.

ಪದ್ಮಳ ಅತ್ತೆ ಮಗುವನ್ನು ಎತ್ತಿಕೊಂಡು ಮುದ್ದಾಡುತ್ತಾ, "ಅಯ್ಯೋ ! ಒಳ್ಳೆ ರಾಜ ಇದ್ದ ಹಾಗೆ ಇದೆ ಗಂಡು ಮಗು. ಇಂಥಾ ಮಗುವನ್ನು ಎತ್ತಿಕೊಳ್ಳಲು ಅವಳಿಗೆ ಅದೃಷ್ಟವಿಲ್ಲವಾಯಿತು" ಎಂದರು.

ಅಬ್ಬ ! ಏನು ಸ್ವಾರ್ಥ ! ವಾಸಂತಿಗೆ ಹಾಗೆಯೇ ಅವಳ ತಲೆಯ ಮೇಲೆ ಒಂದು ಗುಂಡು ಬಂಡೆ ಎತ್ತಿ ಹಾಕಿ ಬಿಡೋಣವೆನಿಸಿತು.

ಪಾಪಿ ! ಸೊಸೆ ಇರುವವರೆಗೂ ಸೊಸೆಯನ್ನು ಹುರಿದು ಮುಕ್ಕಿದಳು. ಅವಳನ್ನು ಮಕ್ಕಳು ಹೆರುವ ಯಂತ್ರಮಾಡಿ ಕಡೆಗೂ ಬಲಿ ತೆಗೆದುಕೊಂಡಳು. ಈಗ ಎಲ್ಲಾ ವಂಶೋದ್ಧಾರಕರನ್ನೂ ಕಟ್ಟಿಕೊಂಡು ಹೆಣಗಲಿ, ಎಂದು ಮನಸ್ಸಿನಲ್ಲಿಯೇ ಶಪಿಸಿದಳು. ಪದ್ಮನ ಹೆಣವನ್ನು ನೋಡಿದಾಗ ವಾಸಂತಿಗೆ ಅತೀವ ಸಂಕಟವಾಯಿತು. ಬರೀ ಮೂಳೆ ಚರ್ಮವಾಗಿ ಬಿಳಿಚಿಕೊಂಡು ಬಿದ್ದಿದ್ದಳು.

ಅಬ್ಬ ! ನರ ರಾಕ್ಷಸರು, ಅವಳಿಗೆ ವಿಶ್ರಾಂತಿಯನ್ನೇ ಕೊಡದೆ 6 ವರ್ಷಕ್ಕೆ ನಾಲ್ಕು ಮಕ್ಕಳನ್ನು ಅವಳಿಂದ ಪಡೆದರು. ಸಾಕಪ್ಪಾ ಸಾಕು ! ಮಕ್ಕಳೂ ಬೇಡ, ಮದುವೆಯೂ ಬೇಡ, ಎಂದು ಬೆಂದ ಹೃದಯದಿಂದ ಮನೆಗೆ ಬಂದಳು ವಾಸಂತಿ.

ಆಗಿನಿಂದ ಅವಳಿಗೆ ಒಂದು ವಿಧವಾದ ವೈರಾಗ್ಯವೇ ಉಂಟಾಯಿತು. ಪಕ್ಕದ ಮನೆಯಲ್ಲಿ ಪದ್ಮಳ ಮಗು ಅತ್ತರೆ "ಪಾಪ! ಪದ್ಮ ಎಷ್ಟು ಸುಸ್ತಾಗಿದ್ದರೂ ಮಕ್ಕಳನ್ನು ಅಕ್ಕರೆಯಿಂದ ಸಾಕಿದ್ದಳು. ಈಗ ಆ ಮಕ್ಕಳ ತಬ್ಬಲಿತನ ನೊಡುವುದಕ್ಕಾಗುವುದಿಲ್ಲ ಎಂದು ಎಷ್ಟೋ ಸಲ ನೊಂದು ವಾಸಂತಿ ತನ್ನ ಅತ್ತೆಯ ಬಳಿ ಹೇಳುತ್ತಿದ್ದಳು.

"ಏನೋಮ್ಮ, ಯಾವುದೂ ಅತಿ ಆದರೆ ಕಷ್ಟವೇ ; ಇಷ್ಟು ಬೇಗ ಬೇಗ ಆಗ ಬಾರದಿತ್ತು. ಪಾಪ ! ಮಕ್ಕಳೇ ಅವಳಿಗೆ ಮೃತ್ಯುವಾಯಿತು. ನಮ್ಮ ಮನೆಯಲ್ಲಿ ನಾವು ಒಂದು ವಂಶದ ಕುಡಿ ಬೆಳೆಯಲಿಲ್ಲವಲ್ಲಾ ಎಂದು ಒದ್ದಾಡ್ತೀವಿ, ಹೀಗೆ ದೈವಲೀಲೆ" ಎಂದರು.

ಹೇಗೋ ಮಾತು ಸುತ್ತೀ ಬಳಸೀ ತನ್ನತ್ತಲೇ ಚುಚ್ಚುತ್ತಿರುವುದು ವಾಸಂತಿಗೆ ತಿಳಿದದ್ದೆ. ಆದರೆ ಏನು ಮಾಡಿಯಾಳು ?

ವಾಸಂತಿಯ ತಂಗಿ ಇಂದಿರಾಗೆ ಮದುವೆಯಾಗಿ ಇನ್ನೂ ಎರಡು ವರ್ಷವಾಗಿತ್ತು. ಈಗವಳು ತುಂಬು ಬಸುರಿ. ತೌರುಮನೆಗೆ ಬಾಣಂತನಕ್ಕೆ ಕರೆದುಕೊಂಡು ಬಂದಿದ್ದರು.

ಒಂಭತ್ತನೇ ತಿಂಗಳು ತೌರುಮನೆಯವರು ಹಸಿರು ಸೀರೆ ತೆಗೆದು ಆರತಿ-ಅಕ್ಷತೆ ಮಾಡುವ ಪದ್ಧತಿ, ಅದಕ್ಕಾಗಿ ವಾಸಂತಿಯನ್ನೂ ಒಂದೆರಡು ದಿನ ಮುಂಚಿತವಾಗಿ ಬರ ಬೇಕೆಂದು ವಾಸಂತಿಯ ತಾಯಿಯೇ ಬಂದು ಕರೆದಿದ್ದರು.

ಭಾಗೀರಥಮ್ಮನವರು ಬೀಗಿತ್ತಿಯ ಕೈಯಲ್ಲಿ ಲೋಕಾರೂಢಿ ಮಾತನಾಡಿ ಕುಂಕುಮ ತಾಂಬೂಲ ಕೊಟ್ಟರು. "ಏನೋ ಅನಸೂಯಮ್ಮ ವಾಸಂತಿಗೆ ಏನು ತಡೆ ದೋಷ ಇದೆಯೋ ? ಏಳು ವರ್ಷವಾದರೂ ಒಂದು ಮಗು ಆಗಲಿಲ್ಲ. ನಮ್ಮ ಅದೃಷ್ಟ" ಎಂದು ಪೇಚಾಡಿದರು.

ಅನಸೂಯಮ್ಮನವರೂ ನೊಂದು "ಅದೇ ನಮಗೂ ಚಿಂತೆ, ಭಾಗೀರಥಮ್ಮ ನವರೇ ; ಎರಡು ಹೆಣ್ಣು ಮಕ್ಕಳೂ ನಮಗೆ ಎರಡು ಕಣ್ಣು ಇದ್ದ ಹಾಗೆ. ಮೊದಲು ವಾಸಂತಿಗೆ ಆಗಿದ್ದರೆ ಚೆನ್ನಾಗಿತ್ತು. ನಾವೂ ಬೇಕಾದಷ್ಟು ಡಾಕ್ಟರಿಗೆ ತೋರಿಸಿದೆವು, ಏನೂ ದೋಷವಿಲ್ಲ, ಆಗುತ್ತೆ ಎನ್ನುತ್ತಾರೆ. ನೋಡೋಣ ದೇವರ ಸಂಕಲ್ಪ" ಎಂದರು.

ಯಾರು ಮಾತಾಡಿದರೂ ತನಗೆ ಮಕ್ಕಳಾಗಲಿಲ್ಲ ; ಅನ್ನೋ ವಿಷಯಾನೇ...ಇದು ಏನು ನನ್ನ ಕರ್ಮವೋ ? ಎಂದು ವಾಸಂತಿ ಒಳೊಳಗೇ ಕೊರಗುತ್ತಿದ್ದಳು.

ತುಂಬು ಬಸುರಿ ತಂಗಿಯನ್ನು ವಾಸಂತಿ ಎಷ್ಟು ಅಲಂಕರಿಸಿ ನೋಡಿದರೂ ಅವಳಿಗೆ ತೃಪ್ತಿಯಿಲ್ಲ. ತನ್ನ ಬೇಸರವನ್ನೆಲ್ಲಾ ಮರೆತು ವಾಸಂತಿ ಚಿಕ್ಕ ಹುಡುಗಿ ಯಂತೆ ಗುಡು ಗುಡು ಎಂದು ಓಡಾಡುತ್ತಾ ತಂಗಿಯನ್ನು ಉಪಚರಿಸುತ್ತಿದ್ದಳು.

ಬಳೆ ತೊಡಿಸುವ ಶಾಸ್ತ್ರ, ಆರತಿ ಅಕ್ಷತೆಗೆಲ್ಲಾ ಸಂಭ್ರಮದಿಂದ ಅಣಿಮಾಡಿದಳು. ಇಂದಿರಾ ಬಳ್ಳಿಯಂತೆ ಬಳುಕಿ, ಚಿಗುರೆಯಂತೆ ಜಿಗಿದು ಓಡಾಡುತ್ತಿದ್ದವಳು ಈಗ ಅಮ ಹೆಜ್ಜೆ ಹಾಕುತ್ತಾ, ಹೊರಲಾರದ ಹೊಟ್ಟೆಯ ಭಾರವನ್ನು ಸರಿದೂಗಿಸಿಕೊಂಡು ಹೊಸಲು ದಾಟುವಾಗ ಅಡ್ಡಡ್ಡ ಕಾಲು ಎಳೆದು ಹಾಕುವುದನ್ನು ನೋಡಿ ವಾಸಂತಿ ಮುಸಿ ಮುಸಿ ನಕ್ಕಳು.

ಇಂದಿರಾ ಹುಸಿ ಮುನಿಸಿನಿಂದ "ಯಾಕೆ ವಾಸೀ ಹಾಗ್ ನಗ್ತೀಯಾ ? " ಎಂದು ಕೆನ್ನೆ ಉಬ್ಬಿಸಿ ಕೇಳಿದಳು.

"ನೀನು ನಡೆಯೋದ್ ನೋಡಿ ನಗು ಬಂತು ಕಣೇ, ಹಿತ್ತಿಲ ಕಡೆ ಸೀಬೆ ಮರಕ್ಕೆ ಕಪಟದ ಹಕ್ಕಿ ನೇತು ಬೀಳೋ ಹಾಗೆ ಜೋತು ಬೀಳುತ್ತಿದ್ದೆಯಲ್ಲಾ ; ಈಗ ಸ್ವಲ್ಪ ಹಾಗೇ ಜೋತಾಡು ನೋಡೋಣ ಮತ್ತೆ ? " ಎಂದು ವಾಸಂತಿ ಇಂದಿರನ ಕೆನ್ನೆಯನ್ನು ಮೆಲ್ಲನೆ ಚಿವುಟಿ, ಆಣಕಿಸಿದಳು.

ರೂಮಿನಲ್ಲಿ ಮೆತ್ತನೆ ಹಾಸಿದ್ದ ಮಂಚದ ಮೇಲೆ ಧೊಸಕ್ಕೆಂದು ಕುಳಿತ ಮೇಲೆ ಇಂದಿರಾ "ಉಶ್ಯಪ್ಪ" ಹೋಗೇ ನಿನಗೇನು ಗೊತ್ತಾಗಬೇಕು ನನ್ನ ಕಷ್ಟ ? ಏನು ಶಾಸ್ತ್ರವೋ ? ಸರಿಯಾಗಿ ಒಂದು ಗಂಟೆ ಕಾಲ ಹಸೇ ಮೇಲೆ ಕೂರಿಸಿ ಬಿಟ್ಟರು. ಬೆನ್ನು, ಸೊಂಟ ಎಲ್ಲಾ ನೋವು, ನಿನಗೂ ಆದಾಗ ಗೊತ್ತಾಗುತ್ತೆ ಸುಮ್ಮನಿರು, ಎಂದು ಅಕ್ಕನಿಗೆ ಸವಾಲು ಹಾಕಿದಳು.

ತಂಗಿ ಹೇಗೆ ಕೂತರೂ ನಿಂತರೂ ವಾಸಂತಿಗೆ ಮುದ್ದೇ, ಇಂದಿರಾ ಮೊದಲೇ ಚೆಂದುಳ್ಳಿ ಚೆಲುವೆ, ಈಗ ತುಂಬು ಬಸುರಿ ಬೇರೆ. ಮೈ – ಕೈ ತುಂಬಿಕೊಂಡು ಕೆಂಪಗೆ ಕರ್ಪೂರದ ಬೊಂಬೆಯಂತಿದ್ದಳು.

ಈಗ ದಿಂಬಿಗೆ ಒರಗಿ ಅರ್ಧ ಮಲಗಿರುವಾಗ ತುಂಬು ಹೊಟ್ಟೆ ಎದ್ದು ಕಾಣುವ ಆ ಭಂಗಿಯಂತೂ ಪ್ರಜಾಮತದಲ್ಲಿ ಜಾಹಿರಾತು ಕೊಡುವ "ಕ್ಯಾಲ್ಸಿಯಂ ಸ್ಯಾಂಡೋಜ್ ಶಿಶು ಈಗ ತಾನೇ ಒದೆಯಿತು" ಎಂಬಂತಿತ್ತು.

ವಾಸಂತಿ ತಂಗಿ ಪಕ್ಕದಲ್ಲಿ ಕುಳಿತು ಅವಳ ತಲೆ ನೇವರಿಸುತ್ತಾ ಅಲ್ಲಾ ;... ಪುಟ್ಟೀ ....ಹೊಟ್ಟೆ ಒಳಗೆ ಪಾಪ ತುಂಬಾ ರಾಂಗ್ ಮಾಡುತ್ತೇನೇ ? ಎಂದು ಪಿಸುಗುಟ್ಟಿದಳು.

"ಮಾಡ್ದೇ ಬಿಟ್ಟು ಬಿಡುತ್ತೆ ಪಾಪ ;.... ತಾಳು ನಿನಗೊಂದು ಬೇಗ ಅಗ್ಲೀ ಅಂತ ಭಾವಂಗೆ ಹೇಳ್ತೀನಿ, ಭಾವಾ ; ...." ಎಂದು ಮಲಗಿದ್ದ ಕಡೆಯಿಂದಲೇ ಕೂಗಿದಳು.

ಆದರೆ ಬಂದವರು ಭಾವ ಅಲ್ಲ, ಇಂದಿರನ ಗಂಡ. ಇಂದಿರಾ ಹಸೆಮಣೆಯಿಂದ ಒಳಕ್ಕೆ ಬರುವುದನ್ನೇ ಕಾದಿದ್ದ ಅವಳ ಗಂಡ ಮೋಹನ " ಯಾಕೆ ಇಂದೂ ಬಹಳ ಆಯಾಸ ಆಯ್ತಾ ? " ಎಂದು ಅವಳ ಪಕ್ಕದಲ್ಲಿಯೇ ಕುಳಿತು ಹೆಂಡತಿಯನ್ನು ಮುದ್ದು ಗರೆಯುತ್ತಾ ಅವಳ ಬೆನ್ನು ಮೈ ಎಲ್ಲಾ ನೇವರಿಸತೊಡಗಿದ.

ವಾಸಂತಿ ಎದ್ದು ಹೊರಗೆ ಬಂದಳು. ಇಂದಿರಳ ಗಂಡ ಇಂಜಿನಿಯರ್. ಒಳ್ಳೆ ಸಂಬಳ, ಅತ್ತೆ–ಮಾವ ಇಂದಿರಾಳನ್ನು ತುಂಬಾ ಪ್ರೀತಿಸುತ್ತಿದ್ದರು. ಅವರಿಗೆ ನಾಲ್ಕು ಹೆಣ್ಣಾದ ಮೇಲೆ ಮೋಹನ್ ಹುಟ್ಟಿದನಂತೆ. ಒಬ್ಬನೇ ಮಗ. ಮಗ–ಸೊಸೆಯೇ ಅವರಿಗೆ ಸರ್ವಸ್ವ, ಬಸುರಿ ಸೊಸೆಗೆ ಎಲ್ಲಿ ಕಣ್ಣು ದೃಷ್ಟಿ ತಾಕುತ್ತದೆಯೋ ; ಎಂದು ಜೋಪಾನ ಮಾಡುತ್ತಿದ್ದರು.

ಅತ್ತೆಯೂ ಸೊಸೆಯನ್ನು ಹುಡುಕಿಕೊಂಡು ಅದೇ ಕೊಠಡಿಗೆ ಬಂದರು. ಆಯಾಸದಿಂದ ಮಲಗಿದ್ದ ಸೊಸೆಯ ಪಕ್ಕ ಮಗ ಕುಳಿತಿರುವುದು ನೋಡಿ, " ಲೋ ; ಮೋಹನಾ...., ಆಗ್ಲೇ ಬಂದು ಬಿಟ್ಯಾ ? ಅವಳಿಗೆ ತುಂಬಾ ಆಯಾಸವಾಗಿದೆ ಸ್ವಲ್ಪ ಹೊತ್ತು ಸುಧಾರಿಸಿಕೊಳ್ಳಲಿ ನಡಿಯೋ" ಅಂದರು ವಯಸ್ಸಾದ ಮುತ್ತೈದೆ.

ಮೋಹನ ಮಗುವಿನಂತೆ "ನಾನೇನ್ ಮಾಡ್ತೀನಮ್ಮಾ ಬೆನ್ನು ನೋವು ಅಂದಳು ಅದಕ್ಕೇ ಸ್ವಲ್ಪ ಒತ್ತಿ ಕೊಡ್ತೀನಿ ಅಂದೆ" ಅಂದ.

"ಹೋಗೋ ಹುಡುಗು ಮುಂಡೇದೇ, ನಿನಗೇನು ಗೊತ್ತಾಗುತ್ತೆ, ಎಲ್ಲೂ ಒತ್ತ ಬೇಡ ನೀನು ಹೋಗು ಹೊರಗೆ" ಅಂದರು.

ಮೋಹನ ಇಂದಿರಾಗೆ ಕಣ್ಣು ಮಿಟುಕಿಸಿ ಟವಲನ್ನು ಬಾಯಿಗೆ ಅಡ್ಡ ಇಟ್ಟು ನಗುತ್ತಾ ಹೊರಕ್ಕೆ ಹೋದ.

ಸೊಸೆಗೆ ಆಸರೆ ಕೊಟ್ಟು ಕುಳ್ಳಿರಿಸಿ "ತಕೋ ಇಂದ್ರಾ ತಣ್ಣನೆ ಈ ಶರಬತ್ ಕುಡಿ ಆಯಾಸ ಹೋಗುತ್ತೆ" ಅಂದರು.

ಇಂದಿರಾಳ ತಾಯಿ ಬಿಸಿಯಾಗಿ ಹಾಲು ಲೋಟದಲ್ಲಿ ತಂದು "ಕೊಳ್ಳೇ...ಇಂದೂ ಇದು ಸ್ವಲ್ಪ ಕುಡಿ" ಎಂದು ಹೇಳುತ್ತಿದ್ದರು.

ಒಬ್ಬರಾದ ಮೇಲೊಬ್ಬರು ತುಂಬು-ಬಸುರಿ ಇಂದಿರಾಳನ್ನು ವಿಚಾರಿಸುವವರೇ. ಇಂದುವಿನ ಅದೃಷ್ಟ ಎಲ್ಲರೂ ಅವಳನ್ನು ಓಲೈಸಿ ಕೊಂಡಾಡುವುದು ನೋಡಿ ವಾಸಂತಿಗೆ ಸಂತೋಷ ಉಕ್ಕಿತು. ತನ್ನ ಮುದ್ದು ತಂಗಿಯ ಭಾಗ್ಯಕ್ಕೆ ಹಿಗ್ಗಿ ಸದಾ ದೇವರು ಅವಳನ್ನು ಸಂತೋಷವಾಗಿಡಲಿ, ಎಂದು ಪ್ರಾರ್ಥಿಸಿದಳು.

ತನ್ನ ಮುಂದೆ ಲಂಗ ಹಾಕಿಕೊಂಡು ಕುಣಿಯುತ್ತಿದ್ದ, ತಾನು ಮುದ್ದಿಗಾಗಿ "ಪಾಪಚ್ಚಿ" "ಎಂದು ಕರೆಯುತ್ತಿದ್ದ ಪಾಪಚ್ಚಿಗೆ ಆಗಲೇ ಒಂದು ಪಾಪ",

ಕಂಡ ದೇವರಿಗೆಲ್ಲಾ ಕೈ ಮುಗಿದು ಹರಕೆ ಹೊತ್ತು ಹಂಬಲಿಸಿದರೂ ಇನ್ನೂ ಒಂದು ಕುಡಿ ತನ್ನ ಹೊಟ್ಟೆಯಲ್ಲಿ ಮೂಡಿ ಬರಲಿಲ್ಲ. ಹೌದು,ನಿಜ, ತನಗೇನು ಗೊತ್ತು? ತುಂಬು ಬಸುರಿಯ ಕಷ್ಟ ? ಇಂದಿರಾ ಚಿಕ್ಕವಳಾದರೂ ಇದೊಂದು ಅನುಭವದಲ್ಲಿ ತನಗಿಂತ ಮೇಲಲ್ಲವೇ ?

"ತಾಯ್ತನದ ಹಿರಿಮೆ ಹೆಣ್ಣಿಗೆ ದೇವರು ಕೊಟ್ಟ ವರಪ್ರಸಾದ, ಅದರಿಂದ ಹೊರ ತಾದವಳು ಭೂಮಿಗೆ ಭಾರವಾದಂತೆ" ಎಂದು ನಿಟ್ಟುಸಿರು ಬಿಟ್ಟು ಬಂದ ನೆಂಟರಿಗೆ ಬಡಿಸುವ ಕೆಲಸಕ್ಕೆ ಸೊಂಟಕಟ್ಟಿ ನಿಂತಳು.

ಬಂದ ನೆಂಟರೆಲ್ಲಾ ಕೇಳುವವರೇ "ಏನಮ್ಮ ವಾಸಂತಿ ತುಂಬಾ ಜಾಣತನ ಮಾಡಿ ಕೊಂಡಿರೋ ಹಾಗಿದೆ, ಮಗ ಹುಟ್ಟಿಬಿಟ್ಟರೆ ಖರ್ಚು ಜಾಸ್ತಿ ಅಂತಾನಾ ?"

ಅಂತ ಒಬ್ರು ಅಂದ್ರೆ.... "ಅಲ್ಲಾಮ್ಮಾ ; ಒಳ್ಳೆ ದಂತದ ಬೊಂಬೆ ಇದ್ದಹಾಗೆ ಇದಾಳೆ. ಮಕ್ಕಳಾಗಿ ಬಿಟ್ಟರೆ ರೂಪ ಕೆಟ್ಹೋಗುತ್ತೇ ಅಂತ ಅವಳ ಯಜಮಾನರು ಪ್ಲಾನಿಂಗ್ ಮಾಡಿರಬಹುದು" ಎಂದು ಮತ್ತೊಬ್ಬರು ಹಾಸ್ಯ ಮಾಡುವರು.

ಒಟ್ಟಿನಲ್ಲಿ ಎಲ್ಲರೂ ವಾಸಂತಿಗೆ ಇನ್ನೂ ಮಕ್ಕಳಾಗದ ವಿಷಯ ಎತ್ತಿ ಮಾತಾಡು ವವರೇ.

ವಾಸಂತಿಗೆ ಈ ವಾತಾವರಣ ಉಸಿರು ಕಟ್ಟಿದಂತಾಗಿತ್ತು. ಯಾವಾಗ ಈ ಎಲ್ಲರ ಗುಂಪಿನಿಂದ ಮನೆಗೆ ಹೋಗಿ ಒಂಟಿಯಾಗಿದ್ದೇನೋ ? ಅನ್ನಿಸಿಬಿಟ್ಟಿತ್ತು.

ಈ ಎಲ್ಲಾ ಮಾತುಗಳೂ ನಾಗರಾಜನ ಕಿವಿಗೂ ಬಿದ್ದು ಮನಸ್ಸು ನೊಂದು ಪಾಪ ; ನನ್ನಿಂದಾಗಿ ವಾಸಂತಿಗೆ ಎಷ್ಟು ಕಿರಿ–ಕಿರಿ ? ಕೇಳುವ ಜನರಿಗೆಲ್ಲಾ ನಾಚಿಕೆ ಯಿಂದ ತಲೆ ತಗ್ಗಿಸುವ ಪಾಡು ಅವಳಿಗೆ, ಎಂದುಕೊಂಡ.

ಎಲ್ಲರ ಊಟ ಮುಗಿದ ಕೂಡಲೇ ವಾಸಂತಿ ತಾಯಿಗೆ ಸಹಾಯವಾಗಿ ಕೆಲಸ ದವಳಿಂದ ಅಡಿಗೆ ಪಾತ್ರೆಯಲ್ಲಾ ತೊಳೆಸಿ ಜೋಡಿಸಿಟ್ಟಳು. ಹರಡಿರುವ ಸಾಮಾನೆಲ್ಲಾ ಓರಣವಾಗಿಟ್ಟಳು. ಬಂದ ನೆಂಟರಿಗೆಲ್ಲಾ ಕುಂಕುಮ ತಾಂಬೂಲ ಕೊಟ್ಟಳು. ಇಷ್ಟೂ ತನ್ನ ಕೈಲಾದಷ್ಟು ತಾಯಿಗೆ ಸಹಾಯಮಾಡಿ ಸಂಜೆ ನಾಗರಾಜನ ಜೊತೆ ಹೊರಟು ನಿಂತಳು.

ಇಂದಿರಾ ಬಂದು ರೇಗಿದಳು, "ಏನೇ ಒಳ್ಳೆ ಪರಸ್ಥಳದವರು ಯಾರೋ ಬಂದ ಹಾಗೆ ಇವತ್ತೇ ಹೊರಟು ನಿಂತುಬಿಟ್ಟಿದ್ದೀ ? ಅಂದು ಅಲ್ಲೇ ನಿಂತಿದ್ದ ಭಾವನಿಗೆ "ಏನ್ ಭಾವಾ ! ಒಂದು ದಿನ ನಮ್ಮ ವಾಸಂತಿನ ಬಿಟ್ಟಿರೋಕಾಗೋಲ್ವೇ ? ನೀವು ಹೋಗಿ, ಅವಳು ನಾಳೆ ಬರ್ತಾಳೆ" ಎಂದಳು.

ವಾಸಂತಿ ತಟ್ಟನೆ "ಅಯ್ಯಯ್ಯೋ .... ಹಾಗಾಗೋಲ್ಲ ಕಣೇ, ನಿಂಗೊತ್ತಿಲ್ಲ ಸುಮ್ಮನಿರು, ರವಿಗೆ ನೆನ್ನೆಯಿಂದಲೇ ಮೈ ಹುಷಾರಿಲ್ಲ, ವಿಪರೀತ ಜ್ವರ, ಬೇಗ ಬಂದು ಬಿಡಿ ಅತ್ತಿಗೇ ಅಂದಿದಾನೆ ಕಣೇ".

"ಸರಿ–ಸರಿ ಒಳ್ಳೆ ಎಳೇ ಮಗೂನ ಬಿಟ್ಟು ಬಂದ ಹಾಗಾಡ್ತೀಯಲ್ಲಾ ; ಅವರಮ್ಮ ಇಲ್ವೇ ? ಅವರೇ ನೋಡ್ಕೋತಾರೆ" ಎಂದಳು ಇಂದಿರಾ.

"ನಿಂಗೊತ್ತಿಲ್ಲ ಸುಮ್ಮನಿರು. ನಾನು ಹೋಗೋವರ್ಗೂ ಬಾಯಿಗೆ ಒಂದು ತೊಟ್ಟು ನೀರು ಬಿಟ್ಟಿರೋಲ್ಲ ಅವನು" ಎಂದು ಪೊರಮವ ಸಿದ್ಧತೆ ಮಾಡಿದಳು ವಾಸಂತಿ.

"ಹೌದು ಇಂದಿರಾ, ವಾಸಂತಿ ಇಲ್ಲದಿದ್ದರೆ ಅವನು ಔಷಧಿ ಸಹ ಕುಡಿದಿರೋಲ್ಲ. ಅಮ್ಮ ಒಬ್ಬಳೇ ಎಷ್ಟು ಗಾಬರಿ ಪಟ್ಟುಕೊಂಡು ಇರುತ್ತಾಳೋ ?" ಎಂದ ನಾಗರಾಜ.

"ಅಂತೂ ನಮ್ಮ ಅಕ್ಕನಿಗೆ ರವೀನೇ ಒಂದು ಪಾಪಾನ ಮಾಡ್ಬಿಟ್ಟಿದೀರಿ" ಅಂದಳು ಇಂದಿರಾ.

"ಇಲ್ಲಿಂದ ಇಲ್ಲಿಗೇನೆ ? ಬರ್ತೀನಿ ಸುಮ್ಮನಿರೇ" ಎಂದು ತಂಗಿಗೆ ಸಮಾಧಾನ ಹೇಳಿ ವಾಸಂತಿ ನಾಗರಾಜನ ಜೊತೆ ಹೊರಟು ನಿಂತಳು.

ಅವಳಿಗೂ ಲಕ್ಷಣಕ್ಕೆ ರೌಕೆ ಖಣ–ತಾಂಬೂಲ ಎಲ್ಲಾ ಕೊಟ್ಟರು ಅವರ ತಾಯಿ. "ಏನೋಮ್ಮ ಇನ್ನೆರಡು ದಿನ ನೀನು ಇಲ್ಲೇ ಇದ್ದಿದ್ದರೆ ನನಗೂ ಸಹಾಯವಾಗುತ್ತಿತ್ತು. ಸಧ್ಯ ಈಗ ಇರಲಿ, ಅವಳು ಹೆತ್ತ ಮೇಲೆ ಒಂದು ಹತ್ತು ರಾತ್ರಿ ಕಳೆಯುವವರೆಗೂ ನೀನು ಇಲ್ಲೇ ಬಂದು ಇದ್ದು ಬಿಡಮ್ಮ ಎಂದು, ಅಳಿಯನಿಗೂ ಸ್ವಲ್ಪ ದಿನ ವಾಸಂತೀನ ಕಳುಹಿಸಿಕೊಡೀಪ್ಪ" ಎಂದರು.

ನಾಗರಾಜ "ಅದಕ್ಕೇನಂತೆ, ಧಾರಾಳವಾಗಿ ಇರಲಿ. ಒಂದೇ ಊರಿನಲ್ಲಿರೋವಾಗ ಯಾವಾಗ ಬೇಕಾದ್ರೂ ಬರಬಹುದು" ಎಂದ.

ವಾಸಂತಿಯ ತಾಯಿ ಗೇಟಿನವರೆಗೂ ಬಂದರು. "ಏನೋಮ್ಮ ಪಾಪಚ್ಚಿಗೆ ಏನು ಅವಸರವಾಗಿತ್ತೆ ? ಆಗಬೇಕಾದ್ದು ನಿನಗೆ. ದೇವರ ದಯೆ ಎಂದಿಗೆ ಬರುತ್ತೋ? " ಎಂದರು.

ಅಲ್ಲೇ ಹೊಸಿಲಿನ ಬಳಿ ನಿಂತಿದ್ದ ಇಂದಿರಾ ಇಬ್ಬರಿಗೂ ಟಾ. ಟಾ ಮಾಡಿ "ಭಾವಾ, ಮುಂದಿನ ವರ್ಷ ಇದೇ ದಿನಕ್ಕೆ ಅಕ್ಕನನ್ನು ನಾನು ಹೀಗೇ ಸತಾಯಿಸದಿದ್ದರೆ ಕೇಳಿ" ಎಂದಳು. ನಿಲುವಿನ ಮೇಲಿನ ಹಲ್ಲಿ ಲೊಚ್.... ಲೊಚ್ ಎಂದಿತು.

ಇಂದಿರಾ ಚಪ್ಪಾಳೆ ತಟ್ಟಿ "ನಿಜವಂತೆ ಕಣೇ ವಾಸೀ, ಅಂದಳು. ಏನೋ ಆಶಾ ಭಾವನೆಯನ್ನು ಹೊತ್ತು ಮುಂದೆ ನಡೆದಳು ವಾಸಂತಿ.

ನಾಗರಾಜನ ಶಕ್ತಿಯೇ ಉಡುಗಿದಂತೆ ಆಗಿತ್ತು. ಮೌನವಾಗಿ ವಾಸಂತಿಯ ಜೊತೆ ಬಸ್‌ಸ್ಟಾಪ್‌ಗೆ ನಡೆದ.

ರವಿಯ ಜ್ವರ ವಿಪರೀತ ಏರಿತ್ತು. ಮೈಮೇಲೆ ಜ್ಞಾನವೇ ಇಲ್ಲದೆ ಬಾಯಿಗೆ ಬಂದದ್ದನ್ನು ಒರಳಿಕೊಳ್ಳುತ್ತಾ ಇದ್ದ. ಮಧ್ಯೆ ಮಧ್ಯೆ "ಅತ್ತಿಗೇ ಇಲ್ಲೇ ಇರಿ ಹೋಗ ಬೇಡಿ" ಎಂದು ಕನವರಿಸುತ್ತಿದ್ದ.

ಭಾಗೀರಥಮ್ಮನವರಿಗೆ ಗಾಬರಿಯೇ ಆಗಿತ್ತು. ಇವರಿಬ್ಬರೂ ಯಾವಾಗ ಬರು ತ್ತಾರಪ್ಪಾ ? ಎನ್ನಿಸಿ ಬಿಟ್ಟಿತ್ತು. ವಾಸಂತಿಯನ್ನು ಕಂಡ ಕೂಡಲೇ "ಸಧ್ಯ ಬಂದ್ಯಾಮ್ಮಾ ? ನನಗಂತೂ ಕೈಕಾಲೇ ಉಡುಗಿ ಹೋಯ್ತು. ನಿನ್ನೆ ಮಾವ ಅಂತೂ ಮಧ್ಯಾಹ್ನವೇ 'ಈಗಲೇ ಹೋಗಿ ವಾಸಂತೀನ ಕರೆದುಕೊಂಡು ಬಂದು ಬಿಡ್ತೀನಿ' ಅಂತ ಕೂತಿದ್ರು. ಸಧ್ಯ ಅವರ ಮನೆಯ ಶುಭ ಕೆಲಸ ನಡೆದು ಊಟ ಮಾಡಿ ಬರಲಿ ಸುಮ್ಮನಿರಿ" ಎಂದೆ.

"ನಾಗರಾಜ ! ಡಾಕ್ಟರು ಶಾಪಿನಲ್ಲೇ ಇರಬಹುದು, ಹೋಗಿ ಕರಕೊಂಡು ಬಾಪ್ಪಾ ! ನೋಡಮ್ಮಾ ವಾಸಂತೀ, ಅವನಿಗೆ ಔಷಧಿ ಕುಡಿಸಮ್ಮ" ಎಂದು ಹೇಳಿ ಎದ್ದು ಒಳಗೆ ಹೋದರು.

ರವಿಯ ಹಣೆ ಬೆಂಕಿಯಂತೆ ಸುಡುತ್ತಿತ್ತು ವಾಸಂತಿ ಒದ್ದೆ ಬಟ್ಟೆಯನ್ನು ಹಣೆಗೆ ಹಾಕಿ ಅಲ್ಲೇ ಕುಳಿತಳು.

ರವಿ ನರಳುತ್ತಾ ಸ್ವಲ್ಪ ಕಣ್ಣು ಬಿಟ್ಟು ನೋಡಿದ. ಅತ್ತಿಗೆಯನ್ನು ನೋಡಿದ ಕೂಡಲೇ ಅವನಿಗೆ ದುಃಖ ಒತ್ತರಿಸಿ ಬಂತು. ಮಗುವಿನಂತೆ ಬಿಕ್ಕಿ-ಬಿಕ್ಕಿ ಅಳಲು ಶುರು ಮಾಡಿದ.

ವಾಸಂತಿ ಅವನ ಕಣ್ಣು ಒರೆಸಿ "ಇದೇನೋ ರವಿ! ಯಾಕಪ್ಪಾ ಹೀಗೆ ಅಳುತ್ತೀ" ? ಎಂದು ಕೇಳಿದಳು.

ಅವನು ಅತೀವ ವೇದನೆಯನ್ನನುಭವಿಸುತ್ತಿರುವುದು ಅವನ ಮುಖಭಾವ ದಿಂದಲೇ ವಾಸಂತಿಗೆ ತಿಳಿಯಿತು.

ಅವಳ ಕೈಯನ್ನು ಭದ್ರವಾಗಿ ಹಿಡಿದು 'ಅತ್ತಿಗೇ ನೀವು ಇಲ್ಲೇ ಇರಿ ಎಲ್ಲೂ ಹೋಗಬೇಡಿ' ಎಂದು ಗೋಗರೆದ.

"ರವೀ ಇದೇಕೆ ಹೀಗಾಡ್ತಿಯಾ ? ನಾನೆಲ್ಲಿಗೂ ಹೋಗೋಲ್ಲ. ಎಲ್ಲಿ ಔಷಧಿ ಕುಡಿ ಮತ್ತೆ" ಎಂದು ವಾಸಂತಿ ಔಷಧಿ ಕುಡಿಸಿದಳು. ರವಿ ಸದ್ದಿಲ್ಲದೆ ಕುಡಿದ.

ರವಿಗೆ ಒಂದು ವಾರ ಒಂದೇ ಸಮ ಜ್ವರ ಕಾಯಿತು. ಡಾಕ್ಟರು ಮನೆಗೆ ಬಂದು ನೋಡಿಕೊಳ್ಳುತ್ತಿದ್ದರು. ವಾಸಂತಿ ಹಗಲು ರಾತ್ರಿ ಎನ್ನದೆ ಉಪಚರಿಸಿದಳು. ಸಧ್ಯ ರವಿಗೆ ವಾಸಿಯಾಗಿ ಓಡಾಡುವಂತೆ ಆದರೆ ಸಾಕಲ್ಲಾ ; " ಎಂದು ಮನೆಮಂದಿ ಯೆಲ್ಲಾ ಕಂಗಾಲಾದರು.

ಮತ್ತೆ ಮೊದಲಿನಂತೆ ಹುಷಾರಾಗಿ ಅವನು ಕಾಲೇಜಿಗೆ ಹೋಗಬೇಕಾದರೆ ಒಂದು ತಿಂಗಳೇ ಬೇಕಾಯಿತು.

ಭಾಗೀರಥಮ್ಮನವರು "ಸಧ್ಯ ಈ ಸಲ ರವಿಗೆ ಒಂದು ಗಂಡಾಂತರವೇ ಕಳೆಯಿತು ವಾಸಂತಿ ; ನೀನು ಎಷ್ಟು ಕಷ್ಟಪಟ್ಟೆಯೋ ತಾಯಿ ಇನ್ನು ಸ್ವಲ್ಪ ಸುಧಾರಿಸಿಕೋ" ಎಂದರು.

ಆದರೆ ವಾಸಂತಿ ಸುಧಾರಿಸಿಕೊಳ್ಳುವುದಕ್ಕೆ ಅವಕಾಶವೇ ಆಗಲಿಲ್ಲ. ಇಂದೂ ಗಂಡು ಮಗುವಿನ ತಾಯಿಯಾದಳು. ವಾಸಂತಿ ಅವಳ ಬಾಣಂತನಕ್ಕೆ ತಾಯಿಗೆ ಸಹಾಯ ಮಾಡಲು ತೌರಿಗೆ ಹೋದಳು.

ಮಗು ಬಾಣಂತಿಗೆ ನೀರು, ಅಡಿಗೆ ಕೆಲಸ ಎಲ್ಲದಕ್ಕೂ ನಡುಕಟ್ಟಿ ನಿಂತಳು ವಾಸಂತಿ. ಮನೆಗೆ ಬರುವವರು, ಹೋಗುವವರು, ಮಗುವಿಗೆ ನಾಮಕರಣ, ಹೀಗೆ ಬಿಡುವಿಲ್ಲದ ದುಡಿತಕ್ಕೆ ನಿಂತಳು. ಮಗು ಮುದ್ದಾಗಿ ಕೃಷ್ಣನಂತೆ ಇತ್ತು. ಅದಕ್ಕೆ "ಮಧುರಾನಾಥ" ಎಂದು ಹೆಸರಿಟ್ಟರು. "ಮಧೂ" ಎಂದು ಕೂಗುವುದಕ್ಕೆ ಎಲ್ಲರಿಗೂ ಇಷ್ಟವಾದ ಹೆಸರು.

ವಾಸಂತಿ ಮಗುವನ್ನು ಮುದ್ದಿಸುತ್ತಾ ಕುಳಿತಳೆಂದರೆ ಅವಳಿಗೆ ಈ ಪ್ರಪಂಚವೇ ಮರೆತು ಹೋಗುತ್ತಿತ್ತು.

"ಅಕ್ಕನಿಗೆ ಮಕ್ಕಳ ಮೇಲಿನ ಮೋಹ ಎಷ್ಟು ತೀವ್ರವಾಗಿದೆ ಎಂದು ಇಂದಿರಾಗೆ ಗೊತ್ತು. ತನ್ನ ಅಕ್ಕ–ಭಾವ, ಇಬ್ಬರೂ ಮುದ್ದಾದ ಜೋಡಿ, ಇವರಿಗೆ ಮಗು ಹುಟ್ಟಿದರೆ ಮಧುವಿಗಿಂತ ಮುದ್ದಾಗಿಯೇ ಹುಟ್ಟುತ್ತದೆ. ಆದರೆ ಇನ್ನೂ ಏಕೆ ಆಗಿಲ್ಲ ? ಏ....ಕೆ ?.... ಎಂದು ತಲೆ ತುರಿಸಿಕೊಂಡಳು.

ತೊಡೆಯ ಮೇಲೆ ಮಲಗಿ ನಿದ್ದೆಹೋದ ಮಗುವನ್ನು ತೊಟ್ಟಿಲಲ್ಲಿ ಬಿಡಲು ವಾಸಂತಿ ರೂಮಿಗೆ ಹೋದಳು.

"ಲೇ ವಾಸಂತೀ....ನನ್ನ ಹತ್ರ ಮುಚ್ಚು ಮರೆ ಇಲ್ಲದೆ ನಿಜ ಹೇಳೇ.." ಎಂದಳು. ಇಂದಿರಾ.

ವಾಸಂತಿ ಮಗುವನ್ನು ತೊಟ್ಟಿಲಲ್ಲಿ ಮಲಗಿಸುತ್ತಾ "ಏನೇ ಅದು ನಾನು ಮುಚ್ಚು ಮರೆ ಮಾಡಿರೋದು ? " ಎಂದಳು.

"ವಾಸೀ ನೀನು ಲೇಡಿ ಡಾಕ್ಟರ ಹತ್ತಿರ ಟೆಸ್ಟ್ ಮಾಡಿಸಿದೆಯೋನೇ" ? ಎಂದು ಮೆಲ್ಲನೆ ಕೇಳಿದಳು ಇಂದು.

ವಾಸಂತಿ ಉದಾಸೀನದ ನಗುವನ್ನು ಚೆಲ್ಲಿ "ಅಯ್ಯೋ....ಆ ವಿಚಾರಾನೇ ?.... ನಿನಗೆ ಬೇರೇನೂ ಯೋಚನೆಯೇ ಇಲ್ಲವೇನೇ ಇಂದೂ" ?

"ನೋಡು ವಾಸೀ ! ನೀನು ಮಾತು ಹಾರಿಸಬೇಡ, ನಿಜ ಹೇಳು".

ವಾಸಿಗೆ ಅಕ್ಕ ಮುದ್ದು ತಂಗಿಯಲ್ಲಿ ಸಂಕೋಚವೇ ? "ಎಲ್ಲಾ ಆಯ್ತಲ್ಲೇ ಇಂದ್ಮೂ, ಹತ್ತು ಜನ ಲೇಡಿ ಡಾಕ್ಟರಿಗೆ ತೋರಿಸಿದ್ದಾಯಿತು."

"ಏನು ಹೇಳಿದರು ?"

"ಸರಿ, ಏನು ಹೇಳುತ್ತಾರೆ ? ನಿಮಗೆ ಯಾವ ದೋಷವೂ ಇಲ್ಲ. ಮಕ್ಕಳು ಆಗಿಯೇ ಆಗುತ್ತೆ, ಅಂತ ಎಲ್ಲರೂ ಹೇಳಿದರು ಕಣೇ".

"ನೋಡು ವಾಸೀ....ನೀನೊಬ್ಬಳು ಟೆಸ್ಟ್ ಮಾಡಿಸಿಕೊಂಡರೆ ಸಾಲದು, ಭಾವ ನಿಗೂ ಮಾಡಿಸಬೇಕಾಗಿತ್ತು".

"ಅವರು ಆಗಿದೆ ಎಂದರು ಕಣೇ"

"ಪೆದ್ದಿ ನೀನು, ಇಬ್ಬರೂ ಜೊತೆಯಲ್ಲಿ ಹೋಗಿ ಇನ್ನೊಂದು ಸಲ ಡಾಕ್ಟರ ಸಲಹೆ ಕೇಳಿ ಬನ್ನಿ".

"ಪಾಪಚ್ಚೀ....ನೀನು ನನಗೇ ಸಲಹೆ ಹೇಳುವಂತಾದಿಯಲ್ಲೇ....ನನಗೆ ಮಕ್ಕಳಾಗ ದಿದ್ದರೆ ಏನು ? ಪ್ರಪಂಚ ಮುಳುಗಿ ಹೋಗುತ್ತದೆಯೇ ? ಮಧು ಇಲ್ಲವೇ ? ಅವನನ್ನೇ ಎತ್ತಿಕೊಂಡು ಸಂತೋಷಪಟ್ಟರೆ ಆಯಿತು."

ಹೀಗೆ ಮೇಲ್ನೋಟಕ್ಕೆ ಹಾರಿಸಿ ಉತ್ತರ ಕೊಟ್ಟರೂ ವಾಸಂತಿಯ ಮನದ ಕೊರಗು ಇದ್ದೇ ಇದ್ದಿತು.

ವಾಸಂತಿ ಒಂದು ತಿಂಗಳು ತೌರುಮನೆಯಲ್ಲಿರುವ ಹೊತ್ತಿಗೆ ಅತ್ತೆ ಮನೆಯ ವರಿಗೆಲ್ಲಾ ಮಂಕು ಬಡಿದಂತೆ ಆಗಿತ್ತು.

ಪರಮಶಿವಯ್ಯನವರಿಗೆ ಸೊಸೆ ಇಲ್ಲದ್ದು ಮುಜುಗರ ಅವರಿಗೆ ಆಗಾಗ ಬೇಕಾಗುವ ಕಾಫಿ, ಸ್ನಾನ, ಪೂಜೆಗೆ ಅಣಿ, ಹೊತ್ತಿಗೆ ಸರಿಯಾಗಿ ಊಟ, ನಂತರ ಎಲೆ ಅಡಿಕೆ, ಹೀಗೆ ಅವರ ಎಲ್ಲಾ ಬೇಕುಗಳನ್ನೂ ಕಾಲಕ್ಕೆ ಸರಿಯಾಗಿ ಮಾಡುತ್ತಿದ್ದಳು.

ನಾಗರಾಜ ಆಗಾಗ ಅತ್ತೆ ಮನೆಗೆ ಹೋಗಿ ಹೆಂಡತಿಯನ್ನು ನೋಡಿಕೊಂಡು "ಬೇಗ ಬಂದು ಬಿಡು ವಾಸೀ...." ಎಂದು ಹೇಳುತ್ತಿದ್ದ.

ರವಿಯಂತೂ ಕಾಲೇಜಿಗೆ ಹೋಗುವಾಗ ಬರುವಾಗ ಒಂದು ಸಲ ವಾಸಂತಿ ಮನೆಗೆ ನುಸುಳಿ " ಅತ್ತಿಗೇ ಆ ಮನೇಲಿ ಹೇಗಿರೋದು ? ನೀವಿಲ್ಲದ್ದು ಶತ ಬೇಜಾರು ಆಗಿ ಬಿಟ್ಟಿದೆ ಬೇಗ ಬಂದು ಬಿಡಿ " ಅನ್ನುತ್ತಿದ್ದ.

ಆ ಮಾತು ಕೇಳಿಸಿಕೊಂಡ ಇಂದು "ರೀ.... ರವೀ ನೀವೇ ನೋಡ್ರಿ ಅಕ್ಕನ ಪಾಪ ಆಗಿ ಬಿಟ್ಟಿದ್ದೀರಿ, ನಿಮ್ಮ ಕಾಟ ತಡೀಲಾರದೆ ಇಲ್ಲಿ ಬಂದಿದ್ದಾಳೆ. ಇನ್ನೂ ಮೂರು ತಿಂಗಳು ನಿಮ್ಮ ಅತ್ತಿಗೆ ಬರೋಲ್ಲ ಹೋಗ್ರೀ...." ಅಂದಳು.

ರವಿಗೆ ಸಿಟ್ಟು ಬಂತು "ಅತ್ತಿಗೇ ನಾನು ನಿಮಗೆ ಕಾಟ ಕೊಡ್ತೀನಿ ಅಂತ ದೂರಿದ್ದೀರಾ ? ಇರಲಿ ಇನ್ನು ನಿಮ್ಮ ಕೈಲಿ ಮಾತೇ ಆಡೋಲ್ಲ" ಎಂದು ಬಡ-ಬಡನೆ ಹೊರಟೇ ಬಿಟ್ಟ.

ವಾಸಂತಿಗೆ ಪಿಚ್....ಎನ್ನಿಸಿತು. "ಯಾಕೆ ಹಾಗೆ ಹೇಳಿದೇ, ಇಂದೂ ?" ಎಂದಳು.

"ಸಾಕು ಸುಮ್ಮನಿರೀ, ಏನು ಮುದ್ದು ಆವೆಂದೂ ? ನೀನೇ ಅವನನ್ನ ಏರ್ಸಿ ಕೂರ್ಸಿದ್ದೀಯೆ" ಎಂದು ರೇಗಿದಳು ಇಂದು.

ಅಂತೂ ರವಿ ನಾಲ್ಕೈದು ದಿನ ಇತ್ತ ಸುಳಿಯಲೇ ಇಲ್ಲ. ವಾಸಂತಿಗೆ ಯೋಚನೆಯಾಯಿತು. ಅವನ ಮನಸ್ಸಿಗೆ ನೋವಾದರೆ ನಾಗರಾಜನೂ ಬೇಸರಪಟ್ಟುಕೊಳ್ಳುತ್ತಾನೆ. ಅತ್ತೆ–ಮಾವನೂ ಏನಾದರೂ ಅನ್ನಬಹುದು ಎಂದು ಚಿಂತಿಸಿ "ಅಮ್ಮಾ ನಾನು ಈವತ್ತು ಆ ಮನೆಗೆ ಹೋಗಿ ಬರ್ತೀನಮ್ಮಾ" ಎಂದಳು.

ವಾಸಂತಿಯ ತಾಯಿ ಸಂಸಾರದಲ್ಲಿ ನುರುಗಿದವರು "ಹೆಣ್ಣು ಮಕ್ಕಳು ಅತ್ತೆ ಮನೆಯವರಿಗೆ ಹೊಂದಿಕೊಂಡು ಬಾಳಬೇಕು ವಾಸಂತಿಯೂ ಒಂದು ತಿಂಗಳಿಂದ ಅತ್ತ ಹೋಗಿಲ್ಲ ಒಂದು ದಿನ ಹೋಗಿ ಬರಲಿ" ಎಂದುಕೊಂಡು,

"ವಾಸಂತೀ.... ಹೋಗಿ ನೋಡಿಕೊಂಡು ಬಾಮ್ಮ. ಇಲ್ಲಿಯ ಕೆಲಸ ಏನು ಹೇಗಾದರೂ ಆಗುತ್ತೆ" ಎಂದರು.

ವಾಸಂತಿ ಬೆಳಿಗ್ಗೆ ಕಾಫಿ ತಿಂಡಿ ಮುಗಿಸಿಕೊಂಡು ಸಡಗರದಿಂದ ಹೊರಟಳು. ಬಾಗಿಲಿಗೆ ಬರುವಾಗಲೇ ಖಾಲಿ ಆಟೋ ಸಿಕ್ಕಿತು. ಇನ್ನು ಬಸ್ಸಿಗೆ ಯಾರು ಕಾಯುತ್ತಾರೆ ಎಂದು ಆಟೋದಲ್ಲಿಯೇ ಹೋದಳು.

ಇದ್ದಕ್ಕಿದ್ದಂತೆ ವಾಸಂತಿ ಮನೆಗೆ ಬಂದದ್ದು ನೋಡಿ ಭಾಗೀರಥಮ್ಮನವರಿಗೆ ಖುಷಿಯೋ ಖುಷಿ.

"ಯಾಕಮ್ಮಾ.... ವಾಸಂತೀ ಇದ್ದಕ್ಕಿದ್ದಂತೆ ಬಂದೆ ? ಮಗು ಬಾಣಂತಿ ಚೆನ್ನಾಗಿದ್ದಾರೆಯೋ ? " ಎಂದು ಕೇಳಿದರು.

"ಹೂಂ ಅಮ್ಮಾ; ಎಲ್ಲಾ ಚೆನ್ನಾಗಿದ್ದಾರೆ. ಏನೋ ನಿಮ್ಮನ್ನೆಲ್ಲಾ ನೋಡೋಣ ಎನ್ನಿಸಿತು ಬಂದು ಬಿಟ್ಟೆ" ಎಂದಳು.

ನೋಡಮ್ಮ ವಾಸಂತಿ ನಾವು ನಾವೇ ಆದ್ರೆ ನಾನು ಹೇಗೋ ಮಾಡಿಕೊಳ್ಳುತ್ತಿದ್ದೆ. ಇವತ್ತು ಬೆಳಿಗ್ಗೆ ತಾನೇ ನಿಮ್ಮ ಮಾವನವರ ತಂಗಿ ಅವರ ಸೊಸೆ ಇಬ್ಬರೂ ಬಂದಿದ್ದಾರೆ.

ಅವರಿಗೇನೋ ಆಗಾಗ ತುಂಬಾ ಹೊಟ್ಟೆ ನೋವು ಬರುತ್ತಿದೆಯಂತೆ, ಅದಕ್ಕೆ ಇಲ್ಲಿ ದೊಡ್ಡ ಆಸ್ಪತ್ರೆಗೆ ತೋರಿಸಲು ಬಂದಿದಾರೆ.

ರವಿಯೇ ಅವರನ್ನು ಕರೆದುಕೊಂಡು ಆಸ್ಪತ್ರೆಗೆ ಹೋದ. ಇನ್ನೂ ಅವರು ಇಲ್ಲಿ ಎಷ್ಟುದಿನ ಇರಬೇಕಾಗುತ್ತೋ ? ನಾನೊಬ್ಬಳು ಅವರಿಗೆಲ್ಲಾ ಹೇಗೆ ಮಾಡಲಿ ? ನನಗೆ ಯೋಚನೆಯೇ ಆಗಿಬಿಟ್ಟಿದೆ ಎಂದರು.

ಅಮ್ಮಾ ; ಯಾಕೆ ಯೋಚನೆ ? ನಾನು ನಮ್ಮ ಅಮ್ಮನಿಗೆ ಹೇಳಿಬಿಟ್ಟು ನಾಳೆಯೇ ಬಂದು ಬಿಡುತ್ತೇನೆ. ಮಗು ಬಾಣಂತಿಗೆ ತಿಂಗಳ ಮೇಲಾಯಿತು ಏನೂ ಪರವಾಗಿಲ್ಲ ಅಮ್ಮ ಮಾಡಿಕೊಳ್ಳುತ್ತಾರೆ, ಎಂದಳು.

ಭಾಗೀರಥಮ್ಮನವರಿಗೆ ಸೊಸೆಯ ಗುಣ ಅಚ್ಚು-ಮೆಚ್ಚು "ಹಾಗೇ ಮಾಡಮ್ಮ ನನ್ನ ಕೈಲಂತೂ ಆಗುತ್ತಿಲ್ಲ" ಅಂದರು.

ಮಧ್ಯಾಹ್ನ ಊಟದಹೊತ್ತಿಗೆ ಎಲ್ಲರಿಗೂ ಅಡಿಗೆ ಆಗ್ಬೇಕಾಗಿತ್ತು. ಭಾಗೀರಥಮ್ಮ ಅರ್ಧಂ ಬರ್ಧ ಅಡಿಗೆ ಮಾಡಿದ್ದರು. ವಾಸಂತಿ ಕೈ ಕಾಲು ತೊಳೆದು ಅಡಿಗೆ ಮನೆಗೆ ಹೋದಳು.

ತರಕಾರಿ ಹೆಚ್ಚಿಕೊಂಡು ಪೂರ್ತಿ ಅಡಿಗೆ ಮಾಡಿದಳು. ಪಾತ್ರೆ ಎಲ್ಲಾ ತೊಳೆದಿಟ್ಟು ನೆಲ ಒರಸಿ, ಮನೆಯಲ್ಲಾ ಶುಭ್ರವಾಗಿಟ್ಟಳು. ಮಾವನವರಿಗೆ ಪ್ರಿಯವಾದ ಕಾಫಿ ಮಾಡಿ ಒಂದು ಲೋಟ ತೆಗೆದುಕೊಂಡು ಅವರ ಕೊಠಡಿಗೆ ಹೋದಳು. ಅವರು ಏನೋ ಸಪ್ಪೆಯಾಗಿ ಮಂಚದ ಮೇಲೆ ಸುಮ್ಮನೆ ಮಲಗಿದ್ದರು.

"ಮಾವಾ.... ತೆಗೆದುಕೊಳ್ಳಿ ಕಾಫಿ," ಎಂದಳು. ವಾಸಂತಿ ಬಂದದ್ದು ಅವರಿಗೆ ತಿಳಿದಿರಲಿಲ್ಲ ಅವಳನ್ನು ನೋಡಿ ಆಶ್ಚರ್ಯವಾಯಿತು "ಸಧ್ಯ ಬಂದು ಬಿಟ್ಟೆಯಾ ತಾಯಿ" ಎಂದರು.

ಯಾಕೆ ಮಾವ ಅಷ್ಟು ಬೇಜಾರಾಗಿಬಿಟ್ಟಿತ್ತೇ ?

"ಹೌದಮ್ಮಾ..... ನೀನಿಲ್ಲದ ಮೇಲೆ ಈ ಮನೆಯು ಕಳೆಯೇ ಇಲ್ಲ. ಇವಳಿಗೆ ಕೈಲಾಗೋಲ್ಲ. ಹೊತ್ತಿಗೆ – ಹೊತ್ತಿಗೆ ಕಾಫಿ ಇಲ್ಲ. ರವಿ ತುಂಟತನ ಹೇಳತೀರದು ಮನೆಯೇ ಸೇರೋಲ್ಲ. ನಾಗರಾಜ ಮಾತಿಲ್ಲ ಕತೆ ಇಲ್ಲ ಸಪ್ಪೆ, ಇನ್ನೇನಾಗಬೇಕಮ್ಮಾ ?" ಅಂದರು.

ವಾಸಂತಿಗೆ ನಿಜವಾಗಿಯೂ ಕರುಣೆ ಉಕ್ಕಿತು. ಪಾಪ ಸಿಂಹ ಘರ್ಜನೆ ಮಾಡುತ್ತಿದ್ದ ಈ ಮನುಷ್ಯ ಎಷ್ಟು ಮೆತ್ತಗಾಗಿದ್ದಾರೆ ? ನನಗೆ ಈ ಮನೆಯಲ್ಲಿ ಎಂಥಾ ಮೇಲ್ಮಟ್ಟದ ಸ್ಥಾನ ಕೊಟ್ಟಿದ್ದಾರೆ? ಸಧ್ಯ ಅವರೆಲ್ಲರ ಕಣ್ಮಣಿಯಾಗಿ ನಾನು ಉಳಿಯಬೇಕು ಎಂದುಕೊಂಡಳು.

"ನಾನು ಇಲ್ಲಿಯೇ ಇರುತ್ತೇನೆ ಮಾವ, ಕೊಳ್ಳಿ ಕಾಫಿ" ಎಂದಳು.

"ಅಬ್ಬ ನನಗೆ ಹೊಸ ಚೈತನ್ಯ ಬಂದ ಹಾಗೆ ಕಣಮ್ಮ. ನನ್ನ ತಂಗಿ ಬೇರೆ

ಮೈಸೂರಿನಿಂದ ಬಂದಿದಾಳೆ. ಅವಳಿಗೆ ಖಾಯಿಲೆ ವಾಸಿಯಾಗುವವರೆಗೂ ಇಲ್ಲಿಯೇ ಇರುತ್ತಾಳೆ. ಅಪರೂಪಕ್ಕೆ ಸೊಸೆಯನ್ನೂ ಕರೆದುಕೊಂಡು ಬಂದಿದಾಳಮ್ಮಾ"

"ಆಗಲಿ ಮಾವ, ನಾನೆಲ್ಲಾ ನೋಡಿಕೊಳ್ಳುತ್ತೇನೆ" ಎಂದು ಹೇಳಿ ಕೆಲಸಕ್ಕೆ ನಡುಕಟ್ಟಿ ನಿಂತಳು.

ಅಷ್ಟರಲ್ಲಿ ಸ್ಕೂಟರಿನಲ್ಲಿ ರವಿ ಬಂದ. ಒಳಗೆ ಬಂದವನೇ "ಅಮ್ಮಾ.....ಅವರು ಆಟೋದಲ್ಲಿ ಬರುತ್ತಿದ್ದಾರೆ. ಅತ್ತೆಯನ್ನು ಡಾಕ್ಟರು ಟೆಸ್ಟ್ ಮಾಡಿ ಎಕ್ಸರೇ ತೆಗೀಬೇಕು ಆಮೇಲೆ ನೋಡೋಣ ನಾಳೆ ಬನ್ನಿ ಎಂದು ಹೇಳಿದಾರೆ" ಎಂದ.

"ಏನು ಗ್ರಹಚಾರವೋ ಇನ್ನು ಅಪ್ರೇಷನ್ನೋ ಏನೋ" ಅಂದರು ಭಾಗೀರಥಮ್ಮ.

ರವಿ ಮನೆಯಲ್ಲಾ ಒಂದು ಸಲ ಕಣ್ಣು ಹಾಯಿಸಿದ. ಆಯಾ ಸಾಮಾನೆಲ್ಲಾ ಓರಣವಾಗಿಟ್ಟು ಚೊಕ್ಕಟವಾಗಿ ಮನೆಯೇ ಕಳೆ ತುಂಬಿದಂತಿತ್ತು.

ಅಡಿಗೆಮನೆಯಲ್ಲಿ ಪಾತ್ರೆ ಶಬ್ದವನ್ನು ಕೇಳಿ, "ಯಾರಮ್ಮಾ ಒಳಗೆ ?" ಅಂದು ತಾಯಿಯ ಮುಖ ನೋಡಿದ.

"ನಿನ್ನ ಅತ್ತಿಗೆ ಬಂದು ಬಿಟ್ಟಿದ್ದಾಳೆ ಕಣೋ" ಅಂದರು. ರವಿಗೆ ಮನಸ್ಸಿನಲ್ಲಿಯೇ ಖುಷಿ ಆಯಿತು. ಆದರೆ ಬಿಗುಮಾನ, ಅತ್ತಿಗೆಯನ್ನು ಸತಾಯಿಸಬೇಕು ಎಂದು. ನೇರ ತನ್ನ ರೂಮಿಗೆ ಹೋಗಿ ಕಾಲು ಚಾಚಿ ಮಲಗಿದ.

"ಅಮ್ಮಾ ವಾಸಂತೀ.....ರವಿ ಬಿಸಿಲಿನಲ್ಲಿ ಬಂದಿದಾನೆ. ಒಂದು ಲೋಟ ಪಾನಕ ಕೊಡು" ಎಂದರು ಭಾಗೀರಥಮ್ಮ.

ಆ ವೇಳೆಗೆ ವಾಸಂತಿ ನಿಂಬೇಹಣ್ಣಿನ ಪಾನಕ ಮಾಡಿ ರವಿಯ ರೂಮಿಗೇ ತೆಗೆದು ಕೊಂಡು ಹೋದಳು.

ರವಿ ಆಯಾಸದಿಂದ ಸೋತು ಮಲಗಿದ್ದ. "ಕೊಳ್ಳೋ ರವಿ ಕುಡಿ" ಎಂದು ಅವನ ಕೈಗೆ ಕೊಡಲು ಹೋದಳು. ರವಿ ಅವಳ ಮುಖವನ್ನೂ ನೋಡದೆ ಬೆನ್ನು ಮೇಲೆ ಮಾಡಿ ಮಲಗಿದ.

ವಾಸಂತಿಗೆ ನಗು ಬಂತು. ರವಿ ಕೋಪ ಇನ್ನೂ ಆರಿಲ್ಲ ಎಂದುಕೊಂಡು ಇರಲಿ ಎಷ್ಟು ಹೊತ್ತು ಇರುತ್ತಾನೋ ನಾನೂ ನೋಡುತ್ತೇನೆ, ಎಂದು ಲೋಟ ಟೇಬಲ್ ಮೇಲೆ ಇಟ್ಟು ಬಂದಳು.

ಆ ವೇಳೆಗೆ ಭಾಗೀರಥಮ್ಮನ ನಾದಿನಿ ಸರಸ್ವತಮ್ಮ, ಅವರ ಸೊಸೆ ದೇವಿಕಾ ಇಬ್ಬರೂ ಆಟೋದಲ್ಲಿ ಬಂದರು.

ಸರಸ್ವತಮ್ಮ ಬಂದಿದ್ದೇ ವ್ಯಸನದಿಂದ "ಏನಮ್ಮಾ ! ಅತ್ತಿಗೇ ನನ್ನ ಗ್ರಹಚಾರ ಇನ್ನೂ ಎಷ್ಟು ದಿನ ಇಲ್ಲಿರಬೇಕಾಗುತ್ತೋ ಕಾಣೆ" ಎಂದರು.

ಭಾಗೀರಥಮ್ಮ ಆತ್ಮೀಯವಾಗಿ "ಏನು ಮಾಡುವುದು ಸರಸ್ವತಿ ! ಹಣೆಯಲಿಗೆ ಯಾರು ಹೊಣೆ ? ಸಧ್ಯ ನಿನಗೆ ವಾಸಿಯಾದರೆ ಸಾಕು" ಅಂದರು.

ದೇವಿಕಾ ಒಂದು ಕಡೆ ಸುಮ್ಮನೆ ಕುಳಿತಳು. ಅತ್ತೆ ಎದುರಿಗೆ ಮಾತನಾಡಲೂ ಹೆದರುವಂತೆ ಕಾಣುತ್ತಿತ್ತು.

ಇವರ ಮಾತಿನ ಧ್ವನಿ ಕೇಳಿ ವಾಸಂತಿ ಹೊರಕ್ಕೆ ಬಂದಳು. "ಆಸ್ಪತ್ರೆಯಲ್ಲಿ ತುಂಬಾ ಗಲಾಟೆ ಇತ್ತೋ ಏನೋ ? ಹೊತ್ತಾಗೋಯ್ತು ಏಳಿ, ಎಲ್ಲಾ ಕೈಕಾಲು ತೊಳೆದುಕೊಂಡು ಬನ್ನಿ ಊಟಕ್ಕೆ" ಎಂದಳು.

ವಾಸಂತಿ ಅಡಿಗೆ ಕೆಲಸವೆಲ್ಲಾ ಮುಗಿಸಿ ಶುಭ್ರವಾಗಿ ಮುಖ ತೊಳೆದು ಲಕ್ಷಣ ವಾಗಿ ಹಣೆಗೆ ದೊಡ್ಡ ಕುಂಕುಮವನ್ನಿಟ್ಟಿದ್ದಳು. ಬಿಚ್ಚಿದ್ದ ಉದ್ದ ಕೂದಲನ್ನು ಎರಡಾಗಿ ಮಡಿಚಿ ಕುದುರೆ ಬಾಲದಂತೆ ರಿಬ್ಬನ್ ಕಟ್ಟಿದ್ದಳು. ತಿಳಿ ನೀಲಿ ವಾಯಿಲ್ ಸೀರೆ ಉಟ್ಟು ಅದಕ್ಕೆ ಹೊಂದುವ ಕಪ್ಪು ಜಾಕೀಟ್ ತೊಟ್ಟಿದ್ದಳು. ಕಿವಿಗೆ ಒಂದೇ ಮುತ್ತಿನ ರಿಂಗ್ ಹಾಕಿದ್ದರಿಂದ ಅವಳಿನ್ನೂ ಚಿಕ್ಕ ಹುಡುಗಿಯಂತೆ ಕಾಣುತ್ತಿದ್ದಳು. ಅವಳ ಹೊಳೆಯುವ ಕಣ್ಣು ಎಲ್ಲರನ್ನೂ ಆಕರ್ಷಿಸುತ್ತಿತ್ತು.

ದೇವಿಕಾ ಬೆರಗುಗಣ್ಣುಗಳಿಂದ ಅವಳನ್ನೇ ತದೇಕವಾಗಿ ನೋಡಿದಳು. ಸರಸ್ವತಮ್ಮನೂ ವಾಸಂತಿಯನ್ನು ನೋಡಿ "ಅತ್ತಿಗೇ ! ನೀನು ಅದೃಷ್ಟವಂತೆ. ನಿನ್ನ ಸೊಸೆ ಒಳ್ಳೆ ಲಕ್ಷ್ಮಿ ಇದ್ದ ಹಾಗಿದ್ದಾಳೆ. ನಾನು ಮದುವೆಯಲ್ಲಿ ನೋಡಿದ್ದು. ಆಗಲೇ 6–7 ವರ್ಷವಾಯಿತು. ಈಗಲೂ ಮದುವೆ ಹೆಣ್ಣು ಇದ್ದ ಹಾಗೇ ಇದ್ದಾಳೆ. ಅದು ಸರಿ....ಏಕೆ ಇನ್ನೂ ಮಕ್ಕಳಾಗಲಿಲ್ಲ?"

"ಅಲ್ಲ ನಿನ್ನ ಸೊಸೆ ಯಾವುದರಲ್ಲಿ ಕಮ್ಮಿಯಾಗಿದ್ದಾಳೆ ? ದೇವಿಕಾ ಎನ್ನುವುದಕ್ಕೆ ಸರಿಯಾಗಿ ಒಳ್ಳೆ ದೇವಿಯಂತೆಯೇ ಶಾಂತ–ಗಂಭೀರವಾಗಿದ್ದಾಳೆ, ಲಕ್ಷಣವಾಗಿದ್ದಾಳೆ" ಎಂದು ಭಾಗೀರಥಮ್ಮನವರು ಅಭಿಮಾನದಿಂದ ದೇವಿಕಾ ಕಡೆ ನೋಡಿದರು.

"ಏನು ಲಕ್ಷಣವೋ ನಾನಂತೂ ಒಳ್ಳೆಯ ಕಡೆ ಸಂಬಂಧವನ್ನು ಬೆಳೆಸಲಿಲ್ಲ" ಎಂದು ಸಿಡುಕಿನಿಂದ ಅಂದರು.

ವಾಸಂತಿಗೆ ಮನಸ್ಸು ಚುರುಕ್ ಎಂದಿತು. ಇದೇನೋ ಅಪಸ್ವರದಂತೆ ತೋರಿತು. ಪಾಪ ! ಸೊಸೆ ಎದುರಿಗೇ ಹೇಗೆ ಮಾತನಾಡಿದರು, ಎಂದುಕೊಂಡಳು.

ದೇವಿಕಾ ಹತ್ತಿರ ಹೋಗಿ "ಬಾ..., ದೇವಿಕಾ, ತುಂಬಾ ಹಸಿವಾಗಿರಬೇಕು. ತಟ್ಟೆ ಹಾಕುತ್ತೇನೆ" ಎಂದು ಒಳಗೆ ಹೋದಳು.

ಸರಸ್ವತಮ್ಮ "ನಾನು ಅನ್ನ ತಿಂದು ಯಾವ್ದೋ ಕಾಲವಾಯಿತು ಅತ್ತಿಗೆ, ಅನ್ನ ತಿಂದರೆ ಕರುಳು ನೋವು ಹೆಚ್ಚಾಗುತ್ತೆ. ನನಗೆ ಸ್ವಲ್ಪ ಅಕ್ಕಿ ತರಿ ಗಂಜಿ ಮಾಡಿಕೊಡ ಬೇಕು" ಅಂದರು.

ಹೌದಾ ; ಅದಕ್ಕೇನಂತೆ ಮಾಡಿದರಾಯಿತು. ಅನ್ನ ಇಲ್ಲದಕ್ಕೇ ಪಾಪ ; ಇಷ್ಟು ಇಳಿದು ಹೋಗಿದ್ದೀ.... ಎಂದು ಪರಿತಾಪದಿಂದ ಹೇಳಿದರು ಭಾಗೀರಥಮ್ಮ.

"ಲೇ.... ದೇವಿಕಾ ನಾವು ಅಕ್ಕಿ ತರಿ ತಂದಿದ್ದೀವಲ್ಲೇ....ತೆಗೆದು ಕೊಡುವುದಕ್ಕೂ ನಿನಗೆ ತೋಚಲ್ಲವೇ ?" ಎಂದು ಗದರಿ ಘರ್ಜಿಸಿದರು.

ದೇವಿಕಾ ಅತ್ತೆಮನೆಯಲ್ಲಿ ತಾನೇ ಸ್ವತಂತ್ರಿಸಿ ಒಂದು ಕೆಲಸಕ್ಕೂ ಹೋದವಳಲ್ಲ. ಅತ್ತೆ ಕಣ್ಣು ಬಿಟ್ಟರೆ ಗಡ-ಗಡ ನಡುಗುತ್ತಿದ್ದಳು. ಈಗ ಅತ್ತೆ ಹೇಳಿದ ಕೂಡಲೇ ಬುಟ್ಟಿಯಿಂದ ಅಕ್ಕಿತರಿಯ ಡಬ್ಬಿಯನ್ನು ತೆಗೆದು ವಾಸಂತಿ ಕೈಲಿ ಕೊಡಲು ಒಳಕ್ಕೆ ಹೋದಳು

ಒಂದೇ ನಿಮಿಷದಲ್ಲಿ ಅತ್ತೆಯ ದರ್ಪ ದೇವಿಕಳ ಸ್ಥಿತಿ ವಾಸಂತಿಗೆ ಅರ್ಥವಾಗಿ ಹೋಯಿತು.

"ಬಾ ದೇವಿಕಾ ಇಲ್ಲಿ ಕೊಡು. ಅಕ್ಕಿ ತರಿ ಗಂಜಿ ನಾನು ಮಾಡುತ್ತೇನೆ. ಬನ್ನಿ ನೀವೆಲ್ಲಾ ಊಟ ಮಾಡುವಿರಂತೆ" ಎಂದು ಅತ್ತೆ-ಮಾವ, ರವಿ ಎಲ್ಲರನ್ನೂ ಕರೆದಳು.

ಪರಮಶಿವಯ್ಯನವರು ತಂಗಿಯ ಯೋಗಕ್ಷೇಮ ವಿಚಾರಿಸಿ ಸ್ವಲ್ಪ ಹೊತ್ತು ಮಾತಾಡಿ ಊಟಕ್ಕೆ ಹೋದರು. ರವಿ ಊಟಕ್ಕೆ ಬಂದು ತಟ್ಟೆಯ ಮುಂದೆ ಕೂತ. ದೇವಿಕಾ ಎದುರಿಗೇ ಸಂಕೋಚದಿಂದ ಮೈಮುದುರಿ ಕುಳಿತಿದ್ದಳು. ಇವರೆಲ್ಲರ ಎದುರಿಗೆ ತನ್ನ ಅತ್ತಿಗೆಯನ್ನು ಸತಾಯಿಸುವುದು ಸರಿಯಲ್ಲ ಎಂದುಕೊಂಡು ಎದ್ದು ಅಡಿಗೆ ಮನೆಗೆ ಹೋದ.

"ಇಲ್ಲಿ ಕೊಡಿ ಅತ್ತಿಗೆ ನಿಮಗೆ ಸಹಾಯವಾಗಿ ನಾನು ಸ್ವಲ್ಪ ಬಡಿಸುತ್ತೇನೆ" ಎಂದು ಏನೋ ಒಂದು ನೆಪದಿಂದ ಮಾತಾಡಿಸಿದ.

ವಾಸಂತಿಗೆ ಒಳಗೊಳಗೇ ನಗು "ಸಧ್ಯ ರಾಯರಿಗೆ ನರಸಿಂಹಾವತಾರ ಹೋಗಿ ಕೃಷ್ಣಾವತಾರ ಬಂದಂತೆ ಕಾಣುತ್ತೆ. ಸಧ್ಯ ತಮ್ಮಿಂದ ಯಾವ ಸಹಾಯವೂ ಬೇಡ ಕುಳಿತು ಊಟ ಮಾಡಿದರೆ ಅದೇ ಸಹಾಯ" ಎಂದಳು.

ರವಿ ವಾಸಂತಿಯ ಮುಂದೆ ಮಗುವಾದ, ಇಲ್ಲ ಅತ್ತಿಗೆ, ನೀವು, ಅಮ್ಮ, ನಾನು ಆಮೇಲೆ ಊಟ ಮಾಡೋಣ ಎಂದು ಅತ್ತಿಗೆಯ ಭುಜವನ್ನು ಹಿಡಿದಲುಗಿಸಿ ತನ್ನ ರೂಮಿಗೆ ಹೊರಟು ಹೋದ.

ಪರಮಶಿವಯ್ಯನವರಿಗೆ ತಂಗಿಯ ಸೊಸೆಯ ಸಂಕೋಚ, ಭಯ ಎರಡು ಸ್ವಲ್ಪ ಅರ್ಥವಾಗಿತ್ತು. ಮೊದಲಿಂದಲೂ ತಂಗಿಯ ಗುಣಕ್ಕೂ ಇವರ ಗುಣಕ್ಕೂ ಅಜಗಜಾಂತರ ಅವಳ ಸ್ವಭಾವ ಒರಟು, ಹಟಮಾರಿ ಎಂಬುದು ಗೊತ್ತು.

ಪಾಪ, ಹುಡುಗಿ ಒಂದೇ ಸಂಕೋಚದಿಂದ ಮುದುಡಿ ಕುಳಿತಿದೆ ಎಂದುಕೊಂಡು, ಲೇ ಭಾಗೂ ನೀನೂ ಬಂದು ಬಿಡು, ಇನ್ನೇನು ವಾಸಂತಿ ಬಡಿಸುತ್ತಾಳೆ, ಎಂದರು.

ಭಾಗೀರಥಮ್ಮನೂ ಸರಸ್ವತಮ್ಮನೂ ಊಟದ ಮನೆಗೇ ಬಂದರು. ವಾಸಂತಿ ಗಂಜಿ ಮಾಡಿ ಸರಸ್ವತಮ್ಮನವರಿಗೆ ಕೊಟ್ಟಳು. ರವಿ ನೀನೂ ಬಾರೋ ಎಂದರು ಭಾಗೀರಥಮ್ಮ.

"ನಾನು ಓದುತ್ತಿದ್ದೇನೆ ಆಮೇಲೆ ಬರುತ್ತೇನೆ" ಅಂದ. ಭಾಗೀರಥಮ್ಮನವರಿಗೆ ಗೊತ್ತು, ಅತ್ತಿಗೆ ಬಂದ ಮೇಲೆ ಅವನ ವರಸೆ ಹೆಚ್ಚಾಗುತ್ತೆ ಎನ್ನುವುದು.

ಮಾರನೆಯ ದಿನ ವಾಸಂತಿ ಅವಳ ತೌರುಮನೆಗೆ ಹೋಗಿ ತಾಯಿಯೊಂದಿಗೆ ಮನೆಯ ಪರಿಸ್ಥಿತಿಯನ್ನು ಹೇಳಿದಳು. ನಾನಿನ್ನು ಇಲ್ಲಿರುವುದಕ್ಕಾಗುವುದಿಲ್ಲ ಅಮ್ಮಾ ಎಂದಳು.

"ಅನಸೂಯಮ್ಮ ಮಗಳಿಗೆ ಲಕ್ಷಣವಾಗಿ ಒಂದು ರೇಷ್ಮೆಸೀರೆ ರೌಕೆ ಖಣ ಇಟ್ಟು ಕುಂಕುಮ ಕೊಟ್ಟರು.

ವಾಸಂತಿ ಹೊರಟಿದ್ದಕ್ಕೆ ಇಂದಿರಾಗೆ ಅಳುವೇ ಬಂದು ಬಿಟ್ಟಿತು. ಹೋಗೇ ವಾಸಿ ಅಲ್ಲಿಯ ಸಂಭ್ರಮವೇ ನಿನಗೆ ಹೆಚ್ಚು. ಇನ್ನೊಂದು 15 ದಿನ ಇಲ್ಲಿದ್ದಿದ್ದರೆ ಏನಾಗಿ ಬಿಡುತ್ತಿತ್ತು ? ಎಂದು ಬಿಕ್ಕಿದಳು.

"ಅಳಬೇಡ ಇಂದೂ, ಆಗಾಗ ಬರುತ್ತೇನೆ ಸುಮ್ಮನಿರು ಒಂದೇ ಊರು, ಯಾವಾಗ ಬೇಕಾದರೂ ಬರಬಹುದು. ಪಾಪ, ನಮ್ಮತ್ತೆ ಕೈಲಿ ಆಗೋಲ್ಲ, ಅವರೆಲ್ಲ ಬಂದಿದ್ದಾರೆ ಯಾರು ಮಾಡುವವರು ? " ಎಂದು ಸಮಾಧಾನ ಹೇಳಿ ವಾಸಂತಿ ಹೊರಟಳು.

ಸರಸ್ವತಮ್ಮನಿಗೆ ಇನ್ನು ಒಂದು ವಾರ ಬಿಟ್ಟು ಆಪರೇಷನ್ ಮಾಡುವುದಾಗಿ ಡಾಕ್ಟರು ಹೇಳಿದಾರೆ ಎಂದರು.

ಸರಸ್ವತಮ್ಮನಿಗೆ ಮೈಸೂರಿನಲ್ಲಿ ಸ್ವಂತಮನೆ, ಗದ್ದೆ ಎಲ್ಲಾ ಇದೆ. ದೇವಿಕಾ ಗಂಡ ಶೇಖರ ಒಬ್ಬನೇ ಮಗ. ಸರಸ್ವತಮ್ಮನ ಗಂಡ ಹೈಸ್ಕೂಲ್ ಮೇಷ್ಟ್ರಾಗಿದ್ದರು. ಶೇಖರ ಹುಟ್ಟಿದ ಒಂದು ವರ್ಷಕ್ಕೆಲ್ಲಾ ಒಂದು ಅಪಘಾತದಲ್ಲಿ ಎರಡು ಕಾಲೂ ಕತ್ತರಿಸಿ ಹೋದವು. ಹೇಗೋ ಜೀವ ಮಾತ್ರ ಉಳಿಯಿತು. ಮೂಲೆಗೆ ಮುದುಪಾಗಿ ಉಳಿದರು. ಸರಿ, ಸರಸ್ವತಮ್ಮನದೇ ಮನೆಯ ಆಡಳಿತ, ಜವಾಬ್ದಾರಿ, ಒಂದೇ ಮಗು ಎನ್ನುವ ಮುದ್ದಿಗೆ ಶೇಖರನನ್ನು ಚೆನ್ನಾಗಿ ಬೆಳಸಿದರು.

ಶೇಖರ ಬುದ್ಧಿವಂತನಾಗಿ ಓದಿದ, ಬಳ್ಳಾರಿಯಲ್ಲಿ ಎಲೆಕ್ಟ್ರಿಕ್ ಆಫೀಸಿನಲ್ಲಿ ಕೆಲಸವೂ ಸಿಕ್ಕಿತು. ಆದರೆ ಅವನಿಗೆ ತಾಯಿಯೇ ಸರ್ವಸ್ವ. ತಾಯಿ ಇಟ್ಟ ಗೆರೆ ದಾಟಿ ನಡೆದು ಅಭ್ಯಾಸವಿಲ್ಲ.

ಮಗನಿಗೆ ಹೆಣ್ಣು ಕೊಡಲು ಬಂದಾಗ ಸರಸ್ವತಮ್ಮನವರು ನಿರ್ದಾಕ್ಷಿಣ್ಯವಾಗಿ ಕಂಡೀಷನ್ ಹಾಕುತ್ತಿದ್ದರು. ಹತ್ತು ಸಾವಿರ ವರದಕ್ಷಿಣೆ, ಸರಿಯಾಗಿ ವರೋಪಚಾರ ಕೊಡಬೇಕು ಎಂದು.

ದೇವಿಕಾ ತಂದೆ ಹಾಸನದವರು. ಏನೋ ಒಂದು ಬಟ್ಟೆ ಅಂಗಡಿ ಇಟ್ಟುಕೊಂಡು ಜೀವನ ಮಾಡುತ್ತಿದ್ದರು. ತಮ್ಮ ಪ್ರೀತಿಯ ಮಗಳು ಹೇಗಾದರೂ ಸುಖವಾಗಿದ್ದರೆ ಸರಿ ಎಂದು ಸರಸ್ವತಮ್ಮನವರ ಎಲ್ಲಾ ನಿಬಂಧನೆಗೆ ಒಪ್ಪಿಕೊಂಡು ಮದುವೆ ಮಾಡಿದರು. ಆದರೆ 5 ಸಾವಿರ ರೂಪಾಯಿ ಮದುವೆಯಲ್ಲಿ ಕೊಟ್ಟು ಇನ್ನೂ ಬಾಕಿ 5 ಸಾವಿರ ರೂಪಾಯಿ ಸ್ವಲ್ಪ ನಿಧಾನಿಸಿ ಕೊಡುತ್ತೇವೆ ಎಂದರು.

ಆಯಿತು, ಮದುವೆಯ ದಿನವೇ ಎಲ್ಲಾ ಶಾಸ್ತ್ರವನ್ನೂ ಮುಗಿಸಿ ಸೊಸೆಯನ್ನು ಮನೆ ತುಂಬಿಸಿಕೊಂಡರು. ಮೈಸೂರಿಗೆ ಕರೆತಂದದ್ದಾಯಿತು. ದೇವಿಕಾ ಲಕ್ಷಣವಾದ ಹುಡುಗಿ. ಉದ್ದವಾದ ನಿಲುವು, ಮಿದುವಾದ ಮೈಕಟ್ಟು, ನಾಗರಂತೆ ನಲಿದಾಡುವ ಉದ್ದವಾದ ಜಡೆ, ಅತೀ ಬಿಳುಪಲ್ಲದ ಮೈಬಣ್ಣ, ಅವಳು ಏನು ಅಲಂಕಾರವನ್ನು ಮಾಡಿಕೊಳ್ಳದಿದ್ದರೂ ಗಂಭೀರವಾಗಿ ನಡೆಯುವಾಗ ಮತ್ತೊಮ್ಮೆ ನೋಡೋಣ ಅನ್ನಿಸುತ್ತಿತ್ತು.

ಶೇಖರನ ಜೊತೆಯಲ್ಲಿ ಬಳ್ಳಾರಿಗೆ ಸೊಸೆಯನ್ನು ಕಳುಹಿಸಲಿಲ್ಲ ಸರಸ್ವತಮ್ಮ ವರದಕ್ಷಿಣೆಯ ಭೂತ ಅವರನ್ನು ಆವರಿಸಿತ್ತು. ಅವರಿಂದ ಪೂರ್ತಾ ವರದಕ್ಷಿಣೆ ಬಂದ ಹೊರ್ತೂ ಅವರ ಮಗಳು ಬಾಳುವುದನ್ನು ಕಾಣಿಸುತ್ತೇನೆ, ಎಂದು ಹಟ ತೊಟ್ಟರು.

ಮಗನಿಗೆ, ಅವಳು ಸ್ವಲ್ಪ ದಿನ ಇಲ್ಲಿರಲಿ, ನೀನು ಹೋಗೋ ಎಂದು ಹೇಳಿ ಅವನೊಬ್ಬನನ್ನೇ ಕಳುಹಿಸಿದರು. ತಾಯಿ ಮಾತು ಶಿರಸಾವಹಿಸಿದ ಶೇಖರ. ವರ್ಷವಾಯಿತು. ಅಷ್ಟರಲ್ಲಿ ಶೇಖರ ಎರಡು ಬಾರಿ ಬಂದು ತಾಯಿಯ ಘರ್ಜನೆಗೆ ಹೆದರಿ ವಾಪಸ್ಸು ಹೋದ.

ಸರಸ್ವತಮ್ಮನವರ ಕಟ್ಟಪ್ಪಣೆ. ಪೂರ್ತಿ ವರದಕ್ಷಿಣೆ ಹಣ ಬರುವವರೆಗೂ ಅವಳು ಇಲ್ಲೇ ಬಿದ್ದಿರ್ಲಿ ಎಂದರು. ಅದೇ ರೀತಿ ಬೀಗರಿಗೂ ತಿಳಿಸಿದರು.

ತಾಯಿಯೆಂದು ಗೌರವಿಸುವುದು ಸರಿ, ಆದರೆ ಮದುವೆ ಮಾಡಿಬಿಟ್ಟು ತನ್ನನ್ನು ಈ ರೀತಿ ಗೋಳಾಡಿಸುತ್ತಿರುವುದು ಇದು ತಾಯಿಯ ಪ್ರೀತಿಯೇ ? ಎಂದು ಮನ ನೊಂದು ಶೇಖರ ಊರಿಗೆ ಹೋದ.

ಹೆಣ್ಣು ಕರುಣೆಯ ಸಾಕಾರ ಮೂರ್ತಿಯಾಗಿರಬೇಕಾದವಳು, ಹೆಣ್ಣು ತಾಳ್ಮೆಯ ಪ್ರತೀಕ, ತ್ಯಾಗದ ಗಣಿ, ವಾತ್ಸಲ್ಯ ಮೂರ್ತಿ, ಹೀಗೆಲ್ಲಾ ವರ್ಣಿತವಾಗಿರುವ ನಾರಿ ಮಾರಿಯಾಗಿ ಹೆಣ್ಣು ಹೆಣ್ಣನ್ನೇ ಕಾಡುವುದಾದರೆ ಆ ಗುಣಗಳಿಗೆಲ್ಲಾ ಮತ್ತೆಲ್ಲಿ ಸ್ಥಾನ ?

ಇಂತಹ ಧನ ಪಿಶಾಚಿಯರಾದ ಕೆಲವು ಕ್ರೂರಿ ಹೆಣ್ಣುಗಳಿಂದ ಎಷ್ಟು ಸಂಸಾರ ನಾಶವಾಗಿದೆಯೋ ? ಎಷ್ಟು ನವ ದಂಪತಿಗಳು ನಕ್ಕು–ನಲಿಯಬೇಕಾದ ಕಾಲದಲ್ಲಿ ನೊಂದು ಬೆಂದಿದ್ದಾರೋ ? ವರದಕ್ಷಿಣೆಯ ಪಿಪಾಸೆಗೆ ಎಷ್ಟು ಹೆಣ್ಣು ಆಹುತಿಯಾಗಿ ದೆಯೋ ? ನಮ್ಮ ಸಮಾಜವಾಗಲೀ ಸರ್ಕಾರವಾಗಲೀ ಈ ವರದಕ್ಷಿಣೆ... ಎಂಬ ಹೆಮ್ಮಾರಿಯನ್ನು ಬುಡ ಸಹಿತ ಕೀಳಲಾರದಾಗಿದೆ.

ಇಂತಹ ಒಂದು ಧನಪಿಶಾಚಿ ಸರಸ್ವತಮ್ಮನ ಕೈಯ್ಯಲ್ಲಿ ಸಿಕ್ಕಿ, ದೇವಿಕಾ ನೊಂದು ಆಸೆ–ಆಕಾಂಕ್ಷೆಯನ್ನೆಲ್ಲಾ ತನ್ನೊಳಗೇ ಅಡಗಿಸಿ ದಿನ ನಿತ್ಯದ ಬೈಗಳು ಬಹಣೆಗೆ ಹೊಂದಿ ಕೊಂಡಳು.

ಪಾಪ ; ಅತ್ತ ತೌರುಮನೆಯವರ ಸಂಕಟವನ್ನು ನೋಡುವುದೇ ? ಇತ್ತ ಅತ್ತೆಯ ಕಾಟವನ್ನು ಸಹಿಸುವುದೇ ? ಹೀಗಾಗಿ ಮಂಕು ಬಡಿದಂತೆ ಆಗಿದ್ದಳು. ಅವಳ ಹೊಳಪಾಗಿರಬೇಕಾದ ಕಣ್ಣುಗಳು ಕಾಂತಿಹೀನವಾಗಿದ್ದವು.

ದೇವಿಕಾ ತಂದೆ ಬೀಗಿತ್ತಿಯನ್ನು ತೃಪ್ತಿಪಡಿಸಿ ಮಗಳ ಸಂಸಾರ ಕೂಡಿಸಲು ಹಣ ಹೊಂಚುವುದರಲ್ಲೇ ಅರೆ ಜೀವವಾಗಿ ಅಸು ನೀಗಿದರು. ಅವರ ಮನೆ ವರಮಾನ ಪೂರ್ತಿ ನಿಂತು ಹೋಯಿತು.

ಇತ್ತ ದೇವಿಕಾಗೆ ಅತ್ತೆಯಿಂದ ಮೂದಲಿಕೆಯೂ ಹೆಚ್ಚಾಯಿತು. ಪಾಪ ; ದೇವಿಕಾಳ ಮಾವ ಕಾಲಿಲ್ಲದ ಅಶಕ್ತರು, ಆವರು ಸರಸ್ವತಮ್ಮನವರ ಅಡಿಯಾಳಿನಂತೆ ಸುಮ್ಮನೆ ಬಿದ್ದಿರುತ್ತಿದ್ದರು. ಅವರು ಮಗ ಸೊಸೆಯ ಅಗಲಿಕೆಯನ್ನು ನೋಡಲಾರದೆ ಕೊರಗುತ್ತಿದ್ದರು.

ಈ ಪರಿಸ್ಥಿತಿಯಲ್ಲಿ ಸರಸ್ವತಮ್ಮನಿಗೆ ಕರುಳುಬೇನೆ ಶುರುವಾಯಿತು. ಮೈಸೂರಿ ನಲ್ಲಿ ವಾಸಿಯಾಗುವುದಿಲ್ಲವೆಂದು ಬೆಂಗಳೂರಿಗೆ ಸೊಸೆಯನ್ನೂ ಕರೆದುಕೊಂಡು ಬಂದಿದ್ದರು.

ದೇವಿಕಾ ಪರಿಸ್ಥಿತಿಯನ್ನು ನೋಡಿ ವಾಸಂತಿಗೆ ತುಂಬಾ ಸಂಕಟವಾಯಿತು. ಅವಳನ್ನು ತನ್ನ ಜೊತೆ–ಜೊತೆಯಲ್ಲಿ ಓಡಾಡಿಸಿಕೊಂಡು ಆತ್ಮೀಯವಾಗಿ ಮಾತಾಡಿಸು ತ್ತಿದ್ದಳು. ದೇವಿಕಾ ಮುಖದಲ್ಲಿ ಸ್ವಲ್ಪ ಗೆಲುವು ಕಾಣುವಂತಾಯಿತು.

ಆ ದಿನ ಮಧ್ಯಾಹ್ನ ಪರಮಶಿವಯ್ಯನವರು ತಂಗಿಯ ಕೈಯ್ಯಲ್ಲಿ ಮಾತಾಡುತ್ತಾ "ಏನಮ್ಮಾ ಸರಸ್ವತಿ, ಅಲ್ಲಿ ಶೇಖರ ಒಬ್ಬನೇ ಊಟ ತಿಂಡಿಗೆ ಒದ್ದಾಡುತ್ತಾನೆ, ಏಕೆ ? ಹೆಂಡತಿಯನ್ನು ಕರೆದುಕೊಂಡು ಹೋಗಬಾರದೇ ?" ಎಂದರು.

"ಅಯ್ಯೋ ! ಅಣ್ಣಾ.... ಅದೊಂದು ಕತೆ ನಿನಗೆ ಗೊತ್ತಿಲ್ಲ, ಸುಮ್ಮನಿರು ದರಿದ್ರದ ಮನೆ ಹೆಣ್ಣನ್ನು ತಂದೆ. ಅವರು ಮಾತಿಗೆ ತಪ್ಪುವ ಪಾಪಿಗಳು" ಎಂದು ಸಿಡುಕಿದ ತಂಗಿಯನ್ನು ನೋಡಿ ಪರಮಶಿವಯ್ಯನವರಿಗೆ ಕೋಪ ನೆತ್ತಿಗೇರಿತು.

ಏನಮ್ಮಾ ನೀ ಹೇಳೋ ಮಾತು ? ಅವರನ್ನು ಕಟ್ಟಿಕೊಂಡು ನಮಗೇನು ? ನಮ್ಮ ಮನೆಗೆ ಬಂದಿರುವ ಹುಡುಗಿ ನಮಗೆ ಸೇರಿದ ವಸ್ತು. ಅದನ್ನು ನಾವು ಚೆನ್ನಾಗಿ ನೋಡಿಕೊಳ್ಳಬೇಕು. ನೋಡು, ನೀನು ತುಂಬಾ ಅನ್ಯಾಯ ಮಾಡುತ್ತಿದ್ದೀ ಎಂದು ಕೋಪದಿಂದ ಹೇಳಿದರು.

"ಹೌದಣ್ಣಾ....ನಿನಗೂ ನಾನು ಕೆಟ್ಟವಳು ಅನ್ನಿಸಿತೇ ?" ಎಂದು ಆಷಾಢಭೂತಿ ಕಣ್ಣೀರು ಹಾಕಿ ಒರೆಸಿಕೊಂಡಳು ಸರಸ್ವತಮ್ಮ.

ಅಷ್ಟರಲ್ಲಿ ಇನ್ನು ಅಣ್ಣ ತಂಗಿಗೆ ಏನಾದರೂ ವಾಗ್ವಾದ ನಡೆದು ಜಗಳ ಹತ್ತಿ ಕೊಂಡೀತು. ನಮಗ್ಯಾಕೆ ? ಎಂದು ಭಾಗೀರಥಮ್ಮ ಮಧ್ಯೆ ಬಂದು "ಅದೋ ನೋಡಿ, ನಿಮ್ಮನ್ನು ಹುಡುಕಿಕೊಂಡು ಯಾರೋ ಬಂದಿದಾರೆ" ಎಂದರು.

ಪರಮಶಿವಯ್ಯನವರೂ ಹೊರಕ್ಕೆ ಹೊರಟು ಹೋದರು. ಅಷ್ಟಕ್ಕೇ ಮಾತು ನಿಂತಿತು.

ಮಾರನೆಯ ದಿನವೇ ಸರಸ್ವತಮ್ಮನನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದರು. ಒಂದು ವಾರ ಕಳೆದು ಆಪರೇಷನ್ ಮಾಡುವುದಾಗಿ ಡಾಕ್ಟರು ಹೇಳಿದ್ದರು. ಆ ಸಮಯಕ್ಕೆ ಮಗ ಬಂದಿರಲಿ ಎಂದು ಕಾಗದ ಬರೆಸಿ ಶೇಖರನನ್ನು ಕೂಡಲೇ ಹೊರಟು ಬರಬೇಕೆಂದು ತಿಳಿಸಿದರು.

ಈಗೀಗ ದೇವಿಕಾ ಮನೆಯಲ್ಲಿ ಸ್ವಲ್ಪ ಧೈರ್ಯವಾಗಿ ನಗು ನಗುತ್ತಾ ಮಾತನಾಡು ತ್ತಿದ್ದಳು. ಬಂದ 7–8 ದಿನಗಳಲ್ಲಿಯೇ ವಾಸಂತಿ ಆ ಮನೆಯ ಸೊಸೆಯಾಗಿ ಎಷ್ಟು ಸ್ವತಂತ್ರಳಾಗಿದ್ದಾಳೆ ? ಮನೆಯವರೆಲ್ಲಾ ಅವಳನ್ನು ಎಷ್ಟು ಓಲೈಸುತ್ತಾರೆ ? ಗಂಡ ಎಷ್ಟು ಪ್ರೀತಿಸುತ್ತಾರೆ ? ಇವೇ ಅವಳಿಗೆ ಒಂದು ಅಪೂರ್ವ ದೃಶ್ಯವಾಗಿ ಕಾಣುತ್ತಿತ್ತು. ತನ್ನ ಬಾಳು ಹೋಳಾಗಿದೆಯೆಂದು ಆಗ ಅವಳಿಗೆ ಅನಿಸುತ್ತಿತ್ತು.

ಆ ದಿನ ದೇವಿಕಾ ತರಕಾರಿ ಹೆಚ್ಚುತ್ತಿದ್ದಳು. ವಾಸಂತಿ ಅವಳ ಪಕ್ಕ ಕುಳಿತು "ದೇವಿಕಾ.... ನೀನು ಎಷ್ಟು ಚೆನ್ನಾಗಿದ್ದೀ.... ನಿನ್ನನ್ನು ನೋಡಿದರೆ ನನಗೇ ಆಸೆ ಯಾಗುತ್ತೆ. ನಿನ್ನ ಯಜಮಾನರು ನಿನ್ನನ್ನು ಬಿಟ್ಟು ಹೇಗಿದಾರೋಮ್ಮ ?" ಎಂದಳು.

ದೇವಿಕಾ ಸುಮ್ಮನೆ ನಾಚಿಕೆಯಿಂದ ತಲೆ ತಗ್ಗಿಸಿದಳು. ಅವಳ ಗಂಡನ ಜ್ಞಾಪಕ ದಿಂದಲೇ ಅವಳ ಮುಖವೆಲ್ಲಾ ಕೆಂಪಾಯಿತು.

"ಹೇಳು... ದೇವಿಕಾ....ನಿನಗೆ ಅವರ ಬಳಿ ಹೋಗಲು ಆಸೆಯಿಲ್ಲವೇ ?" ಎಂದಳು ವಾಸಂತಿ ದೇವಿಕಾಳ ಗಲ್ಲ ಹಿಡಿದು ತಲೆ ಎತ್ತಿ.

ತನ್ನನ್ನು ಇಷ್ಟು ಅಕ್ಕರೆಯಿಂದ ಮಾತಾಡಿಸುವವರು ಯಾರಿದ್ದರು ? ವಾಸಂತಿ ತನ್ನ ಆತ್ಮೀಯಳು, ನನ್ನ ದುಃಖವನ್ನು ಅವಳಿಗಲ್ಲದೆ ಇನ್ಯಾರಿಗೆ ಹೇಳಲಿ ? ಎಂದು

ಕೊಂಡು. "ಇಷ್ಟವಿದೆ. ಆಸೆ ಇದೆ. ಆದರೆ.... ಅವರು ಕಳುಹಿಸಬೇಕಲ್ಲಾ" ಎಂದು ತರಕಾರಿಯ ಹೋಳನ್ನು ತಟ್ಟೆಗೆ ತುಂಬಿದಳು.

"ಇವರೇನು ಕಳುಹಿಸುವುದು ದೇವಿಕಾ ; ನಿನ್ನ ಗಂಡ ಬಂದಾಗ ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆ ಎಂದು ಹೊರಡು."

ದೇವಿಕಾ ಬೆಚ್ಚಿ ನಡುಗಿದಳು. ಮತ್ತೆ ಸ್ವಲ್ಪಹೊತ್ತು ಏನೂ ಹೇಳಲಾರದೆ ತೊಳಲಾಡಿ ಅಕ್ಕಾ ! ನಿಮಗೆ ಗೊತ್ತಿಲ್ಲ.... ಅಷ್ಟು ಹೇಳಿದರೆ ಆಯಿತು. ನನ್ನ ಜೀವವನ್ನೇ ತೆಗೆದು ಬಿಡುತ್ತಾರೆ.

"ಯಾರು ನಿನ್ನ ಅತ್ತೆಯೋ ? ಗಂಡನೋ? "

ಪಾಪ, ಅವರು ಏನೂ ಹೇಳುವುದಿಲ್ಲ ಆದರೆ ತಾಯಿಗಾಗಿ ಬಹಳ ಹೆದರುತ್ತಾರೆ.

"ಥೂ..ನೀನು ಎಂಥಾ ಪೆದ್ದು ಹುಡುಗಿ, ನಿನ್ನಗಂಡ ನಿನ್ನನ್ನು ಪ್ರೀತಿಸಿದ ಮೇಲೆ ರಾತ್ರಿ ನಿನ್ನ ಬಳಿ ಮಲಗಿದಾಗ ಅವರನ್ನು ಒಲಿಸಿ ಒಪ್ಪಿಸು "

ದೇವಿಕಾ ತಲೆಯನ್ನು ಪೂರಾ ತಗ್ಗಿಸಿದಳು. ಕಣ್ಣಿನಿಂದ ನೀರು ತಟ-ತಟನೆ ಈಳಿಗೆ ಮಣೆಯ ಮೇಲೆ ಬೀಳುತ್ತಿತ್ತು.

ವಾಸಂತಿಗೆ ಗಾಬರಿಯಾಯಿತು. "ಏಕೆ ದೇವಿಕಾ ನಾನೇನು ನಿನ್ನ ಮನಸ್ಸು ನೋಯಿಸಿದೆನಾ ? " ಅಂದಳು.

ದೇವಿಕಾ ಏನು ಉತ್ತರವನ್ನೂ ಕೊಡದೆ ಮುಖಕ್ಕೆ ಸೆರಗು ಮುಚ್ಚಿ ಬಿಕ್ಕಿ-ಬಿಕ್ಕಿ ಅತ್ತಳು.

ವಾಸಂತಿ ಅವಳ ತಲೆಯನ್ನು ಭುಜಕ್ಕೆ ಒರಗಿಸಿಕೊಂಡು ಅವಳನ್ನು ಸಮಾಧಾನ ಪಡಿಸಿದಳು. "ಹೇಳು ದೇವಿಕಾ, ನಾನು ನಿನ್ನ ಅಕ್ಕ ಅಂತ ತಿಳಿ, ಧೈರ್ಯವಾಗಿ ಹೇಳು ಏನು ಕಷ್ಟ ನಿನಗೆ ?"

ದೇವಿಕಾ ಬಿಕ್ಕುತ್ತಾ...."ವರದಕ್ಷಿಣೆ ಬಾಕಿ ಐದು ಸಾವಿರ ಕೊಡುವವರೆಗೂ ನಾವಿಬ್ಬರೂ ದೂರ-ದೂರವೇ ಇರಬೇಕೆಂದು ಕಟ್ಟಪ್ಪಣೆ ಮಾಡಿದ್ದಾರೆ.

ವಾಸಂತಿಗೆ ಬಲು ಸಂಕಟವಾಯಿತು. ಎಂತಹ ಪಾಪಿ.... ಆ ಅತ್ತೆ ಎನ್ನುವ ರಾಕ್ಷಸಿ ? ತನ್ನ ಮಗನೇ ಸುಖವಾಗಿರುವುದನ್ನು ಸಹಿಸದ ಇವಳು ತಾಯಿಯೇ ? ಎನ್ನಿಸಿತು.

"ನಿನ್ನ ಗಂಡ ಬಂದಾಗಲಾದರೂ ನೀವಿಬ್ಬರೂ ಪ್ರೀತಿಯಿಂದಿರುವುದಿಲ್ಲವೇ ?"

"ನಾವಿಬ್ಬರೂ ಮಾತಾಡಲು ಅವಕಾಶವೇ ಕೊಡುವುದಿಲ್ಲ, ನಮ್ಮ ಅತ್ತೆ".

"ಹೋಗಲಿ, ರಾತ್ರಿ ?"

"ರಾತ್ರಿಯೂ ಅವರೊಟ್ಟಿಗೆ ನಾನು ಮಲಗುವಂತಿಲ್ಲ."

"ನಮ್ಮತ್ತೆಯ ಪಕ್ಕದಲ್ಲಿ," ಎಂದು ಹೇಳಿ ಸಂಕೋಚದಿಂದ ತಲೆ ತಗ್ಗಿಸಿದಳು ದೇವಿಕಾ.

ವಾಸಂತಿ ರೋಷದಿಂದ "ಇಂಥಾ ರಾಕ್ಷಸ ಹೆಂಗಸು ನಿಜವಾಗಿಯೂ ಬದುಕಿರ ಬಾರದು. ಈ ಆಪರೇರ್ಷನಲ್ಲಿ ಅವರು ಸತ್ತರೇ ಕ್ಷೇಮ" ಎಂದು ಸಂಕಟ ತಡೆಯ ಲಾರದೆ ಅಂದಳು.

"ಅಕ್ಕಾ ; ಸಧ್ಯ ಈ ಮಾತು ಅವರ ಕಿವಿಗೆ ಬಿದ್ದರೆ ಆಯಿತು, ಮೊದಲು ನನ್ನನ್ನು ಸಾಯಿಸುತ್ತಾರೆ".

"ಥೂ....ನಿನ್ನ ಗಂಡನಿಗೆ ಸ್ವಲ್ಪವೂ ಧೈರ್ಯವಿಲ್ಲ" ಎಂದಳು ವಾಸಂತಿ.

"ಧೈರ್ಯ ಇದೆ ಅಕ್ಕಾ ; ಆದರೆ ಅವರದ್ದು ಏನೂ ನಡೆಯುವುದಿಲ್ಲ. ಒಂದು ಸಲ ಒಂದು ವಾರ ರಜಾ ಹಾಕಿ ಮೈಸೂರಿಗೆ ಬಂದರು. ನನ್ನೊಂದಿಗೆ ಮಾತನಾಡಲು ಒಂದು ದಿನವೆಲ್ಲಾ ಹೊಂಚು ಹಾಕಿದರು. ಉ....ಹುಂ....ಸಾಧ್ಯವಾಗಲಿಲ್ಲ. ಅವರ ಮುಂದೆ ನಾನು ಸುಳಿದಾಡಿದರೇ....ಮಾಯಗಾತಿ ! ಅವನನ್ನು ಬಲೆಗೆ ಹಾಕಿಕೊಂಡು ಓಡಬೇಕೆಂದಿದ್ದೀಯೇನೇ ? ನನ್ನ ಮಗ ಅಂಥಾ ಹೆಣ್ಣಿಗೆ ಬಾಯ್ ಬಿಡುವವನಲ್ಲ ಕಣೇ, ಆ ರೂಮಿನ ಮೂಲೆಯಲ್ಲಿ ಸುಮ್ಮನೆ ಬಿದ್ದಿರು, ಅವನು ಊರಿಗೆ ಹೋಗುವವರೆಗೂ, ಎಂದು ಅವರೆದುರಿಗೇ ಚೆನ್ನಾಗಿ ಬೈದರು ನಮ್ಮತ್ತೆ".

"ನನಗೆ ತುಂಬಾ ಅವಮಾನವಾದಂತಾಗಿ ಅತ್ತ ಸುಳಿಯಲೂ ಇಲ್ಲ. ತಾಯಿ ಮಗ ಏನೇನೊ ಮಾತಾಡಿಕೊಳ್ಳುತ್ತಿದ್ದರು. ನನಗೆ ಹೊಟ್ಟೆಯಲ್ಲಿ ತಳಮಳಿಸುತ್ತಿತ್ತು. ಅಯ್ಯೋ ಅವರಿಗೆ ನನ್ನ ಮೇಲಿರುವ ಪ್ರೀತಿಯನ್ನೂ ಈಕೆ ತಪ್ಪಿಸುತ್ತಾಳಲ್ಲಾ ಎಂದು.

ನಮ್ಮ ಅತ್ತೆ ಏನೋ ಕೆಲಸದಿಂದ ಪಕ್ಕದ ಮನೆಗೆ ಹೋಗಿದ್ದರು. ನಮ್ಮವರು ಮನೆಯಲ್ಲಿಯೇ ಇದ್ದರು. ಮೆಲ್ಲನೆ ಅತ್ತಿತ್ತ ನೋಡಿ ನನ್ನ ರೂಮಿಗೆ ಬಂದರು. ನನಗೆ ತಕ್ಷಣ ಗಾಬರಿಯಾಯಿತು. ಪಿಸುಮಾತಿನಲ್ಲಿ "ದೇವಿಕಾ" ಎಂದು ನನ್ನ ಹತ್ತಿರ ಬಂದು ತಮ್ಮ ಎರಡು ತೋಳನ್ನೂ ನನ್ನ ಸುತ್ತ ಬಳಸಿ ನನ್ನ ಮುಖದ ಮೇಲೆ ಮುಖ ಇಟ್ಟರು.

ನಾನು ಭಯದಿಂದ ನಡುಗುತ್ತಿದ್ದೆ. ಇದ್ದಕ್ಕಿದ್ದಂತೆ ಅವರು ಬಂದು ಆಲಂಗಿಸಿದ್ದು ನನಗೆ ಆಶ್ಚರ್ಯವನ್ನುಂಟುಮಾಡಿತ್ತು.

ಅವರ ಕಿವಿಯ ಬಳಿ ನನ್ನ ಬಾಯನ್ನು ತಂದು "ಅಮ್ಮ ಇಲ್ಲವೇ" ಎಂದು ಪಿಸು ಗುಟ್ಟಿದೆ.

"ಅಮ್ಮ ಇಲ್ಲ.... ನನ್ನ ಮೇಲೆ ಕೋಪವಾ ?" ನಾನು ಇಲ್ಲ ಎಂದು ಹೇಳುವು ದಕ್ಕೆ ಅವಕಾಶವೇ ಕೊಡದೆ ಒಳ್ಳೆ ಆವೇಶ ಬಂದವರಂತೆ ನನ್ನನ್ನು ತಮ್ಮ ಎದೆಯಲ್ಲಿ

ಹುದುಗಿಸಿಕೊಂಡು ನನ್ನ ಮೈಯ ಎಲ್ಲಾ ಭಾಗದಲ್ಲಿಯೂ ತಮ್ಮ ತುಟಿಯನ್ನು ಒತ್ತಿ ಒತ್ತಿ ಮುದ್ದಿಸಿದರು.

ನನಗೆ ಎಷ್ಟೋ ಧೈರ್ಯ ಬಂದಂತಾಯಿತು. ನನಗೆ ಸ್ವರ್ಗ ಸಿಕ್ಕಿದಷ್ಟು ಆನಂದ ವಾಯಿತು. ಅವರ ಎದೆಯಲ್ಲಿ ಮುಖವಿರಿಸಿ ಅತ್ತುಬಿಟ್ಟೆ. ಅವರನ್ನು ಅಗಲಿರುವು ದಕ್ಕೆ ನನ್ನಿಂದ ಸಾಧ್ಯವೇ ಇಲ್ಲ ಎಂಬ ದುಃಖ.

ತಮ್ಮ ಷರಟಿನ ತುದಿಯಿಂದ ಕಣ್ಣೊರೆಸಿದರು. "ಅಳಬೇಡ ದೇವಿಕಾ, ನಾನು ನಿನ್ನ ಕೈಬಿಡುವುದಿಲ್ಲ...." ಎಂದರು.

"ಈ ಸಲ ನಾನೂ ನಿಮ್ಮ ಜೊತೆ ಬಂದು ಬಿಡುತ್ತೇನೆ. ಹೇಗಾದರೂ ಮಾಡಿ ಕರದುಕೊಂಡು ಹೋಗಿ"

"ಅದಕ್ಕೇ ನಾನು ಬಂದದ್ದು ದೇವಿಕಾ...."

ಇಬ್ಬರೂ ಆಂಲಿಗನದಲ್ಲಿ ಮೈ ಮರೆತಿದ್ದೆವು. ರೂಮಿನ ಬಾಗಿಲು ಮುಂದೆ ಮಾಡಿತ್ತು.

ಸರಸ್ವತಮ್ಮ ಮೆಲ್ಲನೆ ಸದ್ದಿಲ್ಲದೆ ಬಂದು ರೂಮಿನೊಳಗೆ ಬಗ್ಗಿ ನೋಡಿ ದರು. ಅಲ್ಲಿಯ ದೃಶ್ಯ ಅವರನ್ನು ವಿಸ್ಮಯರನ್ನಾಗಿ ಮಾಡಿತು. ಇಬ್ಬರೂ ತನಗೆ ಎಂಥಾ ಮೋಸ ಮಾಡುತ್ತಿದ್ದಾರೆ ? ಎಂದು ಕೋಪ ನೆತ್ತಿಗೇರಿತು. ಕಾಳಿ ಅವತಾರ ತಾಳಿದರು.

"ಅಯ್ಯೋ.... ಅಯ್ಯೋ.... ಪಾಪಿಗಳಾ, ನಾನಿಲ್ಲದ ಹೊತ್ತೇ ಕಾದಿದ್ದಿರಾ ?" ಎಂದು ಘರ್ಜಿಸಿದರು.

ನಾವು ಇಬ್ಬರೂ ಸಿಡಿಲೆರಗಿದಂತೆ ಬೆಚ್ಚಿದೆವು. ಇಬ್ಬರೂ ದೂರ–ದೂರ ಸರಿದು ನಿಂತೆವು.

"ನನ್ನ ಮಾತನ್ನು ನಡೆಸದಂಥಾ ಮಗ, ನೀನು ನನ್ನ ಮಗನೇ ಅಲ್ಲ. ನಿನ್ನನ್ನು ಸಾಕಿ ದೊಡ್ಡವನನ್ನಾಗಿ ಮಾಡಿದ್ದಕ್ಕೆ ಇದೇ ನಿನ್ನ ನಿಯತ್ತು" ಎಂದೆಲ್ಲಾ ಮಗನನ್ನು ತರಾಟೆಗೆ ತೆಗೆದುಕೊಂಡರು.

ನೀನು ಅವನನ್ನು ಮರುಳು ಮಾಡುತ್ತಿದ್ದೀಯಾ; ಮೂದೇವಿ, ಮೊದಲು ನಾಳೆ ನಿಮ್ಮಅಪ್ಪನ ಮನೆಗೆ ಹೋಗು. 5 ಸಾವಿರ ತೆಗೆದುಕೊಂಡು ಬಾ....ಎಂದೆಲ್ಲಾ ನನ್ನನ್ನು ಬೈದರು.

ಅವರು ಒಂದು ವಾರ ಇರಬೇಕೆಂದು ಬಂದವರು ಅಮ್ಮನ ಆಜ್ಞೆಯಿಂದಾಗಿ ಮಾರನೆಯ ದಿನವೇ ಪ್ರಯಾಣ ಮಾಡಿಬಿಟ್ಟರು.

ನನ್ನನ್ನು ತೌರಿಗೆ ಕಳುಹಿಸಿದರೆ ಇಲ್ಲಿ ನಮ್ಮ ಮಾವನವರ ಸೇವೆ ಮಾಡುವವರು ಯಾರು ? ಅದಕ್ಕಾಗಿ "ಮೂದೇವಿ, ನೀನೆಲ್ಲಿ ಈ ಮನೆಯಿಂದ ಹೋಗುತ್ತೀ ? ಇಲ್ಲೇ ಬಿದ್ದಿರು" ಎಂದರು.

"ನೋಡಿದೆಯಾ ಅಕ್ಕ ನನ್ನ ಅದೃಷ್ಟ ಹೇಗಿದೆ?"ಎಂದು ಕಣ್ಣೀರಿಟ್ಟಳು ದೇವಿಕಾ.

"ನಮ್ಮ ಸಮಾಜ ಕೆಟ್ಟರೆ ಆಡಿಕೊಳ್ಳುತ್ತದೆಯೇ ಹೊರತು ಅದನ್ನು ಸರಿಪಡಿಸುವ ಗೋಜಿಗೆ ಹೋಗುವುದಿಲ್ಲ ದೇವಿಕಾ, ನೋಡು ನಿಮ್ಮತ್ತೆ ಮಾಡುತ್ತಿರುವುದು ತಪ್ಪು ಎಂದು ಯಾರಾದರೂ ಆಕೆಗೆ ಹೇಳಿ ತಿದ್ದುತ್ತಾರೆಯೇ ? ಇಲ್ಲ"

"ಆಯಿತಲ್ಲ ನಿನ್ನ ಗ್ರಹಚಾರ ಹರಿಯುವ ಕಾಲವೂ ಬಂದಿದೆ. ಈ ಸಲ ಶೇಖರ ಬರಲಿ ಸುಮ್ಮನಿರು. ನಾವೆಲ್ಲಾ ಸರಿಯಾಗಿ ಬುದ್ಧಿ ಕಲಿಸುತ್ತೇವೆ" ಎಂದಳು ವಾಸಂತಿ.

ವಾಸಂತಿಗೆ ಅಡಿಗೆ ಕೆಲಸದಲ್ಲಿಯೂ ಗಮನವಿರಲಿಲ್ಲ. ಕುಳಿತರೂ ನಿಂತರೂ ಸದಾ ದೇವಿಕಾಳ ದುಃಖ ಅವಳ ತಲೆಯಲ್ಲಿ ಗುಂಯ್ ಅನ್ನುತ್ತಿತ್ತು. ಪ್ರಾಯದ ಈ ಪತಿ–ಪತ್ನಿಯರ ಅಗಲಿಕೆ, ಅವರ ವಿರಹ ವೇದನೆ ಎಷ್ಟಿರಬಹುದೆಂದು ಚಿಂತಿಸಿದಳು. ತಾನೂ ನಾಗರಾಜನೂ ಎಷ್ಟು ರೀತಿಯಲ್ಲಿ ಸುಖಪಡುತ್ತಿದ್ದೇವೆ ? ಮನೆಯವರೆಲ್ಲಾ ತನ್ನನ್ನು ಎಷ್ಟು ಗೌರವದಿಂದ ಕಾಣುತ್ತಾರೆ ? ನಾನು ನಿಜವಾಗಿಯೂ ಅದೃಷ್ಟವಂತೆ ಅಂದುಕೊಂಡಳು.

ಶೇಖರನಿಗೆ ಕಾಗದ ತಲುಪಿದ್ದೇ ತಡ ಗಾಬರಿಯಿಂದ ಓಡಿಬಂದ. ಈ ಸೋದರ ಮಾವನ ಬಳಿಗೆ ಬಂದು ಬಹಳ ವರ್ಷಗಳಾಗಿತ್ತು. ಒಳಕ್ಕೆ ಬಂದವನೇ "ಅತ್ತೆ, ಎಲ್ಲರೂ ಸೌಖ್ಯವೇ ! ಅಮ್ಮ ಹೇಗಿದ್ದಾರೆ ?" ಎಂದ.

ಭಾಗೀರಥಮ್ಮನವರು ಅಲ್ಲಿಯೇ ವರಾಂಡದಲ್ಲಿದ್ದರು. "ಓ.... ಬಂದ್ಯಾ. ಬಾಪ್ಪ ಶೇಖರ, ಒಳಕ್ಕೆ ಬಾ ... ಎಂದು ತಾವೂ ಎದ್ದು ಒಳಕ್ಕೆ ಬಂದರು. ವಾಸಂತೀ.... ನಾಗರಾಜಾ.... ಶೇಖರ ಬಂದ ಕಣೋ" ಎಂದರು.

ಶೇಖರ ಕೈಯ್ಯಲ್ಲಿದ್ದ ಕಿಟ್ ಬ್ಯಾಗನ್ನು ಕೆಳಗಿಟ್ಟು ಕೆದರಿದ್ದ ಕ್ರಾಪನ್ನು ಬೆರಳಿಂದ ತೀಡುತ್ತಾ ಕಾತುರದಿಂದ ಪುನಃ "ಅಮ್ಮ ಆಸ್ಪತ್ರೆಯಲ್ಲಿಯೇ ಇದ್ದಾರೆಯೇ ಅತ್ತೇ" ಎಂದ.

"ಯಾಕ್ ಗಾಬರಿ ಆಗ್ತೀ ಶೇಖರ ? ನಿಮ್ಮಮ್ಮ ಚೆನ್ನಾಗಿದಾರೆ. ಹೋಗು ಕೈ ಕಾಲು ಮುಖ ತೊಳೆದುಕೋ, ರಾತ್ರಿಯೆಲ್ಲಾ ಪ್ರಯಾಣ ಮಾಡಿ ಬಂದಿದ್ದೀ.... ಎಂದರು.

ಇವರ ಮಾತು ಕೇಳಿಸಿಕೊಂಡು ಶೇಖರನೇ ಬಂದಿರಬಹುದೇನೋ ನೋಡೋಣ ಎಂದು ಕುತೂಹಲದಿಂದ ವಾಸಂತಿ ಹೊರಕ್ಕೆ ಬಂದಳು.

"ಅತ್ತೇ ಕೋಸು ಪಲ್ಯ ಮಾಡಲೋ ....ಸಾಗು ಮಾಡಲೋ...." ಮಾತಿನ ನೆಪ ಮಾಡಿ ಅಲ್ಲಿಯೇ ನಿಂತು ಶೇಖರನನ್ನು ಗಮನಿಸಿ ನೋಡಿದಳು.

ಮಗುವಿನಂತೆ ಮುಗ್ಧಮುಖ, ರಾತ್ರಿಯೆಲ್ಲಾ ಪ್ರಯಾಣ ಮಾಡಿದ್ದರಿಂದ ಮುಖ ಮೈ ಸೋತಿದ್ದರೂ, ಎಷ್ಟು ಸುಂದರ ಯುವಕ, ಇಂಥಾ ಗಂಡನನ್ನು ಪಡೆದರೂ ಸುಖ ಪಡುವ ಅದೃಷ್ಟ ದೇವಿಕಾಗೆ ಇಲ್ಲವಾಯಿತೇ ? ಅನ್ನಿಸಿದರೂ ಈ ಸಲ ಇವರ ಸಂಗಮ ಆಗಲೇ ಬೇಕು, ಎಂಬ ಒಂದು ಸಂತೋಷ ವಾಸಂತಿಯ ಮುಖದಲ್ಲಿ ಮೂಡಿ ಮೆಲ್ಲನೆ ನಕ್ಕಳು.

ವಾಸಂತಿ ಮಾತಿಗೆ ಉತ್ತರವಾಗಿ ಭಾಗೀರಥಮ್ಮ "ನಿನ್ನ ಇಷ್ಟ, ಏನು ಅಡಿಗೆ ಬೇಕಾದರೂ ಮಾಡಮ್ಮ ವಾಸಂತೀ" ಅಂದರು.

ಒಳಗಿದ್ದ ದೇವಿಕಾಗೆ ಗಂಡನ ಧ್ವನಿ ಕೇಳಿಸಿತು. ಒಂದು ವಿಧವಾದ ಸಂಕೋಚ, ಸಂತೋಷ. ಭಯ ಎಲ್ಲಾ ಒಟ್ಟಿಗೇ ಅವಳನ್ನು ಮುತ್ತಿದಂತಾಯಿತು. ಒಳ ಬಾಗಿಲಿನಿಂದ ಬಗ್ಗಿ, ಒಂದು ಸಲ ನೋಡಿದಳು. ಮತ್ತೆ ಒಳಕ್ಕೆ ಹೋಗಿ ಏನೋ ಕೆಲಸದಲ್ಲಿ ತೊಡಗಿದಳು.

ವಾಸಂತಿ ದೇವಿಕಾ ಬಳಿ ಬಂದು ಅವಳ ಜಡೆಯನ್ನು ಹಿಡಿದೆಳೆದು, "ಹೋಗು ಮಾತಾಡಿಸು ದೇವಿಕಾ" ಎಂದು ಚುಡಾಯಿಸಿದಳು.

ಶೇಖರ ಮುಖ ಕೈಕಾಲು ತೊಳೆದು ಬಂದು ಹಾಲಿನಲ್ಲಿ ಸೋಫಾ ಮೇಲೆ ಕುಳಿತು ತಾಯಿಯ ಯೋಗಕ್ಷೇಮದ ಬಗ್ಗೆ ಭಾಗೀರಥಮ್ಮನವರೊಂದಿಗೆ ಮಾತಾಡುತ್ತಿದ್ದ.

ವಾಸಂತಿ ಕಾಫಿ ಲೋಟಾ ದೇವಿಕಾ ಕೈಗೆ ಕೊಟ್ಟು"ಹೋಗು ನೀನೇ ಕೊಟ್ಟುಬಾ" ಎಂದು ಕಳುಹಿಸಿದಳು.

ಪರಮಶಿವಯ್ಯನವರೂ ಅಲ್ಲಿಯೇ ಕುಳಿತು ಮಾತಾಡುತ್ತಿದ್ದರು. ದೇವಿಕಾ ಮೂರು ಕಪ್ಪು ಕಾಫಿ ತಂದಿದ್ದಳು. ಮೂರು ಕಪ್ಪನ್ನೂ ಸೋಫಾ ಮುಂದಿದ್ದ ಕಾಲು ಮಣೆಯ ಮೇಲಿಟ್ಟು ತಲೆ ಬಗ್ಗಿಸಿಕೊಂಡು ಒಳಕ್ಕೆ ಹೊರಟು ಹೋದಳು.

ಶೇಖರ ತನ್ನ ಹೆಂಡತಿಯನ್ನು ಒಂದು ನಿಮಿಷ ಕಣ್ಣರಳಿಸಿ ನೋಡಿದ. ದೇವಿಕಾ ಬಹಳ ಲಕ್ಷಣವಾಗಿ ಕಂಡಳು. ವಾಸಂತಿಯ ತರಬೇತಿಯಿಂದ ಈಗೀಗ ಚೆನ್ನಾಗಿ ಅಲಂಕರಿಸಿಕೊಳ್ಳುತ್ತಿದ್ದಳು. ಲಕ್ಷಣವಾಗಿ ನೀಳ ಜಡೆ ಹೆಣೆದು ಜಾಜಿ ಹೂ ಮುಡಿದಿದ್ದಳು, ವೈಲೆಟ್ ಕಲರ್ ಜಾರ್ಜೆಟ್ ಸೀರೆಯನ್ನು ನೀಟಾಗಿ ಉಟ್ಟಿದ್ದಳು.

ಶೇಖರ ಹೆಂಡತಿಯನ್ನು ಮದುವೆಯಲ್ಲಿ ಈ ರೀತಿ ಲಕ್ಷಣವಾಗಿ ನೋಡಿದ್ದಕ್ಕೆ ಈ ದಿನವೇ ಅವನು ಹೆಂಡತಿಯನ್ನು ಮತ್ತೆ ಈ ರೀತಿ ನೋಡಿದ್ದು. ಒಂದು ಘಳಿಗೆ ಅವನು ತನ್ನನ್ನು ತಾನೇ ಮರೆತ.

ಅಲ್ಲೇ ಇದ್ದ ಪರಮಶಿವಯ್ಯನವರು ಗತ್ತಿನ ಸ್ವರದಲ್ಲಿ "ಏನಪ್ಪಾ ಶೇಖರಾ !.... ಹಾಗೆ ಭ್ರಮಿಸಿ ನೋಡುತ್ತಿದ್ದೀ ಹೆಂಡತಿಯನ್ನು, ಅಲ್ಲಾ ಆ ಹುಡುಗೀನ ಸರ್ಕಸ್ ಪ್ರಾಣಿ ಮಾಡಿಟ್ಟಿದ್ದೀರಲ್ಲಾ ತಾಯಿ ಮಗ ಸೇರಿ.... ಅಂದರು.

ಶೇಖರ ಮೌನವಾಗಿ ತಲೆ ತಗ್ಗಿಸಿದ್ದ.

"ಅಲ್ಲಾ ಕಣೋ, ಹೆಂಡತೀನ ಜೊತೇಲಿ ಇಟ್ಟುಕೊಳ್ಳದ ಮೇಲೆ ಯಾಕೆ ಮದುವೆ ಮಾಡಿಕೊಂಡ್ಯೋ ; ಎಂದು ನಿರ್ದಾಕ್ಷಿಣ್ಯವಾಗಿ ಕೇಳಿದರು.

ಅದಕ್ಕೂ ಸುಮ್ಮನಿದ್ದ ಶೇಖರ. ಕಾಫಿ ತೆಗೆದುಕೊಂಡು ಕುಡಿಯಲೂ ಅವರ ಎದುರಿಗೆ ಅವನಿಂದಾಗಲಿಲ್ಲ. ಲೋಟದಲ್ಲಿ ಕಾಫಿ ಆರುತ್ತಾ ಇತ್ತು.

" ನಿನಗೂ ಬುದ್ಧಿ ಇಲ್ಲ " ಈ ಸಲ ಹೋಗುವಾಗ ನಿನ್ನ ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗು. ತಗೋ....ತಗೋ.... ಕಾಫಿ ಆರೋಗುತ್ತೆ. ಎಂದು ತಮ್ಮ ಕಾಫಿ ಲೋಟ ಕೈಗೆ ತೆಗೆದುಕೊಂಡು ತಮ್ಮ ರೂಮಿಗೇ ಹೊರಟು ಹೋದರು.

ಅವರು ಏನೇ ಹೇಳಬೇಕಾದರೂ ನೇರ-ನೇರ, ಕಡ್ಡಿ ತುಂಡಾದಂತೆ ಮಾತನಾಡುವುದು ಶೇಖರನಿಗೂ ಗೊತ್ತು. ಅವರ ಮಾತಿಗೆ ಯಾರೂ ಎದುರು ಜವಾಬು ಕೊಟ್ಟದ್ದೇ ಕಾಣ.

ಈಗಲೂ ಅವನು ಅವರ ಜೋರು ಮಾತಿಗೆ ಏನು ಉತ್ತರವನ್ನೂ ಹೇಳದೆ ಸುಮ್ಮನಿದ್ದ.

ನಾಗರಾಜ ಆಫೀಸಿಗೆ ಹೋಗುವಾಗ ಶೇಖರನನ್ನು ಮಾತಾಡಿಸಿ ರವಿ ಜೊತೆಯಲ್ಲಿ ಆಸ್ಪತ್ರೆಗೆ ಹೋಗುವಂತೆ ಹೇಳಿ ಹೋದ. ಈ ನಡುವೆ ವಾಸಂತಿ ಹೆಚ್ಚಾಗಿ ದೇವಿಕಾ ಜೊತೆ ಇರುತ್ತಿದ್ದುದರಿಂದ ನಾಗರಾಜನಿಗೆ ಹೆಂಡತಿಯನ್ನು ಚುಡಾಯಿಸಲು ಅವಳು ಸಿಕ್ಕುತ್ತಿರಲಿಲ್ಲ.

ಶೇಖರ ಆಸ್ಪತ್ರೆಗೆ ಹೋಗಿ ಅಮ್ಮನನ್ನು ನೋಡಿ ಮಾತಾಡಿಸಿದ.

"ಆಪರೇಷನ್ ಎಂದರೇ ಭಯ ಕಣೋ ಶೇಖರ ನನಗೆ" ಎಂದು ಸರಸ್ವತಮ್ಮ ಮಗನ ಮುಂದೆ ಅತ್ತರು.

"ಏನೂ ಭಯಪಡಬೇಡ ಅಮ್ಮಾ ; ನಾನು ಅದುವರ್ಗೂ ಇಲ್ಲೇ ಇರ್ತೀನಿ" ಎಂದು ಸಮಾಧಾನ ಹೇಳಿದ ಶೇಖರ.

"ಲೋ.... ಶೇಖರ ಬಾರೋ ಇಲ್ಲೀ, ಹತ್ರ ಕೂತ್ಕೋ" ಅಂದರು.

ಮಂಚದ ತುದಿಯಲ್ಲಿ ಕುಳಿತು "ಏನಮ್ಮಾ" ಎಂದ.

"ನೋಡೂ, ಆ ಮೂದೇವಿ ಇಲ್ಲೇ ಇದಾಳೆ. ಅವಳನ್ನು ಮಾತ್ರ ಕಣ್ಣೆತ್ತಿಯೂ ನೋಡಬೇಡ. ಈ ಸಲ ನಾನು ಆಸ್ಪತ್ರೆಯಿಂದ ಬಂದ ಮೇಲೆ ನಿನಗೆ ಬೇರೆ ಹೆಣ್ಣು ನೋಡಿ ಮದುವೆ ಮಾಡ್ತೀನಿ".

ಶೇಖರ ಗಾಬರಿಯಾದ, "ಏನಮ್ಮಾ ನೀ ಹೇಳೋ ಮಾತು"?

"ಹೌದು ಕಣೋ.... ವರದಕ್ಷಿಣೆ ಪೂರ್ತಿ ಕೊಡೋ ಯೋಗ್ಯತೆ ಇಲ್ಲದ ಮೇಲೆ ಅವರ ಹೆಣ್ಣನ್ನು ಅವರೇ ಇಟ್ಟುಕೊಳ್ಳಲಿ, ದರಿದ್ರದ ಹೆಣ್ಣು, ಅವಳು ಬಂದ ಘಳಿಗೆ ಒಳ್ಳೆಯದಲ್ಲ. ನೋಡೋ.... ನನಗೆ ಆಪರೇಷನ್ ಆಗಬೇಕಾಯಿತಲ್ಲೋ...." ಎಂದು ಗೊಳೋ ಎಂದು ಅತ್ತರು.

ಶೇಖರನ ಹಣೆಯಲ್ಲಿ ಹುಬ್ಬುಗಳು ಗಂಟಾದುವು. ಸಿಡಿ-ಮಿಡಿಗೊಂಡ. ಆದರೂ ತಾಯಿಯ ಎದುರು ತೋರ್ಪಡಿಸಿಕೊಳ್ಳಲಾರ. ತಾಯಿಗಾಗಿ ಏನು ಮಾಡಲೂ ತಯಾರು. ಆದರೆ ತನ್ನ ಹೆಂಡತಿಯನ್ನು ಗೋಳುಗುಟ್ಟಿಸುವುದು ಮಾತ್ರ ಅವನು ಸಹಿಸಲಾರ.

ಹಾಗೂ ಸಮಾಧಾನದ ಧ್ವನಿಯಲ್ಲಿ "ಈಗ ನೀನು ಅದೆಲ್ಲಾ ಯೋಚಿಸಬೇಡ. ನೀನು ಮೊದಲು ಹುಷಾರಾಗಿ ಬಾಮ್ಮ" ಎಂದ.

"ಸರಿ ಕಣೋ, ಆ ಮೂದೇವೀನ ನಾಳೆಯೇ ಮೈಸೂರಿಗೆ ಕಳುಹಿಸಿಬಿಡು. ನಿಮ್ಮ ತಂದೇನ ನೋಡೋವ್ರು ಯಾರೂ ಇಲ್ಲ. ಆಳುಗಳನ್ನು ಬಿಟ್ಟು ಬಂದಿದೀನಿ. ಅಲ್ಲಿದ್ದೂ ಬಿದ್ದಿರ್ಲಿ," ಅಂದರು. ಅವರ ದ್ವೇಷ ಮುಖದಲ್ಲಿ ಉಕ್ಕಿ ಚೆಲ್ಲುತ್ತಿತ್ತು.

ಸಾಯುತ್ತಾ ಬಿದ್ದಿರುವಾಗಲೂ ತಾಯಿಯ ಕೆಡುಕು ಸ್ವಭಾವ ಶೇಖರನಿಗೆ ಬೇಸರವಾಯಿತು. "ಸರಿ, ಇನ್ನು ನಾನು ಬರುತ್ತೇನಮ್ಮಾ ; ಔಷಧಿ ಎಲ್ಲಾ ಹೊತ್ತಿಗೆ ಸರಿಯಾಗಿ ತಗೋ" ಎಂದು ಹೇಳಿದವನೇ ಅಲ್ಲಿ ನಿಲ್ಲದೇ ಹೊರಟು ಬಂದುಬಿಟ್ಟ.

ಅವನ ಮನಸ್ಸಿನಲ್ಲಿ ಸೋದರ ಮಾವ ಮೂದಲಿಸಿದ್ದು ಇನ್ನೂ ಹಸಿಯಾಗಿಯೇ ಇತ್ತು. ನಾನೇನಾದರೂ ಇನ್ನು ಸುಮ್ಮನಿದ್ದರೆ ದೇವಿಕಾ ಖಂಡಿತ ಅಮ್ಮನ ದುರಾಸೆಗೆ ಬಲಿಯಾಗುತ್ತಾಳೆ. ನಮ್ಮನ್ನೇ ನೆಚ್ಚಿ ಬಂದಹೆಣ್ಣಿಗೆ ಇದೆಂಥ ಘೋರ ಶಿಕ್ಷೆ ಎನಿಸಿತು.

ಅನೇಕ ಬಾರಿ ತಾನು ಬಳ್ಳಾರಿಯಿಂದ ನೂರೆಂಟು ಆಸೆಯನ್ನು ಹೊತ್ತು ಬಂದಾಗ ಅಲ್ಲಿ ಕಾದಿರುತ್ತಿತ್ತು ಅಮ್ಮನ ಕಠೋರ ವಾಗ್ಬಾಣ, ಎದೆಯನ್ನು ಇರಿಯುತ್ತಿತ್ತು. ದೇವಿಕಾಗೆ ಹಿಡಿಶಾಪ, ತನ್ನೆದುರಿಗೂ ಅವಳು ಸುಳಿಯದಂತೆ ಅವಳಿಗೆ ಎಚ್ಚರಿಕೆ, ರೆಕ್ಕೆ ಹರಿದ ಗುಬ್ಬಚ್ಚಿಯಂತೆ ಒಂದು ಕಡೆ ಮುದುರಿ ಕುಳಿತಿರುತ್ತಿದ್ದಳು. ಇಲ್ಲಿ ವಾಸಂತಿ ಯೂ ಅವರ ಸೊಸೆ....ಎಷ್ಟು ಸಂತೋಷವಾಗಿದ್ದಾಳೆ ? ಅಮ್ಮನಿಗೇಕೆ ಈ ವರದಕ್ಷಿಣೆ ಭೂತ ಮೆಟ್ಟಿದೆ ? ಎಂದು ಚಿಂತಿಸುತ್ತಲೇ ಮನೆಗೆ ಬಂದ.

ಮನೆಯಲ್ಲಿ ಊಟಕ್ಕಾಗಿ ಎಲ್ಲರೂ ಶೇಖರನನ್ನು ಕಾಯುತ್ತಿದ್ದರು. ಊಟಕ್ಕೆ ಕುಳಿತಾಗ ಶೇಖರನ ಪಕ್ಕ ದೇವಿಕಾಳನ್ನು ಬಲವಂತವಾಗಿ ಕೂರಿಸಿದ್ದಳು ವಾಸಂತಿ.

ಊಟ ಮಾಡುವಾಗ ಪದೇ–ಪದೇ ಓರೆಗಣ್ಣಿನಿಂದ ಹೆಂಡತಿಯನ್ನು ನೋಡಿದ ಶೇಖರ, ಎಂತಹ ಸರಳ ಸೌಂದರ್ಯ, ಮುಡಿದಿದ್ದ ಮಲ್ಲಿಗೆ ಕಂಪು ಹಿತವಾಗಿ ಆಕರ್ಷಿಸುತ್ತಿತ್ತು, ಅಭಿಮಾನ ಮೂಡಿ ಬಂತು.

ವಾಸಂತಿ ಅಡಿಗೆ ಮನೆಯ ಬಾಗಿಲಲ್ಲಿ ಮರೆಯಾಗಿ ನಿಂತು ಆ ಜೋಡಿಯನ್ನೇ ಖುಷಿಯಿಂದ ನೋಡುತ್ತಿದ್ದಳು. ದೇವಿಕಾಗೆ ಇದೀಗ ಹೊಸದಾಗಿ ಮದುವೆಯಾಗಿ ಬಂದಂತಿತ್ತು. ಆದರೆ ಅತ್ತೆಯ ಭಯ ಇದ್ದೇ ಇತ್ತು.

ಸಂಜೆ ವಾಸಂತಿ ತಾನೇ ದೇವಿಕಾಗೆ ಸಡಿಲವಾಗಿ ಜಡೆ ಹೆಣೆದು ಗುಲಾಬಿ ಹೂ ಒಂದನ್ನು ಪಕ್ಕಕ್ಕೆ ಪಿನ್ನಿನಲ್ಲಿ ಸಿಕ್ಕಿಸಿ ಅದೇ ಗುಲಾಬಿ ಬಣ್ಣದ ಸೀರೆ ಉಡಲು ಕೊಟ್ಟಳು.

ಅಲ್ಲಲ್ಲೇ ಸುಳಿದಾಡುತ್ತಿದ್ದ ಹೆಂಡತಿಯನ್ನು ಶೇಖರ ಕಣ್ಣರಳಿಸಿ ನೋಡಿದ.

ಅಗಲಿ ಕಂಗಾಲಾಗಿ ಪರಿತಪಿಸುತ್ತಿದ್ದ ಈ ಪತಿ – ಪತ್ನಿಯರ ಪುನರ್ಮಿಲನಕ್ಕಾಗಿ ಮನೆಯವರೆಲ್ಲಾ ಮುತುವರ್ಜಿ ವಹಿಸಿದ್ದರು. ಅದಕ್ಕಾಗಿ ಎಲ್ಲರೂ ಮಾತನಾಡಿಕೊಂಡು ಈ ಒಂದು ಯೋಜನೆಯನ್ನೇ ರಚಿಸಿದ್ದರು.

ಸಂಜೆ ಎಲ್ಲರೂ ಮನೆಯ ಮುಂದೆ ಕೈ ತೋಟದ ಕಲ್ಲು ಬೆಂಚಿನ ಮೇಲೆ ಮಾತಾಡುತ್ತಾ ಕುಳಿತರು. ಪರಮಶಿವಯ್ಯನವರು ವಾಕಿಂಗ್ ಹೋಗಿದ್ದರು.

ನಾಗರಾಜ ತಮ್ಮ ಯೋಜನೆಯಂತೆ ಎಲ್ಲರೂ ಒಂದು ಪಿಕ್ಚರ್‌ಗೆ ಹೋಗಿ ಬರೋಣ ಬನ್ನಿ ಎಂದ.

ವಾಸಂತಿ ಘೊಳ್ಳನೆ ನಕ್ಕು ನಿಮಗೊಳ್ಳೆ ಖುಷಿ, ಸಧ್ಯ ನಾನು ರಾತ್ರಿ ಅಡಿಗೆ ಮಾಡಬೇಕು ಎಂದಳು.

ವಾಸಂತಿಯ ಪಕ್ಕದಲ್ಲಿಯೇ ಕುಳಿತಿದ್ದ ದೇವಿಕಾ "ಅಕ್ಕಾ ನಾನು ರಾತ್ರಿ ಅಡಿಗೆ ಮಾಡುತ್ತೇನೆ ನೀವು ಹೋಗಿ"ಎಂದಳು.

ಸಧ್ಯ ನಾವು ಹೋಗುವುದು ಇದ್ದೇ ಇದೆ. ನನಗೆ ಸಿನಿಮಾ ನೋಡಿ ನೋಡಿ ಬೇಜಾರು, ನೀನು ನಿನ್ನ ಯಜಮಾನರು ಹೋಗಿ ಬನ್ನಿ ಎಂದಳು.

ಅಲ್ಲಿಯೇ ಇದ್ದ ರವಿ, "ಹೌದು ಶೇಖರ ನಾನು ನನ್ನ ಸ್ನೇಹಿತನ ಮನೆಗೆ ಹೋಗಬೇಕು ನೀವು ಹೋಗಿ" ಎಂದ.

ಶೇಖರ ತಬ್ಬಿಬ್ಬಾದ, ಹೆಂಡತಿಯನ್ನು ಕರೆದುಕೊಂಡು ಸಿನಿಮಾಗೆ ಹೋಗಿದ್ದು ಅಮ್ಮನಿಗೆ ಗೊತ್ತಾದರೆ ? ಅಬ್ಬ ! ಎಂದು ಒಂದು ನಿಮಿಷ ನಡುಗಿದ.

ನಾಗರಾಜ ಬಲವಂತ ಮಾಡಿ ಹೊರಡಿಸಿದ.

ಅಷ್ಟಕ್ಕೆ ಸರಿಯಾಗಿ ಖಾಲಿ ಆಟೋ ಬರುತ್ತಿತ್ತು. ರವಿ ನಿಲ್ಲಿಸಿದ. ವಾಸಂತಿ ದೇವಿಕಾಳನ್ನು ಕರೆದುಕೊಂಡು ಹೋಗಿ ಆಟೋದಲ್ಲಿ ಕೂರಿಸಿದಳು.

ಹುಂ... ಹೋಗು ಶೇಖರ, ನಿಮ್ಮ ಅಮ್ಮನ ಯೋಚನೆ ಬೇಡ. ನಾವು ನೋಡಿ ಕೊಳ್ಳುತ್ತೇವೆ ಎಂದು ಶೇಖರನನ್ನು ಹೊರಿಸಿ ಎಲ್ಲಾ ಗೇಟಿನ ಬಳಿ ಟಾ... ಟಾ... ಮಾಡಿದರು.

ಹೆಂಡತಿಗೆ ಹತ್ತಿರವಾಗಿ ಕುಳಿತಾಗ ಶೇಖರನಿಗೆ ಏನೋ ಹೊಸ ಚೈತನ್ಯ ಬಂದಂತಾಯಿತು. ಪತಿಯ ಸಾನಿಧ್ಯ ದೇವಿಕಾಗ್ಗೂ ಹಿತವೆನಿಸಿತು. ಆದರೆ ಹಳಗಿಲ್ಲದ ದಾಂಪತ್ಯ, ಇನ್ನೂ ಹೊಸತನ ಮಾಸಿರಲಿಲ್ಲ.

ಶೇಖರ ಮಾತಿಲ್ಲದೆ ಸುಮ್ಮನೆ ದೇವಿಕಾ ಕೈಯನ್ನು ಹಿಡಿದು ಒತ್ತಿದ. ದೇವಿಕಾಗೆ ರೋಮಾಂಚನವಾಯಿತು. ತಲೆ ತಗ್ಗಿಸಿದಳು.

"ಏಕೆ ನನ್ನಲ್ಲಿ ಭಯವಾ?" ಎಂದು ಪಿಸುಗುಟ್ಟಿದ. "ಇಲ್ಲ" ಎನ್ನುವಂತೆ ತಲೆಯಾಡಿಸಿದಳು.

ಅವಳ ಹತ್ತಿರಕ್ಕೆ ಒತ್ತಿ ಕುಳಿತ.

ಇವರು ಸಿನಿಮಾ ನೋಡಿಕೊಂಡು ಮನೆಗೆ ಬಂದಾಗ ಒಂಭತ್ತೂವರೆ ಗಂಟೆಯಾಗಿತ್ತು. ದೇವಿಕಾ ಕೈಕಾಲು ತೊಳೆದು ನೇರ ಒಳಗೆ ಹೋಗಿ ವಾಸಂತಿಯನ್ನು ಹುಡುಕಿದಳು. ಅವಳು ಎಲ್ಲಿಯೂ ಕಾಣಲಿಲ್ಲ. ಎಲ್ಲರಿಗೂ ಊಟವಾಗಿ ಭಾಗೀರಥಮ್ಮ ಪರಮಶಿವಯ್ಯ ಎಲ್ಲಾ ಮಲಗಿ ಬಿಟ್ಟಿದ್ದರು. ವಾಸಂತಿ ಮಹಡಿ ಮೆಟ್ಟಿಲಿಳಿದು ಬಂದಳು.

ಅಕ್ಕಾ ಮಲಗಿದ್ದಿರಾ ? ಊಟವಾಯಿತೇ ? ಎಂದಳು. ಅವಳ ಧ್ವನಿಯಲ್ಲಿ ನವೀನತೆಯಿತ್ತು. ವಾಸಂತಿ ಗಮನಿಸಿದಳು.

ಬಾ....ದೇವಿಕಾ, ಅವರನ್ನೂ ಕರಿ, ನೀವಿಬ್ಬರೂ ಊಟ ಮಾಡಿ ನಮ್ಮದೆಲ್ಲಾ ಆಯಿತು ಎಂದಳು.

ಆ ವೇಳೆಗೆ ಶೇಖರ ಷರಟು ಬಿಚ್ಚಿ ಟವಲನ್ನು ಹೆಗಲ ಮೇಲೆ ಹಾಕಿ ಊಟಕ್ಕೆ ಬಂದು ಕುಳಿತ. ಇಬ್ಬರಿಗೂ ವಾಸಂತಿ ಬಡಿಸಿದಳು. ಸಿನಿಮಾ ಚೆನ್ನಾಗಿತ್ತಾ ಎಂದಳು.

ಅವರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿ ಕಣ್ಣು ಮಿಟುಕಿಸಿದರು. ದೇವಿಕಾ ಅನ್ನವನ್ನು ಕಲೆಸುತ್ತಾ ಚೆನ್ನಾಗಿತ್ತು ಎಂದಳು.

"ಇವರ ಪಯಣದ ಹಾದಿ ತುಂಬಾ ಮುಂದುವರಿದಂತೆ ಕಾಣುತ್ತೆ" ಎಂದು ಮನಸ್ಸಿನಲ್ಲಿಯೇ ನಕ್ಕಳು ವಾಸಂತಿ.

ಅಮ್ಮನನ್ನು ಯಾರು ನೋಡಿಕೊಂಡು ಬಂದರು ? ಎಂದ ಶೇಖರ.

"ರವಿ ಹೋಗಿದ್ದ. ಗಂಜಿ, ಹಾಲು, ಎಲ್ಲಾ ಕೊಟ್ಟು ಬಂದ. ಶೇಖರ ಮೈಸೂರಿಗೆ ಹೋದನೇ ? ಎಂದು ಕೇಳಿದರಂತೆ," ಎಂದಳು ವಾಸಂತಿ.

ಆ ಮಾತು ಕಿವಿಗೆ ಬಿದ್ದ ಕೂಡಲೇ ಶೇಖರನ ಶಕ್ತಿ ಉತ್ಸಾಹವೆಲ್ಲಾ ಉಡುಗಿ ಹೋಯಿತು. ಎತ್ತಿದ್ದ ತುತ್ತು ಹಾಗೆಯೇ ಉಳಿಯಿತು.

ತಟ್ಟನೆ ವಾಸಂತಿ "ನಮ್ಮ ರವಿ ಜಾಣ. ಶೇಖರನಿಗೆ ಸ್ವಲ್ಪ ತಲೆನೋವು, ಮಲಗಿದ್ದ. ಅದಕ್ಕೆ ನಾನೇ ಬಂದೆ ಅತ್ತೆ ಎಂದು ಹೇಳಿದನಂತೆ" ಎಂದಳು.

ನೆಮ್ಮದಿಯ ಉಸಿರು ಬಿಟ್ಟ ಶೇಖರ.

ಊಟವಾದ ಮೇಲೆ "ಬಾ ದೇವಿಕಾ ಸ್ವಲ್ಪ ಕೆಲಸವಿದೆ" ಎಂದು ವಾಸಂತಿ ಕರೆದಳು. ದೇವಿಕಾ ವಾಸಂತಿಯ ಜೊತೆ ಮಹಡಿ ಮೇಲಕ್ಕೆ ಹೋದಳು.

"ಕುಳಿತುಕೋ...."

ಮಂಚದ ಮೇಲೆ ದೇವಿಕಾ ಕುಳಿತಳು. ಮೆತ್ತನೆ ಹಾಸಿಗೆ ಮೇಲ್ಹೊಪ್ಪಟೆಯಿಂದ ಅಚ್ಚುಕಟ್ಟಾಗಿ ಹಾಸಿತ್ತು. ಊದುಗಡ್ಡಿಯ ಪರಿಮಳ ಕೊಠಡಿಯೆಲ್ಲಾ ತುಂಬಿತ್ತು. ಅಲ್ಲೇ ಟೇಬಲ್ ಮೇಲೆ ತಟ್ಟೆಯಲ್ಲಿ ವೀಳೆದಲೆ, ಅಡಿಕೆ ಪುಡಿ, ಸುಣ್ಣ ಎಲ್ಲಾ ಸಿದ್ಧ ವಾಗಿತ್ತು. ಫ್ಲಾಸ್ಕ್‌ನಲ್ಲಿ ಬಿಸಿ ಹಾಲು ಹಾಕಿ ಪಕ್ಕದಲ್ಲಿಟ್ಟಿತ್ತು.

ಎಲ್ಲಾ ದೇವಿಕಾಳ ಗಮನಕ್ಕೆ ಬಂತು. ಮನಸ್ಸು ಒಂದು ಕ್ಷಣ ತನ್ನ ಅದೃಷ್ಟವನ್ನು ಹಳಿಯಿತು. ಎಲ್ಲರೂ ಹೆಣ್ಣಾಗಿ ಹುಟ್ಟಿ ಏನು ಸಾರ್ಥಕ ? ಈ ವೈಭವದ ಬಾಳು ಎಷ್ಟು ಜನ್ಮದ ಪೂಜಾ ಫಲ ? ವಾಸಂತಿಗೆ ? ಎಂದುಕೊಂಡಳು, ನೊಂದ ಮನ ಮಾತಿಲ್ಲದ ಮೌನ ತಾಳಿತು.

ದೇವಿಕಾಳ ಮನಸ್ಸಿನ ಹೊಯ್ದಾಟ ಪುಸ್ತಕವನ್ನು ಓದುವಂತೆ ವಾಸಂತಿಗೆ ಅರ್ಥ ವಾಯಿತು. ಅವಳ ಬೆನ್ನಮೇಲೆ ಕೈ ಆಡಿಸುತ್ತಾ ನಿನ್ನ ಯಜಮಾನರು ಏನು ಹೇಳಿದರು? ಎಂದಳು.

ಬಾಲ್ಕನಿಯಲ್ಲಿ ಇಬ್ಬರೂ ಒಂದೇ ಸೀಟಿನಲ್ಲಿ ಕೂತಿದ್ದಾಗ ಗಂಡ ತನ್ನ ಬೆನ್ನ ಸುತ್ತ ಕೈಬಳಸಿ ಒತ್ತಿ ಕುಳಿತು ಅವನ ಬಿಸಿಯುಸಿರು ಕೆನ್ನೆಯ ಮೇಲೆ ಹರಿದಾಡಿದ್ದು ಜ್ಞಾಪಕಕ್ಕೆ ಬಂದು ದೇವಿಕಾಳ ಕೆನ್ನೆ ಕೆಂಪಾಯಿತು. ತಲೆ ತಗ್ಗಿಸಿ "ಏನೂ ಇಲ್ಲ" ಎಂದಳು.

ತಾಯಿಯಂತೆ ಇವರೂ ನಿನ್ನನ್ನು ಸಿಡುಕುತ್ತಾರೆಯೇ ದೇವಿಕಾ ? ಮೃದುವಾಗಿ ಕೇಳಿದಳು ವಾಸಂತಿ.

"ಇಲ್ಲಾಕ್ಕಾ ಅವರಿಗೆ ತುಂಬಾ ಪ್ರೀತಿ"

ಹೀಗಿದ್ದರೂ ನೀವು ಬೇರೆ, ಬೇರೆ ಇರುವುದೇಕೆ ?

ವರದಕ್ಷಿಣೆಯ ಪೆಡಂಭೂತ ನಮ್ಮನ್ನು ಅಗಲಿಸಿದೆ ಅಕ್ಕಾ ಎಂದು ನೊಂದು ನುಡಿದಳು.

ಆ ಭೂತವನ್ನು ಓಡಿಸಲು ನಾವೆಲ್ಲಾ ಇಲ್ಲವೇ ? ಇನ್ನು ಧೈರ್ಯವಾಗಿರು. ದೇವಿಕಾ ಇಲ್ಲೇ ಸ್ವಲ್ಪ ಇರು ನಾನು ಬರುತ್ತೇನೆ ಎಂದು ಎದ್ದಳು ವಾಸಂತಿ.

ಅಕ್ಕಾ ನಿಮ್ಮ ಯಜಮಾನರು ಇನ್ನೂ ಮನೆಗೆ ಬಂದಿಲ್ಲವೇ ?

ಅವರು ಕೆಳಗೆ ರೂಮಿನಲ್ಲಿ ಮಲಗಿದ್ದಾರೆ, ಅಂದಳು ವಾಸಂತಿ.

ಅಯ್ಯೋ ಹೊತ್ತಾಯಿತು, ನೀವು ಮಲಗಿಕೊಳ್ಳಿ ನಾನು ಹೋಗುತ್ತೇನೆ ಎಂದು ಎದ್ದಳು ದೇವಿಕಾ.

ಪುನಃ ಅವಳನ್ನು ಮಂಚದಲ್ಲಿ ಕೂರಿಸಿ, ಸ್ವಲ್ಪ ಇರು ಬಂದೆ ಎಂದು ವಾಸಂತಿ ಕೆಳಗೆ ಬಂದಳು.

ಆ ವೇಳೆಗೆ ನಾಗರಾಜ ಶೇಖರನೊಂದಿಗೆ ಮಾತಾಡುತ್ತಿದ್ದ. "ಧೈರ್ಯವಾಗಿ ಹೋಗು ಶೇಖರ. ಬಾಳನ್ನು ಹಾಳು ಮಾಡಿಕೊಳ್ಳಬೇಡ" ಎನ್ನುವ ಮಾತು ವಾಸಂತಿ ಬರುವ ಹೊತ್ತಿಗೆ ಸರಿಯಾಗಿ ಕಿವಿಗೆ ಬಿತ್ತು.

"ಬನ್ನಿ ಹೊತ್ತಾಯಿತು ಮಲಕ್ಕೊಳ್ಳೋಣ" ಎಂದು ವಾಸಂತಿ ಗಂಡನಿಗೆ ಕಣ್ಣು ಮಿಟುಕಿಸಿ, ನೋಡಿ ಫ್ಲಾಸ್ಕಿನಲ್ಲಿ ಹಾಲಿಟ್ಟಿದೆ ತೆಗೆದುಕೊಳ್ಳಲು ಹೇಳಿ ಎಂದು ಬಿಟ್ಟು ರೂಮಿನ ಕಡೆ ಹೋದಳು.

ಶೇಖರನ ಭುಜದ ಮೇಲೆ ಕೈ ಹಾಕಿ ಮಹಡಿ ಮೆಟ್ಟಿಲು ಹತ್ತಿಸಿ 'ಗುಡ್-ನೈಟ್' ಎಂದು ಹೇಳಿ ನಾಗರಾಜ ರೂಮಿಗೆ ಹೋದ.

ದೇವಿಕಾ–ಶೇಖರರ ಪುನರ್ಮಿಲನವು ಅವರಿಗಿಂತ ಹೆಚ್ಚಾಗಿ ವಾಸಂತಿ, ನಾಗರಾಜ ಅವರಿಗೇ ಹೆಚ್ಚು ಸಂತೋಷವನ್ನುಂಟುಮಾಡಿತು. ಅಗಲಿದ್ದ ವಿರಹಿಗಳು ಒಂದಾಗಿ ಪಡುವ ಆನಂದವನ್ನು ನೆನೆದೇ ಇವರು ಆನಂದಪಟ್ಟರು.

ದೇವಿಕಾ ವಾಸಂತಿಯ ನಿರೀಕ್ಷಣೆಯಲ್ಲಿ ಮಂಚದ ಮೇಲೇ ಕುಳಿತಿದ್ದಳು. ಆದರೆ ಬಂದವನು ಶೇಖರ. ಗಾಬರಿಯಿಂದ ಎದ್ದು ನಿಂತಳು.

ಶೇಖರ ಮೌನವಾಗಿ ಅವಳ ಬಳಿ ಬಂದು ಕೈಹಿಡಿದು ಮಂಚದಲ್ಲಿ ಕುಳ್ಳಿರಿಸಿ ಮೆಲ್ಲನೆ ದೇವಿಕಾ .... ಎಂದ.

ಒಂದು ನಿಮಿಷ ದೇವಿಕಾ ಮೌನವಾಗಿ ಗಂಡನ ಮುಖವನ್ನೇ ಕಣ್ಣರಳಿಸಿ ನೋಡಿದಳು. ಆ ದೃಷ್ಟಿಯಲ್ಲಿ ನೂರಾರು ಭಾವನೆಗಳು ತುಂಬಿದ್ದುವು. ಇದು ನಿಜವೋ ? ಕನಸೋ ? ಏಕಾಂತದಲ್ಲಿ ತನ್ನ ಪತಿ ತನ್ನನ್ನು ಪ್ರೀತಿಸುತ್ತಿರುವುದು ? ಎಂದು ಭ್ರಮೆ ಅವಳಿಗೆ.

ಶೇಖರನ ಒರಟು ಕೆನ್ನೆ ಅವಳ ಮೃದು ಕಪೋಲವನ್ನು ನೇವರಿಸಿತು. ಕೈ ಅವಳ ಮೃದು ಮುಂಗುರುಳನ್ನು ಸರಿಸಿತು. ತನಗೆ ಆಸರೆ ನೀಡಿದ ಪತಿಯ ಎದೆಯಲ್ಲಿ

ಮುಖವಿಟ್ಟು ಅತ್ತಳು. ಸಂತೋಷಕ್ಕೋ, ದುಃಖಕ್ಕೋ ಅವಳಿಗೇ ತಿಳಿಯದು. ಹಾಗೆಯೇ ಕುಸಿದು ಅವನ ಎರಡು ಕಾಲನ್ನೂ ಭದ್ರವಾಗಿ ಹಿಡಿದು ಕಣ್ಣೀರಿನಿಂದ ಕಾಲು ತೊಳೆದಳು.

ಶೇಖರ ಅವಳನ್ನು ಹಿಡಿದೆತ್ತಿ "ಇದೇನು ದೇವಿಕಾ ? ಸಂತೋಷವಾಗಿ ಇರ ಬೇಕಾದ ಸಮಯದಲ್ಲಿ ಹೀಗೇಕೆ ಅಳುತ್ತೀ ?"

ಮುಂಗೈಯಿಂದ ಕಣ್ಣನ್ನು ಉಜ್ಜಿಕೊಳ್ಳುತ್ತಾ "ನಿಮ್ಮಮ್ಮ ಹೇಳಿದಂತೆ ನೀವೇನು ಮಾಡಿಬಿಡುತ್ತೀರೋ ಎಂದು ಭಯವಾಗಿತ್ತು" ಎಂದಳು ದೇವಿಕಾ.

"ಅಮ್ಮ ಏನು ಹೇಳಿದಳು"

"ನಿನ್ನನ್ನು ಇಲ್ಲಾ ಅನ್ನಿಸಿ ಅವನಿಗೆ ಬೇರೆ ಮದುವೆ ಮಾಡುತ್ತೇನೆ ಎಂದು"

ಛೀ... ಹುಚ್ಚಿ....ನಾನೆಂದಾದರೂ ನಿನ್ನನ್ನು ನೋಯಿಸಿದ್ದೇನೆಯೇ ?"

"ಆದರೆ"? ಎಂದು ಅನುಮಾನಿಸಿದಳು.

"ಆದರೆ ಇಲ್ಲ. ಗೀದರೆ ಇಲ್ಲ, ಬಾ ಬಾ ಎಂದು ಹಾಸಿಗೆಯಲ್ಲಿ ಮಲಗಿ ಅವಳನ್ನು ಹತ್ತಿರಕ್ಕೆ ಎಳೆದುಕೊಂಡ.

ಕಳೆದ ನಿಧಿ ಅವಳಿಗೆ ಸಿಕ್ಕಂತಾಯಿತು. ಇಷ್ಟೆಲ್ಲಾ ಏರ್ಪಾಡು ಒಳೊಳಗೇ ಮಾಡಿ ತಮ್ಮನ್ನು ಒಂದುಗೂಡಿಸಿದ ವಾಸಂತಿಯನ್ನು ಮನಸಾರ ವಂದಿಸಿದಳು.

ಆ ಕೊಠಡಿಯ ವಸ್ತುಗಳೆಲ್ಲಾ ಅವರಿಗೆ ಶುಭರಾತ್ರಿಯನ್ನು ಕೋರಿತು. ಅಂದಿ ನಿಂದ ಅವರ ಹೊಸಬಾಳು ಪ್ರಾರಂಭವಾಯಿತು.

ಇವರ ಗೆಲುವು ಮನೆಯವರಿಗೆಲ್ಲಾ ಸಂತೋಷವನ್ನು ನೀಡಿತು. ಆದರೆ ಸರಸ್ವತಮ್ಮನವರಿಗೆ ಈ ಯಾವ ವಿಷಯವೂ ತಿಳಿಯದಂತೆ ಗುಟ್ಟಾಗಿಟ್ಟರು.

ಡಾಕ್ಟರು ಕೊಟ್ಟಿದ್ದ ತಾರೀಖಿಗೆ ಸರಿಯಾಗಿ ಸರಸ್ವತಮ್ಮನವರಿಗೆ ಆಪರೇಷನ್ ಆಯಿತು. ಹೆಚ್ಚೇನೂ ತೊಂದರೆ ಇಲ್ಲದೆ ದಿನದಿನಕ್ಕೆ ಚೇತರಿಸಿಕೊಳ್ಳತೊಡಗಿದರು. ಶೇಖರ ಪ್ರತಿದಿನ ಮೂರು ಹೊತ್ತೂ ಬಂದು ತಾಯಿಯನ್ನು ವಿಚಾರಿಸಿಕೊಂಡು ಉಪಚರಿಸುತ್ತಿದ್ದ.

ಮಗನ ಪ್ರೀತಿಗೆ ಹಿಗ್ಗಿದರು ಸರಸ್ವತಮ್ಮ. ಮೊದಲು ಅವರು ಕೇಳಿದ ಮಾತು "ಆ ಮೂದೇವಿ ಮೈಸೂರಿಗೆ ಹೋದಳೇನೋ ? ಎಂದು. ಎಂದಾದರೂ ಅವರು ಬಾಯಿ ತುಂಬಾ "ದೇವಿಕಾ" ಎಂದು ಸೊಸೆಯನ್ನು ಕೂಗಲಿಲ್ಲ.

ಅದಕ್ಕೆ ಶೇಖರ "ಅಮ್ಮಾ ನನಗೆ ರಜಾ ಕಳೆಯಿತು. ನಾನು ನಾಡಿದ್ದು ಹೋಗ ಬೇಕು. ನಾಳೆ ಮೈಸೂರಿಗೆ ಹೋಗಿ ಅಪ್ಪನನ್ನು ನೋಡಿಕೊಂಡು ಹಾಗೆಯೇ ಹೋಗು ತ್ತೇನೆ. ನೀನು ಇನ್ನೂ ಒಂದು ತಿಂಗಳು ಇಲ್ಲಿಯೇ ಇದ್ದು ಸುಧಾರಿಸಿಕೋ" ಎಂದ.

"ಹೌದೇನೋ ಹೊರಟೇ ಬಿಟ್ಟೀಯಾ ?"

"ಹೌದಮ್ಮಾ.... ಈ ಸಲ ದೇವಿಕಾಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ಊಟಕ್ಕೆ ನನಗೆ ತುಂಬಾ ತೊಂದರೆ" ಎಂದ.

ಸರಸ್ವತಮ್ಮ ಥಟ್ಟನೆ ಮಂಚದಲ್ಲಿ ಎದ್ದು ಕುಳಿತು.... ಅಯ್ಯೋ ... ಇದೇನೋ ನಿನಗೆ ಇಂಥಾ ಕೇಡಿಗ ಬುದ್ಧಿ ? ಅವಳನ್ನು ಮೊದಲು ಅವರ ಅಪ್ಪನ ಮನೆಗೆ ಕಳಿಸ್ತೀನಿ ಅಂತ ಇದ್ನಲ್ಲೋ"

"ಅಮ್ಮಾ ! ಸಾಕು ಇಷ್ಟು ದಿವಸ ಅವಳು ಪಟ್ಟ ಕಷ್ಟ, ನನಗೆ ಒಳ್ಳೇ ಬುದ್ಧಿ ಈಗ ಬಂತು. ನಿನ್ನ ಕೇಡು ಬುದ್ಧಿ ಇನ್ನೂ ಹೋಗಿಲ್ಲ. ನೋಡು ಅವಳನ್ನು ನೀನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಅನ್ನುವವರೆಗೂ ನಾನು ಎಂದೂ ಬರುವುದಿಲ್ಲ, ಅವಳನ್ನೂ ಕಳುಹಿಸುವುದಿಲ್ಲ ನಾನು ಹೋಗುತ್ತೇನೆ" ಎಂದವನೇ ಬಿರಬಿರನೆ ಹೊರಟು ಬಿಟ್ಟ.

ಸರಸ್ವತಮ್ಮ "ನಾನಿಲ್ಲದಾಗ ಅವಳು ನಿನ್ನ ಬುದ್ಧಿ ತಿರುಗಿಸಿದಳಲ್ಲೋ ಮನೆಹಾಳಿ" ಎಂದು ಗೋಳೋ ಎಂದು ಅತ್ತರು.

ಶೇಖರ, ದೇವಿಕಾರನ್ನು ವಾಸಂತಿ, ನಾಗರಾಜ ಸಂತೋಷವಾಗಿ ಕಳುಹಿಸಿ ಕೊಟ್ಟರು. ವಾಸಂತಿ ಪದೇ ಪದೇ ಕಾಗದ ಬರಿ ಎಂದು ಪ್ರೀತಿಯಿಂದ ಹೇಳಿದಳು.

ವರದಕ್ಷಿಣೆಯ ಭೂತ ಹಿಡಿದ ತಂದೆ–ತಾಯಿಯರಿಗೆ ಮಗನಾದವನು ಈ ರೀತಿ ಬುದ್ಧಿ ಕಲಿಸಿದರೆ ಆಗ ಅವರು ತೆಪ್ಪಗಾಗುತ್ತಾರೆ. ಸೀಮೆಎಣ್ಣೆಯಿಂದ ಸುಟ್ಟುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಎಷ್ಟೋ ಹೆಣ್ಣುಮಕ್ಕಳ ಬಾಳು ಬೆಳಗುತ್ತದೆ.

ಈ ಒಂದು ದಿಶೆಯಲ್ಲಿ ಶೇಖರ ಬಹಳ ಧೈರ್ಯಶಾಲಿಯಾಗಿ ವಿವೇಕದಿಂದ ಮುಂದುವರಿದ ಎಂದಳು ವಾಸಂತಿ.

ಈಗಿನ ಯುವಕರೆಲ್ಲಾ ಈ ರೀತಿ ಕಟ್ಟಿಕೊಂಡವಳನ್ನು ಕಾಪಾಡಿದರೆ ಖಂಡಿತ ವರದಕ್ಷಿಣೆ ಪದ್ಧತಿ ತಪ್ಪಿಹೋಗುತ್ತೆ, ಎಂದ ನಾಗರಾಜ. ಕೆಲವು ದಿನಗಳವರೆಗೆ ದೇವಿಕಾ–ಶೇಖರರ ನೆನಪು ಮನೆಯವರಿಗೆಲ್ಲಾ ಹಸಿರಾಗಿ ಉಳಿದಿತ್ತು.

ಸರಸ್ವತಮ್ಮ ಅವಮಾನದಿಂದ ಅಣ್ಣನ ಮನೆಯಲ್ಲಿ ಹೆಚ್ಚು ದಿನ ಇರಲಾರದೇ ಮೈಸೂರಿಗೆ ಪ್ರಯಾಣ ಮಾಡಿದರು.

ದೇವಿಕಾಳಿಂದ ವಾಸಂತಿಗೆ ಆಗಾಗ ಕಾಗದ ಬರುತ್ತಿತ್ತು. ಅದರ ತುಂಬಾ ಅವಳ ಕೃತಜ್ಞತೆ ವಾಸಂತಿಯ ಬಗ್ಗೆ, ತಾನೂ ಶೇಖರ ಸಂತೋಷವಾಗಿರುವ ವಿಚಾರ, ಮದುವೆಯಲ್ಲಿ ತೆಗೆದುಕೊಂಡ ವರದಕ್ಷಿಣೆ ಐದುಸಾವಿರವನ್ನು ವಾಪಸ್ಸು ಮಾಡುವುದಾಗಿ ಶೇಖರ ಪ್ರತಿ ತಿಂಗಳೂ ಸ್ವಲ್ಪ ಸ್ವಲ್ಪ ಹಣ ತಮ್ಮ ತಾಯಿ ಮನೆಗೆ ಕಳುಹಿಸುತ್ತಿರುವುದಾಗಿ

ಎಲ್ಲಕ್ಕಿಂತ ಕಡೆಯಲ್ಲಿ ಅಕ್ಕಾ ; ನನ್ನ ಪ್ರೀತಿಯ ಅಕ್ಕಾ ನಿಮಗಲ್ಲದೆ ಯಾರಿಗೆ ಹೇಳಲಿ ? ನನಗೆ ನಾಚಿಕೆಯಾಗುತ್ತಿದೆ. ಆದರೂ ಬರೆಯುತ್ತೇನೆ ನನಗೆ ಈಗ ಐದು ತಿಂಗಳು ನಿಮ್ಮ ಆಶೀರ್ವಾದ ಎಂದು ಒಂದು ಸಲ ಕಾಗದ ಬಂತು.

ವಾಸಂತಿ ತುಂಬಾ ಸಂತೋಷಪಟ್ಟಳು. ಹಿಂದೆಯೇ ಯೋಚಿಸಿದಳು, ಇದೀಗ ಇಲ್ಲಿಂದ ಅವರು ಹೋಗಿ ಐದು ತಿಂಗಳಾಯಿತು. ಆಗಲೇ ಅವಳು ಐದು ತಿಂಗಳ ಗರ್ಭಿಣಿ ಎಷ್ಟು ಸೋಜಿಗ. ನನಗೆ ಏಳು ವರ್ಷ ದಾಂಪತ್ಯ ಜೀವನ ನಡೆಸಿದರೂ ಒಂದು ಮಗುವಾಗಲಿಲ್ಲ ... ದೇವರೇ ನನಗೆ ಮಕ್ಕಳ ಭಾಗ್ಯವಿಲ್ಲವೆಂದೇ ಕಾಣುತ್ತೆ ಎಂದು ತನ್ನ ಪರಿಸ್ಥಿತಿಗಾಗಿ ಕೊರಗಿದಳು.

ಅಷ್ಟು ದ್ವೇಷಿಸುತ್ತಿದ್ದ ದೇವಿಕಾಳ ಅತ್ತೆಯೂ ಸಹ ಮನೆಯಲ್ಲಿ ಒಂದು ಹಸುಗೂಸನ್ನು ಕಂಡರೆ ಅದೇ ಸೊಸೆಯನ್ನು ಓಲೈಸಬಹುದು.

ಆದರೆ ಮಕ್ಕಳಿಗಾಗಿ ಹಾತೊರೆಯುತ್ತಿರುವ ಈ ಮನೆಗೆ ಒಂದು ಮುದ್ದು ಮಗುವನ್ನು ಕೊಡಲಾರದ ನನ್ನನ್ನು ಇವರುಗಳು ಮುಂದೆ ಖಂಡಿತ ಈ ರೀತಿ ಪ್ರೀತಿಸಲಾರರು ಎಂದು ಯೋಚಿಸಿ ಕಂಗಾಲಾದಳು ವಾಸಂತಿ.

ಮನುಷ್ಯನ ಜೀವಮಾನ ಕ್ಷಣಭಂಗುರವಾದದ್ದು ಸಿರಿವಂತರು ಬಡವರಾಗುವುದು ಒಂದು ಕ್ಷಣದಲ್ಲಿ.

ಸಂತೋಷವೆಂಬುದೂ ಕ್ಷಣಿಕ, ನೋವು–ನಲಿವು ಮಾನವನಿಗೆ ಕಡ್ಡಾಯವಾದ ಬದಲಾವಣೆ.

ಹೀಗಿರುವಲ್ಲಿ ಪರಮಶಿವಯ್ಯನವರ ಸಂಸಾರ ಇದಕ್ಕೆ ಹೊರತಲ್ಲ. ಸಂತೋಷ ನೆಮ್ಮದಿಯಿಂದ ಸಾಗುತ್ತಿದ್ದ ಅವರ ಸಂಸಾರಕ್ಕೆ ಒಂದು ಬರಸಿಡಿಲೆರಗಿತು. ತಿಳಿ ಕೊಳಕ್ಕೆ ಕಲ್ಲೆಸೆದಂತೆ ಕಲಕಿತು. ಅದು ರವಿ ಆಕಸ್ಮಿಕವಾಗಿ ಎರಡು ಕಣ್ಣೂ ಕಳೆದು ಕೊಂಡು ಪೂರಾ ಕುರುಡನಾದದ್ದು.

ರವಿಯ ರೂಪಕ್ಕೇ ದೃಷ್ಟಿ ತಾಕಿತೋ ಏನೋ ? ಅವನ ಮೋಹಕವಾದ ಕಣ್ಣುಗಳು ಯಾರನ್ನಾದರೂ ಆಕರ್ಷಿಸುವಂತಿತ್ತು. ಅಂತಹ ಕಣ್ಣಿಗೇ ಆಪತ್ತು ಬರಬೇಕೆ ? ಎಂದು ಪ್ರತಿಯೊಬ್ಬರೂ ಸಂಕಟಪಡುವವರೇ.

ಒಂದು ಸಲ ಅವರ ಕಾಲೇಜಿನಲ್ಲಿ ವಾರ್ಷಿಕೋತ್ಸವ ನಡೆಸಿದರು. ಅಧ್ಯಕ್ಷತೆಗೆ ವಿದ್ಯಾಮಂತ್ರಿಗಳನ್ನೇ ಆಹ್ವಾನಿಸಿದ್ದರು. ಆಗ ರವಿ ಮೊದಲನೇ ವರ್ಷದ ಪಿ.ಯು.ಸಿ. ತರಗತಿಯಲ್ಲಿ ಓದುತ್ತಿದ್ದ. 16 ವರ್ಷದ ಪ್ರಾಯ, ನೋಡಲು ತುಂಬಾ ಸುಂದರ ನಾಗಿದ್ದ ರವಿಗೆ ಮೋಹಿನಿ ವೇಷ ಹಾಕಿ ತುಂಬಾ ಚೆನ್ನಾಗಿ ಅಲಂಕಾರ ಮಾಡಿದ್ದರು. ಮೋಹಿನಿ ಭಸ್ಮಾಸುರನ ನೃತ್ಯದೃಶ್ಯ ಕೇಳಬೇಕೇ ? ಬಳ್ಳಿ ಬಳುಕುವಂತೆ ವಿವಿಧ

ಭಂಗಿಯಲ್ಲಿ ರವಿ ಮೋಹಿನಿಯಾಗಿ ನೃತ್ಯ ಮಾಡುತ್ತಿದ್ದರೆ ಹೆಣ್ಣೆಂದೇ ಎಲ್ಲರೂ ಭ್ರಮಿಸಿದರು.

ಕಾಲೇಜಿನ ಅಧ್ಯಾಪಕರಿಗೇ ರವಿ ಈ ನೃತ್ಯದಲ್ಲಿ ಭಾಗವಹಿಸಿದ್ದಾನೆ ಎಂಬುದೇ ಗೊತ್ತಿಲ್ಲ. ಕಡೆಗೆ ಅವನ ಆಪ್ತಮಿತ್ರರಿಗೂ ಈ ಸುಳಿವು ಕೊಟ್ಟಿರಲಿಲ್ಲ.

ಭಸ್ಮಾಸುರನ ಪಾತ್ರ ವಹಿಸಿದ್ದ ಅವನ ಸ್ನೇಹಿತ ಶಂಕರನಿಗೆ ಮಾತ್ರ ಗೊತ್ತು. ಇವರಿಬ್ಬರೂ ಮಾತಾಡಿಕೊಂಡು ಮನೆಯಲ್ಲೇ ವೇಷ-ಭೂಷಣ ಮಾಡಿಕೊಂಡು ಇದ್ದಕ್ಕಿ ಇದ್ದಂತೆ ವೇದಿಕೆ ಮೇಲೆ ಬಂದು ನೃತ್ಯವನ್ನು ಪ್ರಾರಂಭಿಸಿದರು.

ರವಿ ನೃತ್ಯಾಭ್ಯಾಸದಲ್ಲೂ ಪರಿಣತನಾಗಿದ್ದ. ಇವರ ನೃತ್ಯ ಕಾರ್ಯಕ್ರಮ ಸಭಿಕರನ್ನು ದಂಗುಬಡಿಸಿತು. ಪುನಃ ಪುನಃ ಮಾಡಲು ಎಲ್ಲರೂ ಶಿಳ್ಳೆ ಹಾಕಲು ತೊಡಗಿದರು.

ಕಾಲೇಜಿನ ಯುವಕರು ಮೋಹಿನಿಯನ್ನು ಮೋಹಿಸಿದರು. "ಈ ಮೋಹಿನಿ ಯಾರೋ ? ನಮ್ಮ ಕಾಲೇಜಿನ ಯಾವ ತರಗತಿ ಇವಳು ? ಇವಳನ್ನು ನಾನು ಮಾತಾಡಿಸಲೇಬೇಕು" ಎಂದು ಒಬ್ಬರಿಗೊಬ್ಬರು ಪೈಪೋಟಿ ಮಾಡಿಕೊಂಡರು.

ಸಮಾರಂಭಕ್ಕೆ ಒಬ್ಬರು ಪ್ರಖ್ಯಾತ ಚಿತ್ರ ನಿರ್ದೇಶಕರಾದ ನಂದಕುಮಾರ್ ಬಂದಿದ್ದರು. ಅವರಂತೂ ಮೋಹಿನಿಯ ಮೋಹಕವಾದ ಕಣ್ಣಿಗೇ ಮಾರುಹೋದರು. ಹೇಗಾದರೂ ಮಾಡಿ ಈ ಹುಡುಗಿಯನ್ನು ತಮ್ಮ " ಅಮೃತವಾಹಿನೀ " ಚಿತ್ರಕ್ಕೆ ಮೋಹಿನಿಯಾಗಿ ತೆಗೆದುಕೊಳ್ಳಲೇಬೇಕು ಎಂದು ಕೂಡಲೇ ಎದ್ದು ಹೋಗಿ ಪ್ರಾಂಶುಪಾಲರನ್ನು ಕೇಳಿಯೇಬಿಟ್ಟರು. ಇವಳು ಯಾರ ಮಗಳು ? ನಾನು ಪರಿಚಯ ಮಾಡಿಕೊಳ್ಳಬೇಕು ಎಂದು ಕಾತುರಪಟ್ಟರು.

ವಿದ್ಯಾಮಂತ್ರಿಗಳಂತೂ ಈ ಹುಡುಗಿಯ ಕಲಾಪ್ರತಿಭೆ ಅಮೋಘವಾದದ್ದು ಇದೀಗ ನಾನು ಒಂದು ಸಾವಿರ ರೂಪಾಯಿಗಳ ಚೆಕ್ಕನ್ನು ಆಶೀರ್ವಾದ ರೂಪದಲ್ಲಿ ಕೊಟ್ಟಿದ್ದೇನೆ ಎಂದು ಘೋಷಿಸಿದರು. ಎಲ್ಲರೂ ಕರತಾಡನ ಮಾಡಿದರು.

ಕಾರ್ಯಕ್ರಮವೆಲ್ಲಾ ಆದ ನಂತರ ರವಿ ಮೋಹಿನಿ ರೂಪದಿಂದಲೇ ವೇದಿಕೆಯ ಮೇಲೆ ಬಂದು ಎಲ್ಲರಿಗೂ ಕೃತಜ್ಞತೆಯಿಂದ ವಂದಿಸಿ ತನ್ನ ವೇಷ-ಭೂಷಣಗಳನ್ನು ಎಲ್ಲರೆದುರಿಗೆ ಬಿಚ್ಚಿಹಾಕಿದ. ಒಳಗೆ ಪೈಜಾಮು, ಶರಟು ತೊಟ್ಟಿದ್ದ ರವಿಯನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು.

ಇಂಥಾ ಕಲಾವಿದ ಸುಂದರ ಯುವಕನ ಕಣ್ಣು ಹೋಗಿದ್ದು ಆಕಸ್ಮಿಕ ಒಂದು ಆಘಾತ.

ಅಂದು ರವಿ ಕಾಲೇಜಿಗೆ ಹೊರಟ. ಬೆಳಿಗ್ಗೆ ಒಂಭತ್ತು ಗಂಟೆ, ವಾಸಂತಿ ಬಾಗಿಲ ವರೆಗೂ ಬಂದು "ರವೀ ಊಟ ಮಾಡಿಕೊಂಡು ಹೋಗು, ಅಡಿಗೆ ಆಗಿದೆ" ಎಂದಳು.

ಅಲ್ಲಿಯೇ ಇದ್ದ ಭಾಗೀರಥಮ್ಮನವರು "ವಾಸಂತೀ ಎಲ್ಲಿಗಾದರೂ ಹೊರಟಾಗ ಊಟ ಮಾಡಿಕೊಂಡು ಹೋಗಿ ಅಂತ ಯಾರಿಗೂ ಹೇಳಬಾರದಮ್ಮ, ಬಾರೋ....ರವೀ ಇಲ್ಲಿ, ಸ್ವಲ್ಪಹೊತ್ತು ಕುಳಿತಿದ್ದು ಹೋಗು" ಅಂದರು.

ರವಿ ಬೀದಿ ಬಾಗಿಲು ದಾಟುತ್ತಾ "ಇದೆಲ್ಲಾ ಎಂಥಾ ಶಕುನ ಅಮ್ಮಾ ! ಸುಮ್ಮ ನಿರು, ಹೊತ್ತಾಯಿತು ನನಗೆ" ಎಂದು ಕಾಲೇಜಿಗೆ ಹೊರಟುಹೋದ. ಆ ದಿನ ರಾಸಾಯನಿಕ ಶಾಸ್ತ್ರ ಪಾಠ, ಪ್ರಯೋಗ ಇತ್ತು. ರಾಸಾಯನಿಕ ವಸ್ತುಗಳನ್ನು ಸೇರಿಸು ವಾಗ ಗಾಜಿನ ಜಾಡಿ ಸ್ಫೋಟನವಾಗಿ ಸಿಡಿದು ಆಸಿಡ್ ಗಾಜು ಎಲ್ಲಾ ರವಿಯ ಮುಖಕ್ಕೆ ಹಾರಿ ಕಣ್ಣು, ಮೂಗು, ಬಾಯಿ, ಎಲ್ಲಾದಕ್ಕೂ ಗಾಜಿನ ಚೂರು ತುಂಬಿಕೊಂಡಿತು. ಕಿಟಾರನೆ ಕಿರುಚಿಕೊಂಡಿದ್ದೊಂದೇ ಜ್ಞಾನ ರವಿಗೆ.

ಕಾಲೇಜಿನ ಜನ ಎಲ್ಲಾ ಬಂದು ಸೇರಿದರು. ರವಿಯನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿ ಮನೆಯವರಿಗೆ ಹೇಳಿ ಕಳುಹಿಸಿದರು.

ರವಿಯ ಸ್ಥಿತಿಯನ್ನು ನೋಡಿ ಮನೆಯವರ ಗೋಳು ಹೇಳತೀರದು. ಡಾಕ್ಟರು ಬಂದ್ರು ತುಂಬಿಕೊಂಡರು. ಪರೀಕ್ಷಿಸಿದರು. ರವಿಯ ಕಣ್ಣು ಸುಟ್ಟುಹೋಗಿ ಒಳಗೆಲ್ಲಾ ಗಾಜಿನ ಚೂರುಗಳು ಚುಚ್ಚಿಕೊಂಡಿದ್ದವು.

ಡಾಕ್ಟರುಗಳಿಗೇ ಬಹಳ ಸಂಕಟವಾಯಿತು. ಕಣ್ಣು ಉಳಿಯುವ ಸಂಭವವಿಲ್ಲ ವೆಂದು ತೀರ್ಮಾನಿಸಿದರು. ಗಾಬರಿಯಿಂದ ತಮ್ಮ ಹಿಂದೆ-ಹಿಂದೆ ಓಡಾಡುತ್ತಿದ್ದ ನಾಗರಾಜನನ್ನು ಸಮಾಧಾನ ಪಡಿಸುವುದಕ್ಕಾಗಿ "ಏನೂ ಪರವಾಗಿಲ್ಲ, ಸ್ವಲ್ಪ ಗಾಜಿನ ಚೂರು ಚುಚ್ಚಿರುವುದನ್ನು ತೆಗೆದರೆ ಸರಿಹೋಗುತ್ತೆ" ಎಂದು ಹೇಳಿದವರೇ ಒಳಕ್ಕೆ ಹೊರಟು ಹೋದರು. 3-4 ಜನ ಡಾಕ್ಟರುಗಳು ಸೇರಿ ಬಹಳ ಪರಿಶ್ರಮದಿಂದ ಗಾಜಿನ ಚೂರುಗಳನ್ನು ತೆಗೆದರು. ಕಣ್ಣಿಗೇ ಹೆಚ್ಚು ಅಪಾಯವಾಗಿತ್ತು.

ಔಷಧಿ ಮುಲಾಮನ್ನು ಹಾಕಿ ಕಣ್ಣಿಗೆ ಬ್ಯಾಂಡೇಜ್ ಕಟ್ಟಿದರು. ಇನ್ನು ಒಂದು ವಾರದ ನಂತರ ಪಟ್ಟಿ ಬಿಚ್ಚುವುದಾಗಿ ಹೇಳಿ ರವಿಯನ್ನು ವಾರ್ಡಿಗೆ ತಂದು ಮಲಗಿಸಿ ದರು. ಮುಖ ಪೂರ್ತಿ ಮುಚ್ಚಿ ಬ್ಯಾಂಡೇಜ್ ಮಾಡಿದ್ದ ಆ ಭಯಂಕರ ರೂಪವನ್ನು ನೋಡಿ ಮನೆಯವರೆಲ್ಲಾ ಗೋಳೋ ಎಂದು ಅತ್ತರು.

ರವಿಗೆ ಜ್ಞಾನ ಬಂದ ಕೂಡಲೇ "ಅಯ್ಯೋ ಅಮ್ಮಾ ನಾ ಸತ್ತೆ....ನನ್ನಿಂದ ಈ ಬಾಧೆ ಸಹಿಸುವುದಕ್ಕಾಗುವುದಿಲ್ಲ" ಎಂದು ನೋವಿನಿಂದ ವಿಲಿ-ವಿಲಿ ಒದ್ದಾಡಿದ.

ಎಂಟು ದಿನಗಳ ವೇಳೆಗೆ ಮುಖದ ಗಾಯವೆಲ್ಲಾ ಸ್ವಲ್ಪವಾಸಿಯಾಯಿತು ಆದರೆ ಕಣ್ಣಿನ ಪಟ್ಟಿ ಬಿಚ್ಚಿದಾಗ ರವಿಗೆ ಕಣ್ಣು ಹೋಗಿಬಿಟ್ಟಿದೆ, ಪೂರಾ ಕುರುಡನಾಗಿ ಬಿಟ್ಟ. ಎಂದು ಡಾಕ್ಟರಿಗೆ ಗೊತ್ತಾಯಿತು.

"ರವೀ ಮೆಲ್ಲನೆ ಕಣ್ಣು ತೆರೆಯಪ್ಪಾ" ಎಂದರು ಡಾಕ್ಟರು. ರವಿ ಜೀವ ಬಿಗಿ ಹಿಡಿದು ನಡುಗುವ ಕೈಗಳಿಂದ ಕಣ್ಣನ್ನು ಸವರಿಕೊಂಡು ಮೆಲ್ಲನೆ ತೆರೆದ. ಮನೆಯವ ರೆಲ್ಲಾ ಈ ಒಂದು ಘಳಿಗೆಯನ್ನು ಎದುರಿಸಲು ತವಕದಿಂದ ಕಾದು ಕುಳಿತಿದ್ದರು.

ಎಲ್ಲಿಡೆ ಶೂನ್ಯ ಕತ್ತಲು ಕವಿದಿತ್ತು. ರವಿ ಕಿಟಾರನೆ ಕಿರುಚಿ "ಅಮ್ಮಾ.... ಕಾಣೋಲ್ಲ ...ಏನೂ ಕಾಣೋಲ್ಲ, ಅಮ್ಮಾ ಎಲ್ಲಿದ್ದೀ" ಎಂದು ಕೂಗಿಕೊಂಡ.

ಭಾಗೀರಥಮ್ಮ ಬಹಳ ದುಃಖದಿಂದ ರವೀ ಎಂದು ಅವನ ಕೈ ಹಿಡಿದುಕೊಂಡರು

ಡಾಕ್ಟರು ಈ ದೃಶ್ಯವನ್ನು ನೋಡಲಾರದೇ ತಲೆತಗ್ಗಿಸಿಕೊಂಡು ಹೊರಟು ಹೋದರು

"ಅಮ್ಮಾ, ಅತ್ತಿಗೇ ಎಲ್ಲಿದ್ದೀರಾ ? ಕಾಣೋಲ್ಲ ಅತ್ತಿಗೇ, ನಾನು ಕುರುಡ, ನನ್ನ ಕಣ್ಣು ಹೋಯಿತು" ಎಂದು ಗಂಟಲು ಹರಿಯುವಂತೆ ಕಿರುಚಿ ಹಾಸಿಗೆಯ ಮೇಲೆ ಬಿದ್ದು ಬಿದ್ದು ತಲೆ ಚಚ್ಚಿಕೊಂಡ. ಅವನ ಗೋಳು ನೋಡುವವರ ಕರುಳು ಕಿತ್ತು ಬರುವಂತಿತ್ತು. ಮನೆಯವರಿಗೆಲ್ಲಾ ಅವನನ್ನು ಸಮಾಧಾನ ಮಾಡಬೇಕಾದರೆ ಸಾಕು ಸಾಕಾಗಿ ಹೋಯಿತು. ಕಾಲೇಜಿನ ಅಧ್ಯಾಪಕರೂ ರವಿಯ ಸ್ನೇಹಿತರೂ ಬಂದು ಬಂದು ರವಿಗೆ ಸಮಾಧಾನ ಹೇಳಿ ಹೋಗುತ್ತಿದ್ದರು. ಕಣ್ಣಿಲ್ಲದ ರವಿ ಯಾರನ್ನೂ ಗುರುತಿಸಲಾರ.

ಮನೆಗೆ ಬಂದಮೇಲೆ ರವಿ ಯಾವಾಗಲೂ ದುಃಖದಿಂದ ತನ್ನ ರೂಮಿನಲ್ಲಿ ಮಂಚದ ಮೇಲೆ ಮುದುರಿ ಕುಳಿತಿರುತ್ತಿದ್ದ. ಒಂದೊಂದು ಬಾರಿ ಹುಚ್ಚನಂತೆ ರೂಮಿನ ಬಾಗಿಲವರೆಗೆ ಬಂದು ತಲೆಯನ್ನು ಗಟ್ಟಿಸಿಕೊಳ್ಳುತ್ತಿದ್ದ. ವಾಸಂತಿಯೋ ನಾಗರಾಜನೊ ಓಡಿಬಂದು ರವಿಯನ್ನು ಹಿಡಿದು ಕರೆತಂದು ಹಾಸಿಗೆಯ ಮೇಲೆ ಮಲಗಿಸುತ್ತಿದ್ದರು.

ರವಿ ಸಂಕಟದಿಂದ ರೇಗಿ ಅಯ್ಯೋ ! ಅತ್ತಿಗೇ ! ರಾಜಾ ! ನನ್ನನ್ನು ಸಾಯಲೂ ನೀವು ಬಿಡೋಲ್ವೇನ್ರೋ ! ಎಂದು ಗೋಳೋ ಎಂದು ಅತ್ತುಬಿಡುತ್ತಿದ್ದ.

ನಾಗರಾಜನಿಗೆ ದುಃಖ ಉಕ್ಕಿ ಬಂದು "ರವೀ ಮೊದಲೇ ಕಣ್ಣು ನೋಯುತ್ತಿದೆ. ಇನ್ನೂ ಚೆನ್ನಾಗಿ ವಾಸಿಯಾಗಿಲ್ಲ, ಹೀಗೆಲ್ಲಾ ಅತ್ತು ಇನ್ನೂ ನೋವು ಮಾಡಿಕೊಳ್ಳ ಬೇಡ. ನಿನ್ನ ದಮ್ಮಯ್ಯ" ಅಂದು ಅವನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಗಳ-ಗಳ ಅತ್ತುಬಿಟ್ಟ. ಅಲ್ಲಿಯೇ ನಿಂತಿದ್ದ ವಾಸಂತಿ ರವಿಯ ಸಂಕಟವನ್ನು ನೋಡಿ ಸಹಿಸಲಾರದೇ ಬಾಯಿಗೆ ಸೀರೆ ಸೆರಗನ್ನು ಅದುಮಿಕೊಂಡು ಬಿಕ್ಕಿ-ಬಿಕ್ಕಿ ಅತ್ತಳು.

ಅಣ್ಣ–ಅತ್ತಿಗೆ ಇಬ್ಬರೂ ತನಗಾಗಿ ಪಡುತ್ತಿರುವ ಸಂಕಟ ರವಿಗೆ ಸಹಿಸಲಾಗುತ್ತಿರಲಿಲ್ಲ. ರವಿಯ ಅನೇಕ ಸ್ನೇಹಿತರು ಪ್ರತಿದಿನ ಬಂದು ಅವನ ಹತ್ತಿರ ಕುಳಿತು ಮಾತಾಡಿ ಅವನಿಗೆ ಸಮಾಧಾನ ನೀಡುತ್ತಿದ್ದರು.

ಅವನ ಆತ್ಮೀಯ ಸ್ನೇಹಿತ ಬಾಲಚಂದ್ರ ಬಂದ. ಅವನ ಧ್ವನಿ ಕೇಳಿದ್ದೇ ರವಿ ಕೈಯಿಂದ ತಡವರಿಸುತ್ತಾ ಅವನ ಬಳಿ ಬಂದು ಅವನನ್ನು ಗಟ್ಟಿಯಾಗಿ ತಬ್ಬಿಕೊಂಡು "ಬಾಲೂ ! ನೀನು ನನ್ನ ನಿಜವಾದ ಸ್ನೇಹಿತನೇನೋ ?" ಅಂದ

"ಯಾಕೋ ರವೀ....ಹೀಗಂತೀ.... ನಾನು ಪ್ರತಿ ದಿನ ಬರುತ್ತೇನಲ್ಲೋ.... ಏನಪ್ಪಾ ಮಾಡ್ಲೀ ?

"ಬಾಲೂ ನನಗೆ ಇನ್ನು ಕಣ್ಣು ಬರೋಲ್ವೇನೊ ? ಗೋಗರೆದು ಕೇಳಿದ

"ಯಾಕೋ ನಿರಾಶನಾಗ್ತೀಯ ಬರುತ್ತೆ ಸುಮ್ಮನಿರು".

"ಅಲ್ಲಾ ಕಣೋ ಬಾಲೂ, ಹುಟ್ಟಿದಾಗಿನಿಂದಲೇ ಕುರುಡನಾಗಿದ್ದಿದ್ದರೆ ಚಿಂತೆಯೇ ಇರಲಿಲ್ಲ ಕಣೋ... ಕಾಲೇಜಿಗೆ ಸೇರಿ ವಿದ್ಯಾವಂತನಾಗಿ ಆಟಗಳಲ್ಲೆಲ್ಲಾ ಗೆದ್ದು ಕುಣಿದು ಕುಪ್ಪಳಿಸುತ್ತಿದ್ದ ನಾನು ಈಗ ಮೂಲೆಗುಂಪಾಗಿ ಬಿದ್ದಿರಲೇನೋ ? ನನ್ನ ಪಾಲಿಗೆ ಪ್ರಪಂಚವೇ ಶೂನ್ಯವಾಯಿತಲ್ಲೋ ಬಾಲೂ.... ಒಂದೊಂದು ಕ್ಷಣವೂ ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ಒದ್ದಾಡುತ್ತಿದ್ದೇನೆ ಕಣೋ, ನನ್ನ ಸಂಕಟ ಯಾರಿಗೆ ಅರ್ಥವಾಗುತ್ತೋ ಎಂದು ಬಾಲುವಿನ ಭುಜದ ಮೇಲೆ ತಲೆಯಿಟ್ಟು ಬಿಕ್ಕಿ–ಬಿಕ್ಕಿ ಅತ್ತ.

ನೋಡು ರವೀ ಸುಮ್ಮನೆ ಒದ್ದಾಡ್ತೀ.... ನಿನ್ನದೇ ಚಿಂತೆ ಎಲ್ಲರಿಗೂ ನಿನ್ನ ಕಣ್ಣು ಒಳಗಡೆ ಚೆನ್ನಾಗಿ ವಾಸಿಯಾಗಲಿ. ಒಳ್ಳೆ ಕಣ್ಣು ಡಾಕ್ಟರುಗಳು ಬೇಕಾದಷ್ಟು ಜನ ಇದಾರೆ ತೋರಿಸೋಣ ಎಂದು ಸಮಾಧಾನ ಮಾಡಿದ ಬಾಲು.

ಬಾಲೂ ಅಮ್ಮ ಆವತ್ತಿನಿಂದ ಕೊರಗಿ ಹಾಸಿಗೆ ಹತ್ತಿ ಮಲಗಿಬಿಟ್ಟಿದ್ದಾರೆ. ಎಲ್ಲಾದಕ್ಕೂ ನನಗೆ ಒಬ್ಬರ ಸಹಾಯ ಬೇಕು. ನನ್ನ ಅತ್ತಿಗೆ ಮಹಾತಾಯಿ ನನ್ನ ಭಾಗದ ದೇವರು ಕಣೋ ಸದಾ ನನ್ನ ಉಪಚಾರವೇ ಆಗಿಹೋಯಿತು ಅವರಿಗೆ. ಅವರ ಋಣ ಹೇಗೆ ತೀರಿಸಲೋ ಬಾಲೂ....?

"ನೀನು ಅದೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬೇಡ ಸುಮ್ಮನಿರು" ಎಂದು ಬಾಲು ಅವನ ಬೆನ್ನಮೇಲೆ ಆತ್ಮೀಯತೆಯಿಂದ ಕೈಯಾಡಿಸಿದ.

ಅಲ್ಲಿಯೇ ನಿಂತು ಎಲ್ಲಾ ಕೇಳಿಸಿಕೊಳ್ಳುತ್ತಿದ್ದ ವಾಸಂತಿ "ರವೀ....ಇನ್ನು ಮೇಲೆ ಹೀಗೆಲ್ಲಾ ಹೇಳಬೇಡ, ನೋಡಪ್ಪಾ ಬಾಲು, ಇವನಿಗೆ ನಾವು ಎಷ್ಟು ಸಮಾಧಾನ ಹೇಳಿದರೂ ನಾನು ಮನೆಯವರಿಗೆ ಹುಳ್ಳಾದೆನಲ್ಲಾ; ಎಂದು ಕೊರಗುತ್ತಾನೆ. ಸಧ್ಯ ನಾವು ಹೇಗಾದರೂ ಮಾಡುತ್ತೇವೆ, ಇವನು ಮಾಡಿಸಿಕೊಳ್ಳುವ ಸಂಕೋಚ ನಾವು ನೋಡಲಾರೆವು" ಎಂದಳು.

"ಅತ್ತಿಗೇ ; ನಾನು ಅನೇಕ ಡಾಕ್ಟರುಗಳನ್ನು ವಿಚಾರಿಸಿದ್ದೇನೆ. ಇನ್ನೂ ಸ್ವಲ್ಪ ದಿನ ಆಗಲಿ, ಕಣ್ಣಿನ ಹುಣ್ಣು ವಾಸಿಯಾಗಲಿ ಟೆಸ್ಟ್ ಮಾಡೋಣ ಎಂದಿದ್ದಾರೆ. ಅಷ್ಟರಲ್ಲಿ ಇವನು ಹೀಗಾಡಿದರೆ ಹೇಗೆ ಅತ್ತಿಗೇ ?" ಅಂದ ಬಾಲು.

ಬಾಲಚಂದ್ರ ಆಗಾಗ ಇವರ ಮನೆಗೆ ಬರುತ್ತಿದ್ದುದರಿಂದ ವಾಸಂತಿಯನ್ನು ಅತ್ತಿಗೇ ಎಂದೇ ಕರೆಯುತ್ತಿದ್ದ.

ರವಿ ಹೀಗಾದ ಮೇಲೆ ಪರಮಶಿವಯ್ಯನವರು ಅಲೆದಲೆದು ಅನೇಕ ಕಣ್ಣಿನ ಪರೀಕ್ಷೆಯ ಡಾಕ್ಟರುಗಳನ್ನು ಕಂಡು ರವಿಯ ಸ್ಥಿತಿಯನ್ನು ವಿವರಿಸುತ್ತಿದ್ದರು. ಅನೇಕ ಡಾಕ್ಟರು ಕಣ್ಣು ಸುಟ್ಟಮೇಲೆ ಗುಳ್ಳೆ ಹೋಗಿಬಿಡುತ್ತೆ. ಮತ್ತೆ ಬರುವುದಿಲ್ಲ ಎಂದರು. ಕೆಲವರು ಆಮೇಲೆ ನೋಡೋಣ ಎಂದು ಎಲ್ಲರೂ ನಿರಾಶೆಯನ್ನೇ ವ್ಯಕ್ತಪಡಿಸಿದರು.

ಆಗಿನಿಂದ ಪರಮಶಿವಯ್ಯನವರು ಜೀವನದಲ್ಲಿಯೇ ವಿರಕ್ತಿಗೊಂಡು ಯಾರ ಕೈಯ್ಯಲ್ಲೂ ಹೆಚ್ಚು ಮಾತನ್ನೂ ಆಡದೆ ಮೌನವಾಗಿ ಕಾಲ ಕಳೆಯುತ್ತಿದ್ದರು.

ಗಲಗಲನೆ ನಗುತ್ತಾ ನಂದನವನದಂತಿದ್ದ ಅವರ ಸಂಸಾರ ಚಂದ್ರಮನಿಗೆ ಗ್ರಹಣ ಬಡಿಯಿತು. ಯಾರಿಗೂ ಉತ್ಸಾಹವಿಲ್ಲ, ಆಸಕ್ತಿಯಿಲ್ಲ, ಒಬ್ಬರಿಗೊಬ್ಬರಿಗೆ ಹೆಚ್ಚು ಮಾತೇ ಇಲ್ಲ ಯಾಂತ್ರಿಕವಾಗಿ ಊಟ, ಕೆಲಸ, ನಿದ್ದೆ ಮಾಡುತ್ತಿದ್ದರು

ವಾಸಂತಿಯ ತಲೆಯ ಮೇಲೆ ಬಹಳ ಜವಾಬ್ದಾರಿ ಬಿತ್ತು. ಭಾಗೀರಥಮ್ಮನವರು ಏನೋ ಮಂಕು ಕವಿದಂತೆ ಸುಮ್ಮನೆ ಕೂತುಬಿಡುತ್ತಿದ್ದರು. ಪರಮಶಿವಯ್ಯನವರು ಯಾವ ಮಾತಿಗೂ ಬರುತ್ತಿರಲಿಲ್ಲ. ನಾಗರಾಜ ಬೆಳಗ್ಗೆ 10 ಗಂಟೆಗೆ ಬ್ಯಾಂಕಿಗೆ ಹೋದರೆ ಸಾಯಂಕಾಲ 5 ಗಂಟೆಗೆ ಮನೆಗೆ ಬರುತ್ತಿದ್ದ.

ಅಷ್ಟರಲ್ಲಿ ವಾಸಂತಿ ಒಬ್ಬಳೇ ಎಲ್ಲಾ ಕೆಲಸ ನಿಭಾಯಿಸಬೇಕಾಗುತ್ತಿತ್ತು. ಎಲ್ಲರನ್ನೂ ಊಟಕ್ಕೆ ಎಬ್ಬಿಸಿ ಊಟ ಮಾಡಿಸುವುದೇ ಒಂದು ಗಂಡಾಂತರವಾಗಿ ಬಿಡುತ್ತಿತ್ತು.

ಬೆಳಗ್ಗೆ ಎದ್ದ ಕೂಡಲೇ ರವಿಯ ಶುಶ್ರೂಷೆ ಶುರುವಾಗುತ್ತಿತ್ತು. ಈಗೀಗ ನಾಗರಾಜ ಬೆಳಗ್ಗೆ ಎದ್ದು ಹೆಂಡತಿಯ ಕಷ್ಟ ನೋಡಲಾರದೆ ಆದಷ್ಟು ಸಹಾಯ ಮಾಡುತ್ತಿದ್ದ.

"ರವೀ ... ಏಳಪ್ಪಾ.... ಮುಖ ತೊಳೆದುಕೋ" ಎಂದು ನಾಗರಾಜ ಮಲಗಿದ್ದ ರವಿಯ ತಲೆಯನ್ನು ಪ್ರೀತಿಯಿಂದ ನೇವರಿಸಿದ.

"ರಾಜಾ ನೀನು ಹೋಗಿ ಕಾಫಿ ಕುಡಿ. ನಾನೇ ಮೆಲ್ಲಗೆ ಬಚ್ಚಲ ಮನೆಗೆ ಹೋಗಿ ಮುಖ ಕೈಕಾಲು ತೊಳೆದುಕೊಳ್ಳುತ್ತೇನೆ".

"ನಿನ್ನ ಬಿಟ್ಟು ಎಂದು ನಾನೊಬ್ಬ ಕಾಫಿ ಕುಡಿದಿದ್ದೇನೆಯೋ ರವಿ ? ಏಳು ಬಾ ಎಂದು ಎಬ್ಬಿಸಿದ ನಾಗರಾಜ.

ಅಣ್ಣ ತನ್ನನ್ನು ಮೊದಲಿಗಿಂತ ಹೆಚ್ಚಾಗಿ ಪ್ರೀತಿಸುತ್ತಿರುವುದು ರವಿಗೆ ಇನ್ನೂ ದುಃಖ ಬರಿಸುತ್ತಿತ್ತು. "ರಾಜಾ.... ಹೊರಗೂ ಒಳಗೂ ನೀನೊಬ್ಬ ದುಡಿಯುವಂತಾಯಿತೆ.

ನಾನು ಸಂಪಾದಿಸಿ ನಿನಗೆ ಒತ್ತಾಸೆಯಾಗುವ ಕಾಲಕ್ಕೆ ನಿನಗೇ ಹೊರೆಯಾದೆ" ಎಂದು ಎರಡೂ ಕೈಗಳಿಂದ ತಡವರಿಸಿ ನಾಗರಾಜನ ಕೈಯ್ಯನ್ನು ಭದ್ರವಾಗಿ ಹಿಡಿದುಕೊಂಡು ಅತ್ತ ರವಿ.

"ರವೀ.... ನೋಡು ನನಗಿನ್ನು ಸಿಟ್ಟು ಬರುತ್ತಪ್ಪ, ಮೂರು ಹೊತ್ತೂ ಸಂಪಾದಿಸಲಿಲ್ಲವಲ್ಲಾ ! ಎಂದು ನೀನು ಹೀಗೆ ಕೊರಗಿದರೆ ಹೇಗೆ ಬುದ್ಧಿ ಹೇಳುವುದು? ಮನುಷ್ಯ ಅಂದಮೇಲೆ ಕಷ್ಟ ಬಂದೇ ಬರುತ್ತೆ, ಅದನ್ನು ಧೈರ್ಯವಾಗಿ ಎದುರಿಸಬೇಕಪ್ಪಾ ಹೀಗೆ ಮಾತು ಮಾತಿಗೆ ಹೇಡಿಯಂತೆ ಅಳುತ್ತಾರೇನೋ ? ಏಳು ಮೇಲಕ್ಕೆ" ಎಂದು ಗದರಿದ ನಾಗರಾಜ.

"ರಾಜಾ ನನ್ನ ಪಾಲಿಗೆ ಈಗ ಅಳುವುದೊಂದೇ ವಿಧಿ ಕೊಟ್ಟು ಕೊಡುಗೆ. ನೀನೊಬ್ಬ ಸಂಪಾದಿಸೋದು ನಾವೆಲ್ಲಾ ಕುಳಿತು ತಿನ್ನೋದು, ನಿನ್ನ ಹೆಗಲ ಮೇಲೆ ಇಷ್ಟು ಜನರ ಭಾರ, ನಾನು ಹೇಗೆ ಸಂಪಾದಿಸಲೀ ? ಎಂದು ಯೋಚಿಸುತ್ತೇನೆ" ಎಂದು ರವಿ ಎದ್ದು ನಾಗರಾಜನ ಆಸರೆಯಿಂದ ಬಚ್ಚಲು ಮನೆ ಕಡೆ ನಡೆದ.

ವಾಸಂತಿ ಅಡಿಗೇ ಮನೆಯಿಂದ "ರವೀ ನಿನ್ನ ಗೋಳಾಟ ಶುರು ಮಾಡಿದೆಯಾ? ಇಬ್ಬರೂ ಬನ್ನಿ ಬೇಗ, ಕಾಫಿ ಆರಿಹೋಗುತ್ತೆ" ಎಂದು ಕೂಗಿದಳು.

ರವಿ ಬಿಸಿ ಕಾಫಿ ಹೀರುತ್ತಾ "ಅತ್ತಿಗೇ ನಾನು ನಿಮ್ಮ ಮಗುವಾಗಿ ಬಿಟ್ಟಿದ್ದೇನೆ. ನನ್ನನ್ನು ಸುಧಾರಿಸುವ ಹೊತ್ತಿಗೇ ನಿಮಗೆ ಸಾಕು ಸಾಕಾಗಿ ಹೋಗುತ್ತೆ" ಎಂದ.

"ಸರಿ ಹಾಗೆಯೇ ಆಗಲಿ ಬಿಡು, ನೀನೇ ನನ್ನ ಮಗು ಆಯ್ತೋ" ಎಂದು ಸಮಾಧಾನ ಹೇಳಿದಳು. ಅವನ ಮುಖದ ಹತ್ತಿರ ಬಗ್ಗಿ ಅವನ ಕಣ್ಣುಗಳನ್ನೇ ದಿಟ್ಟಿಸಿ ನೋಡಿದಳು. ಕರಿಯ ಗುಳ್ಳೆಯಾಗಲಿ, ಬಿಳಿಯ ಗುಳ್ಳೆಯಾಗಲಿ ವ್ಯತ್ಯಾಸವೇ ತಿಳಿಯದೆ ಕಣ್ಣು ಪೂರಾ ಕೆಂಪಗೆ ಮಾಂಸದ ಉಂಡೆಯಾಗಿತ್ತು. ಮುಖವೇ ಭಯಂಕರ ವಾಗಿ ಕಾಣುತ್ತಿತ್ತು. ಮುಖದ ಮೇಲೂ ಅಲ್ಲಲ್ಲೇ ಗಾಯದ ಗುರುತು.

ನೋಡುತ್ತಿದ್ದಂತೆ ವಾಸಂತಿಯು ಕಣ್ಣುಗಳಿಂದ ಪಟ–ಪಟನೆ ನೀರುದುರಿತು. ರವಿಯ ಆಕರ್ಷಕವಾದ ಹೊಳಪಿನ ಕಣ್ಣು ಹೀಗಾಯಿತೇ ? ಎಂದು ಬಹಳ ದುಃಖದಿಂದ ತಲೆ ಕೊಡವಿದಳು. ನಾಗರಾಜ ಆ ದೃಶ್ಯವನ್ನು ನೋಡಲಾರದೇ ದುಃಖವನ್ನು ತಡೆದು ಮೌನವಾಗಿ ಅಲ್ಲಿಂದ ಎದ್ದು ಹೋದ.

ರವಿ ಅಣ್ಣಾ ! ಎಂದು ಮಗ್ಗುಲಲ್ಲಿ ತಡವರಿಸಿದ, ಇರಲಿಲ್ಲ. "ಅತ್ತಿಗೇ.... ನನಗೆ ಗೊತ್ತು, ಅಣ್ಣ ಹೇಗೆ ದುಃಖವನ್ನು ಎದೆಯಲ್ಲಿಯೇ ತುಂಬಿಕೊಂಡು ಬೇಯುತ್ತಿದ್ದಾನೆ ಎಂಬು. ನೀವೂ ನನ್ನನ್ನು ನೋಡಿ ಅಳುತ್ತಿದ್ದೀರಾ ತಾನೇ ? ಈ ಮನೆಗೇ ಮೃತ್ಯುವಾದೆ ನಾನು, ಅತ್ತಿಗೇ ಆಗ ನಾನು ಸತ್ತು ಹೋಗಿದ್ದರೇ ಚೆನ್ನಾಗಿತ್ತು".

"ಆಯಿತೇನೋ ನಿನ್ನ ಪುರಾಣ ? ಈಗ ಯಾರು ಅತ್ತವರು ? ಪ್ರಪಂಚದಲ್ಲಿ

ನಮಗಿಂತ ಕಷ್ಟದಲ್ಲಿರುವವರನ್ನು ನೋಡಿ ನಾವು ಸಮಾಧಾನ ಪಡೆಯಬೇಕು. ನಾವೇನು ಅಳುತ್ತಿಲ್ಲ, ಏಳು ನೀರು ತೋಡಿಕೊಡುತ್ತೇನೆ ಸ್ನಾನ ಮಾಡುವಿಯಂತೆ" ಎಂದು ಎಬ್ಬಿಸಿ ಕೈ ಹಿಡಿದು ಕರೆದುಕೊಂಡು ಹೋದಳು ವಾಸಂತಿ. ತನ್ನ ದುಃಖವನ್ನು ಮರೆಸುವುದರಲ್ಲಿ ಅವಳ ಪ್ರಯತ್ನ.

ಹೀಗೆಯೇ ಅವರ ಮನೆಯ ದಿನಚರಿ ಗೋಳಿನಲ್ಲಿ ಸಾಗಿತ್ತು. ಮತ್ತೊಂದು ದಿನ ರವಿ ಸ್ನಾನ ಮಾಡಿ ಒದ್ದೆ ಟವಲನ್ನೇ ಮೈಗೆ ಸುತ್ತಿಕೊಂಡು ತನ್ನ ರೂಮಿಗೆ ತಡವರಿಸಿ ಕೊಂಡು ಬಂದ. ಪ್ರತಿದಿನ ಇಡುವ ಸ್ಟ್ಯಾಂಡಿನ ಮೇಲೆ ಅವನ ಒಗೆದ ಉಡುಪುಗಳು ಸಿಕ್ಕಲಿಲ್ಲ.

ಅತ್ತಿಗೇ.... ಅತ್ತಿಗೇ.... ಎಂದು ಎರಡು ಬಾರಿ ಕೂಗಿದ. ಏನೋ ಕೆಲಸಕ್ಕಾಗಿ ಹೊರಗೆ ಕಾಂಪೌಂಡು ಕಡೆ ಹೋಗಿದ್ದ ವಾಸಂತಿಗೆ ರವಿ ಕೂಗಿದ್ದು ಕೇಳಿಸಲಿಲ್ಲ. ಹಾಗೆಯೇ ತಡವರಿಸುತ್ತಾ ರವಿ ಹಾಲಿಗೆ ಬಂದ. ಅಲ್ಲಿ ಹಾಕಿದ್ದ ಸೋಫಾ ಎಡವಿ ಗೋಡೆಯ ಕಡೆ ವಾಲಿದ. ಗೋಡೆಗೆ ಹಾಕಿದ್ದ ಪಟದ ಮೊಳೆ ಹಣೆಗೆ ಚುಚ್ಚಿ ಗಾಯ ದಿಂದ ದಳ-ದಳನೆ ರಕ್ತ ಸುರಿಯಲು ಶುರುವಾಯಿತು.

ಅಮ್ಮಾ !.... ಎಂದು ಗಟ್ಟಿಯಾಗಿ ಕೂಗಿಕೊಂಡ. ಈ ಕೂಗಿಗೆ ಗಾಬರಿಯಾಗಿ ವಾಸಂತಿ ಒಳಕ್ಕೆ ಬಂದಳು. ಭಾಗೀರಥಮ್ಮನವರೂ. ಪರಮಶಿವಯ್ಯನವರೂ ಓಡೋಡಿ ಬಂದರು. ರಕ್ತದ ಧಾರೆ ಮುಖ ಮೈಮೇಲೆಲ್ಲಾ ಹರಿದು ರವಿ ನೋಡಲು ಭಯಂಕರನಾಗಿದ್ದ.

ಒದ್ದೆ ಟವಲು ಮೈಗಂಟಿಕೊಂಡಿದೆ. ಮೇಲ್ಭಾಗ ಬರಿಮೈ ರಕ್ತದಿಂದ ತೊಯ್ದು ಹೋಗಿದೆ.

ಇವನ ಅವಸ್ಥೆಯನ್ನು ನೋಡಿ ವಾಸಂತಿ ಭಯದಿಂದ "ಅಯ್ಯೋ ರವೀ ಏನಾಯಿತೋ ಎಂದು ಕೂಗಿ ಅವನನ್ನು ಹಿಡಿದುಕೊಂಡಳು. ಭಾಗೀರಥಮ್ಮನವರು ದುಃಖದಿಂದ ತತ್ತರಿಸಿ "ಅಯ್ಯೋ... ದೇವರೇ.... ಇದನ್ನೆಲ್ಲಾ ನೋಡುವುದು ನನ್ನ ಕರ್ಮವಾಯಿತೆ" ಎಂದು ಅಲ್ಲಿಯೇ ಕುಸಿದು ಕುಳಿತರು.

ಪರಮಶಿವಯ್ಯನವರು ಬೇಗ ಒಂದು ಪಾತ್ರೆಯಲ್ಲಿ ನೀರು ಒಂದು ಬಟ್ಟೆ ತಂದರು. ವಾಸಂತಿ ಒದ್ದೆ ಬಟ್ಟೆಯಿಂದ ಅವನ ಮುಖ ಮೈ ಎಲ್ಲಾ ಒರೆಸಿ ಆ ರಕ್ತ ವನ್ನೆಲ್ಲಾ ತೊಳೆದಳು. ರವಿ ಒಂದು ಮಾತೂ ಆಡಲಿಲ್ಲ.

ಹಣೆಯ ಗಾಯದಿಂದ ರಕ್ತ ಸೋರುತ್ತಲೇ ಇತ್ತು. "ಮಾವ .... ಮೊದಲು ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಬ್ಯಾಂಡೇಜ್ ಮಾಡಿಸಬೇಕು ರಕ್ತ ನಿಲ್ಲಲಿಲ್ಲ" ಎಂದಳು ವಾಸಂತಿ.

ಪರಮಶಿವಯ್ಯನವರಿಗೆ ಮಗನ ಸ್ಥಿತಿಯನ್ನು ನೋಡಲಾರದ ಸಂಕಟ, ಜೊತೆಗೆ

ಕೋಪವು ಬಂದುಬಿಟ್ಟಿತು.

"ಒಂದು ಕಡೆ ತೆಪ್ಪಗೆ ಬಿದ್ದಿರೋಕೇನೋ ! ಪಾಪಿಸೂಳೇಮಗನೇ.... ನಮ್ಮ ಹೊಟ್ಟೆ ಎಷ್ಟು ಉರಿಸ್ತೀಯೋ ?" ಎಂದು ಬೈದರು.

"ಯಾಕಪ್ಪಾ ; ರವೀ ಈ ಕಡೆ ಬಂದೆ ? " ವಾಸಂತಿ ಕರುಣೆಯಿಂದ ಕೇಳಿದಳು.

ರವಿ ಅಳುತ್ತಾ ... ಸಾಕು ಅತ್ತಿಗೇ ನನ್ನ ಈ ಬಾಳಿನ ಗೋಳು. ನನ್ನ ನಿಕ್ಕರು ಪಂಚೆ ಒಂದೂ ನನಗೆ ಸಿಕ್ಕಲಿಲ್ಲ. ಯಾರನ್ನು ಕೇಳಲಿ ?

ಏನಮ್ಮಾ.... ವಾಸಂತೀ !.... ನಿನಗಾಗಲೇ ನನ್ನ ಈ ಕುರುಡು ಮಗನ ಮೇಲೆ ಉದಾಸೀನ ಬಂದು ಬಿಡ್ತಾ ? ಇನ್ನೊಂದು ಕ್ಷಣ ನೀನು ಈ ಮನೆಯಲ್ಲಿ ಇರುವುದು ಬೇಡ. ನಿನ್ನ ಗಂಡನನ್ನೂ ಕರೆದುಕೊಂಡು ಬೇರೆ ಹೋಗಿ ಸುಖವಾಗಿರು. ನಾವು ಹೇಗೋ ನೋಡಿಕೊಳ್ಳುತ್ತೇವೆ ಎಂದು ವಿಪರೀತ ಕೋಪದಿಂದ ಗುಡುಗಿದರು.

ವಾಸಂತಿ ಎಂದೂ ಮಾವನವರ ಇಂಥಾ ಕೋಪವನ್ನು ನೋಡಿರಲಿಲ್ಲ. ಗಡ ಗಡನೆ ನಡುಗಿಹೋದಳು ರವೀ.... ನಿನ್ನ ಒಗೆದ ಬಟ್ಟೆಗಳನ್ನೆಲ್ಲಾ ಬಚ್ಚಲುಮನೆ ಸ್ಟ್ಯಾಂಡಿನ ಮೇಲೆಯೇ ಇಟ್ಟಿದ್ದೆ. ಹೇಳುವುದು ಮರೆತೆ... ಎಂದಳು ಮೆಲ್ಲನೆ.

ತಂದೆಯ ರೋಷ, ಅತ್ತಿಗೆಯ ನೊಂದ ನುಡಿ. ಈ ಅವಾಂತರಕ್ಕೆಲ್ಲಾ ಕಾರಣ ನಾದ ತನ್ನ ಮೇಲೆಯೇ ರವಿಗೆ ಸಿಟ್ಟು ಬಂದಿತು.

ಅತ್ತಿಗೇ... ನನ್ನನ್ನು ಕ್ಷಮಿಸಿ,.... ನಂದೇ ತಪ್ಪು, ನಾನು ಹೊರಕ್ಕೆ ಬರಬಾರ ದಾಗಿತ್ತು. ಸೋಫಾ ಎಡವಿಬಿಟ್ಟೆ ಗೋಡೆಗೆ ತಲೆ ಬಡಿಯಿತು ಅಷ್ಟೆ. ನನಗೇನೂ ಆಗಿಲ್ಲ ಎಂದು ರೂಮಿನ ಕಡೆ ಹೊರಟ. ವಾಸಂತಿ ಅವನ ಕೈ ಹಿಡಿದು ಕರದುಕೊಂಡು ಹೋಗಿಬಿಟ್ಟಳು.

ನಾನು ಆಟೋ ತರೋ ಹೊತ್ತಿಗೆ ಬಟ್ಟೆ ಹಾಕಿಕೊಳ್ಳೋ ಎಂದು ಹೇಳಿದವರೇ ಪರಮಶಿವಯ್ಯನವರು ಹೊರಕ್ಕೆ ಹೋದರು.

ಭಾಗೀರಥಮ್ಮನವರು ಮಾತಾಡುವ ಸ್ಥಿತಿಯಲ್ಲಿಯೇ ಇರಲಿಲ್ಲ ಗರ ಬಡಿದಂತೆ ಕುಳಿತರು.

ವಾಸಂತಿ ಅವನ ನಿಕ್ಕರ್ ಬನಿಯನ್ ಎಲ್ಲಾ ತಂದು ಕೈಗೆ ಕೊಟ್ಟು ಹಾಕ್ಕೋ ರವೀ ಆಟೋ ಬಂದುಬಿಡುತ್ತೆ ಅಂದಳು. ನಾನು ಯಾವ ಪಾಪಿಗೂ ಹೋಗೋಲ್ಲ ಅತ್ತಿಗೆ.

ನೀನು ಹೋಗಲೇ ಬೇಕು ರವಿ, ರಕ್ತ ಇನ್ನೂ ನಿಂತಿಲ್ಲ. ರವಿ ಕೈಯಿಂದ ಮುಟ್ಟಿ ಮುಟ್ಟಿ ಬಟ್ಟೆಗಳನ್ನು ಗುರುತಿಸುತ್ತಿದ್ದ. ಪ್ರಾಯಕ್ಕೆ ಬಂದ ರವಿ ದಷ್ಟ ಪುಷ್ಟವಾಗಿ ಬೆಳೆದಿದ್ದ. ಹರವಾದ ಎದೆಯ ಬಿಳುಪನ್ನು ತೋರುವಂತ ಕಪ್ಪು ರೋಮದ ಒತ್ತು ಪುಷ್ಟವಾದ ತೋಳು ತೊಡೆಗಳು. ತಲೆ ಎತ್ತಿ ನೋಡುವಂತಹ ಎತ್ತರದ ಮೈ. ಇಂತಹ

ಉಕ್ಕುವ ಹರೆಯದ ಗಂಡಸಿಗೆ ನಾನು ನಾಚಿಕೆ ಬಿಟ್ಟು ಎಲ್ಲಾ ಸೇವೆ ಹೇಗೆ ಮಾಡಲಿ? ಅನ್ನಿಸಿತು ಒಂದು ಕ್ಷಣ ವಾಸಂತಿಗೆ.

ಅಷ್ಟಕ್ಕೆ ಸರಿಯಾಗಿ ರವಿ ಅತ್ತಿಗೇ ಇಷ್ಟು ಸೇವೆ ಮಾಡುವ ನಿಮ್ಮ ಮನಸ್ಸನ್ನು ನಾನು ಇವತ್ತು ನೋಯಿಸಿದೆ ಕ್ಷಮಿಸಿ ಎಂದು ಬಗ್ಗಿ ಅವಳ ಕಾಲಿಗೆ ನಮಸ್ಕರಿಸಿದ.

ಛೆ....ಪಾಪ ಮಗುವಿನಂಥ ಹುಡುಗ ಎನ್ನಿಸಿತು. ವಾಸಂತಿ ಅವನ ತೋಳನ್ನು ಹಿಡಿದೆತ್ತಿ ಅದೆಲ್ಲಾ ಇರಲಿ, ಮೊದಲು ಬಟ್ಟೆ ಹಾಕಿಕೋ.... ಎಂದು ಹೇಳಿ ಅವಳು ಹೊರಕ್ಕೆ ಹೋದಳು.

ಅವಳು ಮದುಮಗಳಾಗಿ ಈ ಮನೆಗೆ ಬಂದ ಹೊಸದರಲ್ಲಿ ತನ್ನ ಓರಿಗೆಯವನೇ ಆದ ರವಿಯನ್ನು ಕಂಡರೆ ನಾಚುತ್ತಿದ್ದಳು. ನೇರ ಅವನ ಮುಖ ನೋಡಲಾರದಿದ್ದಳು.

ಆದರೆ ರವಿ ತುಂಟ ಮಗುವಿನಂತೆ "ಅತ್ತಿಗೆ ಇದೋ ನೋಡಿ ನನ್ನ ಕೈಯ್ಯಲ್ಲಿ ಒಂದು ಸಣ್ಣ ಮುಳ್ಳು ಚುಚ್ಚಿದೆ ತೆಗೆಯಿರಿ ಸ್ವಲ್ಪ" ಎಂದು ಅವನ ಕೈಯನ್ನು ಅತ್ತಿಗೆಯ ಮುಂದೆ ನೀಡುತ್ತಿದ್ದ.

ಕೆಂಪಗೆ ಪುಷ್ಟವಾದ ಅವನ ಅಂಗೈ ಹಿಡಿದು ಮುಳ್ಳು ತೆಗೆಯುವಾಗ ಅವಳ ಮೈ ಜುಂ....ಎಂದದ್ದುಂಟು.

ಅತ್ತಿಗೇ....ಅತ್ತಿಗೇ ಕಾಲೇಜಿಗೆ ಹೊತ್ತಾಯಿತು ಈ ಒರಟು ಕೂದಲು ಎಷ್ಟು ಬಾಚಿದರೂ ಕ್ರಾಪು ಸರಿಯಾಗಲಿಲ್ಲ. ಸ್ವಲ್ಪ ಬಾಚಿ ಅತ್ತಿಗೇ.... ಎಂದು ಬಾಚಣಿಗೆ ಕೈಗೆ ಕೊಟ್ಟು ಅವಳ ಮುಂದೆ ತಲೆ ಬಗ್ಗಿ ನಿಲ್ಲುತ್ತಿದ್ದ. ಒಂದು ಕೈಯಿಂದ ಅವನ ತಲೆ ಹಿಡಿದು ಮತ್ತೊಂದು ಕೈಯಿಂದ ಆ ಒರಟು ಕೂದಲನ್ನು ಒಪ್ಪವಾಗಿ ಬಾಚುತ್ತಿದ್ದಳು. ಆಗೆಲ್ಲಾ ರವಿ ಅವಳಿಗೆ ಬಹಳ ಮೋಹಕವಾಗಿ ಕಾಣುತ್ತಿದ್ದ. ಅವನ ಸ್ಪರ್ಶ ಅವಳಿಗೆ ಮೋಡಿ ಹಾಕುತ್ತಿತ್ತು.

ಎಷ್ಟೋ ದಿನ ರಾತ್ರಿ ರವಿ ಓದುತ್ತಾ ಹಾಗೆಯೇ ಮಲಗಿಬಿಡುತ್ತಿದ್ದ. ಭಾಗೀರಥಮ್ಮನವರು ಅವನನ್ನು ಊಟಕ್ಕೆ ಎಬ್ಬಿಸಿ ಸಾಕಾಗಿ, "ಅಮ್ಮಾ.... ವಾಸಂತೀ ಅವನಿಗೆ ಒಂದು ತುತ್ತು ಅನ್ನ ಕಲಸಿ ಕೊಟ್ಟು ಬಿಡಮ್ಮಾ" ಅನ್ನುತ್ತಿದ್ದರು.

ವಾಸಂತಿ ಬಟ್ಟಲಲ್ಲಿ ಅನ್ನ ಕಲಸಿಕೊಂಡು ಹೋಗಿ ಅವನನ್ನು ಎಬ್ಬಿಸಿದರೆ "ಹೋಗಿ ಅತ್ತಿಗೇ ತುಂಬಾ ನಿದ್ದೆ ಆ ಊಟಾನೂ ಬೇಡ. ಚಳೀಲಿ ಕೈ ತೊಳೆಯೋದೂ ಬೇಡ" ಅನ್ನುತ್ತಿದ್ದ.

ಕೊಳ್ಳಪ್ಪ ಮಹಾರಾಯಾ : ....ಎಂದು ತುತ್ತು ಮಾಡಿ ಬಾಯಿಗೇ ಹಾಕಿ ತಿನ್ನಿಸು ತ್ತಿದ್ದಳು. ಒಳ್ಳೆ ಐದು ವರ್ಷದ ಮಗುವಿನಂತೆ ಕಣ್ಣು ಮುಚ್ಚಿಕೊಂಡು ನುಂಗುತ್ತಿದ್ದ.

ಹೀಗೆ ಮೊದಲಿನಿಂದಲೂ ಒಂದೊಂದು ಕೆಲಸದಲ್ಲಿಯೂ ತನ್ನನ್ನೇ ಅವಲಂಬಿಸಿ

ಹಸುಗೂಸಿನಂತಿದ್ದ ರವಿಯನ್ನು ಯಾವ ರೀತಿಯಿಂದಲೂ ದೂರವಿಡಲು ಸಾಧ್ಯವಾಗಲಿಲ್ಲ.

ಅದಕ್ಕೆ ಒತ್ತು ಕೊಟ್ಟಂತೆ ನಾಗರಾಜನೂ ತಮ್ಮನಿಗಾಗಿ ಹೆಂಡತಿ ಏನು ಮಾಡಿದರೂ ಆಕ್ಷೇಪಿಸುತ್ತಿರಲಿಲ್ಲ. ರವಿ ಎಂದರೆ ಆ ಮನೆಯ ಮುದ್ದು ಮಗುವಾಗಿದ್ದ.

ಅಂತಹವನು ಹೀಗೆ ಕಣ್ಣು ಕಳೆದುಕೊಂಡು ಸಂಕಟ ಪಡುತ್ತಿರುವಾಗ ಅವನ ಮನಸ್ಸನ್ನು ಸ್ವಲ್ಪವೂ ನೋಯಿಸದೆ ಉಪಚರಿಸುತ್ತಿದ್ದಳು ವಾಸಂತಿ.

ಹೀಗಿರುವ ತನ್ನ ಸ್ವಭಾವವನ್ನು ಅರಿತಿದ್ದೂ ಮಾವನವರು ಈ ದಿನ ತನ್ನನ್ನು ನಿಷ್ಠೂರವಾಗಿ ಅಂದದ್ದು ವಾಸಂತಿಯ ಮನಸ್ಸಿಗೆ ನೋವಾಯಿತು.

ಆದರೆ ಹಿಂದೆಯೇ ಛೆ....ಪಾಪ....ರವಿಯ ಸ್ಥಿತಿಯನ್ನು ಕಂಡು ಹೆತ್ತತಂದೆಗೆ ಎಷ್ಟು ಹೊಟ್ಟೆ ಉರಿಯಿತೋ ತುಂಬಾ ಸಂಕಟದಿಂದ ಅಂದಿರುವ ಮಾತದು. ನನ್ನನ್ನು ಕಂಡರೆ ಅವರಿಗೇನು ಪ್ರೀತಿಯಿಲ್ಲವೇ ? ಎಂದು ಸಮಾಧಾನಪಟ್ಟುಕೊಂಡಳು.

ರವಿಯ ಜೀವನದಲ್ಲಿ ಅವನಿಗಾಗಿರುವ ನಷ್ಟವನ್ನು ಯಾರು ತಾನೇ ತುಂಬಲು ಸಾಧ್ಯ ? ಅವನ ಕಾಲೇಜಿನಲ್ಲಿ ಅವನ ಪ್ರಾಧ್ಯಾಪಕರು, ಮೊದಲಾಗಿ ಉಪನ್ಯಾಸಕರೂ, ಸಹವಿದ್ಯಾರ್ಥಿಗಳೂ ಅವನನ್ನುಮೆಚ್ಚಿ ಕೊಂಡಾಡುತ್ತಿದ್ದರು. ತರಗತಿಯಲ್ಲಿ ಅವನು ಎಲ್ಲರಿಗೂ ಅಚ್ಚುಮೆಚ್ಚು.

ಪರೀಕ್ಷೆಗಳಲ್ಲಿ ನಿರಾತಂಕವಾಗಿ ಮೊದಲ ಸ್ಥಾನ ಗಿಟ್ಟಿಸಿಬಿಡುತ್ತಿದ್ದ. ಆಟಗಳಲ್ಲಿ ಅವನೇ ಮುಖಂಡ. ಚರ್ಚಾಕೂಟದಲ್ಲಿ ಇವನನ್ನು ಮೀರಿಸುವುದಕ್ಕೆ ಯಾವ ಪಕ್ಷವೂ ಶಕ್ತವಾಗಿರಲಿಲ್ಲ.

ಇಷ್ಟು ಚಟುವಟಿಕೆಯ ಸುಂದರ ಯುವಕನನ್ನು ಹೆಣ್ಣುಗಳು ಹಿಂಬಾಲಿಸುವುದಕ್ಕೆ ಕೊರತೆಯೇ ? ಕಾಲೇಜಿನ ಹುಡುಗಿಯರು ಅವನಿದ್ದ ಕಡೆ ಸುತ್ತುವರಿಯುತ್ತಿದ್ದರು. ಸಂಕೋಚ, ಬಿಗುಮಾನ ಅಥವಾ ಮೋಹ, ಒಂದೂ ಇಲ್ಲದೆ ಅವರೆಲ್ಲರೊಂದಿಗೆ ಸಲೀಸಾಗಿ ನಗು–ನಗುತ್ತಾ ಮಾತಾಡುತ್ತಿದ್ದ.

ಯಾವುದೇ ಒಂದು ಹುಡುಗಿಯೊಂದಿಗೆ ಅವನು ಹೆಚ್ಚು ಹೊತ್ತು ಮಾತಾಡುತ್ತಿದ್ದರೆ ಬೇರ ಹುಡುಗಿಯರಿಗೆ ಹೊಟ್ಟೆ ಉರಿ, ಅವನ ಮೋಹಕವಾದ ನಗುವಿಗೆ ಹುಡುಗಿಯರಲ್ಲದೆ ಹುಡುಗರೂ ಸಹ ಮಾರು ಹೋಗುತ್ತಿದ್ದರು.

ಎಲ್ಲಕ್ಕಿಂತ ಅವನ ಕಣ್ಣು ಬಹಳ ಆಕರ್ಷಕವಾಗಿತ್ತು. ಕಣ್ಣಿನ ನೋಟದಿಂದಲೇ ಅವನು ಹುಡುಗಿಯರನ್ನು ಆಕರ್ಷಿಸುತ್ತಿದ್ದ.

ಕಾಲೇಜಿಗೇ ಕಣ್ಣಿನಂತಿದ್ದ ಇಂತಹ ಪ್ರತಿಭಾವಂತ ವಿದ್ಯಾರ್ಥಿಗೆ ಕಣ್ಣು ಹೋಯಿತೆಂದರೆ ಯಾರು ಸಂಕಟ ಪಡುವುದಿಲ್ಲ? ಕಾಲೇಜೇ ಕಣ್ಣನ್ನು ಕಳೆದುಕೊಂಡಿತೋ ? ಎಂಬಂತೆ ಎಲ್ಲರೂ ಬಹಳ ದುಃಖಪಟ್ಟರು.

ಅದರಲ್ಲೂ ಅತೀವ ದುಃಖಿಕ್ಕೊಳಗಾದವಳೆಂದರೆ ಶಾಂತಲೆ.... ರವಿ ಬಿ. ಎಸ್ಸಿ., ಕೊನೆಯ ವರ್ಷದಲ್ಲಿದ್ದಾಗ ಶಾಂತಲೆ ಪಿ.ಯು.ಸಿ. ನಲ್ಲಿದ್ದಳು. ಇದೀಗ ಎಂ. ಎಸ್ಸಿ., ಓದುತ್ತಿದ್ದ. ಯಾವ ಹುಡುಗಿಯರನ್ನೂ ಹೆಚ್ಚು ಹಚ್ಚಿಕೊಳ್ಳದ ರವಿ ಶಾಂತಲೆಯನ್ನು ಮಾತ್ರ ಗಮನವಿಟ್ಟು ನೋಡುತ್ತಿದ್ದ. ಕಾಲೇಜಿನಲ್ಲಿ ಒಂದು ದಿನ ಅವಳು ಕಾಣದಿದ್ದರೆ ಅವನಿಗೆ ಹೇಗೆ ಹೇಗೋ ಆಗುತ್ತಿತ್ತು.

ಶಾಂತಲೆ ಕೂಡಾ ರೂಪ, ವಿದ್ಯೆ, ಘನತೆ ಗಾಂಭೀರ್ಯದಲ್ಲಿ ಇವನನ್ನು ಮೀರಿಸು ವಂತಿದ್ದಳು. ಹತ್ತು ಹೆಣ್ಣು ಮಕ್ಕಳಲ್ಲಿ ಅವಳು ಎದ್ದು ಕಾಣುತ್ತಿದ್ದಳು. ಅದರಿಂದಾ ಗಿಯೇ ರವಿ ಅವಳಿಗೆ ಮನಸೋತ.

ಸಮಯ ಸಿಕ್ಕಾಗ ಇವರು ಸಂಧಿಸಿ ಮಾತಾಡುತ್ತಿದ್ದರು, ಅವರ ಸ್ನೇಹ, ಗಾಢವಾಗಿ ಸ್ನೇಹ ಪ್ರೇಮಕ್ಕೆ ತಿರುಗಿತು.

ಒಂದು ದಿನ ಶಾಂತಲಾ ರವೀ....ನೀವು ನನಗೆ ಏನು ಮೋಡಿ ಹಾಕಿದ್ದೀರೋ ಕಾಣೆ. ಯಾವುದೇ ಗಂಡು ಹುಡುಗರನ್ನು ತಲೆ ಎತ್ತಿ ನೋಡಿದವಳಲ್ಲ. ಎಂದು ನಾಚಿ ತಲೆ ತಗ್ಗಿಸಿದಳು.

ನನ್ನನ್ನು ಮಾತ್ರ ಏಕೆ ತಲೆ ಎತ್ತಿ ನೋಡಿದೆ ? ಎಂದು ಚುಡಾಯಿಸಿದ ರವಿ.

ನಿಮ್ಮನ್ನೂ ತಲೆ ಎತ್ತಿ ನೋಡುತ್ತಿರಲಿಲ್ಲ.

ಮತ್ತೆ ಯಾವಾಗ ನೋಡಿದೆ ?

ಅದಕ್ಕೊಂದು ಅವಕಾಶ ಸಿಕ್ಕಿದಾಗ

ಅದು ಯಾವಾಗ ಅವಕಾಶ ಸಿಕ್ಕಿತು ?

ಚರ್ಚಾ ಕೂಟದಲ್ಲಿ ವೇದಿಕೆಯ ಮೇಲೆ.

ಆಗ ತಾನೇ ಏಕೆ ನೋಡಿದೆ ?

ನಿಮ್ಮ ವಾಗ್ವೈಖರಿ ನೋಡುವಂತೆ ಮಾಡಿತು.

ನೋಡಿ ನನಗೇ ಮೋಡಿ ಹಾಕಿದೆ ನೀನು ಎಂದು ರವಿ ಅವಳ ಕೆನ್ನೆ ಚಿವುಟಿದ. ಇಬ್ಬರೂ ಮನಸಾರ ನಕ್ಕರು.

ರವೀ ಸಂಜೆ ಹೊತ್ತಾಯಿತು. ಅಮ್ಮ ಅಪ್ಪ ತುಂಬಾ ಗಾಬರಿಯಾಗುತಾರೆ. ನಾನು ಮನೆಗೆ ಹೋಗಬೇಕು.

ಅಪ್ಪಣೆ-ರಾಣಿ ನಡೀ ನಿನ್ನನ್ನು ಮನೆಗೆ ತಲುಪಿಸಿ ನಾನು ಮುಂದೆ ಹೋಗುತ್ತೇನೆ ಎಂದ ರವಿ.

ಈ ಇಬ್ಬರು ಪ್ರೇಮಿಗಳಿಗೆ ಮನೆಯವರ ಬೆಂಬಲವಿತ್ತು. ಶಾಂತಲಾ ತಂದೆ ಸದಾನಂದರು ಒಂದು ಪೆನ್ ಫ್ಯಾಕ್ಟರಿಯ ಮ್ಯಾನೇಜರ್ ಆಗಿದ್ದರು. ಅವರ ಒಬ್ಬಳೇ ಮಗಳಾದ ಶಾಂತಲಾ ರವಿಯಂಥಾ ಉತ್ತಮ ಯುವಕನನ್ನು ಪ್ರೀತಿಸಿರುವುದು ಅವರಿಗೆ ತುಂಬಾ ಸಂತೋಷವಾಯಿತು.

ಒಂದು ದಿನ ಮಗಳೊಂದಿಗೆ ಅವರ ಮನೆಗೆ ಬಂದ ರವಿಯನ್ನು ಗೌರವವಾಗಿ ಕಂಡು ಮಾತನಾಡಿಸಿ ಅವರ ಮನೆಯ ವಿವರವನ್ನೆಲ್ಲಾ ವಿಚಾರಿಸಿದರು.

ನಂತರ ರವಿಯ ಮನೆಗೆ ಹೋಗಿ ತಮ್ಮ ಮಗಳನ್ನು ರವಿಗೆ ಮಾಡಿಕೊಳ್ಳಬೇಕೆಂದು ಕೇಳಿಕೊಂಡರು. ಎರಡು ಕುಟುಂಬಕ್ಕೂ ಹೊಂದಾಣಿಕೆಯಾದ್ದರಿಂದ ರವಿಯ ಎಂ.ಎಸ್ಸಿ. ಓದು ಮುಗಿದೊಡನೆ ಮದುವೆ ನೆರವೇರಿಸುವುದಾಗಿ ತೀರ್ಮಾನವಾಗಿತ್ತು. ಇದರಿಂದಾಗಿ ಆಗಾಗ ಶಾಂತಲಾ ಸಹ ರವಿ ಮನೆಗೆ ಬರುತ್ತಿದ್ದಳು.

ಹೀಗೆ ರವಿ ಕಣ್ಣು ಕಳೆದುಕೊಂಡು ಕುರುಡನಾದ ಮೇಲೆ ಅವಳ ಸಂಕಟ ಹೇಳ ತೀರದು. ಸದಾನಂದರೂ ರವಿಯ ಕಣ್ಣನ್ನು ಅನೇಕ ಕಣ್ಣಿನ ತಜ್ಞರಿಗೆ ತೋರಿಸಿದರು. ಎಲ್ಲರೂ ಗುಳ್ಳೆ ಸುಟ್ಟು ಹೋಗಿರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲ ಎಂದರು. ಅವರು ನಿರಾಶೆಯಿಂದ ಆ ಸಂಬಂಧವನ್ನು ಕೈಬಿಟ್ಟರು. ಅದರೆ ಶಾಂತಲೆಗೆ ಅಷ್ಟು ಸುಲಭವಾಗಿ ರವಿಯನ್ನು ಮರೆಯಲು ಸಾಧ್ಯವಾಗಲಿಲ್ಲ. ಕುರುಡನಾದರೂ ರವಿಯನ್ನೇ ಮದುವೆಯಾಗುವೆನೆಂದು ತಂದೆಯ ಬಳಿ ಹೋರಾಡಿದಳು.

ಒಬ್ಬಳೇ ಮಗಳಾದ ಶಾಂತಲೆಯನ್ನು ಕುರುಡನಿಗೆ ಕೊಡಲು ಅವರು ಸುತರಾಂ ಒಪ್ಪಲಿಲ್ಲ. ಕೂಡಲೇ ಉತ್ತಮ ವರನನ್ನು ನೋಡಿ ಮದುವೆ ಗೊತ್ತು ಮಾಡಿದರು.

ಈ ವಿಚಾರವನ್ನು ರವಿಗೆ ಹೇಗೆ ತಿಳಿಸುವುದೆಂದು ವಿಲವಿಲನೆ ಒದ್ದಾಡಿದಳು.

ಕಡೆಯದಾಗಿ ರವಿಯನ್ನು ನೋಡಲು ಕಾತುರಪಟ್ಟಳು.

ಆ ದಿನ ಅವಳು ರವಿಯ ಮನೆಗೆ ಬಂದಾಗ ರವಿ ತನ್ನ ರೂಮಿನಲ್ಲಿ ಸುಮ್ಮನೆ ಮಲಗಿದ್ದ. ಶಬ್ದವಿಲ್ಲದೆ ಮೆಲ್ಲನೆ ಶಾಂತಲಾ ರೂಮಿಗೆ ಬಂದಳು. ಕಣ್ಣು ತೆರೆದಿದ್ದರೂ ಬಂದವರು ಕಾಣುತ್ತಿರಲಿಲ್ಲ ರವಿಗೆ. ಸಿಕ್ಕಾ–ಪಟ್ಟೆ ತಲೆಯ ಕೂದಲು ಬೆಳೆದು ಮುಖದ ಮೇಲೆಲ್ಲಾ ಹರಡಿತ್ತು. ಮುಖ ಕ್ಷೌರ ಕಾಣದೆ ಗಡ್ಡ ಮೀಸೆ ಹುಲುಸಾಗಿ ಬೆಳೆದಿತ್ತು. ಅಲ್ಲಲ್ಲಿ ಮುಖದಲ್ಲಿ ಗಾಜಿನಿಂದಾದ ಗಾಯದ ಗುರುತು, ಚಲಿಸದ ಕಣ್ಣಿನ ನೋಟ, ರವಿ ಭಯಂಕರವಾಗಿ ಕಂಡ.

ಈತನೇ ತಾನು ಪ್ರೀತಿಸಿದ ರವೀನಾ ? ಎನ್ನಿಸಿ ಒಂದು ಕ್ಷಣ ಎದೆ ಒತ್ತಿ ಹಿಡಿದು ದುಃಖ ತಡೆದಳು ಶಾಂತಲಾ.

ಅವಳ ಸಣ್ಣ ನಿಟ್ಟುಸಿರು ರವಿಗೆ ಕೇಳಿಸಿತು. ತಟ್ಟನೆ ಎದ್ದುಕೂತು ಯಾರು ? ಯಾರದು ? ಅತ್ತಿಗೇನಾ ? ಎಂದ.

ವಾಸಂತಿ ಮನೆಯಲ್ಲಿರಲಿಲ್ಲ. ಅಂಗಡಿಗೆ ಹೋಗಿದ್ದಳು. ಮೆಲ್ಲನೆ ಎದ್ದು ನಿಂತು ರವಿ ಕೈಯಿಂದ ತಡಕಾಡಿದ.

ಶಾಂತಲಾ ದೂರ ಸರಿದು ನಾನು ರವೀ ಎಂದಳು.

ಉತ್ಸುಕತೆಯಿಂದ ಯಾರು . ನನ್ನ ಶಾಂತಾ ಶಾಂತೀ ನನ್ನ ಮುದ್ದು ಶಾಂತೀ ಬಾ

ತನಗಾಗಿ ಹಾತೊರೆಯುತ್ತಿರುವ ರವಿಯನ್ನು ಹೇಗೆ ಸಾಂತ್ವನಗೊಳಿಸುವುದು ? ಬಲು ಸಂಕಟಪಟ್ಟಳು.

ರವಿಯ ಹತ್ತಿರ ಬಂದು ಅವನ ಕೈಯ್ಯನ್ನು ತನ್ನ ಕೈಯ್ಯಲ್ಲಿಟ್ಟುಕೊಂಡು "ರವೀ ನೀವು ಹೇಗೆ ಕಾಲ ಕಳೆಯುತ್ತೀರಾ " ? ಎಂದು ಬಿಕ್ಕಿದಳು. ಅವಳ ಕಣ್ಣಿನಿಂದ ನೀರು ತೊಟ್ಟಿಕ್ಕಿ ಅವನ ಕೈ ಬಿಸಿಯಾಯಿತು.

ನನ್ನ ಮುದ್ದು ಶಾಂತೀ ನೀನು ಅಳಬೇಡ. ನಮ್ಮ ಹಿಂದಿನ ಸವಿ ನೆನಪು ನನಗೆ ಚೈತನ್ಯ ತುಂಬಿದೆ.

ಆ ನೆನಪನ್ನು ಮರೆಯಬೇಕಾಗಿತ್ತು ರವಿ. ಆ ನೆನಪೇ ನಿಮಗೆ ಶೂಲ.

ಏಕೆ ಶಾಂತೀ ನಮ್ಮ ಮಧುರ ಕ್ಷಣಗಳು ಮರೆಯುವಂತಹುದೇ ?
ಮರೆಯಲಾರದ್ದನ್ನು ವಿಧಿ ಮರೆಸುತ್ತದೆ ರವೀ.

ಅಂದರೆ ನೀನು ನನ್ನನ್ನು ಮರೆಯುತ್ತೀಯಾ ಶಾಂತೀ ಕಾತುರನಾಗಿ ಕೇಳಿದ.

ಮರೆಯಲಾರೆ, ಮರೆತಂತೆ ಇರಬೇಕಾದದ್ದೇ ವಿಧಿ, ಈ ದಿನ ಹೀಗೇಕೆ ನನ್ನನ್ನು ಕೊಲ್ಲುತ್ತೀ ಶಾಂತೀ ನಾನು ಕುರುಡನಾದರೆ ನಮ್ಮ ಪ್ರೇಮವು ಕುರುಡಾಯಿತೇ ?

ಶಾಂತಿ ಮಾತಾಡಲಾರದೆ ಸುಮ್ಮನೆ ಅಳುತ್ತಿದ್ದಳು. ಶಾಂತಲೆಯ ಕೈಯನ್ನು ಭದ್ರವಾಗಿ ಹಿಡಿದು ಶಾಂತೀ ನೀನೊಬ್ಬಳು ನನ್ನ ಬಳಿ ಇದ್ದರೆ ಸಾಕು ನಾನು ಪ್ರಪಂಚ ವನ್ನು ಬೇಕಾದರೂ ಎದುರಿಸಬಲ್ಲೆ. ನೀನೇ ನನ್ನ ಕಣ್ಣು ಶಾಂತೀ... ನನ್ನಿಂದ ದೂರ ಹೋಗಬೇಡ ಶಾಂತೀ....

ಶಾಂತಲಾ ಮಾತಾಡಲಿಲ್ಲ.

ಅವಳ ಎರಡೂ ಭುಜಗಳನ್ನು ಹಿಡಿದಲುಗಿಸಿ, ಮಾತಾಡು ಏಕೆ ಸುಮ್ಮನಾದೆ ?

ಶಾಂತಲಾ ದುಃಖವನ್ನು ತಡೆದು ನನ್ನ... ಮದುವೆ....ಇನ್ನು ಒಂದು ವಾರವಿದೆ ಎಂದು ಹೇಳುವ ಹೊತ್ತಿಗೆ ಅವಳಿಗೆ ಗಂಟಲು ಬಿಗಿಯಿತು.

ರವಿಗೆ ಸಹಸ್ರ ಚೇಳುಗಳು ಒಂದೇ ಸಲ ಕುಟುಕಿದಂತಾಯಿತು. ಕೋಪದಿಂದ ಅವಳನ್ನು ದೂರ ತಳ್ಳಿ ಶಾಂತೀ....ನೀನು ಅದಕ್ಕೆ ಒಪ್ಪಿದೆಯಾ ? ಗಟ್ಟಿಯಾಗಿ ಕೂಗಿದ.

ರವಿಯ ಕೂಗಿಗೆ ಗಡಗಡನೆ ನಡುಗಿದಳು ಶಾಂತಲಾ. ಮನೆಗೆ ಆಗ ತಾನೇ ಬಂದ ವಾಸಂತಿ ಅವನ ಕೂಗು ಕೇಳಿ ರೂಮಿಗೆ ಬಂದಳು.

ಶಾಂತಲಾ ಬಿಕ್ಕಿ-ಬಿಕ್ಕಿ ಅಳುತ್ತಿದ್ದಾಳೆ. ಏನಮ್ಮಾ ಶಾಂತಲಾ ಯಾವಾಗ ಬಂದೆ ? ಎಂದಳು ವಾಸಂತಿ.

ಅತ್ತಿಗೇ ರವಿಯನ್ನು ಚೆನ್ನಾಗಿ ನೋಡಿಕೊಳ್ಳಿ ನಾನು ಮತ್ತೆ ರವಿಯನ್ನು ನೋಡಲಾರೆ ಎಂದಳು.

ವಾಸಂತಿ ಶಾಂತವಾಗಿ " ಎಲ್ಲಾದರೂ ಸುಖವಾಗಿ ಬದುಕು ಶಾಂತಲಾ" ನಿನ್ನಂಥ ರತ್ನವನ್ನು ಪಡೆದುಕೊಳ್ಳಲು ನಮಗೆ ಅದೃಷ್ಟವಿಲ್ಲ. ಎಲ್ಲಾ ಗೊತ್ತಾಯಿತು ಶಾಂತಲಾ ಈಗ ಒಂದು ವಾರದ ಹಿಂದೆಯೇ ನಿಮ್ಮ ತಂದೆ ಬಂದು ನಿನಗೆ ಮದುವೆ ಗೊತ್ತಾಗಿರುವ ವಿಚಾರ ಹೇಳಿದರು ಎಂದಳು.

ಅತ್ತಿಗೇ ಗೊತ್ತಿದ್ದೂ ನನಗೆ ಮೋಸ ಮಾಡಿದಿರಾ ? ಎಂದು ಗಟ್ಟಿಯಾಗಿ ಕೂಗಿಕೊಂಡ ರವಿ.

"ನೋಡು ರವೀ ... ನಿನಗೆ ತುಂಬಾ ಆಘಾತವಾಗಿದೆ ಗೊತ್ತು. ಸಮಾಧಾನ ತಗೋ. ನಿನಗೆ ಶಾಂತಲಾ ಮೇಲೆ ಪ್ರೀತಿಯಿದ್ದರೆ ಅವಳು ಸಂತೋಷವಾಗಿ ಬದುಕಲು ಅವಕಾಶ ಕೊಡು".

"ಅತ್ತಿಗೇ ನನ್ನ ಸಜೀವ ಸಮಾಧಿ ಮಾಡಿಬಿಡಿ" ಎಂದು ಕೈಯಿಂದ ತಲೆ ಗಟ್ಟಿಸಿ ಕೊಂಡ.

ರವಿಯ ಗೋಳನ್ನು ನೋಡಲಾರದೇ ಶಾಂತಲಾ "ರವೀ ನನ್ನನ್ನು ಕ್ಷಮಿಸಿ" ಎಂದವಳೇ ಅಲ್ಲಿಂದ ದಢ–ದಢನೆ ಹೊರಟು ಹೋದಳು. ಬುಡ ಕಡಿದ ಬಾಳೆಯ ಗಿಡದಂತೆ ರವಿ ಮಂಚದ ಮೇಲೆ ಧೊಪ್ಪೆಂದು ಬಿದ್ದ.

ಅಂದಿನಿಂದ ರವಿ ಅನ್ನಾಹಾರಗಳನ್ನು ಬಿಟ್ಟು ಕೊರಗಿದ. ಅವನಿಗಿದ್ದ ಒಂದೇ ಒಂದು ಆಶಾಕಿರಣ, ಅದೂ ನಂದಿಹೋಯಿತು.

ಮನೆಯ ವಾತಾವರಣ ತೀರಾ ಹದಗೆಟ್ಟಿತು. ತಮ್ಮನ ಗೋಳು ನೋಡಲಾರದೆ ನಾಗರಾಜ ಹೆಚ್ಚು ಹೊತ್ತು ಮನೆಯಲ್ಲಿಯೇ ಇರುತ್ತಿರಲಿಲ್ಲ. ರವಿಗೆ ಇನ್ನು ಕಣ್ಣು ಬರುವುದೇ ಇಲ್ಲ ಎಂದು ತಿಳಿದ ಮೇಲೆ ಭಾಗೀರಥಮ್ಮ ತೀರಾ ನಿರಾಶರಾದರು.

ನಾಗರಾಜನಿಗಂತೂ ಮಕ್ಕಳಾಗಲಿಲ್ಲ. ರವಿಯ ಮದುವೆ ಆದರೆ ಅವನ ಹೊಟ್ಟೆ ಯಲ್ಲಾದರೂ ನಾಲ್ಕು ಮಕ್ಕಳಾಗಿ ವಂಶ ಬೆಳೆಯುತ್ತೆ ಎಂದು ಆಸೆ ಪಟ್ಟಿದ್ದರು.

ಗೊತ್ತಾದ ಮದುವೆ ತಪ್ಪಿ ಹೋಯಿತು. ಶಾಂತಲಾ ಅಂತಹ ಹುಡುಗಿ ಮನೆ ತುಂಬಿ ಬರುವ ಅದೃಷ್ಟ ನಮಗಿಲ್ಲ. ಮತ್ತೆ ಈ ಕುರುಡನಿಗೆ ಯಾರು ಹೆಣ್ಣು ಕೊಡು ತ್ತಾರೆ ಎಂದು ತಮ್ಮ ಅದೃಷ್ಟವನ್ನು ಹಳಿದುಕೊಂಡು ಕೊರಗುತ್ತಿದ್ದರು ಭಾಗೀರಥಮ್ಮ.

ಇಂತಹ ಪರಿಸ್ಥಿತಿಯಲ್ಲಿ ಆ ಮನೆಗೆ ದಿಕ್ಕಾಗಿ ಸಾಂತ್ವನ ನೀಡಿದವನೆಂದರೆ ಬಾಲಚಂದ್ರ. ರವಿಯ ಸ್ನೇಹಿತ ಅವನೀಗ ನಿಜವಾದ ಸ್ನೇಹಿತ.

ರವಿ ಅನ್ನಾಹಾರಗಳನ್ನು ಬಿಟ್ಟು ಸಾಯಲು ಪಣ ತೊಟ್ಟ ಎರಡು ದಿನದಿಂದ ಆಹಾರವನ್ನೇ ಮುಟ್ಟಿರಲಿಲ್ಲ. ರೂಮಿಗೆ ತಂದಿಟ್ಟ ಕಾಫಿ, ತಿಂಡಿ ಹಾಗೆಯೇ ಒಣಗಿ ಬಿದ್ದಿರುತ್ತಿತ್ತು.

ವಾಸಂತಿ ನಯವಾಗಿ, ಭಯಪಾಗಿ, ಅತ್ತೂ ಕರೆದೂ ಹೇಳಿದ್ದಾಯಿತು. ಕಡೆಗೆ ಸಿಟ್ಟಿನಿಂದ "ಈ ಮನೆಯಲ್ಲಿ ನಾನೊಬ್ಬಳು ಬೇಕಾಬಿಟ್ಟಿ ಬಿದ್ದಿದೀನಿ. ಯಾರು ಹೇಗಾದರೂ ಹಾಳಾಗಿ ಹೋಗಿ, ಇನ್ನು ನಿಮ್ಮ ಸುದ್ದಿಗೆ ಬರುವುದಿಲ್ಲ" ಎಂದು ಕೂಗಾಡಿಕೊಂಡು ಒಳಕ್ಕೆ ಹೊರಟು ಹೋದಳು.

ಆ ವೇಳೆಗೆ ಸರಿಯಾಗಿ ಬಾಲಚಂದ್ರ ಬಂದ.. "ಅತ್ತಿಗೇ ಏನು–ಏನು ? ನೀವು ಇಷ್ಟು ರೋಷದಿಂದ ಮಾತಾಡಿದ್ದು ನಾನು ಎಂದೂ ಕಾಣೆ. ಏನು ಸಮಾಚಾರ" ? ಎಂದ.

"ನನ್ನ ಕರ್ಮ ಬಾಲೂ ಇದೆಲ್ಲಾ ನೋಡುವುದು" ಎಂದು ಗೊಳೋ ಎಂದು ಅತ್ತಳು.

"ಅತ್ತಿಗೇ ನೀವು ಮಾತ್ರ ಅಳಬೇಡಿ, ನಾನಿಲ್ಲವೇ ? ಏನಾಯಿತು ಹೇಳಿ".

"ನೋಡಪ್ಪಾ ಬಾಲು, ನಿನ್ನ ಸ್ನೇಹಿತ ಎರಡು ದಿನದಿಂದ ಊಟವನ್ನೇ ಮಾಡಿಲ್ಲ. ಏನೋ ಪ್ರಾಯೋಪವೇಶ ಮಾಡುವಂತೆ ಕಾಣುತ್ತೆ. ನಾವೂ ಅವನ ಜೊತೆ ಉಪವಾಸ ಸಾಯುತ್ತೇವೆ ಬಿಡು" ಎಂದಳು ವಾಸಂತಿ.

ಬಾಲು ರವಿಯ ರೂಮಿಗೆ ಬಂದ. "ರವೀ.... ಏನು ಮಾಡುತ್ತಿದ್ದೀಯೋ" ?

ರವಿಗೆ ಉಪವಾಸದಿಂದ ತುಂಬಾ ಸುಸ್ತಾಗಿತ್ತು. ಮಾತನಾಡಲು ಉಸಿರೇ ಏಳಲಿಲ್ಲ.

"ನಿನಗೇನು ಬುದ್ಧಿ–ಗಿದ್ದಿ ಇದೆಯೇನೋ ? ಏಳೋ ಮೇಲಕ್ಕೆ ಊಟಮಾಡು" ಎಂದು ಅವನ ಬಳಿ ಕುಳಿತ ಬಾಲು.

"ಬಾಲೂ ನೀನು ನನ್ನ ನಿಜವಾದ ಸ್ನೇಹಿತನೇ ಆದರೆ ನನಗೆ ಸ್ವಲ್ಪ ವಿಷ ತಂದು ಕೊಟ್ಟು ಬಿಡೋ, ನೆಮ್ಮದಿಯಾಗಿ ಸಾಯುತ್ತೇನೆ" ಎಂದು ಸುಸ್ತಾಗಿ ಹೇಳಿದ ರವಿ.

"ಹೌದು ನಾವೆಲ್ಲಾ ಇರೋದು ನಿನಗೆ ವಿಷ ಕುಡಿಸೋಕೇನೇ, ಏಳೋ ಮೇಲಕ್ಕೆ" ಎಂದು ಗದರಿ ಅವನನ್ನು ಬಲವಂತವಾಗಿ ಎಬ್ಬಿಸಿ ಕೂರಿಸಿದ.

"ಅತ್ತಿಗೇ ತುಂಬಾ ಸುಸ್ತಾಗಿದ್ದಾನೆ ಮೊದಲು ಸ್ವಲ್ಪ ಹಣ್ಣಿನ ರಸ ತನ್ನೀ...." ಎಂದ ಬಾಲು.

ವಾಸಂತಿ ಹಣ್ಣಿನ ಜ್ಯೂಸ್ ಮಾಡಿ ತಂದಳು. "ತೊಗೊಳ್ಳೋ ಕುಡಿಯೋ ಇದನ್ನು."

"ಬಾಲೂ ನನ್ನ ಸಾಯೋಕೂ ಬಿಡೋಲ್ವೇನ್ರೋ ?.... ನೋಡು ನನ್ನಿಂದ ಮನೆಯವರಿಗೆಲ್ಲಾ ಎಷ್ಟು ವೇದನೆ"?

"ನೀನು ತೊಂದರೆ ಕೊಡದ ಹಾಗೆ ಇರಬೇಕು ಮತ್ತೇ.... ಪ್ರಪಂಚದಲ್ಲಿ ನಿನ್ನಂಥಾ ಕುರುಡರು ಕೋಟಿ–ಕೋಟಿ ಇದ್ದಾರೆ. ಅವರು ಎಷ್ಟು ದಿನಾ ಅಂತ ಒಬ್ಬರಿಗೆ ಹೊರೆಯಾಗಿರುತ್ತಾರೆ ? ಅವರಿಗೆ ಪೋಷಣೆ ಮಾಡುವವರು ತಾನೇ ಯಾರು? ಅಂತಹವರೆಲ್ಲಾ ಒಂದಲ್ಲಾ ಒಂದು ದುಡಿಮೆ ಮಾಡಿ ನಾಲ್ಕು ಕಾಸು ಸಂಪಾದಿಸುತ್ತಾರೆ. ಆಗ ಅವರಿಗೆ ಎಷ್ಟೋ ನೆಮ್ಮದಿ, ಸಂತೋಷ ಇರುತ್ತೆ. ಕಣ್ಣು ಕಳೆದು ಹೋದರೆ ದೇವರು ನಿನಗೆ ಕೈ ಕೊಟ್ಟಿಲ್ಲವೇ ? ಏನಾದರೂ ಕೆಲಸಮಾಡಿ ಸಂಪಾದಿಸು" ಎಂದ ಬಾಲು.

"ಲೋ... ಬಾಲೂ ನಿಜವಾಗಿ ನಾನು ಸಂಪಾದಿಸಲು ಸಾಧ್ಯವೇನೋ" ?

"ಇಲ್ಲ, ಗೂಬೆ ಗುಡ್ಡೆ ಹಾಕ್ಕೊಂಡು ಮನೆಯಲ್ಲೇ ಅಳುತ್ತಾ ಕೂತಿರು. ಎಲ್ಲಾ ಸಾರ್ಥಕ ಆದ ಹಾಗಾಯಿತು".

"ಬಾಲೂ ಈಗ ನಾನು ಏನು ಮಾಡಲಿ ಹೇಳೋ...."

"ಮೊದಲು ಸ್ವಲ್ಪ ಹಣ್ಣಿನ ರಸ ಕುಡಿ, ಆಮೇಲೆ ಮಾತು"

ರವಿ ಸದ್ದಿಲ್ಲದೆ ಹಣ್ಣಿನ ರಸ ಕುಡಿದ, ಸ್ವಲ್ಪ ಉಸಿರು ಬಂತು.

"ಅತ್ತಿಗೇ ಏನಾದರೂ ಕಾಫಿ ತಿಂಡಿ ಕೊಡಿ" ಎಂದ ಬಾಲು.

ವಾಸಂತಿ ಎರಡು ತಟ್ಟೆಯಲ್ಲಿ ಬಿಸಿ–ಬಿಸಿ ದೋಸೆ ಚಟ್ನಿ ತಂದು ಇಬ್ಬರಿಗೂ ಕೊಟ್ಟಳು.

ಅದನ್ನು ಇಬ್ಬರೂ ತಿಂದರು.

ಆಯ್ತೇನೋ, ಬಾರೋ ಇಲ್ಲಿ ಎಂದು ಅವನನ್ನು ಎಬ್ಬಿಸಿ ಕುರ್ಚಿಯಲ್ಲಿ ಕೂರಿಸಿದ. ಮುಖ ಕೆರೆದು ಎಷ್ಟು ದಿನ ಆಯಿತೋ ? ಒಳ್ಳೆ ಅವಲಕ್ಷಣವಾಗಿ ಬಿಟ್ಟಿದ್ದಾನೆ. ಎಂದು ಬಾಲು ಷೇವಿಂಗ್ ಸಾಮಾನೆಲ್ಲಾ ತೆಗೆದುಕೊಂಡು ಅವನ ಗಡ್ಡ ಮೀಸೆ ಎಲ್ಲಾ ಷೇವ್ ಮಾಡಿದ. "ಬಾ ಬಚ್ಚಲು ಮನೆಗೆ, ಸ್ನಾನ ಮಾಡಿಸುತ್ತೇನೆ" ಎಂದ.

ಬಾಲೂ ನಿನ್ನಂಥಾ ಸ್ನೇಹಿತನನ್ನು ಹೇಗೆ ಮರೆಯಲೋ ?

ಹೇಗಾದರೂ ಮರೆಯುವಂತೆ....ಬಾ ಸ್ನಾನ ಮಾಡು ಅಂದ ಬಾಲು.

"ನಾನೇ ಹೋಗಿ ಸ್ನಾನ ಮಾಡುತ್ತೇನೆ ಬಿಡು ಬಾಲೂ" ಎಂದು ರವಿ ಹೋಗಿ ಸ್ನಾನ ಮಾಡಿ ಬಂದ. ಬಾಲು–ರವಿ ಇಬ್ಬರಿಗೂ ಬಡಿಸಿದಳು ವಾಸಂತಿ. ಉಸಿರೆತ್ತದೆ ಊಟ ಮಾಡಿದ ರವಿ.

"ಸಧ್ಯ ಬಾಲೂ ನಿನಗೆ ಕೋಟಿ ನಮಸ್ಕಾರಪ್ಪ, ಇವನನ್ನು ದಾರಿಗೆ ತರುವುದು ಯಾರಿಂದಲೂ ಸಾಧ್ಯವಿಲ್ಲ. ನೀನೇ ಸರಿ" ಎಂದಳು ವಾಸಂತಿ.

"ಅಲ್ಲಾ ಅತ್ತಿಗೇ, ಪ್ರಪಂಚದಲ್ಲಿ ಅಂಗವಿಕಲರಾಗಿ ಕೈ ಇಲ್ಲದೇ. ಕಾಲಿಲ್ಲದೇ, ಕಣ್ಣಿಲ್ಲದೇ ಎಷ್ಟು ಜನ ಎಷ್ಟು ಕಷ್ಟಪಡುವವರಿದ್ದಾರೆ ? ಅಂತಹವರನ್ನು ನೋಡಿ ನಾವು ಸಮಾಧಾನ ತೆಗೆದುಕೊಳ್ಳಬೇಕು. ಇವನೊಬ್ಬನಿಗೇ ಪ್ರಪಂಚ ಮುಳುಗಿಹೋದ ಹಾಗೆ ಆಡ್ತಾನಲ್ಲಾ".... ಎಂದ ಬಾಲು.

ರವಿಗೂ ಸ್ವಲ್ಪ ಸಮಾಧಾನವಾಯಿತು. ರವಿ ಸ್ವಲ್ಪ ಹೊತ್ತು ಸುಧಾರಿಸಿಕೊಂಡ ಮೇಲೆ ಬಾಲುವೇ ಅವನ ಕ್ರಾಪನ್ನು ಓರಣವಾಗಿ ಬಾಚಿದ. ಬೇರು ತೆಗೆದು ಅವನ ಒಳ್ಳೆ ಪ್ಯಾಂಟು ಬುಷ್ ಕೋಟನ್ನು ತೆಗೆದ.

"ರವೀ.... ಈ ಬಟ್ಟೆಯನ್ನು ಹಾಕಿಕೋ" ಎಂದ.

ರವಿ ಕೈಯಿಂದ ಮುಟ್ಟಿ–ಮುಟ್ಟಿ ನೋಡಿ ಗಾಬರಿಯಿಂದ "ಬಾಲೂ ಇದೇಕೋ ಪ್ಯಾಂಟೂ ಷರಟೂ.... ನಾನೆಲ್ಲಿ ಹೋಗಬೇಕೋ" ? ಎಂದ.

"ಲೋ ಸುಮ್ಮನೆ ಹೇಳಿದಷ್ಟು ಕೇಳೋ, ಹಾಕ್ಕೋ ಬೇಗ" ಪುಂಗಿಯ ನಾದಕ್ಕೆ ತಲೆದೂಗುವ ಹಾವಿನಂತೆ ರವಿ ಸುಮ್ಮನೆ ಬಾಲು ಹೇಳಿದ್ದನ್ನು ಕೇಳುತ್ತಿದ್ದ.

ಕಣ್ಣಿಲ್ಲದವರು ಷೋ....ಗಾಗಿ ಹಾಕಿಕೊಳ್ಳುವ ಕೂಲಿಂಗ್ ಗ್ಲಾಸ್ ತಂದಿದ್ದ ಬಾಲು, ಅದನ್ನು ರವಿಯ ಕಣ್ಣಿಗೆ ತೊಡಿಸಿದ. ಏನು ಐಬೂ ಇಲ್ಲದ ಸುಂದರ ಯುವಕ ನಂತೆ ಕಂಡ ರವಿ.

ಈಗ ನನ್ನ ಜೊತೆಯಲ್ಲಿ ಬಾ.... ಎಂದು ಭಾಗೀರಥಮ್ಮನವರಿದ್ದ ರೂಮಿಗೆ ರವಿಯನ್ನು ಕರೆದುಕೊಂಡು ಹೋಗಿ "ಅಲ್ಲಿ ಅಮ್ಮ ಕೂತಿದ್ದಾರೆ ನಮಸ್ಕಾರ ಮಾಡು" ಎಂದ.

ರವಿ ಕೈಯಿಂದ ತಡವರಿಸಿ ತಾಯಿಯ ಪಾದ ಮುಟ್ಟಿ ನಮಸ್ಕರಿಸಿದ. ಭಾಗೀ ರಥಮ್ಮನವರು ಬೆರಗಾಗಿ ಮಗನನ್ನು ನೋಡಿದರು.

"ಅಯ್ಯೋ ... ರವೀ.... ನನ್ನ ಕಂದಾ, ಹೀಗೆ ಲಕ್ಷಣವಾಗಿ ನಿನ್ನನ್ನು ನೋಡಿ ಎಷ್ಟು ದಿನವಾಯಿತೋ ? ಇದೇನಪ್ಪಾ ಬಾಲೂ" ಎಂದರು.

"ಇವತ್ತು ಸ್ವಲ್ಪ ಹೊರಗಡೆ ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ ಅಮ್ಮಾ" ಎಂದ ಬಾಲು.

"ಸಧ್ಯ ನಿನ್ನ ಪುಣ್ಯಕ್ಕೆ ಅಷ್ಟು ಮಾಡಪ್ಪಾ ! ಸ್ವಲ್ಪ ಹೊರಗಿನ ಗಾಳಿಯಾದರೂ ತಗುಲಲಿ ಅವನಿಗೆ" ಎಂದು ಕಣ್ಣು ಒರೆಸಿಕೊಂಡರು. ವಾಸಂತಿ ಬೆರಗಾಗಿ ರವಿಯನ್ನು ನೋಡುತ್ತಿದ್ದಳು.

ರವಿಯನ್ನು ಆಟೋದಲ್ಲಿ ಕೂರಿಸಿಕೊಂಡು ಬಾಲು ಹೊರಟು ಹೋದ. ಬಾಲು ಮೊದಲೇ ವಿಚಾರಿಸಿ ಎಲ್ಲಾ ಏರ್ಪಾಡು ಮಾಡಿದ್ದ. ಕುರುಡರಿಗೆ ಏನಾದರೂ ಕೈಕೆಲಸ ಕಲಿಸುವ ತರಬೇತಿ ಕೇಂದ್ರ "ಗಾಂಧೀ ನಿಲಯ". ಅಲ್ಲಿ ನೂರಾರು ಜನ ಕುರುಡರು ಬೆತ್ತ ಹೆಣಿಗೆ, ಸಂಗೀತ, ವಾದ್ಯ, ಹೊಲಿಗೆ, ರೇಡಿಯೋ ರಿಪೇರಿ, ಮರಗೆಲಸ ಹೀಗೆ ನಾನಾ ವಿಧ ಕೈಗಾರಿಕೆಯಲ್ಲಿ ತರಬೇತಿ ಪಡೆಯುತ್ತಿದ್ದರು. ರವಿಯನ್ನು ರೇಡಿಯೋ ರಿಪೇರಿ ತರಬೇತಿಗೆ ಸೇರಿಸಿದ ಬಾಲು. ರವಿಗೆ ಸಾಮಾನ್ಯವಾಗಿ ಅದೆಲ್ಲಾ ಗೊತ್ತಿತ್ತು. ಆದರೆ ಕಣ್ಣು ಕಾಣದೇ ತಯಾರಿಸುವುದು ತರಬೇತಿಯಿಂದಲೇ ಬರಬೇಕು.

ರವಿಗೆ ಮೊದಲು ಮೊದಲು ಸಂಕೋಚ, ಬೇಸರವಾದರೂ ಆಮೇಲೆ ತನ್ನಂತೆಯೆ ಬೇಕಾದಷ್ಟು ಬಡಜನರು, ತಿನ್ನುವುದಕ್ಕೆ ಗತಿಯಿಲ್ಲದ ಕುರುಡರು ಪಡುವ ಕಷ್ಟವನ್ನು ನೋಡಿ ರವಿ ಸಮಾಧಾನ ಪಡೆದ.

ಕೇಂದ್ರದವರು ಕುರುಡರಿಗಾಗಿ ವ್ಯಾನನ್ನೂ ಇಟ್ಟಿದ್ದರು. ಅದರಲ್ಲಿ ಸಲೀಸಾಗಿ ಹೋಗಿ ಬರುತ್ತಿದ್ದ ರವಿ.

ಬಾಲು ರೇಡಿಯೋ ರಿಪೇರಿ ವರ್ಕ್‌ಶಾಪ್ ಇಟ್ಟಿದ್ದ. ತರಬೇತಿ ಪಡೆದ ನಂತರ ರವಿಯನ್ನು ತನ್ನ ವರ್ಕ್‌ಶಾಪಿನಲ್ಲಿಯೇ ಕೆಲಸಕ್ಕೆ ಇಟ್ಟುಕೊಂಡ.

"ರವೀ ಏನು ದಾಕ್ಷಿಣ್ಯವೂ ಬೇಡ, ನೀನು ಕೆಲಸ ಮಾಡಿದ್ದಕ್ಕೆ ತಕ್ಕ ಸಂಭಾವನೆ ಯನ್ನು ತೆಗೆದುಕೊ.... ಸ್ನೇಹ ಸ್ನೇಹವಾಗಿರಲಿ" ಎಂದ ಬಾಲು.

"ಅಲ್ಲ ಬಾಲೂ, ನನ್ನನ್ನು ಇಷ್ಟು ಮುಂದೆ ತಂದ ನಿನಗಾಗಿ ನಾನು ಏನು ಮಾಡಲೂ ಸಿದ್ಧ ನನಗೆ ಸಂಬಳ ಬೇಡ. ಸಧ್ಯ ನಿನ್ನೊಂದಿಗೆ ಕಾಲ ಕಳೆಯಲು ಅವಕಾಶ ಕೊಡು".

ನನ್ನೊಂದಿಗೆ ಇರು ರವೀ, ಬೇಡ ಅನ್ನಲಿಲ್ಲ. ನಿನ್ನಿಂದ ಮನೆಯವರಿಗೂ ಸ್ವಲ್ಪ ಸಹಾಯವಾಯಿತು ಎನ್ನುವ ನೆಮ್ಮದಿ ನಿನಗೆ ಉಂಟಾಗಲಿ ಅಷ್ಟೆ ಅಂದ ಬಾಲು.

ರವಿಯ ಸಂಪಾದನೆ ತಿಂಗಳಿಗೆ 200-300 ರೂ. ಆಗುತ್ತಿತ್ತು. ಬಾಲಚಂದ್ರ ಬೇಕೆಂದೇ ಲೆಕ್ಕಾಚಾರದಲ್ಲಿ ಹೆಚ್ಚು ಮಾಡಿ ಸ್ವಲ್ಪ ಹೆಚ್ಚಾಗೇ ಹಣವನ್ನು ಕೊಡುತ್ತಿದ್ದ.

ಸಧ್ಯ ರವಿ ಎಷ್ಟೋ ಗೆಲುವಾದ. ಆ ಜೀವನಕ್ಕೇ ಹೊಂದಿಕೊಂಡ. ನನ್ನಿಂದ ಮನೆಗೆ ಸ್ವಲ್ಪ ಸಹಾಯವಾಗುತ್ತಲ್ಲಾ ಎಂಬ ನೆಮ್ಮದಿ ಅವನಿಗೆ.

"ಕಾಲಾಯ ತಸ್ಮೈ ನಮಃ" ಕಾಲದ ಗರ್ಭದಲ್ಲಿ ಎಲ್ಲವೂ ಕರಗಿ ಹೋಗುತ್ತದೆ. ಗತವು ಮರೆಯಾಗಿ ಭವಿಷ್ಯವು ಮುಂದೆ ನಿಲ್ಲುತ್ತದೆ. ಕಾಲವು ಹೊಸತನ್ನು ತರಬಲ್ಲದು, ಹಳೆಯದನ್ನು ಮರೆಸಬಲ್ಲದು. ಚಿಂತೆಯ ಆಳವಾದ ಕಡಲಿನಲ್ಲಿ ಮುಳುಗುತ್ತಿರುವ ಮನುಷ್ಯನೂ ಕೂಡ ಕಾಲ ನಿರೀಕ್ಷಣೆಯೆಂಬ ತೃಣವನ್ನು ಹಿಡಿದು ಬದುಕುವ ಆಸೆ ಯನ್ನು ಇಟ್ಟಿರುತ್ತಾನೆ.

ಭಾಗೀರಥಮ್ಮನೂ ಕಾಲಕ್ರಮೇಣ ಸ್ವಲ್ಪ ಚೇತರಿಸಿಕೊಂಡರು. ಅವರ ಒಂದು ಹಂಬಲವೆಂದರೆ ತಮ್ಮ ವಂಶದ ಹೆಸರು ಹೇಳುವ ಒಂದು ಕುಡಿ ಬೇಕು. ರವಿಗಂತೂ ಇನ್ನು ಮದುವೆ ಮಾಡುವ ಆಸೆ ಹೋಯಿತು. ಇನ್ನು ನಾಗರಾಜನಿಗೆ ಇದುವರೆಗೂ ಆಗಲಿಲ್ಲ. ಮಕ್ಕಳಾಗದ ದೋಷ ವಾಸಂತಿಯದೇ ಎಂದು ಅವರ ತೀರ್ಮಾನ.

ತಿಂದು ಉಂಡು ನನ್ನ ಮನೆಗೆ ಒಂದು ಕಂದನನ್ನು ಕೊಡದ ಇವಳ ಬಾಳು ವ್ಯರ್ಥ ಎಂಬ ಒಂದು ಅಭಿಪ್ರಾಯ ಅವರಲ್ಲಿ ಮೂಡಿದ್ದೇ ತಡ, ವಾಸಂತಿಯನ್ನು ನಿಕೃಷ್ಟವಾಗಿ ಕಾಣಲು ತೊಡಗಿದರು. ಅವಳ ಮೇಲಿದ್ದ ಪ್ರೀತಿ ಕಮ್ಮಿಯಾಗಿ ಆ ಜಾಗದಲ್ಲಿ ದ್ವೇಷ ತಲೆ ಎತ್ತತೊಡಗಿತು. ಮಾತು ಮಾತಿಗೆ ಸಿಡುಕುತ್ತಿದ್ದರು.

ಅಮ್ಮಾ.... ಬನ್ನಿ ಊಟಕ್ಕೆ, ಎಂದು ನಯವಾಗಿ ವಾಸಂತಿ ಕರೆದರೂ ಅವರು ಸಿಡಾರನೆ "ಇನ್ನೇನು ಊಟ ಮಾಡೋದು, ಮಲಗೋದು, ಇವೆರಡೇ ತಾನೇ ಈ ಮನೆಯಲ್ಲಿ ಕೆಲಸ, ಒಂದು ಮಕ್ಕಳೇ ಮರೀನೇ ?.... ಸುಧಾರಿಸಬೇಕೇ ಉಂಡುಂಡು ಗುಂಡುಕಲ್ಲಿನ್ಹ ಹಾಗಾಗೋದೇ ಎಲ್ರೂ" ... ಎನ್ನುವರು.

"ಅಮ್ಮಾ ದೇವಸ್ಥಾನಕ್ಕೆ ಹೋಗಿ ಬರ್ತೀನಿ" ಎಂದರೆ "ಯಾಕಮ್ಮಾ ತಾಯೀ.... ಅವತ್ತಿನಿಂದ ವರ ಪಡೆದುಕೊಂಡು ಪಡೆದುಕೊಂಡು ಸಾಕಾಗಿದೆಯಲ್ಲಾ, ಏನ್ ಪಾಪ ಮಾಡಿದ್ದೀಯೋ ಏನೋ ... ಯಾವ ದೇವರೂ ನಿನ್ನ ಹೊಟ್ಟೇಲಿ ಒಂದು ಮಗೂನ ಕೊಡಲಿಲ್ಲ" ಎನ್ನುವ್ವರು.

ವಾಸಂತಿ ಒಳಗೊಳಗೇ ದುಃಖಿಸಿ–ದುಃಖಿಸಿ ಕರಗಿದಳು.

ಆ ದಿನ ರವಿ ವರ್ಕ್‌ಶಾಪ್‌ಗೆ ಹೊರಟ. "ಅತ್ತಿಗೇ ಅಡಿಗೆ ಆಗಿದ್ದರೆ ಬಡಿಸ್ತೀರಾ ?" ಅಂದ.

"ಇನ್ನೊಂದು ಹತ್ತು ನಿಮಿಷ ಆಗ್ಹೋಯ್ತು ತಾಳು" ಅಂದಳು ವಾಸಂತಿ.

"ಏನತ್ತಿಗೇ, ವ್ಯಾನ್ ಬರೋ ಹೊತ್ತಿಗೆ ಇನ್ನೂ ನಂದು ಊಟಾನೇ ಆಗಿರೋಲ್ಲ ಅಂದ.

ಅಲ್ಲೇ ಇದ್ದ ನಾಗರಾಜ "ಏನೇ ಒಂದಡಿಗೆ ಮಾಡೋಕೆ ಎಷ್ಟು ಹೊತ್ತೇ ? ಅವನು ಸ್ವಲ್ಪ ನಿಧಾನವಾಗಿ ಊಟ ಮಾಡೋ ಹಾಗೆ ಅಡಿಗೆ ಮಾಡಬಾರದಾ?" ಅಂದ

ವಾಸಂತಿಗೆ ತಡೆದ ದುಃಖ ಒಟ್ಟಿಗೇ ಉಕ್ಕಿತು. "ಇನ್ನೇನು ಈ ಮನೇಲಿ ಎಲ್ರೂ ನನ್ನ ಮೇಲೆ ಜೋರು ಮಾಡೋವ್ರೇ, ಒಬ್ಬಳು ಎಲ್ಲಾ ಮಾಡಬೇಡ್ವೇ ?" ಎಂದು ಅಳುತ್ತಾ ರವಿಗೆ ತಟ್ಟೆ ಹಾಕಿದಳು.

ಅಲ್ಲಿಯೇ ಇದ್ದ ಭಾಗೀರಥಮ್ಮನವರು ಸಿಡ–ಸಿಡನೆ ನೋಡು ನೀನಿರೋದೇ ಈ ಮನೆ ಕೆಲಸಕ್ಕೆ ಅಷ್ಟೆ. "ಹೊಟ್ಟೇಲಿ ಮಕ್ಕಳಿಲ್ಲ. ಕಟ್ಟೇಲಿ ನೀರಿಲ್ಲ" ಅನ್ನೋ ಗಾದೆಗೆ ಸರಿಯಾಗಿ ಗೊಡ್ಡಹಸೂನ ಕಟ್ಟಿಕೊಂಡ ಹಾಗೆ ನಿನ್ನ ಕಟ್ಟಿಕೊಂಡು ಮನೆ ವಂಶಾನೇ

ಮುಳುಗಿಸಿದ್ದಾಯಿತು. ನಿನ್ನಿಂದ ಏನು ಪ್ರಯೋಜನ ? ನನ್ನ ಮಗನಿಗೆ ಬೇರೆ ಮದುವೆ ಮಾಡಿಕೊಳ್ಳೋಕಾದ್ರೂ ಅವಕಾಶ ಕೊಡು ಮಹಾತಾಯಿ" ಎಂದರು.

ನಾಗರಾಜ, ರವಿ ಇಬ್ಬರೂ ಅಮ್ಮನ ಈ ಕಠೋರವಾದ ಮಾತನ್ನು ಕೇಳಲಾರದೇ "ಅಮ್ಮಾ, ಅತ್ತಿಗೇನ ಯಾಕಮ್ಮಾ ಹೀಗೆ ನಿಷ್ಠೂರವಾಗಿ ಅಂತೀಯಾ? ಈ ಮನೆಗೋಸ್ಕರ ಎಷ್ಟು ದುಡೀತಿದ್ದಾರೆ ? ಅವರ ಮನಸ್ಸನ್ನ ನೋಯಿಸಬೇಡಮ್ಮಾ" ಅಂದ ರವಿ.

"ಅಮ್ಮಾ ಅವಳನ್ನೇಕೆ ಸುಮ್ಮನೆ ಅಂತೀಯಾ, ಅವಳದ್ದೇನಮ್ಮಾ ತಪ್ಪು ?" ಎಂದು ರೇಗಿದ ನಾಗರಾಜ.

"ಹೌದು ಕಣ್ರೋ.... ನಾನು ಸಂಕಟ ಪಡುವುದು ನಿಮಗೆ ಅರ್ಥವಾಗೋಲ್ಲ ಮಗು ಇಲ್ಲದ ಮನೆ ಸ್ಮಶಾನಕ್ಕೆ ಸಮಾನ ಕಣ್ರೋ".

"ಅದಕ್ಕೇನು ಮಾಡಬೇಕೂ ಅಂತೀಯಾಮ್ಮಾ, ರವೀಗೆ ಹೇಗಾದರೂ ಒಂದು ಹೆಣ್ಣು ತಂದು ಮದುವೆ ಮಾಡೋಣ ಸುಮ್ಮನಿರು" ಅಂದ ನಾಗರಾಜ.

"ಅವನ ಹಣೇ ಬರಹಕ್ಕೆ ಅದಂತೂ ಆಗೋಲ್ಲ, ನೀನೇ ಇನ್ನೊಂದು ಮದುವೆ ಆಗೋ ನಾಗರಾಜ" ಎಂದು ನಿರ್ದಾಕ್ಷಿಣ್ಯವಾಗಿ ವಾಸಂತಿಯ ಎದುರಿಗೇ ಹೇಳಿದರು.

"ಅಮ್ಮಾ .... ಸಾಕು ಕೇಳಲಾರೆ" ಅಂದಿದ್ದೇ ನಾಗರಾಜ ಎರಡು ಕೈಲೂ ಕಿವಿ ಮುಚ್ಚಿಕೊಂಡು ಊಟವನ್ನೂ ಮಾಡದೆ ಬಟ್ಟೆ ಹಾಕಿಕೊಂಡು ಬ್ಯಾಂಕಿಗೆ ಹೊರಟು ಹೋದ

ಈ ಹಗರಣದಲ್ಲಿ ರವಿಯೂ ಊಟ ಮಾಡಲಿಲ್ಲ. ಆ ವೇಳೆಗೆ ವ್ಯಾನ್ ಬಂತು. ಅವನೂ ಹಾಗೆಯೇ ಹೊರಟು ಹೋದ

ಇನ್ನು ವಾಸಂತಿಯ ದುಃಖ ಹೇಳತೀರದು. ಅವಳೂ ಊಟ ಮಾಡದೆ ಮಹಡಿಯ ಮೇಲೆ ಹೋಗಿ ಅಳುತ್ತಾ ಮಲಗಿದಳು.

ಪರಮಶಿವಯ್ಯನವರು ಹೆಚ್ಚು ಹೊತ್ತು ಮನೆಯಲ್ಲಿಯೇ ಇರುತ್ತಿರಲಿಲ್ಲ. ಯಾವುದಾದರೂ ಅಂಗಡಿ ಅಥವಾ ಬೆಂಚುಕಲ್ಲಿನ ಮೇಲೆ ಸುಮ್ಮನೆ ಕುಳಿತಿದ್ದು ಮಧ್ಯಾಹ್ನ ಊಟದ ವೇಳೆಗೆ ಮನೆಗೆ ಬರುತ್ತಿದ್ದರು.

ಅವರು ಬಂದಾಗ ಯಾವ ಹಗರಣವನ್ನೂ ಕಾಣಿಸಿಕೊಳ್ಳದೆ ವಾಸಂತಿ ಬಡಿಸಿದಳು.

ನಾಗರಾಜ ಬ್ಯಾಂಕಿಗೆ ಹೋದವನು ಒಂದು ನಿಮಿಷವೂ ನೆಮ್ಮದಿಯಿಂದಿರಲಿಲ್ಲ. ತಾಯಿಯ ವಾಗ್ಬಾಣ ವಾಸಂತಿಯನ್ನು ಎಷ್ಟು ನೋಯಿಸಿರಬಹುದು ? ನನ್ನಿಂದಾಗಿ ಅವಳು ಎಷ್ಟು ಸಂಕಟವನ್ನು ಸಹಿಸಿಯಾಳು ? ಇನ್ನು ನಾನು ಸುಮ್ಮನಿರಲಾರೆ. ಇಷ್ಟು ದಿನ ಬಚ್ಚಿಟ್ಟ ರಹಸ್ಯವನ್ನು ಅವಳಲ್ಲಿ ಬಿಚ್ಚಿ ಹೇಳಲೇಬೇಕು ಎಂದು ತಲ್ಲಣಿಸಿದ.

ಬ್ಯಾಂಕಿನಲ್ಲಿ ಗಮನದಿಂದ ಕೆಲಸ ಮಾಡಲಾಗಲಿಲ್ಲ ಅವನಿಗೆ. ಸಪ್ಪೆಯಾಗಿ ಕುಳಿತಿದ್ದ ಅವನನ್ನು ನೋಡಿ ಮ್ಯಾನೇಜರ್ "ವೈ ಹುಷಾರಿಲ್ಲವೇ ನಾಗರಾಜ್ ? ನೀವು ಮನೆಗೆ ಹೋಗಿ, ಪರವಾಗಿಲ್ಲ" ಎಂದರು.

ನಾಗರಾಜ ಮಧ್ಯಾಹ್ನ ಎರಡು ಗಂಟೆ ವೇಳೆಗೆ ಮನೆಗೆ ಬಂದ. ಮನೆಯಲ್ಲಿ ಮೌನವೇ ಮೌನ. ನೇರ ಮಹಡಿಗೆ ಹೋದ. ರೂಮಿನಲ್ಲಿ ವಾಸಂತಿ ಬೋರಲಾಗಿ ಮಲಗಿ ದಿಂಬಿನಲ್ಲಿ ಮುಖ ಮುಚ್ಚಿ ಅಳುತ್ತಿದ್ದಳು.

ನಾಗರಾಜ ಮಂಚದ ಮೇಲೆ ಕುಳಿತು ಹೆಂಡತಿಯ ಬೆನ್ನಿನ ಮೇಲೆ ಕೈ ಆಡಿಸುತ್ತಾ "ವಾಸೀ.... ಅಂದ.

ವಾಸಂತಿಯ ದುಃಖ ಕಣ್ಣೀರ ಕೋಡಿಯಾಗಿ ಹರಿಯಿತು. ಬಿಕ್ಕಿ–ಬಿಕ್ಕಿ ಅತ್ತಳು.

ನಾಗರಾಥ ಹೆಂಡತಿಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು "ವಾಸೀ.... ನನ್ನಿಂದ ನಿನಗೆಷ್ಟು ಕಷ್ಟ ? ನನ್ನನ್ನು ಕ್ಷಮಿಸುತ್ತೀಯಾ ವಾಸೀ ?" ಎಂದು ಅಂಗಲಾಚಿ ಬೇಡಿಕೊಂಡ.

ತಕ್ಷಣ ಎದ್ದು ಕುಳಿತು ವಾಸಂತಿ ಅವನ ಮುಖ ದುರ–ದುರನೆ ನೋಡುತ್ತಾ, "ನಾನೇನೂ ನಿಮಗೆ ಯಾವುದಕ್ಕೂ ಅಡ್ಡಿ ಮಾಡಿಲ್ಲವಲ್ಲಾ" ಎಂದಳು.

"ಯಾವುದಕ್ಕೆ ಅಡ್ಡಿ ವಾಸೀ ?.... ಏನು ನೀನು ಹೇಳುವುದು ?" ಎಂದ.

"ನೀವು ಇನ್ನೊಂದು ಮದುವೆ ಮಾಡಿಕೊಳ್ಳಲು ನಾನು ಅಡ್ಡಿ ಮಾಡಿಲ್ಲ".

"ಮಾಡಿಕೊಳ್ಳಲು ನಾನು ರೆಡಿಯಾಗಿಲ್ಲ ವಾಸೀ...." ಎಂದು ಕೂಗಿಕೊಂಡ.

"ಮತ್ತೆ ನಿಮ್ಮ ಅಮ್ಮನ ಆಸೆ ನೆರವೇರಬೇಕಲ್ಲಾ"

"ಇನ್ನೊಂದು ಮದುವೆ ಮಾಡಿಕೊಂಡರೆ ಮಕ್ಕಳಾಗುತ್ತೆ ಎಂದು ನಿನಗೆ ಯಾರು ಹೇಳಿದರು ?"

"ನಿಮ್ಮ ಅಮ್ಮನ ಸಂಶಯ ಅದೇ ತಾನೇ ?"

"ಅಯ್ಯೋ.... ವಾಸೀ, ಅಮ್ಮನಿಗೆ ಒಂದೂ ಗೊತ್ತಿಲ್ಲ. ಅವಳು ಮದುವೆ ಆಗು ಅಂದ್ರೆ, ನಾನು ಆಗ್ತೀನ್ಯೇ ವಾಸೀ? ಅಳಬೇಡ ಏಳು" ಎಂದು ಅವಳನ್ನು ಸಂತೈಸಿದ.

ವಾಸಂತಿ ನಾಗರಾಜನ ಪ್ರೀತಿಯಿಂದ ವಂಚಿತಳಾಗಲಿಲ್ಲ. ಅವಳ ಸರ್ವಸ್ವವಾದ ಪತಿಯನ್ನು ಇನ್ನೊಬ್ಬ ಹೆಣ್ಣಿಗೆ ಬಿಟ್ಟು ಕೊಡುವುದೆಂದರೆ ಅವಳ ಜೀವವೇ ಹೋದಂತೆ. ಆದರೂ ತನ್ನಿಂದ ಮಕ್ಕಳಾಗದ ಈ ನಿಷ್ಠೂರ ತಾನು ಸಹಿಸಲಾರಳು.

ತನ್ನನ್ನು ಸಮಾಧಾನ ಪಡಿಸುತ್ತಿರುವ ಪತಿಯ ಕೈಯನ್ನು ಭದ್ರವಾಗಿ ಹಿಡಿದು "ನೀವು ನನ್ನ ದೇವರು, ನಿಮಗಾಗಿ ನಾನು ಏನು ತ್ಯಾಗ ಮಾಡಲೂ ಸಿದ್ಧ, ಖಂಡಿತ

ನೀವು ಇನ್ನೊಂದು ಮದುವೆಯಾಗಿ, ನಾನೇ ಒಪ್ಪಿಗೆ ಕೊಡುತ್ತೇನೆ" ಎಂದು ಹೇಳಿದವಳೆ ದುಃಖ ಉಕ್ಕಿ ಬಂದು ಅವನ ಎದೆಯಲ್ಲಿ ಮುಖ ಹುದುಗಿಸಿ ಬಿಕ್ಕಿ–ಬಿಕ್ಕಿ ಅತ್ತಳು.

"ವಾಸಂತೀ ನಿಜಸಂಗತಿ ನಿನಗೆ ಗೊತ್ತಿಲ್ಲ. ಈ ದಿನ ನಿನಗೆ ಹೇಳಲೇಬೇಕು. ಇರಲಿ, ಎಲ್ಲರೂ ಊಟ ಮಾಡಿದ್ದಾಯಿತೇ ?" ಅಂದ.

"ಸಧ್ಯ. ಯಾರಿಗೆ ಊಟ ಬೇಕಾಗಿದೆ ?"

"ನೀನೂ ಊಟ ಮಾಡಿಲ್ಲವೇ ? ವಾಸೀ ನಡಿ–ನಡಿ, ನನಗೆ ತುಂಬಾ ಹಸಿವು ಊಟ ಮಾಡೋಣ" ಎಂದು ಅವಳ ಕಣ್ಣೊರಸಿ ಕೆಳಕ್ಕೆ ಕರೆದುಕೊಂಡು ಹೋದ.

ಊಟವಾದ ನಂತರ ಮತ್ತೆ ಇಬ್ಬರೂ ಮೇಲೆ ರೂಮಿಗೆ ಬಂದರು. ವಾಸಂತಿಯು ಮನಸ್ಸಿಗೆ ತುಂಬಾ ಆಘಾತವಾಗಿತ್ತು. ತನ್ನನ್ನು ಎಷ್ಟು ಪ್ರೀತಿಸುತ್ತಿದ್ದ ಅತ್ತೆ ಇದ್ದಕ್ಕಿದ್ದಂತೆ ದ್ವೇಷಿಸಲು ತೊಡಗಿದ್ದಾರೆ. ಮಾತು ಮಾತಿಗೆ ಗೊಡ್ಡಿ ಎನ್ನುವ ಬಿರುದನ್ನು ಸೇರಿಸುತ್ತಿದ್ದಾರೆ. ಮಗನಿಗೆ ಬೇರೆ ಮದುವೆ ಮಾಡಿಕೊ ಎಂದು ಬೇರೆ ಬೋಧಿಸುತ್ತಿದ್ದಾರೆ. ಇನ್ನು ತನ್ನ ಸ್ಥಾನ ಈ ಮನೆಯಲ್ಲಿ ಕಸಕ್ಕಿಂತ ಕಡೆ, ಎಂದು ನೊಂದು ಪೆಚ್ಚಾಗಿ ಸುಮ್ಮನೆ ಮಂಚದ ಮೇಲೆ ಕುಳಿತಳು.

ನಾಗರಾಜ ವಾಸಂತಿಯನ್ನು ಪಕ್ಕಕ್ಕೆ ಎಳೆದುಕೊಂಡು "ವಾಸೀ ನಿನಗೆ ಇವತ್ತೊಂದು ಮುಖ್ಯ ವಿಚಾರ ತಿಳಿಸಬೇಕು. ನನ್ನಿಂದಾಗಿ ನೀನು ಪಡುವ ಬವಣೆ ನಾನು ನೋಡಲಾರೆ. ಇಷ್ಟು ದಿನ ಬಚ್ಚಿಟ್ಟ ರಹಸ್ಯ ಈ ದಿನ ನಿನಗೆ ಮಾತ್ರ ಹೇಳುತ್ತೇನೆ" ಎಂದ.

ವಾಸಂತಿ ಆಶ್ಚರ್ಯದಿಂದ "ಏನು !.... ನನ್ನಿಂದಲೂ ರಹಸ್ಯ ಬಚ್ಚಿಟ್ಟಿದ್ದೀರಾ" ಎಂದಳು

"ಹೌದು ವಾಸಂತಿ ನನ್ನನ್ನು ಕ್ಷಮಿಸು.... ಯಾವತ್ತೋ ಹೇಳೋಣ, ಹೇಳೋಣ ಎಂದಿದ್ದವನು ನಿನ್ನ ಉತ್ಸಾಹಕ್ಕೆ ಭಂಗ ತರಬಾರದೆಂದು ಸುಮ್ಮನಾಗಿ ದಿನ ತಳ್ಳುತ್ತಾ ಬಂದೆ ವಾಸೀ" ಮುಂದೆ ಮಾತನಾಡಲಾರದೆ ನಾಗರಾಜ ವಾಸಂತಿಯ ಭುಜದ ಮೇಲೆ ತಲೆಯಿಟ್ಟು ಕಣ್ಣೀರು ಸುರಿಸಿದ.

ವಾಸಂತಿಗೆ ಗಾಬರಿಯಾಯಿತು. ಎಂದೂ ನಾಗರಾಜ ಹೀಗೆಲ್ಲಾ ಅತ್ತವನಲ್ಲ. ಏನಾಗಿದೆ ? "ಛೆ ಯಾಕೆ ಹೀಗೆ ದುಃಖ ಪಡ್ತೀರಾ ? ನನ್ನ ಕೈಲೂ ಹೇಳಿಕೊಳ್ಳದ ರಹಸ್ಯ ಇನ್ನೆಂತಹುದು" ಎಂದು ಅವನ ತಲೆಯನ್ನು ಮೇಲಕ್ಕೆತ್ತಿ ಕೇಳಿದಳು ವಾಸಂತಿ.

"ವಾಸೀ ನಾನು ಮದುವೆಯೇ ಆಗುವುದಿಲ್ಲ ಎಂದು ಮದುವೆಗೆ ಮೊದಲು ಹೋರಾಡುತ್ತಿದ್ದುದು ನಿನಗೂ ತಿಳಿದಿರಬಹುದು, ಇದಕ್ಕಾಗಿಯೇ. ನನ್ನಿಂದ ಒಂದು ಹೆಣ್ಣಿನ ಜೀವನ ಹಾಳಾಗಬಾರದು ಎಂದು ಎಷ್ಟೇ ಹಟ ಮಾಡಿದರೂ ಮದುವೆ ತಪ್ಪಲಿಲ್ಲ.

ನಿನಗೂ ನನಗೂ ಋಣಾನುಬಂಧವಿತ್ತು. ಆದರೆ ನೀನು ನನ್ನ ಜೀವನದಲ್ಲಿ ನನ್ನ ಜೀವಾಳವಾಗಿ ಬಂದೆ. ಬತ್ತಿಹೋದ ಬರಡು ಭೂಮಿಯಲ್ಲಿ ತಿಳಿ ನೀರಿನ ಬುಗ್ಗೆಯಾಗಿ ಬಂದೆ. ಕತ್ತಲು ಕವಿದಿದ್ದ ನನ್ನ ಬಾಳಿನಲ್ಲಿ ಬೆಳಕಾಗಿ ಬಂದೆ. ನಿನ್ನನ್ನು ಮದುವೆಯಾದ ನಂತರ ನನಗೆ ಎಷ್ಟೋ ಸಮಾಧಾನವಾಯಿತು.

ಆದರೆ ನೀನು ತಾಯಿಯಾಗುವ ಹಂಬಲ ಪಟ್ಟಾಗಲೆಲ್ಲಾ ನಾನು ಪೆಚ್ಚಾಗುತ್ತಿದ್ದೆ. ಅದು ನಿನಗೆ ಅನುಭವವಿದೆ ವಾಸೀ ಅಲ್ಲವೇ ಎಂದ.

ವಾಸಂತಿ ತದೇಕವಾಗಿ ಕೇಳುತ್ತಿದ್ದಳು

"ಇದೇನು ನೀವು ಹೇಳುತ್ತಿರುವುದೇ ನನಗೆ ಅರ್ಥವಾಗುತ್ತಿಲ್ಲ. ಹೇಳಬೇಕೆಂದಿರುವುದನ್ನು ನೇರ ಹೇಳಿಬಿಡಿ" ಎಂದಳು ವಾಸಂತಿ.

"ಹೌದು ವಾಸೀ,ನೇರ ಹೇಳುತ್ತೇನೆ. ಮಕ್ಕಳಾಗದುದು ನಿನ್ನ ತಪ್ಪಲ್ಲ. ನಿನ್ನಲ್ಲಿ ದೋಷವಿಲ್ಲ. ನನ್ನಲ್ಲಿಯೇ ದೋಷ, ನನಗೆ ಮಕ್ಕಳಾಗುವ ಸಂಭವವೇ ಇಲ್ಲ ವಾಸೀ, ನನ್ನಿಂದ ನಿನಗೆ ಮಕ್ಕಳಾಗುವುದಿಲ್ಲ" ಎಂದು ತಲೆ ಕೊಡವಿದ.

ವಾಸಂತಿ ಗಾಬರಿಯಿಂದ "ಹಾಂ ... ಹೌದೇ ? ಏನಾಯಿತು ನನ್ನ ರಾಜಾ ? ನಿಮಗೇನಾಗಿದೆ ?" ಎಂದು ಅವನ ಎರಡು ಭುಜವನ್ನೂ ಹಿಡಿದು ಜೋರಾಗಿ ಅಲುಗಾಡಿಸಿದಳು.

ಮದುವೆಗೆ ಮೊದಲೇ ನನಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಆಗಿಹೋಗಿತ್ತು. ನಾನು ನಿಷ್ಪ್ರಯೋಜಕ. ವಾಸೀ ನಿನಗೆ ಯೋಗ್ಯನಲ್ಲ ಎಂದು ಕಣ್ಣೀರು ಸುರಿಸಿದ.

ವಾಸಂತಿಗೆ ಇದು ನಿಜವಾಗಿಯೂ ಆಕಸ್ಮಿಕ ಆಘಾತ. ಹೀಗೂ ಉಂಟೇ ? ಎಂದು ದಿಗ್ಭ್ರಾಂತಳಾದಳು. ಇದೆಂತಹ ಅನ್ಯಾಯ ? ಹೀಗೇಕಾಯಿತು ? ಎಂದು ಕಾತುರಳಾಗಿ ಗಂಡನನ್ನು ಕೇಳಿದಳು

ಅದೊಂದು ಆಕಸ್ಮಿಕ, ಎಂದು ನಡೆದದ್ದನ್ನೆಲ್ಲಾ ಹೇಳಿದ ನಾಗರಾಜ.

ಕೇಳಿ ವಾಸಂತಿ ದೊಡ್ಡದಾಗಿ ಒಂದು ನಿಟ್ಟುಸಿರು ಬಿಟ್ಟಳು. ಸರ್ಕಾರದ ಸಂತಾನ ನಿಯಂತ್ರಣ ಯೋಜನೆಯಲ್ಲಿ ಹೀಗೆ ಒಂದು ಕುಟುಂಬಕ್ಕೆ ಹಾನಿಯಾಗಬೇಕೇ? ಅಭಾಗಿನಿಯಾದ ನನಗೇ ಅದು ಅನ್ವಯಿಸಬೇಕೇ ? ಬೇಜವಾಬ್ದಾರಿಯ ಆ ವೈದ್ಯರುಗಳನ್ನು ಅಲ್ಲಿಯೇ ಭೂಗತ ಮಾಡಿಬಿಡಬೇಕಾಗಿತ್ತು. ಯಾಕೆ ಸುಮ್ಮನೆ ಬಿಟ್ಟಿರಿ ? ಎಂದು ಹಲ್ಲು ಕಡಿದಳು ಕೋಪಾವೇಶದಿಂದ.

"ವಾಸೀ ಆಗ ತುರ್ತುಪರಿಸ್ಥಿತಿ, ನಮ್ಮ ದೂರನ್ನು ಕೇಳುವವರ್ಯಾರು ?"

"ಹೋಗಲಿ, ನಿಮ್ಮ ಅಮ್ಮನಿಗೆ ಈ ವಿಚಾರ ಆಗಲೇ ಯಾಕೆ ನೀವು ಹೇಳಲಿಲ್ಲ"?

"ವಾಸೀ ಇದೊಂದು ರಹಸ್ಯ, ಇದನ್ನು ಬಯಲು ಮಾಡುವುದರಿಂದ ಯಾರಿಗೂ

ಲಾಭವಿಲ್ಲ. ರಹಸ್ಯವಾಗಿಟ್ಟು ನಿನಗೆ ಮಾತ್ರ ತಿಳಿಸಿದರೆ ಒಂದು ಸಮಯ ಲಾಭ ವಾದರೂ ಆಗಬಹುದು" ಎಂದ.

ಗಂಡನ ಮಾತಿಗೆ ಕೆಂಡವಾದಳು ವಾಸಂತಿ. ಇವರಲ್ಲಿ ತಪ್ಪಿಟ್ಟುಕೊಂಡು ನನ್ನನ್ನು ಹೀಗೆ ಗೋಳಾಡಿಸಿದರಲ್ಲಾ ಎಂದು. "ಸಾಕು ನಿಮ್ಮ ಬುದ್ಧಿವಂತಿಕೆ. ನಿಮ್ಮ ರಹಸ್ಯ ದಿಂದ ನನ್ನ ಪಾಡು ಏನಾಗಿದೆ ನೋಡಿ. ಇವಳಿಂದ ನನ್ನ ವಂಶ ನಿಂತು ಹೋಯಿತು ಎಂದು ಹಿಡಿಶಾಪ ಹಾಕುತ್ತಿದ್ದಾರೆ. ನನ್ನಮ್ಮ ಅವರು ಅನ್ನದೇ ಇರಬೇಕಾದರೆ ಮೊದಲು ನೀವು ಅವರಿಗೆ ನಿಜಸಂಗತಿ ತಿಳಿಸಿರಿ" ಎಂದಳು.

"ಬೇಡ ವಾಸೀ ಅವ್ವನಿಗೆ ಖಂಡಿತ ತಿಳಿಸುವುದು ಬೇಡ. ಹೇಗಾದರೂ ನಿನಗೆ ಒಂದು ಮಗು ಆಗಲೇ ಬೇಕು" ಎಂದು ಅವಳನ್ನು ದೈನ್ಯವಾಗಿ ನೋಡಿದ.

ವಾಸಂತಿಗೆ ಕೋಪ ನೆತ್ತಿಗೇರಿತು "ಸಾಕು ನಿಮ್ಮ ಮಾತು, ನಿಮ್ಮಿಂದ ಆಗದ ಮೇಲೆ ನನಗೆ ಇನ್ನೆಲ್ಲಿಯ ಮಕ್ಕಳು ? ಸಧ್ಯ ನಿಮ್ಮವ್ವನಿಗೆ ಮೊದಲು ತಿಳಿಸಿ".

"ವಾಸೀ.... ನನ್ನಾಣೆ ನೀನು ಹೇಳಬೇಡ" ಅಂದ. ವಾಸಂತಿ ಅವನ ಕೈಯನ್ನು ದೂರ ತಳ್ಳಿ ಅವನಿಂದ ದೂರ ಹೋಗಿ ಮಲಗಿ ಬಿಕ್ಕಿ–ಬಿಕ್ಕಿ ಅತ್ತಳು.

ಗಂಡನ ವಿಷಯ ತಿಳಿದ ಮೇಲೆ ವಾಸಂತಿ ಬಹಳ ಉದಾಸೀನಳಾದಳು. ಅವಳಿಗೆ ದಾಂಪತ್ಯ ಜೀವನವೇ ಜಿಗುಪ್ಸೆಯೆನಿಸಿತು. ಒಬ್ಬಳೇ ಕುಳಿತಾಗ ಯೋಚಿಸುವಳು. ತನ್ನ ಮದುವೆಯಾದ ಹೊಸದರಲ್ಲಿ ತನ್ನ ಗಂಡ ಇದ್ದಕ್ಕಿದ್ದಂತೆ ಉದಾಸೀನನಾಗುತ್ತಿದ್ದುದು. ಮನಸ್ಸಿಗೆ ಏನೋ ಚಿಂತೆ ಕೊರೆಯುತ್ತಿದ್ದುದು, ಇವೆಲ್ಲಾ ನೆನೆಸಿಕೊಂಡು ಅಯ್ಯೋ ! ನನ್ನ ಕರ್ಮವೇ ! ಒಂದು ಸಂತಾನವನ್ನು ಕೊಡಲಾರದ ಪುರುಷನೊಂದಿಗೆ ನನ್ನ ಮದುವೆ ? ಛೆ. ಇದೆಂತಹ ವಿಧಿಯ ವೈಪರೀತ್ಯ ? ಸಾಲದ್ದಕ್ಕೆ ಇವರ ತಪ್ಪನ್ನು ಸಮಾಜ ಹೆಣ್ಣಿನ ಮೇಲೆಯೇ ದೋಷ ಹೊರಿಸಿ ಕೀಳು ಮಾಡುವುದು. ಇವೆಲ್ಲಾ ವಾಸಂತಿಗೆ ಬಹಳ ವೇದನೆಯನ್ನುಂಟುಮಾಡುತ್ತಿತ್ತು. ಯೋಚಿಸಲಾರದೇ ತಲೆಯನ್ನು ಭದ್ರವಾಗಿ ಹಿಡಿದುಕೊಂಡು ಕೊಡವಿ ಏಳುವಳು.

ಕಡೆಗೆ ವಾಸಂತಿ ತನ್ನಷ್ಟಕ್ಕೆ ತಾನೇ ಸಮಾಧಾನ ತೆಗೆದುಕೊಳ್ಳುವಳು. ಎಷ್ಟೋ ಜನಕ್ಕೆ ಮಕ್ಕಳೇ ಆಗುವುದಿಲ್ಲ. ಯಾರಲ್ಲಿ ದೋಷವೋ ಏನು ಕರ್ಮವೋ ? ಅವರು ಸಂಸಾರ ಮಾಡುವುದೇ ಇಲ್ಲವೇ ? ನಮ್ಮದೂ ಹಾಗೆಯೇ ನೀರಸ ಸಂಸಾರ.... ಎಂದು ಕೊಳ್ಳುವಳು.

ಉತ್ಸಾಹವೆಲ್ಲಾ ಕಳೆದುಕೊಂಡು ಸಪ್ಪೆಯಾಗಿದ್ದ ವಾಸಂತಿಯನ್ನು ನಾಗರಾಜ ಈಗ ಹೆಚ್ಚು ಓಲೈಸುತ್ತಿದ್ದ. ಆ ದಿನ ವಾಸಂತಿ ಬಂದು ಮಲಗಿದಾಗ,

"ಏಕೆ ವಾಸೀ ತುಂಬಾ ಆಯಾಸವಾಯಿತೇ" ಎಂದ.

"ನನಗೆಂತಹ ಆಯಾಸ" ಎಂದು ಸಿಡುಕಿದಳು.

"ನನ್ನ ಮುದ್ದು ವಾಸೀ, ನೀನೂ ನನ್ನ ಮೇಲೆ ಕೋಪಿಸಿಕೊಂಡರೆ ನಾನೆಲ್ಲಿ ಹೋಗಲಿ ? ಇಲ್ಲಿ ಹತ್ತಿರ ಬಾ ನಿನಗೊಂದು ಮಾತು ಹೇಳಬೇಕು" ಅಂದು ಅವಳ ಪಕ್ಕದಲ್ಲಿ ಕುಳಿತು ಪ್ರೀತಿಯಿಂದ ಅವಳ ಮೈದಡವಿದ.

"ಇನ್ನೇನು ಪೀಠಿಕೆ ? ಹೇಳೋದು ನೇರ ಹೇಳಿಬಿಡಿ" ಎಂದು ಸಿಡುಕಿದಳು.

ಅವತ್ತಿನಿಂದ ಒಂದು ಮಾತನ್ನು ವಾಸಂತಿಗೆ ಹೇಳಲೋ, ಬೇಡವೋ ಎಂದು ತುಂಬಾ ಯೋಚಿಸಿ ಕಡೆಗೆ ಈ ದಿನ ಅವಳನ್ನು ಒಲಿಸಿ ಹೇಳಬೇಕೆಂದು ತೀರ್ಮಾನಿಸಿದ.

"ವಾಸೀ ನಾನು ಈ ಸಮಸ್ಯೆಗೆ ಪರಿಹಾರ ಹುಡುಕಿದ್ದೀನಿ. ಆದರೆ ನೀನು ಒಪ್ಪಬೇಕು" ಎಂದ.

"ಯಾವ ಸಮಸ್ಯೆಗೆ"

"ಮಕ್ಕಳಾಗುವ ಸಮಸ್ಯೆಗೆ"

"ಆಗುವ ಸಮಸ್ಯೆಯೇ ಇಲ್ಲವಲ್ಲಾ"

"ವಾಸೀ ನೀನು ಮನಸ್ಸು ಮಾಡಿದರೆ ಆಗುತ್ತೆ. ನಾನು ಹೇಳಿದಂತೆ ಈಗ ನೀನು ಕೇಳಲೇ ಬೇಕು. ಹೂಂ.... ಅಂತ ಭಾಷೆ ಕೊಡು ಮತ್ತೆ"

"ಯಾಕೋ ಕೈಕೇಯಿ ವರ ಕೇಳಿದ ಹಾಗೆ ಆಯ್ತಲ್ಲಾ, ಅದೇನ್ ಹೇಳಿ ಆಮೇಲೆ ಭಾಷೆ–ಸತ್ಯ ಎಲ್ಲಾ" ಅಂದಳು.

"ನೀನು ನಮ್ಮ ವಂಶಕ್ಕೆ ಒಂದು ಮಗುವನ್ನು ಕೊಡಲೇಬೇಕು" ಅಂದ.

"ಇದೆಂಥಾ ಭಾಷೆ ಕೊಡೋದ್ರೀ ನಿಮಗೆ ನಾನು ?" ಆಶ್ಚರ್ಯದಿಂದ ಎದ್ದು ಕುಳಿತು ಹುಬ್ಬು ಗಂಟಿಕ್ಕಿ ಗಂಡನನ್ನು ಬಿರುಗಣ್ಣಿನಿಂದ ನೋಡುತ್ತಾ ಕೇಳಿದಳು ವಾಸಂತಿ.

"ಅಬ್ಬಬ್ಬ ! ಕಣ್ಣಿನಿಂದಲೇ ನನ್ನನ್ನು ಸುಟ್ಟು ಬಿಡಬೇಡ. ವಾಸೀ ನೀನೀಗ ಮನಸ್ಸು ಮಾಡಿದರೆ ಆಗುತ್ತೆ".

"ಹೇಗೆ ಆಗುತ್ತೆ"

"ರವಿಯಿಂದ ನಿನಗೊಂದು ಮಗು".

ಕೇಳಿದ ಕೂಡಲೇ ವಾಸಂತಿ ಬೆಂಕಿಯಲ್ಲಿ ಬಿದ್ದವಳಂತೆ ಬೆಚ್ಚಿದಳು. ತನ್ನ ಗಂಡನಿಂದ ಈ ಮಾತು ? ಅವನ ತಲೆಯನ್ನು ಹಿಡಿದು ಅಲ್ಲಾಡಿಸಿ "ಏನ್ರೀ ನಿಮಗೆ ತಲೆ ಸರಿಯಾಗಿ ಇದೆಯೋ ಇಲ್ಲವೋ ?" ಎಂದು ಗದರಿದಳು.

"ವಾಸೀ ಸರಿಯಾಗಿದೆ, ನಾನು ತೀರ್ಮಾನ ಮಾಡಿಯೇ ಹೇಳುತ್ತಿರುವುದು".

"ನೀವು ತೀರ್ಮಾನ ಮಾಡೋಕೆ ಇದೇನು ಹಣ್ಣು ತಿಂದು ಎಸೆಯೋ ವಿಷಯ ಅಲ್ಲ" ಎಂದಳು ಸಿಟ್ಟಿನಿಂದ.

"ವಾಸೀ ನಿಮಗಾಗಿ ಏನು ತ್ಯಾಗ ಮಾಡಲೂ ಸಿದ್ಧ ಅಂದೆಯಲ್ಲ. ಈಗ ನಾನು ಹೇಳಿದಂತೆ ಇದೊಂದಕ್ಕೆ ನೀನು ಒಪ್ಪಲೇಬೇಕು".

"ಥೂ.... ಥೂ.... ಏನು ಹೊಲಸು ವಿಷಯ ? ಅದನ್ನು ಎಷ್ಟು ಸಲೀಸಾಗಿ ಹೇಳುತ್ತೀರಿ ? ನಿಮಗೆ ನಾಚಿಕೆಯಾಗೋಲ್ವೇ ?"

"ನನ್ನ ಮುದ್ದು ವಾಸೀ.... ಇದು ತಮಾಷಿಯಲ್ಲ ನಾನೇ ಇದಕ್ಕೆ ಸಮ್ಮತಿ ಕೊಟ್ಟಿದ್ದೇನೆ ರವಿಯಿಂದ ಆದರೆ ನಮ್ಮ ವಂಶದ್ದೇ ಆಗುತ್ತೆ. ಅವನನ್ನು ನೀನೇ ಒಪ್ಪಿಸು. ದಯವಿಟ್ಟು ಒಪ್ಪು ವಾಸೀ".

"ಥೂ ನೀವು ಇಷ್ಟು ಹಲ್ಕ ಅಂತ ನನಗೆ ತಿಳಿದಿರಲಿಲ್ಲ. ರೀ ತಾಯಿ ಸಮಾನವಾಗಿ ನೋಡುತ್ತಿರುವ ರವಿಯಲ್ಲಿ ನಾನು ! ಸಂಭೋಗ.... ಅಯ್ಯೋ.... ರಾಮ ರಾಮಾ.... ನಾನು ಯೋಚಿಸಲಾರೆ, ಮಕ್ಕಳಿಲ್ಲದಿದ್ದರೆ ನಿಮ್ಮ ವಂಶ ನಾಶವಾಗಲಿ, ನಾನು ಮಾತ್ರ ವ್ಯಭಿಚಾರಿಯಾಗಲಾರೆ.... ಅಬ್ಬಬ್ಬ ಈ ಮಾತನ್ನು ನಾನು ಹೇಗೆ ಸಹಿಸಲಿ ? ನನ್ನ ತಲೆಯೇ ಚಕ್ರವಾಗಿ ಸುತ್ತುತ್ತಿದೆ" ಎಂದು ಹೇಳುತ್ತಾ ಹಾಗೆಯೇ ಹಾಸಿಗೆಯ ಮೇಲೆ ಕುಸಿದು ಮಲಗಿದಳು ವಾಸಂತಿ.

ಅವಳ ಮನಸ್ಸಿಗೆ ಬಹಳ ಆಘಾತವಾಗಿದೆ ಎಂದು ತಾನೂ ತುಂಬಾ ದುಃಖಪಟ್ಟ.

"ವಾಸೀ ಸಮಾಧಾನ ತಗೋ. ನಾನು ನಿನಗೆ ಮಾಡಿರುವ ಅನ್ಯಾಯಕ್ಕೆ ಅದನ್ನು ಹೇಗಾದರೂ ಸರಿಪಡಿಸಬೇಕು. 'ಇದರಿಂದ ನೀನು ದೋಷಿಯಾಗಲಾರೆ, ನಿಧಾನವಾಗಿ ಯೋಚಿಸು ಈಗ ಮಲಗಿಕೋ...." ಎಂದ.

ತನ್ನ ಪತಿಯ ಈ ಸಲಹೆ ಅವಳ ಮನಸ್ಸಿನಲ್ಲಿ ಮುಳ್ಳಾಗಿ ಚುಚ್ಚುತ್ತಿತ್ತು. ಮುಗ್ಧ ರವಿಯನ್ನು ಒಂದು ಸಲ ನೆನೆಸಿಕೊಂಡಳು. ಅಬ್ಬ ! ಎಂಥಾ ಸರಳ ಹುಡುಗ, ಅವನ ಬಳಿ ... ನನ್ನ.... ಕಾಮ ... ಛೆ.... ಛೆ.... ಇದೆಂತಹ ದ್ರೋಹ ? ಎಂದು ನಿಟ್ಟುಸಿರು ಬಿಟ್ಟಳು. ಅವಳಿಗೇಕೋ ಈ ದಿನ ತನ್ನ ಗಂಡ ತನ್ನ ಶತ್ರು ಎನ್ನುವಂತಾಯಿತು. ಅವನಿಂದ ದೂರ ಮಲಗಿದಳು.

ಈ ವಿಷಯದ ಹುಳು ತಲೆ ಹೊಕ್ಕ ಮೇಲೆ ವಾಸಂತಿ ಯಾವಾಗಲೂ ಅನ್ಯ ಮನಸ್ಕಳಾಗಿಯೇ ಇರುತ್ತಿದ್ದಳು. ಎಷ್ಟೋ ಹೊತ್ತು ಕುಳಿತಲ್ಲಿಯೇ ಕುಳಿತು ಬಿಡುತ್ತಿದ್ದಳು.

ಈಗ ರವಿಯ ಬಳಿ ಹೋಗಿ ಅವನಿಗೆ ಉಪಚರಿಸಬೇಕಾದರೆ ಏಕೋ ಮನಸ್ಸು ಸಂಕುಚಿತಗೊಳ್ಳುತ್ತಿತ್ತು. ಪದೇ–ಪದೇ ಗಂಡ ಹೇಳಿದ ಮಾತು "ರವಿಯಿಂದ ನಿನಗೆ ಮಗು" "ರವಿಯಿಂದ ನಿನಗೆ ಮಗು" ಈ ಮಾತು ನಾಲ್ಕು ಕಡೆಯಿಂದ ಧಾಣಾ ಢಮಾಣ ಬಾರಿಸಿದಂತೆ ಕಿವಿಗೆ ಅಪ್ಪಳಿಸುತ್ತಿತ್ತು. ಹಿಂದಿನಂತೆ ರವಿಯನ್ನು ನೋಡಲು

ತನಗೇಕೆ ಅಳುಕು ? ಎಂದುಕೊಳ್ಳುವಳು, ಹಾಗೂ ರವಿಯಿಂದ ದೂರ–ದೂರವೆ ಇರುತ್ತಿದ್ದಳು.

ಆ ದಿನ ಬೆಳಗ್ಗೆ ನಾಗರಾಜ–ರವಿ ಇಬ್ಬರೂ ಒಳಗೆ ಬಂದರು. ಏನೊಂದು ಮಾತೂ ಇಲ್ಲದೆ ವಾಸಂತಿ ಇಬ್ಬರಿಗೂ ಕಾಫಿ ಕೊಟ್ಟಳು.

"ಅತ್ತಿಗೇ ನನಗೇಕೋ ತಲೆನೋವು, ಹಾಗೇ ಒಂದು ಮಾತ್ರೆ ಕೊಡಿ" ಎಂದ ರವಿ.

ವಾಸಂತಿ ಮಾತನಾಡಲೂ ಇಲ್ಲ, ಮಾತ್ರೆ ತಂದು ಕೊಡಲೂ ಇಲ್ಲ. ಅಲ್ಲಿಯೇ ಇದ್ದ ನಾಗರಾಜ ಎದ್ದು ಹೋಗಿ ಆಸ್ಪ್ರೋ ಮಾತ್ರೆ ತಂದು "ತೊಗೊಳ್ಳೋ ರವೀ.... ಯಾಕೆ ಹುಷಾರಿಲ್ಲವೇನೋ" ಅಂದ.

"ಇಲ್ಲ ಅಣ್ಣಾ ತುಂಬಾ ತಲೆನೋವು.... ಯಾಕಣ್ಣಾ ಅತ್ತಿಗೆ ಈ ನಡುವೆ ನನ್ನ ಕೈಲಿ ಸರಿಯಾಗಿ ಮಾತೇ ಆಡೋಲ್ಲ, ನಾನೇನು ತಪ್ಪು ಮಾಡಿದೇ ಅಂತ ನನ್ನ ಮೇಲೆ ಕೋಪ ?" ಅಂದ.

ರವಿ ಅಂದರೆ ಮೊದಲಿನಿಂದಲೂ ಪ್ರಾಣ ನಾಗರಾಜನಿಗೆ. ಎರಡು ದೇಹ ಒಂದು ಜೀವ, ಅನ್ನುವಂತಿದ್ದ ಅಣ್ಣತಮ್ಮಂದಿರು ಅವರು. ರವಿಗೆ ಕಣ್ಣು ಹೋದ ಮೇಲೆ ಅವನನ್ನು ನಲುಗಿಸದೆ ನೋಯಿಸದೆ ನೋಡಿಕೊಳ್ಳಲು ಸತತ ಪ್ರಯತ್ನಿಸಿದ. ಅವನು ನಿರುಪಯೋಗಿ ಆದನಲ್ಲಾ ಎಂದು ತಮ್ಮನ ಮೇಲಿನ ಪ್ರೀತಿ ಸ್ವಲ್ಪವೂ ಕೊರೆಯಾಗಲಿಲ್ಲ. ವಾಸಂತಿ ಸಹ ರವಿಯನ್ನು ತುಂಬಾ ಗಮನಿಸಿ ಉಪಚರಿಸುತ್ತಿದ್ದಾಳೆಂದು ಸಮಾಧಾನ ನಾಗರಾಜನಿಗೆ.

ರವಿಯಿಂದ ಮಗುವಾಗಲಿ ಎಂದು ತಾನು ಹೇಳಿದ ಮೇಲ ಹೆಂಡತಿ ರವಿಯನ್ನು ಕಡೆಗಣಿಸುತ್ತಿರುವುದು ಗೊತ್ತು. ತಮ್ಮನನ್ನು ಪ್ರೀತಿಯಿಂದ ಸಮಾಧಾನಪಡಿಸುತ್ತಾ "ಹೋಗು ರವೀ, ನೀನು ಮಲಗಿ ರೆಸ್ಟ್ ತಗೋ.. ಈ ದಿನ ವರ್ಕ್‌ಶಾಪಿಗೆ ಹೋಗ ಬೇಡ. ವಾಸಂತಿ ಎಲ್ಲಾ ನೋಡಿಕೊಳ್ಳುತ್ತಾಳೆ" ಎಂದು ರವಿಯನ್ನು ಕರೆದುಕೊಂಡು ಹೋಗಿ ಮಂಚದಲ್ಲಿ ಮಲಗಿಸಿದ.

ಹಾಗೆಯೇ ಅಡಿಗೆ ಮನೆಗೆ ಬಂದು ವಾಸಂತಿಯನ್ನು ಅಪ್ಪಿ ಮುದ್ದಿನ ಮಳೆಗರೆದ. ಅವಳನ್ನು ಅಪ್ಪಿಕೊಂಡೇ ಮಹಡಿ ಮೇಲಿನ ತಮ್ಮ ಕೊಠಡಿಗೆ ಕರೆದುಕೊಂಡು ಹೋದ.

"ಇದೇನ್ರೀ ನಿಮ್ಮ ತಮಾಷಿ ? ಅಡಿಗೆ ಮಾಡಬೇಡವೇ ?" ಎಂದು ಸಮಾಧಾನವಾಗಿಯೇ ಕೇಳಿದಳು.

"ಬೇಡ ವಾಸೀ.... ನಿಧಾನವಾಗಿ ಮಾಡು, ನಾನು ಮಧ್ಯಾಹ್ನ ಬಂದು ಊಟ ಮಾಡುತ್ತೇನೆ. ಅದಿರಲಿ.... ರವಿಯ ಮನಸ್ಸಿಗೆ ಹೀಗೆ ಯಾಕೆ ನೋವು ಮಾಡುತ್ತೀ"?

"ಅದು ನಿಮ್ಮಿಂದಲೇ"

"ಇಲ್ಲ ವಾಸೀ, ನಾನು ನಿನಗೆ ತಪ್ಪಾಗಿ ಹೇಳುತ್ತಿಲ್ಲ. ನೀನು ಸ್ವಲ್ಪ ಮನಸ್ಸು ಬದಲಾವಣೆ ಮಾಡಬೇಕು. ಇದು ಪಾಪಕೃತ್ಯವೆಂದು ಭಾವಿಸಬೇಡ. ನನ್ನದೇ ಒಪ್ಪಿಗೆಯಿಂದ ನೀನು ಏನು ಮಾಡಿದರೂ ಅದು ನನಗೆ ಸೇರಿದ್ದು. ನಾನೂ ರವಿಯೂ ಒಂದೇ ಪ್ರಾಣವಾಗಿ ಬೆಳೆದೆವು. ಎಲ್ಲವನ್ನೂ ಹಂಚಿಕೊಂಡು ಉಂಡೆವು, ಉಟ್ಟೆವು. ಈಗ ನಿನ್ನನ್ನೂ ರವಿಗಾಗಿ ಹಂಚಿಕೊಡಲು ಸಿದ್ಧ. ಅವನಿಗೆ ಯಾರೂ ಹೆಣ್ಣು ಕೊಡುವುದಿಲ್ಲ. ಅವನ ಜೀವನ ಬರಡಾಗುತ್ತಿದೆ. ನಿನಗೂ ಸಹ ಮಕ್ಕಳ ಹಂಬಲ ಅದಮ್ಯವಾಗಿದೆ. ನನ್ನ ತಪ್ಪಿಗೆ ನನಗೂ ಸಮಾಧಾನ ಸಿಕ್ಕುತ್ತೆ. ರವಿಯನ್ನು ಹೇಗಾದರೂ ಒಲಿಸು" ಎಂದು ಗೋಳಾಡಿದ ನಾಗರಾಜ.

ಪತಿಯ ಪ್ರೇಮ ವಾಸಂತಿಗೆ ಹೊಸದಲ್ಲ. ಅವನ ಪ್ರೇಮ ಸ್ಫಟಿಕ ಮಣಿಯಷ್ಟು ಸ್ವಚ್ಛ. ಎಂದೂ ತನ್ನ ಮನಸ್ಸನ್ನು ನೋಯಿಸಿದವನಲ್ಲ. ಆದರೆ ಯಾವ ಗಂಡ ತಾನೇ ತನ್ನ ಹೆಂಡತಿಯನ್ನು ಪರರಿಗೆ ಬಿಟ್ಟುಕೊಡುತ್ತಾನೆ ? ನನ್ನ ಹಂಬಲಿಕೆಗಾಗಿ ಇವರ ತ್ಯಾಗ ಎಷ್ಟು ದೊಡ್ಡದು ? ಇವರು ಹೇಳುವಷ್ಟು ಸುಲಭವೇ ಆ ಕಾರ್ಯ ? ಎಂದು ಒಂದೇ ಸಮ ನಾಗರಾಜನನ್ನು ಕರುಣಾರ್ದ್ರಳಾಗಿ ನೋಡಿದಳು.

ಅವನ ಪಾದಗಳ ಮೇಲೆ ತನ್ನ ತಲೆಯಿಟ್ಟು "ರಾಜಾ ನೀವು ಮನುಷ್ಯರಲ್ಲ ದೇವರು. ನಮಗೆ ಮಕ್ಕಳೇ ಬೇಡ, ನಿಮ್ಮ ಪ್ರೀತಿಯೊಂದಿದ್ದರೆ ಸಾಕು ನನಗೆ. ಈ ಅಕಾರ್ಯಕ್ಕೆ ಮಾತ್ರ ನನ್ನ ಮನಸ್ಸು ಒಗ್ಗುವುದಿಲ್ಲ" ಅಂದಳು.

ನನ್ನ ಮುದ್ದು ವಾಸೀ ಇದು ಅಕಾರ್ಯವಲ್ಲ. ಪತಿಯಿಂದ ಮಕ್ಕಳಾಗದಿದ್ದರೆ ಗರ್ಭದಾನ ಮಾಡುವಂತೆ ಮತ್ತೊಬ್ಬ ಪುರುಷನನ್ನು ಆಶ್ರಯಿಸುವುದು ಪುರಾಣ ಕಾಲದಿಂದಲೂ ಬಂದಿದೆ. ಶಂತನ ಮಕ್ಕಳಾದ ಚಿತ್ರವೀರ್ಯ - ವಿಚಿತ್ರವೀರ್ಯರು ಸತ್ತು ಹೋದ ಮೇಲೆ ಶಂತನ ವಂಶವೇ ನಿಂತುಹೋಯಿತು.

ಆಗ ಹಿರಿಯನಾದ ಭೀಷ್ಮನನ್ನು ಮದುವೆಯಾಗೆಂದು ನಾನಾ ವಿಧವಾಗಿ ಗುರು ಹಿರಿಯರು ಕೇಳಿಕೊಂಡರು. ಆಜನ್ಮ ಬ್ರಹ್ಮಚಾರಿಯಾಗಿಯೇ ಇರುವೆನೆಂದು ಪ್ರತಿಜ್ಞೆ ಮಾಡಿದ್ದ ಭೀಷ್ಮ ಏನಾದರೂ ಮದುವೆಯಾಗುವುದಿಲ್ಲವೆಂದನು.

ಆಗ ಹಿರಿಯರೂ ಗುರುಗಳೂ ಆಲೋಚಿಸಿ ಸತ್ಯವತಿಯ ಹಿರಿಯ ಮಗನಾದ ವ್ಯಾಸನಿಂದ ಸಂತಾನವಾಗಲಿ, ಎಂದು ತೀರ್ಮಾನಿಸಿದರು. ಅದರಂತೆ ವ್ಯಾಸನಿಂದ ಅಂಬಿಕೆ, ಅಂಬಾಲಿಕೆಯರಲ್ಲಿ ಮಕ್ಕಳಾದರು. ಅವರೇ ಪಾಂಡವರು, ಕೌರವರು. ಅರ್ಥವಾಯಿತೇ ವಾಸೀ ?

ಒಬ್ಬಳೇ ಆಡ ದ್ರೌಪದಿಯನ್ನು ಐದು ಜನ ಪಾಂಡವರು ಹಂಚಿಕೊಂಡರು. ಆದರೆ ಅವೆಲ್ಲವುಗಳಲ್ಲಿಯೂ ಧರ್ಮ ಸೂಕ್ಷ್ಮವಿದೆ. ಧರ್ಮಬಾಹಿರವಲ್ಲವೆಂದು ತೀರ್ಮಾನಿಸಿಯೇ ಅವರು ಹಾಗೇ ಆಚರಿಸಿದ್ದು. ಅದರಂತೆಯೇ ನಾನು ಒಪ್ಪಿದ ಮೇಲೆ ನನ್ನ

ತಪ್ಪಿಲ್ಲ. ಒಂದು ಮಗುವನ್ನು ಪಡೆದುಕೋ ವಾಸೀ.... ಎಂದು ಪುರಾಣ ಕಥೆಯನ್ನೇ ಬೋಧಿಸಿದ ನಾಗರಾಜ. ವಾಸಂತಿ ಏನೊಂದು ಮಾತನಾಡದೆ ನಿಟ್ಟುಸಿರು ಬಿಟ್ಟು ಕೆಳಗೆ ಇಳಿದು ಬಂದಳು. ನಾಗರಾಜ ಬ್ಯಾಂಕಿಗೆ ಹೋದ. ಮನೆಯಲ್ಲಿ ರವಿ ತಲೆನೋವಿನಿಂದಾಗಿ ಮಲಗಿದ್ದ.

ಇತ್ತೀಚೆಗೆ ತುಂಬಾ ಬೇಸರವಾಗಿ ಪರಮಶಿವಯ್ಯನವರೂ ಭಾಗೀರಥಮ್ಮನವರೂ ತೀರ್ಥ-ಯಾತ್ರೆ ಮಾಡಿಕೊಂಡು ಬರುತ್ತೇವೆಂದು ಊರೂರು ಸುತ್ತಲು ಹೋಗಿದ್ದರು. ಎರಡು ತಿಂಗಳ ಮೇಲಾಗಿತ್ತು. ಅವರು ಹೋಗಿ ಮನೆಯ ಪೂರ್ಣ ಜವಾಬ್ದಾರಿ ವಾಸಂತಿ ಮೇಲೆ ಬಿದ್ದಿತ್ತು.

ಅಡಿಗೆಯಾದ ನಂತರ ರವಿಯ ರೂಮಿಗೆ ಬಂದು ನೋಡಿದಳು, ವಾಸಂತಿ. ರವಿ ದಿಂಬಿನಲ್ಲಿ ಮುಖ ಹುದುಗಿಸಿ ಕಾಲು ಚಾಚಿ ಸುಮ್ಮನೆ ಮಲಗಿದ್ದ. ಅವನ ನೀಳ ದೇಹ ಸೊರಗಿತ್ತು. ತಾನಲ್ಲದೆ ಕೇಳುವವರ್ಯಾರು ? ಅವನ ಬಳಿ ಬಂದು ತನ್ನ ಮೃದುವಾದ ಕೈಯಿಂದ ಅವನ ತಲೆಯನ್ನು ಮೆಲ್ಲನೆ ನೇವರಿಸಿದಳು ವಾಸಂತಿ.

ರವಿ ಥಟ್ಟನೆ ಮಗ್ಗುಲಿಗೆ ತಿರುಗಿ ಯಾರು ಅತ್ತಿಗೇನೆ ? ಅಂದ.

ತಲೆನೋವು ವಾಸಿಯೇ ರವೀ ? ಅಂದಳು. ಅತ್ತಿಗೇ ನಿಮ್ಮ ಕೈ ತಗುಲಿದರೇನೇ ಖಂಡಿತ ತಲೆನೋವು ವಾಸಿಯಾಗುತ್ತೆ ಅತ್ತಿಗೇ.... ನಿಜ ಹೇಳಿ ನೀವೇಕೆ ನನ್ನನ್ನು ಕಸ ವಾಗಿಸಿದಿರಿ ? ಎಂದು ಹಣೆಯ ಮೇಲಿದ್ದ ವಾಸಂತಿಯ ಕೈಯನ್ನು ಹಾಗೆಯೇ ಹಿಡಿದು ಕೊಂಡ.

ವಾಸಂತಿಯ ಮೈ ಜುಂ.... ಎಂದಿತು. ಎಷ್ಟೋ ಸಲ ರವಿಯ ಹಣೆ-ತಲೆ ಮೈ ಎಲ್ಲಾ ಮುಟ್ಟುತ್ತಿರಲಿಲ್ಲವೇ ? ಹಿಂದೆ ! ಇವತ್ತು ರವಿಯ ವಿಷಯದಲ್ಲಿ ನನ್ನ ದೃಷ್ಟಿ ಯೇ ಬೇರೆಯಾಗಿದೆ ಎಂದುಕೊಂಡಳು.

ಇವಳ ಮೌನ ರವಿಗೆ ಅಸಹನೀಯವಾಯಿತು. ಏಕೆ ಅತ್ತಿಗೇ ಮಾತಾಡುವು ದಿಲ್ಲ ? ಅಂದ.

ಏಳು ರವೀ ಊಟ ಮಾಡುವಿಯಂತೆ. ಇನ್ನು ಸ್ವಲ್ಪ ತಲೆ ನೋವು ಕಮ್ಮಿ ಯಾಗಲಿ ಅತ್ತಿಗೇ ನೀವು ಹೋಗಿ ಊಟ ಮಾಡಿ.

ಇಲ್ಲ ರವಿ ನಿನ್ನ ಜೊತೆಯಲ್ಲಿಯೇ ಮಾಡುತ್ತೇನೆ ಎಂದು ಮಂಚದಲ್ಲಿ ಅವನ ಪಕ್ಕ ಕುಳಿತು ತಲೆಯನ್ನು ಒತ್ತಿದಳು. ರವಿಯ ಕಣ್ಣು ಕುರುಡಾಯಿತೇ ಹೊರತು ಅವನ ರೂಪ ಎಳ್ಳಷ್ಟೂ ಕೊರೆಯಾಗಿರಲಿಲ್ಲ. ಇಂತಹ ಸುಂದರ ಯುವಕನಿಂದ ತನಗೆ ಒಂದು ಮಗುವಾದರೆ ?.... ಅದು ಹೇಗೆ ಮುದ್ದಾಗಿರಬಹುದು ? ಎಂದು ಯೋಚಿಸು ವಾಗಲೇ ಅವಳ ಬತ್ತಿದ ಆಸೆ ಸ್ವಲ್ಪ ಚಿಗುರಿತು.

ಥೂ....ಆದರೆ ರವಿ ತನ್ನನ್ನು ಏನೆಂದುಕೊಳ್ಳುವುದಿಲ್ಲ? ಮನಸ್ಸು ಒಗ್ಗಬೇಕಲ್ಲಾ ಹಾಗೆಯೇ ಮಂಚಕ್ಕೆ ಒರಗಿ ಒಂದು ನಿಟ್ಟುಸಿರು ಬಿಟ್ಟಳು.

ಥಟ್ಟನೆ ರವಿ ಎದ್ದು ಅತ್ತಿಗೇ ಏಕೇ ? ತುಂಬಾ ಆಯಾಸವಾಗಿದೆಯೇ ? ನೀವು ಇಲ್ಲೇ ಮಲಗಿಕೊಳ್ಳಿ. ನಾನು ಹೊರಗೆ ಹೋಗುತ್ತೇನೆ ಎಂದು ಎದ್ದು ನಿಂತ.

ಥೂ ... ನಾನೆಷ್ಟು ಕೀಳಾಗುತ್ತಿದ್ದೇನೆ ?.... ಛೆ ... ಪಾಪ: ಮುಗ್ಧ ಹುಡುಗ ಎಂದುಕೊಂಡು ಏನೂ ಇಲ್ಲ ಬಾ ಊಟ ಮಾಡೋಣ, ಎಂದು ಅವನನ್ನು ಅಡಿಗೆ ಮನೆಗೆ ಕರದುಕೊಂಡು ಹೋದಳು

ವಾಸಂತಿ ಮನಸ್ಸಿನಲ್ಲಿ ಕಾಮನೆಗೆ ಎಡೆ ಕೊಟ್ಟಮೇಲೆ ಅದು ಸುಮ್ಮನೆ ಬಿಟ್ಟು ಹೋಗತಕ್ಕದ್ದಲ್ಲ. ಮನ-ಮೈ ... ನರ-ನಾಡಿಗಳಲ್ಲೆಲ್ಲಾ ವ್ಯಾಪಿಸಿ ಅವಳೆತ್ತರಕ್ಕೂ ಬೆಳೆದು ನಿಂತಿತು. ಆಸೆ ಅದಮ್ಯವಾಯಿತು.

ಹೌದು!.... ನನ್ನ ಬಹಳ ದಿನಗಳ ಹಂಬಲ, ನನಗೊಂದು ಮಗುವಾಗಬೇಕು.... ನಾನೂ ತಾಯಿಯ ಸ್ಥಾನ ಪಡೆಯಬೇಕು, ಅತ್ತೆಯ ಮನವೊಲಿಸಬೇಕು.... ಅದು ಮತ್ತೆ ಹೇಗೂ ಸಾಧ್ಯವಿಲ್ಲ. ರವಿಯಿಂದಲೇ ಆಗಬೇಕು ಇದು ಪತಿಯ ಒತ್ತಾಸೆ ಬಲವಂತವೂ ಸಹ ಆಗಿದೆ.

ಆದರೆ ?.... ಈ ಅಸಭ್ಯ ವಿಚಾರವು ರವಿಯ ಮನಸ್ಸಿನ ಮೇಲೆ ಯಾವ ಪರಿಣಾಮವನ್ನು ಮಾಡೀತು? ಎಂದು ಯೋಚಿಸಿ-ಯೋಚಿಸಿ ತಲೆ ಬಿಸಿ ಮಾಡಿಕೊಂಡಳು.

ರವಿ ಎಷ್ಟೋ ದಿನ ವರ್ಕ್‌ಶಾಪಿಗೆ ಹೋಗುತ್ತಿರಲಿಲ್ಲ. ಆಗೆಲ್ಲಾ ವಾಸಂತಿ ರವಿಯ ಬಳಿಯೇ ಹೆಚ್ಚು ಹೊತ್ತು ಇರುತ್ತಿದ್ದಳು. ತನ್ನ ಮನಸ್ಸಿನಲ್ಲಾಗುವ ಆಂದೋಲನವನ್ನು ತಾನೇ ಪರೀಕ್ಷಿಸಿಕೊಳ್ಳುತ್ತಿದ್ದಳು ಮೊದಲಿನಂತೆ ತನ್ನ ಮನಸ್ಸು ಸ್ವಚ್ಛವಾಗಿಲ್ಲ ಎಂದುಕೊಳ್ಳುವಳು. ಯಾವುದೋ ಒಂದು ಅದಮ್ಯ ಶಕ್ತಿ ತನ್ನನ್ನು ಅಧಃಪತನದತ್ತ ತಳ್ಳುತ್ತಿದೆ. ಗುರುತ್ವಾಕರ್ಷಣೆಯಂತೆ ರವಿಯತ್ತ ತನ್ನನ್ನು ಎಳೆಯುತ್ತಿದೆ. ಇದು ನಾಗರಾಜ ತನ್ನಲ್ಲಿ ಬಿತ್ತಿದ ವಿಷಬೀಜ.... ಮೊಳಕೆಯೊಡೆಯುತ್ತಿದೆ. ಮೊಳಕೆಯಲ್ಲಿಯೇ ಚಿವುಟಿ ಹಾಕಲು ಸಾಧ್ಯವಾದರೆ ತಾನು ಗೆದ್ದೆ.... ಎಂದು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವಳು.

ನಾಗರಾಜ ಮನೆಗೆ ಬಂದ ಕೂಡಲೇ ವಾಸಂತಿ ಕಾಫಿ-ತಿಂಡಿ ತೆಗೆದುಕೊಂಡು ಹೋಗಿ ಕೊಟ್ಟಾಗ,

"ಏನು ವಾಸೀ ರವಿ ಹೇಗಿದ್ದಾನೆ ? ಇವತ್ತು ವರ್ಕ್‌ಶಾಪಿಗೆ ಹೋಗಲಿಲ್ಲವೇ?" ಎಂದು ಕೇಳಿದ.

"ಇಲ್ಲ ಬಾಲಚಂದ್ರನ ತಂಗಿಗೆ ಮದುವೆ ಹಾಸನದಲ್ಲಿ, ಅವನು ಐದು ದಿನ ವರ್ಕ್‌ಶಾಪ್ ಮುಚ್ಚಿದ್ದಾನಂತೆ. ಅದಕ್ಕೆ ರವಿಗೂ ರಜ".

"ಸರಿ–ಸರಿ, ಹೌದಲ್ಲವೇ ? ಒಳ್ಳೆಯದಾಯಿತು. ರವಿಯನ್ನು ಸರಿಯಾಗಿ ವಿಚಾರಿಸಿಕೊಂಡೆಯಾ ?"

ವಾಸಂತಿಗೆ ಕೋಪ ಬಂದೇ ಬಿಟ್ಟಿತು. ಅವನ್ನ ವಿಚಾರಿಸಿಕೊಳ್ಳೋಕೆ ಇನ್ನೇನು ನಾಲ್ಕಾಳು ಇಟ್ಟಿದ್ದೀರೇನು ? ನಾನೇ ತಾನೇ ಅವನ ಚಾಕರಿ ಎಲ್ಲಾ ಮಾಡಬೇಕು ?" ಎಂದು ರೇಗಿದಳು.

"ವಾಸೀ ಹೀಗೇಕೆ ಕೂಗಾಡುತ್ತೀ ? ನೀನು ಸ್ವಲ್ಪ ಉದಾಸೀನ ಮಾಡಿದರೆ ರವಿಯ ಗತಿ ಏನು ?"

"ಯಾಕೆ ನೀವೆಲ್ಲಾ ಇಲ್ಲವೇನು ಅವನನ್ನು ಉದ್ಧಾರ ಮಾಡೋದಕ್ಕೆ, ಹೆಂಡತಿ ಯನ್ನೇ ಹಂಚಿ ಕೊಡುವವರು ಇನ್ನೇನು ತಾನೇ ಮಾಡುವುದಿಲ್ಲ ?"

"ಹಾಗಾದರೆ ಹಂಚಿದ ಭಾಗ ಅವನಿಗೆ ಸೇರಿತೋ ?" ಅಂದ ನಾಗರಾಜ.

"ಥೂ.... ನಿಮ್ಮ ಹಾಳು ದುರಾಲೋಚನೆ ನಾಶವಾಗಲೇ ಇಲ್ಲ. ನನಗಂತೂ ತಲೆಯೇ ಕೆಟ್ಟು ಹೋಗಿದೆ" ಅಂದಳು ವಾಸಂತಿ.

"ನಮ್ಮ ವಂಶದ ಕುಡಿ ಬೆಳೆಯಬೇಡವೇ ವಾಸೀ ?"

ಛೇ.... ನಿಮ್ಮ ಸ್ವಾರ್ಥಕ್ಕೆ ಬೆಂಕಿ ಹಾಕಿದರು, ನಿಮ್ಮ ವಂಶ ಬೆಳೀಬೇಕಾದರೆ ಆ ಕುರುಡನಿಗೇ ಒಂದು ಹೆಣ್ಣು ತಂದು ಮದುವೆ ಮಾಡಿ".

"ವಾಸೀ ಸ್ವಲ್ಪ ಸಮಾಧಾನ ತಗೋ, ನಿನ್ನ ಮಾತಿನಂತೆ ಒಂದು ಸಮಯ ಅವನಿಗೆ ಮದುವೆ ಮಾಡಿದರೂ ಮಾಡಬಹುದು. ಆದರೆ ನಾನು ನಿನಗೆ ಮಾಡಿರುವ ಅನ್ಯಾಯವನ್ನು ಹೇಗೆ ಸರಿಪಡಿಸಲಿ ವಾಸೀ ?.... ನೀನು ಒಂದು ಮಗುವಿನ ತಾಯಿ ಯಾದರೆ ಮಾತ್ರ ನನಗೆ ಸಮಾಧಾನ. ಇದಕ್ಕಾಗಿ ನಿನ್ನ ಮನಸ್ಸನ್ನು ಗಟ್ಟಿಮಾಡಿಕೋ ನೋಡು ವಾಸೀ ಪತಿಯು ರೋಗಿಷ್ಠನೋ ನಪುಂಸಕನೋ ಆಗಿದ್ದಲ್ಲಿ ಅವನ ಸಹೋದರ ನಿಂದ ಸಂತಾನ ಪಡೆಯಬಹುದು ಎಂದು ಮನುಸ್ಮೃತಿಯೇ ಹೇಳಿದೆಯಂತೆ. ಇದರಿಂದ ನಿನಗೇನೂ ಪಾಪವಿಲ್ಲ ವಾಸೀ" ಎಂದು ಹೇಳಿದವನೇ ಹೊರಗಡೆ ತಿರುಗಾಡಿಕೊಂಡು ಬರಲು ಹೊರಟು ಹೋದ.

ಗಂಡನ ಬಳಿ ಏನೇನೋ ವಾದ ಮಾಡಿದರೂ ವಾಸಂತಿ ರವಿಯ ಉಪಚಾರದಲ್ಲಿ ಲೋಪವಿಲ್ಲದೆ ಮಾಡುತ್ತಿದ್ದಳು. ಅವನಿಗೆ ಬೇಸರವಾಗದಂತೆ ಆಗಾಗ ಇಂಗ್ಲಿಷ್ ನಾವೆಲ್ ಏನಾದರೂ ಓದುತ್ತಿದ್ದಳು.

ಆಗೆಲ್ಲಾ ರವಿ "ಅತ್ತಿಗೇ.... ಈ ಕುರುಡನ ಮೇಲೆ ನಿಮ್ಮ ವಾತ್ಸಲ್ಯ ಹೆಚ್ಚಾಗು ತ್ತಿದೆ. ನಾನೇ ಅದೃಷ್ಟವಂತ" ಎನ್ನುವನು.

ವಾಸಂತಿ ಯೋಚಿಸುವಳು.... 'ವಾತ್ಸಲ್ಯ' ಎಂಬ ಪದ ಪ್ರೇಮಕ್ಕಿಂತ ಪ್ರತ್ಯೇಕ ವಾದುದು. ಮಕ್ಕಳಲ್ಲಿ ವಾತ್ಸಲ್ಯ ಇಡುವುದು, ರವಿ ನನ್ನಿಂದ ವಾತ್ಸಲ್ಯವನ್ನು ಅಪೇಕ್ಷಿಸುತ್ತಾನೆಯೇ ವಿನಃ ಪ್ರೇಮವನ್ನಲ್ಲ.

ನಾಗರಾಜ ಹೆಂಡತಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದ. ಪ್ರತಿದಿನ ರಾತ್ರಿ "ಹೋಗು ವಾಸೀ ನೀನು ರವಿಯನ್ನು ವಿಚಾರಿಸಿಕೋ ನನಗೆ ಬೇಸರವಿಲ್ಲ" ಎನ್ನುತ್ತಿದ್ದ.

"ಅದು ಸಾಧ್ಯವಿಲ್ಲದ ಮಾತು ಸುಮ್ಮನಿರಿ, ರವಿಯ ಪವಿತ್ರ ಭಾವನೆಯನ್ನು ನಾನು ಕಲುಷಿತಗೊಳಿಸಲಾರೆ".

"ಸರಿ ವಾಸೀ, ಸೋಲು–ಗೆಲುವು ನಿನ್ನ ಕೈಲಿದೆ. ನಾನಿನ್ನೇನೂ ಹೇಳಲಾರೆ" ಎಂದು ಮುಖ ತಿರುಗಿಸಿ ಮಲಗುತ್ತಿದ್ದ.

ದಿನ–ದಿನಕ್ಕೆ ಪತಿ ತನ್ನಲ್ಲಿ ಉದಾಸೀನನಾಗುತ್ತಿರುವುದು ವಾಸಂತಿಗೆ ಬಿಡಿಸಲಾರದ ಸಮಸ್ಯೆಯಾಯಿತು. ಇದು ತ್ಯಾಗವೋ–ಸ್ವಾರ್ಥವೋ ಒಂದೂ ಅರಿಯದಾದಳು.

ದ್ವಂದ್ವ ಆಂದೋಲನದ ಚಕ್ರದಲ್ಲಿ ಸಿಲುಕಿ ಜರ್ಜರಿತಳಾದಳು ವಾಸಂತಿ.

ಬ್ಯಾಂಕಿನವರು ಒಂದು ಸಣ್ಣ ಟ್ರಿಪ್ ಇಟ್ಟರು. ತಿರುಪತಿ–ಮದ್ರಾಸ್– ಕಂಚಿ ಕಾಳಹಸ್ತಿ. ಮೂರು ದಿನ ಮಾತ್ರ ಹೋಗಿ ಬರುವುದು. ನಾಗರಾಜನನ್ನು ಬಲವಂತ ಮಾಡಿ ಹೊರಡಿಸಿದರು ಬ್ಯಾಂಕಿನವರು

ನಾಗರಾಜ ತಾನು ಮೂರು ದಿನ ಹೋಗಿ ಬರುವುದಾಗಿ ವಾಸಂತಿಗೆ ಹೇಳಿ ಹೊರಟ. ಏಕೋ ವಾಸಂತಿಗೆ ಎದೆ ಡವ–ಡವ ಹೊಡೆದುಕೊಂಡಿತು. ಇದೇನು ದೈವದ ಕೈವಾಡ ! ಮನೆಯಲ್ಲಿ ನಾನು ರವಿ ಇಬ್ಬರೇ.... ಇವರೇ ಇದಕ್ಕೆಲ್ಲಾ ಒಂದು ಸಂಚು ಹೂಡುತ್ತಿದ್ದಾರೆ. ವಿಧಿ ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತದೆಯೋ ಯಾರಿಗೆ ಗೊತ್ತು ? ಎಂದು ನಿಡುಸುಯ್ದಳು,

ನಾಗರಾಜ ಊರಲ್ಲಿಲ್ಲವೆಂದು ರವಿಗೆ ತಿಳಿದಿರಲಿಲ್ಲ. ದಿನದಂತೆ ರಾತ್ರಿ ಅಣ್ಣ ತಮ್ಮ ಇಬ್ಬರೂ ಒಟ್ಟಿಗೆ ಊಟಕ್ಕೆ ಕುಳಿತುಕೊಳ್ಳುವುದು ವಾಡಿಕೆ. ಒಬ್ಬನೇ ಊಟಕ್ಕೆ ಕುಳಿತಾಗ "ಅತ್ತಿಗೇ ಅಣ್ಣ ಎಲ್ಲಿ ?" ಎಂದ.

"ಅವರು ಊರಲ್ಲಿಲ್ಲ ರವೀ, ಬ್ಯಾಂಕಿನವರೆಲ್ಲಾ ತಿರುಪತಿ ಟ್ರಿಪ್ ಹೋಗಿದ್ದಾರೆ" ಎಂದಳು.

"ಇದೇಕೆ ಅಣ್ಣ ನನಗೆ ಹೇಳಲೇ ಇಲ್ಲ ?"

"ಇತ್ತೀಚೆಗೆ ನಿಮ್ಮಣ್ಣನಿಗೆ ಎಲ್ಲದರಲ್ಲಿಯೂ ಉದಾಸೀನ".

"ಅತ್ತಿಗೇ.... ನಿಮ್ಮ ಮದುವೆಗೆ ಮೊದಲು ಅಣ್ಣ ಹಾಗೆ ಜೀವನವೇ ಬೇಸರ ಗೊಂಡಂತಿದ್ದ. ನೀವು ಬಂದ ಮೇಲೆ ಅವನಿಗೆ ನವಶಕ್ತಿ ತುಂಬಿದಿರಿ".

"ಅವರು ಮದುವೆ ಆಗದೇ ಇದ್ದಿದ್ದರೇ ಚೆನ್ನಾಗಿತ್ತು ರವಿ...." ಎಂದು ಸಂಕಟ ದಿಂದ ಹೇಳಿದಳು.

ಅತ್ತಿಗೇ ನೀವು ಎಂದೂ ಅಣ್ಣನ ವಿಷಯದಲ್ಲಿ ಬೇಸರ ಪಟ್ಟವರಲ್ಲ. ಇವತ್ತೇಕೆ ಹೀಗೆ ಹೇಳುತ್ತೀರಿ" ಎಂದ.

"ಏಕೆ ಎನ್ನುವುದು ಒಂದು ದಿನ ತಿಳಿಯುತ್ತೆ, ಸುಮ್ಮನಿರು" ಎಂದು ಎದ್ದು ಕೆಲಸವನ್ನು ಮುಗಿಸಿ ರವಿಗೆ ಕುಡಿಯಲು ಹಾಲು ಕೊಟ್ಟು ಮಹಡಿಯ ತನ್ನ ಕೊಠಡಿಗೆ ಮಲಗಲು ಹೋದಳು.

"ಒಬ್ಬರೇ ಮಲಗುತ್ತೀರಾ ಅತ್ತಿಗೇ ? ಬೇಕಾದರೆ ಕೆಳಗೆ ಹಾಲಿನಲ್ಲೇ ಮಲಗಿ" ಅಂದ.

"ಪರವಾಗಿಲ್ಲ, ರವಿ.... ಏನೂ ಭಯವಿಲ್ಲ" ಎಂದು ತನ್ನ ಮನಸ್ಸನ್ನು ಬಿಗಿ ಹಿಡಿದು ಹೋಗಿ ಮಲಗಿದಳು. ಆದರೆ ಸ್ವಲ್ಪ ಹೊತ್ತಿಗೆಲ್ಲಾ ಭೋ ... ರೆಂದು ಮಳೆ.... ಛಟೀಲ್–ಛಟೀಲ್ ಎಂದು ಸಿಡಿಲು ಹೊಡೆಯಲು ಆರಂಭವಾಯಿತು. ಕರೆಂಟ್ ಹೊರಟು ಹೋಯಿತು.

ವಾಸಂತಿಗೆ ವಿಪರೀತ ಭಯವಾಯಿತು ಗಡ–ಗಡನೆ ನಡುಗುತ್ತಾ ಮೆಟ್ಟಿಲಿಳಿದು ಬಂದಳು. ರವೀ.... ಎಂದು ಗಟ್ಟಿಯಾಗಿ ಕೂಗಿದಳು.

"ಭಾರೀ ಸಿಡಿಲು ಅತ್ತಿಗೇ ಒಬ್ಬರೇ ಇರಬೇಡಿ ಬನ್ನಿ" ಎಂದ ರವಿ.

ಬಂದವಳೇ ರವಿಯ ಕೈಯನ್ನು ಬಿಗಿಯಾಗಿ ಹಿಡಿದುಕೊಂಡಳು. ಗಡ–ಗಡನೆ ನಡುಗುವ ಅವಳ ಕೈಯನ್ನು ಹಿಡಿದು ರವಿ "ಅತ್ತಿಗೇ ಏಕೆ ಹೀಗೆ ನಡುಗುತ್ತೀರಿ" ಎಂದ.

"ನಾನು ಇಲ್ಲೇ ಮಲಗುತ್ತೇನೆ ರವೀ"

"ಬನ್ನೀ ನೀವು ಮಂಚದ ಮೇಲೆ ಮಲಗಿ, ನಾನು ಕೆಳಗೆ ಹಾಸಿಕೊಳ್ಳುತ್ತೇನೆ" ಅಂದ.

"ಬೇಡ ರವೀ ನನಗೆ ತುಂಬಾ ಭಯವಾಗುತ್ತಿದೆ. ನೀನೂ ಮಂಚದ ಮೇಲೆಯೆ ಮಲಗು" ಎಂದು ಆವೇಶ ಬಂದವಳಂತೆ ಹೇಳಿದಳು.

ವಿಧಿಯು ಸಂಚು ಗೆದ್ದಿತು. ಅಂದೇ ಅವರ ಅಧಃಪತನ ಪ್ರಾರಂಭವಾಯಿತು. ಹೆಣ್ಣಿನ ಮೈ ಕಾಣದ ರವಿ ತನ್ನ ಅಸ್ತಿತ್ವವನ್ನೇ ಮರೆತ. ಎಚ್ಚೆತ್ತಾಗ ಇಬ್ಬರೂ ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದು ಹೋದರು.

ಅತ್ತಿಗೇ ನನ್ನಿಂದ ತಪ್ಪಾಯಿತು ಕ್ಷಮಿಸಿ, ಎಂದು ಅವಳ ಕಾಲ ಬಳಿ ತಲೆಯಿಟ್ಟು ಕುಸಿದ. ವಾಸಂತಿ ಮೌನವಾಗಿ ದೂರ ಸರಿದಳು. ವಾಸಂತಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಯಾವುದು ಆಗಬಾರದೆಂದು ಹೋರಿದೆನೋ ಅದು ಆಗಿಯೋಯಿತು. ವಿಧಿಯ ಕೈವಾಡಕ್ಕೆ ಪ್ರಕೃತಿಯೂ ಜೊತೆಗೂಡಬೇಕೇ ? ಮಳೆ–ಸಿಡಿಲು ಇಲ್ಲದಿದ್ದರೆ ? ಇವರು ಊರಿನಲ್ಲಿಯೇ ಇದ್ದಿದ್ದರೆ ? ಎಂದು ನೊಂದು ಬೆಂದಳು.

ಆದರೆ ಇದು ತನ್ನ ಪ್ರಕೃತಿಯ ಪ್ರೇರಣೆಯೇ ಹೊರತು ತನ್ನ ತಪ್ಪಿಲ್ಲ. ಇನ್ನು

ಮುಂದೆ ರವಿಯ ಬಳಿ ಹೇಗೆ ವರ್ತಿಸುವುದು ? ನನ್ನ ಅಸ್ತಿತ್ವ ಏನು ? ನನ್ನ ಬಗ್ಗೆ ಅವನೇನು ಅಂದುಕೊಂಡಿರಬಹುದು ? ನಾಚಿಕೆಯಿಂದ ಕುಗ್ಗಿಹೋದಳು.

ಮತ್ತೆ ದಿನ ಪೂರ್ತಿ ಒಬ್ಬರಿಗೊಬ್ಬರು ಮಾತಾಡಲಿಲ್ಲ. ಕಾಫಿ, ತಿಂಡಿ, ಊಟ, ಕೆಲಸ ಎಲ್ಲಾ ಯಾಂತ್ರಿಕವಾಗಿ ಮಾಡುತ್ತಿದ್ದಳು.

ನಾಗರಾಜ ಪ್ರವಾಸ ಮುಗಿಸಿ ಊರಿಗೆ ಬಂದ. ಮನೆಯಲ್ಲಿ ಸ್ಮಶಾನ ಮೌನ. ತಾನು ಬಂದ ಕೂಡಲೇ ಬಿಸಿ ಕಾಫಿ ತಂದು ಕೊಟ್ಟು ಅಕ್ಕರೆಯಿಂದ ಮಾತಾಡಿಸುತ್ತಿದ್ದ ಮುದ್ದಿನ ಮಡದಿ ಮೌನವಾಗಿ ಮಹಡಿ ಮೇಲಕ್ಕೆ ಹೊರಟು ಹೋದಳು.

ಏನಾಗಿರಬಹುದು ? ಓ....ಸರಿ ಸರಿ ನನ್ನ ಯೋಜನೆ ಫಲಕಾರಿಯಾಗಿರಬಹುದು ಪಾಪ ! ವಾಸಂತಿಯನ್ನು ಸಮಾಧಾನ ಪಡಿಸಬೇಕು ಎಂದುಕೊಂಡ.

ಮಹಡಿ ಏರಿ ಕೊಠಡಿಗೆ ಬಂದು "ವಾಸೀ ನನಗೆ ಕಾಫಿ ಇಲ್ಲವಾ ?" ಅಂದ.

ತಡೆ ಹಿಡಿದ ದುಃಖ ಉಕ್ಕಿತು. ವಾಸಂತಿ ಮಂಚದಿಂದ ಇಳಿದು ಅವನ ಕಾಲ ಬಳಿ ದೊಪ್ಪೆಂದು ಬಿದ್ದಳು. ತನ್ನೆರಡು ಕೈಗಳಿಂದಲೂ ಅವನ ಕಾಲನ್ನು ಭದ್ರವಾಗಿ ಹಿಡಿದು "ಅಯ್ಯೋ ನನ್ನ ದೇವರು ನೀವು, ನಿಮಗೆ ಅನ್ಯಾಯ ಮಾಡಿಬಿಟ್ಟೆ" ಎಂದು ಗೋಳೋ ಎಂದು ಅತ್ತಳು.

ಅವಳ ತೋಳನ್ನು ಹಿಡಿದೆತ್ತಿ "ಏಕೆ ವಾಸೀ ಏನಾಯಿತು ?" ಎಂದ.

"ಆಗುವ ಅನ್ಯಾಯವೆಲ್ಲಾ ಆಗಿಹೋಯಿತೂಂದ್ರೇ.... ಇನ್ನು ನಾನು ನಿಮಗೆ ಯೋಗ್ಯಳಾದ ಹೆಂಡತಿಯಲ್ಲ" ಎಂದು ಬಿಕ್ಕಿದಳು.

ಅಷ್ಟೇ ತಾನೇ ವಾಸೀ ನಾನು ಧನ್ಯ, ನನಗೆಲ್ಲಾ ಅರ್ಥವಾಯಿತು. ನನ್ನ ಮನಸ್ಸಿನ ಸಂಕಲ್ಪ ನೆರವೇರಿತು. ನೀನು ಸ್ವಲ್ಪವೂ ದುಃಖಪಡಬೇಡ. ಸಂತೋಷವಾಗಿರು. ರವಿ ನನ್ನನ್ನು ಮಾತಾಡಿಸಲಾರ. ನನಗೆ ಗೊತ್ತು, ಚಿಂತೆಯಿಲ್ಲ ಎಲ್ಲಾ ಸರಿ ಹೋಗುತ್ತೆ, ಎಂದ.

ನೋಡಿ ಇದಂತೂ ಒಳ್ಳೆಯ ಕೆಲಸವಲ್ಲ, ನೀವು ಮೆಚ್ಚಿದರೂ ನಾನು ಮೆಚ್ಚಲಾರೆ ನನಗೆ ತುಂಬಾ ಜಿಗುಪ್ಸೆ ಎಂದಳು ಕಣ್ಣೀರು ಒರಸಿಕೊಳ್ಳುತ್ತಾ ವಾಸಂತಿ.

ಆಯಿತು ದೈವೇಚ್ಛೆಯಿದ್ದಂತಾಗಲಿ, ಬಾ ಕಾಫಿ ಕುಡಿಯೋಣ ರವಿಯನ್ನು ನೀನೇ ವಿಚಾರಿಸಿಕೋ ಎಂದು ವಾಸಂತಿಯನ್ನು ಕರೆದುಕೊಂಡು ಕೆಳಗೆ ಬಂದ.

ನೋಡು ವಾಸೀ ನಿನಗಾಗಿ ಕಾಂಚೀವರಂ ಸೀರೆ ತಂದಿದೀನಿ ಚೆನ್ನಾಗಿದೆಯೊ ನೋಡು.... ಎಂದು ರೇಷ್ಮೆ ಸೀರೆ ತೋರಿಸಿದ. ನಿಜವಾಗಿಯೂ ಸೀರೆ ಆರಿಸುವುದರಲ್ಲಿ ನಾಗರಾಜ ತುಂಬಾ ಜಾಣ. ಬಾದಾಮಿ ಬಣ್ಣಕ್ಕೆ ಕೆಂಪು ಅಂಚು ಸೆರಗು ಇರುವ ಜರಿ ಸೀರೆ ತಂದಿದ್ದ.

ವಾಸಂತಿಗೆ ಆ ಬೇಸರದಲ್ಲಿಯೂ ಸೀರೆಯನ್ನು ನೋಡಿ ಆಸೆಯಾಯಿತು "ತುಂಬಾ ಚೆನ್ನಾಗಿದೇರೀ" ಅಂದಳು.

"ತೆಗೋ.... ಎಲ್ಲಾ ದೇವಸ್ಥಾನದ ದೇವರ ಪ್ರಸಾದಗಳಿವೆ. ರವಿಗೂ ಕೊಡು" ಎಂದ.

ಜೀವನವೇ ಆಲ್ಲೋಲವಾಗಿರುವಾಗ ಎಂತಹ ಶಾಂತ ಸಾಗರ ತನ್ನ ಗಂಡ ? ಎಂದು ವಾಸಂತಿ ಅವನ ತ್ಯಾಗಕ್ಕೆ ಆಶ್ಚರ್ಯ ಪಟ್ಟಳು. ಅವನನ್ನು ಚೆನ್ನಾಗಿ ಮೂದಲಿಸ ಬೇಕೆಂದಿದ್ದವಳು ಅವನ ಸಹನೆಗೆ ಮಾರು ಹೋದಳು. ಅವನಲ್ಲಿ ಇನ್ನೂ ಗೌರವ ಹೆಚ್ಚಾಯಿತು.

ಅವಳು ಸಂಕಟದಿಂದ "ಆ ಪ್ರಸಾದವೆಲ್ಲಾ ನಿಮ್ಮಂತಹವರಿಗೆ ನನಗೆಲ್ಲಿದೆ ಆ ಯೋಗ್ಯತೆ ?" ಎಂದು ವಾಸಂತಿ ಒಳಕ್ಕೆ ಹೊರಟು ಹೋದಳು.

ರವಿಯಂತೂ ಅಣ್ಣನಿಗೆ ಮುಖ ತೋರಿಸಲೇ ಇಲ್ಲ. ಅಣ್ಣನಿಗೆ ದ್ರೋಹ ಬಗೆದ ಪಾಪಿ ನಾನು ಎಂದು ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ಒದ್ದಾಡುತ್ತಿದ್ದ. ಅಣ್ಣನಿಗೆ ಈ ವಿಷಯ ತಿಳಿದರೆ ಎಷ್ಟು ಸಂಕಟ ಪಡಬಹುದು ? ಈ ನನ್ನ ಅಪರಾಧಕ್ಕೆ ಏನು ಶಿಕ್ಷೆ ವಿಧಿಸಿದರೆ ತಾನೇ ಸಾಕಾದೀತು ? ಹೀಗೆ ಚಿಂತಿಸಿ ಅನ್ನಾಹಾರಗಳನ್ನು ಬಿಟ್ಟು ಕೊರಗಿದ ರವಿ.

ರವಿಯ ಸಂಪರ್ಕವಾದ ವಿಷಯ ತಿಳಿದಂದಿನಿಂದ ನಾಗರಾಜ ದೂರವಾದ "ವಾಸೀ.... ನಿನಗೆ ಇಷ್ಟ ಬಂದಲ್ಲಿ ಮಲಗು, ಇನ್ನು ನನ್ನ ನಿನ್ನ ಶಾರೀರ ಸಂಬಂಧ ಬೇಡ ಎಂದ.

ವಾಸಂತಿಗೆ ಅಂಕುಶದಿಂದ ಇರಿದಂತಾಯಿತು. "ಉರಿಯುವ ಗಾಯದ ಮೇಲೆ ಉಪ್ಪು ಸುರಿದಂತೆ ಮೊದಲೇ ಕೊರಗುತ್ತಿರುವ ನನ್ನನ್ನು ಹೀಗೇಕೆ ಚಿತ್ರಹಿಂಸೆ ಮಾಡು ತ್ತೀರಿ" ಎಂದಳು.

"ಇಲ್ಲ ವಾಸೀ ನನಗೇನೂ ಅಸಮಾಧಾನವಿಲ್ಲ. ಧರ್ಮದೃಷ್ಟಿಯಿಂದ ಇದು ಸರಿ, ನಿನ್ನ ಮೇಲಿನ ಪ್ರೀತಿ ಕಿಂಚಿತ್ತೂ ಕಮ್ಮಿಯಾಗಿಲ್ಲ ವಾಸೀ...." ಎಂದ.

ಇದೆಂತಹ ಪ್ರೀತಿಯೋ ದೇವರೇ ಗತಿ ಎಂದು ಅತ್ತಳು.

ಕುರುಡನಾದ ರವಿಗೆ ಹೊರಗೆ ಹೋಗಲೂ ಸಾಧ್ಯವಾಗದೆ ಮನೆಯಲ್ಲಿ ನೆಮ್ಮದಿ ಇಲ್ಲದೆ ಕೊರಗುತ್ತಿದ್ದ.

ಆ ದಿನ ನಾಗರಾಜ ಬ್ಯಾಂಕಿಗೆ ಹೊರಟು ಹೋದ ಮೇಲೆ ರವಿಗೆ ಊಟ ತಂದಳು ವಾಸಂತಿ. "ರವೀ.... ಊಟ ಸಾರು ಎಲ್ಲಾ ಟೇಬಲ್ ಮೇಲೆ ಇಟ್ಟಿದೀನಿ ತಗೋ" ಎಂದು ಹೇಳಿ ಹೊರಟಳು.

ರವಿ ಕಾತುರದಿಂದ "ಅತ್ತಿಗೇ ಒಂದು ನಿಮಿಷ ನಿಲ್ಲಿ" ಎಂದು ಅವಳ ಕೈ ಹಿಡಿದುಕೊಂಡ.

"ಏನು ಹೇಳು ರವೀ...."

'ನಾನು ಅಣ್ಣನಿಗೇ ದ್ರೋಹ ಮಾಡಿದ ಪಾಪಿ ಅತ್ತಿಗೇ.... ನಾನು ಅವನಿಗೆ ತಕ್ಕ ತಮ್ಮನಲ್ಲ, ಇನ್ನು ನಾನು ಬದುಕಿರಬಾರದು ಅತ್ತಿಗೇ" ಎಂದು ಅತ್ತ.

"ರವೀ ನಿನ್ನದೇನೂ ತಪ್ಪಿಲ್ಲ" ಎಂದಷ್ಟೇ ಹೇಳಿದಳು.

"ಅಣ್ಣನಿಗೆ ಈ ವಿಷಯ ತಿಳಿಯಿತೇ" ?

"ತಿಳಿದರೂ ಅಭ್ಯಂತರವಿಲ್ಲ"

"ಅಣ್ಣ ನನ್ನನ್ನು ಮಾತಾಡಿಸುತ್ತಿಲ್ಲ ಅತ್ತಿಗೇ"

"ಮಾತಾಡಿಸದಿದ್ದರೂ ಮೊದಲಿಗಿಂತ ಪ್ರೀತಿ ಹೆಚ್ಚಾಗಿದೆ".

"ಅತ್ತಿಗೇ ನಿಮ್ಮ ಮಾತೊಂದೂ ಅರ್ಥವಾಗುತ್ತಿಲ್ಲ".

"ಒಂದು ದಿನ ಅರ್ಥವಾಗುತ್ತದೆ"

ವಾಸಂತಿ ಅಷ್ಟಷ್ಟೇ ಉತ್ತರವನ್ನು ಹೇಳಿ ಸುಮ್ಮನಾಗುತ್ತಿದ್ದಳು

ದಿನ ಕಳೆದಂತೆ ಮಾನವೀಯತೆಯನ್ನು ಕಳೆದುಕೊಂಡ ರವಿಗೆ ಕಾಮಪಿಪಾಸೆ ಹೆಚ್ಚಿತು. ವಾಸಂತಿಯ ಸಾಮೀಪ್ಯಕ್ಕಾಗಿ ಹಾತೊರೆಯುತ್ತಿದ್ದ. ಮತ್ತೆ ಮತ್ತೆ ಹೆಣ್ಣಿನ ಸಂಪರ್ಕಕ್ಕಾಗಿ ಮೈ ಮನ ತವಕಿಸುತ್ತಿತ್ತು. ಒಂದು ಸಾರಿ ದಾರಿ ತಪ್ಪಿದರೆ ಆ ತಪ್ಪುದಾರಿಯೇ ಮುಂದೆ ಸಾಗುತ್ತದೆ. ಹೀಗೆಯೇ ರವಿ–ವಾಸಂತಿಯರೂ ಮುಂದೆ ಸಾಗಿದರು.

ಭಾಗೀರಥಮ್ಮನವರೂ–ಪರಮಶಿವಯ್ಯನವರೂ ಯಾತ್ರೆ ಮುಗಿಸಿ ಊರಿಗೆ ಬಂದರು. ಮನೆಯ ವಾತಾವರಣ ಯಥಾಸ್ಥಿತಿ. ಒಬ್ಬರಿಗೊಬ್ಬರಿಗೆ ಹೆಚ್ಚು ಮಾತುಕತೆಯಿಲ್ಲದೆ ದಿನ ಮುಂದೆ ಸಾಗುತ್ತಿತ್ತು.

ಆದರೆ ಮಾನವ ಜೀವನ ಪಥದಲ್ಲಿ ಅನೇಕ ಕವಲು ದಾರಿಗಳು ಮೂಡಿ ಬರುತ್ತವೆ ಅದು ತೊಡಕಾದರೂ ಆಗಬಹುದು, ಅಥವಾ ಸಹಾಯಕವೂ ಆಗಬಹುದು.

ಪರಮಶಿವಯ್ಯನವರ ಸಂಸಾರದಲ್ಲಿಯೂ ಹಾಗೆಯೇ ಅನೇಕ ಆಗು–ಹೋಗುಗಳು ಆದುವು. ಬೆಳಕು–ಕತ್ತಲೆ, ಮತ್ತೆ ಬೆಳಕು, ಹೀಗೆ ಸುಖ–ದುಃಖ ಚಕ್ರದಂತೆ ಸುತ್ತಿ ಬರುತ್ತಿತ್ತು.

ಯಾವುದೋ ನಿರಾಶೆಯಲ್ಲಿ ಒಂದು ಆಶಾಕಿರಣ ಮೂಡುತ್ತದೆ. ವಾಸಂತಿ ಹೊರಗಾಗಲಿಲ್ಲ. ಏಳುತ್ತಲೇ ತಲೆಸುತ್ತು–ವಾಂತಿಯಿಂದ ಬಳಲುತ್ತಿದ್ದಳು.

ಭಾಗೀರಥಮ್ಮನವರು ವಾಸಂತಿಯ ಆಲಸ್ಯವನ್ನು ತಾತ್ಸಾರ ಮಾಡಿ ಬಯ್ಯುತ್ತಿದ್ದರು. "ಇನ್ನು ನಿನಗೇನು ಬಂತಮ್ಮಾ ರೋಗ ? ಬೆಳಗಾಗೆದ್ದು ಎಲ್ಲಾ ಕೆಲಸವನ್ನು ನಾನೇ ಮಾಡಿಕೊಳ್ಳಬೇಕಾಗಿದೆ. ಮಹಾರಾಣಿ ಮಹಡಿ ಇಳಿದು ಬರುವುದೇ ಎಂಟು ಗಂಟೆ" ಅನ್ನುತ್ತಿದ್ದರು.

ವಾಸಂತಿ ತನ್ನಲ್ಲಾದ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಳು. ತಾನು ಎರಡು ತಿಂಗಳ ಮೇಲಾಯಿತು ಹೊರಗಾಗಿ. ಈಗ ಮೂರನೇ ತಿಂಗಳು, ಅಬ್ಬ! ನಾನು ಬಸುರಿ, ಎಂಬ ಹರ್ಷದಿಂದ ಅವಳ ಮೈ ರೋಮಾಂಚನವಾಯಿತು

ಆದರೆ ? ಹಿಂದೆಯೇ ಛೆ.... ಇದು ನ್ಯಾಯವಾಗಿ ಆಗಲಿಲ್ಲ. ರವಿಯ ಪಿಂಡವನ್ನು ಹೊತ್ತೆ, ಅದೇ ತನ್ನ ಗಂಡನಿಂದಾಗಿದ್ದರೆ ? ಎಷ್ಟು ಸಂತೋಷ ಇರುತ್ತಿತ್ತು, ಎಂದು ಕೊರಗುವಳು

ವಾಸಂತಿ ಏಳಲಾರದೆ ಸೋತು ಸುಸ್ತಾಗಿರುವುದನ್ನು ಗಮನಿಸಿ ನಾಗರಾಜ ವಾಸಂತಿಯ ಬಳಿ ಕುಳಿತು ಅವಳ ಕೈಯ್ಯನ್ನು ತನ್ನ ಕೈಯ್ಯಲ್ಲಿ ತೆಗೆದುಕೊಂಡು "ಏಕೆ ವಾಸೀ.... ಹುಷಾರಿಲ್ಲವೇ ?" ಅಂದ.

ಈ ನಡುವೆ ಗಂಡ ತನ್ನ ಹತ್ತಿರ ಕುಳಿತು ಮಾತಾಡುವುದೇ ಅಪರೂಪವಾಗಿತ್ತು. ಅವನ ಪ್ರೀತಿಯನ್ನು ಅವಳು ಎಂದೂ ಮರೆಯಳು. ಈಗ ಅವಳಿಗೆ ದುಃಖವೇ ಉಕ್ಕಿತು. ಸುಮ್ಮನೆ ಮುಖ ಮುಚ್ಚಿ ಅತ್ತಳು.

"ಏಕೆ ವಾಸೀ, ನಿನಗೇನಾಗಿದೆ ಹೇಳು" ಎಂದು ಅವಳ ತಲೆ ನೇವರಿಸಿದ.

"ಇನ್ನೇನು ಆಗಬೇಕು ? ಆಗಬೇಕಾದ್ದೆಲ್ಲಾ ಆಗಿದೆ" ಎಂದಳು.

"ಹಾಗೆಂದರೆ ನನಗೆ ಹೇಗೆ ಅರ್ಥವಾಗಬೇಕು ವಾಸೀ ? ಏಕೆ ಹುಷಾರಿಲ್ಲ ಹೇಳು"

"ಈಗ ನನಗೆ ಮೂರು ತಿಂಗಳು, ನಿಮಗೆ ತೃಪ್ತಿಯಾಯಿತೇ ?" ಎಂದಳು.

ನಾಗರಾಜ ಕಿವಿ ನೆಟ್ಟಗೆ ಮಾಡಿ ಹಾಂ ! .... ಹೌದೇ ವಾಸೀ ? ನನ್ನ ಮುದ್ದು ವಾಸೀ ಎಂದು ಅವಳನ್ನು ಅನಾಮತ್ತಾಗಿ ಎತ್ತಿ ರೂಮಿನಲ್ಲೆಲ್ಲಾ ಕುಣಿದಾಡಿ ಬಿಟ್ಟ.

ವಾಸೀ ಮಲಗಿಕೋ ನೀನೇನೂ ಇನ್ನು ಕೆಲಸ ಮಾಡಬೇಡ. ಒಬ್ಬ ಕೆಲಸದವಳನ್ನು ಗೊತ್ತು ಮಾಡುತ್ತೇನೆ. ಅವಳು ಹೊರಗಿನ ಎಲ್ಲಾ ಕೆಲಸ ಮಾಡಿಕೊಳ್ಳುತ್ತಾಳೆ, ಅಮ್ಮ ಅಡಿಗೆ ಮಾಡಿಕೊಳ್ಳಲಿ, ನೀನು ಹಾಯಾಗಿರು, ಎಂದ.

ಪತಿಗೆ ತನ್ನ ಬಗ್ಗೆ ಇನ್ನೂ ಇಷ್ಟು ಪ್ರೀತಿ ಉಳಿದಿರುವುದಕ್ಕಾಗಿ ವಾಸಂತಿ ಸಂತೋಷಪಟ್ಟಳು. "ನೀವು ಹೀಗೇ ನನಗೆ ಸಮಾಧಾನ ಕೊಡುತ್ತಿದ್ದರೆ ಮಾತ್ರ ನನಗೆ ನೆಮ್ಮದಿ" ಎಂದು ಅವನ ಕಾಲಿಗೆ ನಮಸ್ಕರಿಸಿದಳು.

ನಾಗರಾಜ ಮಹಡಿಯಿಂದ ಧಡ – ಧಡನೆ ಇಳಿದು ಬಂದ. "ಅಮ್ಮಾ !...." ಎಂದು ಕೂಗಿಕೊಂಡೇ ಅಡಿಗೆ ಮನೆಗೆ ಬಂದ.

"ಏನೋ ಅದೂ ... ನಿನ್ನ ರಾಣಿ ಇನ್ನೂ ಏಳಲಿಲ್ಲವೇ ? ನಾನೇ ಕಾಫಿ ಮಾಡಿದೆ ತಗೋ ಕುಡೀ ..." ಎಂದರು ಭಾಗೀರಥಮ್ಮ.

"ಅಮ್ಮಾ ವಾಸಿ ಏಕೋ ತುಂಬಾ ಸುಸ್ತಾಗಿದ್ದಾಳೇಮ್ಮಾ ; ನಾನು ಹೋಗಿ ಡಾಕ್ಟರನ್ನು ಕರೆದುಕೊಂಡು ಬರುತ್ತೇನೆ" ಎಂದ.

"ಏನೇನು ಗ್ರಹಚಾರವೋ ; ಹೋಗಪ್ಪಾ" ಎಂದರು.

ಡಾಕ್ಟರು ಬಂದು ಪರೀಕ್ಷಿಸಿ "ಅವರಿಗೆ ಏನೂ ಖಾಯಿಲೆ ಇಲ್ಲ ನಾಗರಾಜ್ ಆಕೆ ಗರ್ಭಿಣಿ, ಮೂರು ತಿಂಗಳಾಗಿರಬಹುದು" ಎಂದು ಹೇಳಿದರು

ಅಲ್ಲಿಯೇ ಇದ್ದು ಕೇಳಿಸಿಕೊಂಡ ಭಾಗೀರಥಮ್ಮನವರ ಆನಂದ ಹೇಳತೀರದು. "ಅದೇ ಕಣೋ ನಾನು ಯಾತ್ರೆ ಮಾಡುವಾಗ ಧರ್ಮಸ್ಥಳದಲ್ಲಿ ಹರಸಿಕೊಂಡು ಬಂದೆ ಮಂಜುನಾಥನ ಕೃಪೆಯಿಂದ ನಮ್ಮ ವಂಶಕ್ಕೆ ಒಂದು ಮಗುವಾದರೆ ಆ ದೇವರ ಹೆಸರಿಡುತ್ತೇನೆ ಎಂದು. ಸಧ್ಯ ಮಂಜುನಾಥನ ಕೃಪೆ,ಇಷ್ಟು ಕಾಲಕ್ಕೆ ಕಣ್ಣು ಬಿಟ್ಟು ನೋಡಿದ

ನಿನಗೆ ಏನಾಗಿದೆಯೋ ಎಂದುಕೊಂಡೇಮ್ಮಾ ಬಾ.... ತಾಯಿ, ಇನ್ನು ನಿನ್ನನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂದು ವಾಸಂತಿಯನ್ನು ಒಳಕ್ಕೆ ಕರೆದುಕೊಂಡು ಹೋಗಿ ನೋಡು ಇನ್ನು ಮೇಲೆ ನೀನು ಬರೀ ಹೊಟ್ಟೆಗೆ ಕಾಫಿ ಕುಡಿಯಬೇಡ ತಗೋ.... ಈ ಬಿಸಿ ಹಾಲು ಮೊದಲು ಕುಡಿ ಎಂದು ಒಂದು ಲೋಟ ಹಾಲನ್ನು ವಾಸಂತಿಗೆ ಕೊಟ್ಟು ಕೂರಿಸಿದರು.

ಅಂದಿನಿಂದ ವಾಸಂತಿಗೆ ಅತ್ತೆಯಿಂದ ಎಡಬಿಡದ ಉಪಚಾರ ನಡೆಯುತೊಡಗಿತು.

ಇವರ ಬಾಯಿ ಮುಚ್ಚಿಸುವುದಕ್ಕಾದರೂ ನಾನು ಬಸುರಿಯಾದದ್ದು ಒಳ್ಳೆಯದಾಯಿತು ಎಂದುಕೊಂಡಳು.

ಭಾಗೀರಥಮ್ಮನವರ ಸಂಭ್ರಮ ಹೇಳತೀರದು ಮತ್ತೆ ಪ್ರಾಯ ಬಂದವರಂತೆ ಮನೆಯೆಲ್ಲಾ ಗುಡುಗಾಡಿ ಓಡಾಡಿಕೊಂಡು ಕೆಲಸ ಮಾಡುವರು. ವಾಸಂತಿಯನ್ನು ಒಂದು ಕೆಲಸಕ್ಕೂ ಬಿಡುತ್ತಿರಲಿಲ್ಲ.

ವಾಸಂತಿ ರವಿಗೆ ಸ್ನಾನಕ್ಕೆ ನೀರು, ಬಟ್ಟೆ, ಬರೆ ಅಣಿಮಾಡಲು ಹೋದರೆ, ಲೋ ರವೀ ನೀನು ಅವಳನ್ನು ಓಡಾಡಿಸಿ ಅವಳಿಗೆ ಆಯಾಸ ಮಾಡಬೇಡ ಕಣೋ ನಿನ್ನ ಅತ್ತಿಗೆ ಬಸುರಿ ಕಣೋ" ಎಂದು ಹೇಳಿ ಆ ಕೆಲಸವನ್ನೂ ತಾವೇ ಮಾಡುತ್ತಿದ್ದರು.

ವಾಸಂತಿ ತನ್ನ ರೂಮಿಗೆ ಬಂದಾಗ ರವಿ ಗುಟ್ಟಾಗಿ "ಅತ್ತಿಗೆ ನೀವು ಬಸುರಿಯಾಗಿದ್ದು ಸಂತೋಷ, ಆದರೆ ನನ್ನಿಂದ ದೂರವಾದರೆ ಮಾತ್ರ ನನಗೆ ಬಲು ಸಂಕಟ.

ನನ್ನ ಕೆಲಸವನ್ನೂ ಅಮ್ಮನೇ ಮಾಡಲು ಶುರುಮಾಡಿಬಿಟ್ಟಿದ್ದಾಳೆ ಇನ್ನು ನಿಮ್ಮ ಭೇಟಿಗಾಗಿ ಕಾದು ಕಾದು ಕಂಗಾಲಾಗುವ ಈ ಕಣ್ಣಿಲ್ಲದವನ ಕಷ್ಟ ನಿಮಗೆ ಹೇಗೆ ತಿಳಿಯಬೇಕು ಅತ್ತಿಗೇ ! " ಎಂದು ಅವಳು ಕೈಗೆ ಸಿಕ್ಕಿದಾಗ ಬಿಡುತ್ತಿರಲಿಲ್ಲ.

"ರವೀ ನಿನಗೊಂದೂ ಗೊತ್ತಾಗುವುದಿಲ್ಲ ಇದೇನೋ ದೊಡ್ಡ ಕತೆಯಾಗುತ್ತಿದೆ ನನ್ನ ಮಾನ ಮೂರು ಕಾಸಿಗೂ ಬೇಡವಾಗುತ್ತೆ"

" ಏಕೆ ಅತ್ತಿಗೇ ಅಣ್ಣನಿಗೆ ಏನಾದರೂ ತಿಳಿಯಿತಾ ?"

"ನಿಮ್ಮಣ್ಣನ ಪ್ರೇರೇಪಣೆಯೇ ಈ ಕರ್ಮಕ್ಕೆ ಕಾರಣ. ಇಷ್ಟುದಿವಸ ಬಚ್ಚಿಟ್ಟಿ ರಹಸ್ಯವನ್ನು ಈ ದಿನ ನಾನು ತಿಳಿಸುತ್ತೇನೆ ಕೇಳು. ನಿಮ್ಮಣ್ಣನಿಗೆ ಮದುವೆಗೆ ಮೊದಲೇ ಮಕ್ಕಳಾಗದಂತೆ ಶಸ್ತ್ರ ಚಿಕಿತ್ಸೆ ಆಗಿಹೋಗಿದೆ. ನಿಮ್ಮಮ್ಮನ ಆರ್ಭಟಕ್ಕೆ ಹೆದರಿ ನನಗೆ ಹೇಗಾದರೂ ಮಗು ಆಗಲೇಬೇಕೆಂದು ಮಾಡಿದ ಕುತಂತ್ರ ಇದು. ಈಗ ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗು ನಿನ್ನದೇ ರವೀ.... ನಿನ್ನದೇ"

"ಹಾಂ ... ಹೌದಾ ? ಹಾಗಾದರೆ ಅಣ್ಣನ ಸಮ್ಮತಿಯೇ ಇದಕ್ಕೆ ?"

"ಹೌದು ರವೀ...."

"ಅಯ್ಯೋ ನನ್ನ ಅಣ್ಣಾ ನೀನೆಂತಹ ತ್ಯಾಗಜೀವಿ ? ನಿನ್ನ ಮುಂದೆ ನಾನೆಷ್ಟು ಅಲ್ಪ ?"

"ಹೌದು ರವೀ ಅವರ ಗುಣ ಮೇರುವಷ್ಟು ದೊಡ್ಡದು ನನಗೆ ಒಂದು ಮಗು ಆಗಲೇಬೇಕೆಂಬ ಹಂಬಲಕ್ಕಾಗಿ ನನ್ನನ್ನು ನಿನಗೆ ಹಂಚಿಕೊಟ್ಟರು. ಅಂದಿನಿಂದ ಅವರು ನನ್ನ ಸಂಪರ್ಕವನ್ನೇ ತೊರೆದಿದ್ದಾರೆ. ಅವರೊಂದು ಧರ್ಮದೇವತೆ"

"ಏನೇ ಆದರೂ ನಾನು ಅಣ್ಣನ ಮುಂದೆ ತಲೆ ಎತ್ತಿ ತಿರುಗಲಾರೆ. ನಿಮ್ಮನ್ನು ಅತ್ತಿಗೇ ಎಂದು ಕರೆಯಲು ನನ್ನ ನಾಲಿಗೆ ತಡೆಯುತ್ತದೆ. "ಅತ್ತಿಗೇ" ಅಂದಾಗಲೆಲ್ಲಾ ಅಣ್ಣನ ವ್ಯಕ್ತಿತ್ವ ಕಣ್ಣ ಮುಂದೆ ನಿಲ್ಲುತ್ತದೆ.

"ರವೀ ಏನೇ ಆದರೂ ಸಮಾಜ ನಮ್ಮನ್ನು ಅರ್ಥಮಾಡಿಕೊಳ್ಳಲಾರದು. ನಿಮ್ಮ ಅಮ್ಮನ ವಂಶ ಬೆಳಸುವ ಹುಚ್ಚಿಗೆ ಬಲಿಯಾದವರು ನಾವು. ನಿಮ್ಮಣ್ಣನಿಗೆ ಬೇರೆ ಮದುವೆ ಮಾಡಿಸುವ ಹಂಚಿಕೆಯನ್ನು ಮಾಡಿದ್ದರು ನಿಮ್ಮ ಅಮ್ಮ. ಇದು ಗೋಪ್ಯವಾಗಿಯೇ ಇರಬೇಕು. ನಾವು ಅತ್ತಿಗೆ–ಮೈದುನರಾಗಿಯೇ ಅವರ ದೃಷ್ಟಿಯಲ್ಲಿ ಇರಬೇಕು.

"ಸರಿ ಅತ್ತಿಗೇ.... ಇನ್ನು ನಾನೆಂದಿಗೂ ನಿಮ್ಮನ್ನು ಅಗಲಿರಲಾರೆ ಅತ್ತಿಗೇ".

"ರವೀ ಈ ಹುಚ್ಚು ಸರಿಯಲ್ಲ" ಎಂದು ವಾಸಂತಿ ಆಗಾಗ ಎಚ್ಚರಿಸುತ್ತಲೇ ಇದ್ದಳು.

ದಿನ ತುಂಬುತ್ತಿದ್ದಂತೆ ವಾಸಂತಿಯು ತೌರುಮನೆಯವರಿಗೂ ಸಂಭ್ರಮ. ಆಗಾಗ ಮನೆಗೆ ಕರೆಸಿಕೊಂಡು ಅವಳಿಗೆ ಬೇಕು ಬೇಕೆಂದದ್ದನ್ನೆಲ್ಲಾ ಮಾಡಿ ಕೊಡುತ್ತಿದ್ದರು.

ಏಳನೇ ತಿಂಗಳಲ್ಲಿ ಬಳೆ ತೊಡಿಸುವ ಶಾಸ್ತ್ರ ಮಾಡಿದರು, ಒಂಭತ್ತು ತುಂಬುವವರೆಗೂ ವಾಸಂತಿ ಅತ್ತೆಯ ಮನೆಯಲ್ಲಿಯೇ ಇದ್ದಳು. ಬಾಣಂತಿತನಕ್ಕೆ ತೌರಿಗೇ ಕಳುಹಿಸಬೇಕೆಂದು ಕೇಳಿಕೊಂಡು ವಾಸಂತಿಯ ತಾಯಿ ಅವಳನ್ನು ಕರೆದುಕೊಂಡು ಹೋದರು

ವಾಸಂತಿ ಹೊರಡುವಾಗ ತುಂಬಾ ಬೇಸರಗೊಂಡವನೆಂದರೆ ರವಿ, "ಅತ್ತಿಗೇ ನೀವಿಲ್ಲದ ಮೇಲೆ ನನ್ನನ್ನು ಕೇಳುವವರ್ಯಾರು" ಎಂದು ಅತ್ತ.

ಆದರೆ ವಾಸಂತಿಗೆ ತನ್ನ ಗಂಡನನ್ನು ಬಿಟ್ಟು ಹೋಗುವಾಗ ಬಹಳ ವ್ಯಸನವಾಯಿತು "ನೀವು ಹೊತ್ತಿಗೆ ಸರಿಯಾಗಿ ಮನೆಗೆ ಬಂದು ಊಟ–ತಿಂಡಿ ಸರಿಯಾಗಿ ಮಾಡಬೇಕು, ನಾನು ಹೋಗಿ ಬರಲೇ" ಎಂದು ಕಣ್ಣೀರಿಟ್ಟು ಅವನ ಕಾಲಿಗೆ ನಮಸ್ಕರಿಸಿದಳು.

"ಏಳು ವಾಸಿ .... ಏಕೆ ಅಳುತ್ತೀ ? ನಾನೆಲ್ಲಾ ಚೆನ್ನಾಗಿರ್ತೀನಿ" ಅಂದ.

"ಆ ಮನೆಗೆ ಆಗಾಗ ಬರುತ್ತಿರಬೇಕು".

"ಆಗಲಿ ಬರುತ್ತೇನೆ".

"ರವಿಯನ್ನೂ ನೀವೇ ನೋಡಿಕೊಳ್ಳಬೇಕು".

"ನೀನು ಹೇಳಬೇಕೇ ವಾಸೀ ?.... ನೋಡು ನೆಮ್ಮದಿಯಾಗಿ ಹೋಗಿದ್ದು ಬಾ.

ಸುಖವಾಗಿ ಗಂಡು ಮಗುವಿನ ತಾಯಿಯಾಗಿ ಬಾ, ಅದು ನಮ್ಮೆಲ್ಲರ ಮುದ್ದು ಮಗು".

"ನೀವು ಇಷ್ಟು ಒಳ್ಳೆಯವರಾಗಿರುವುದಕ್ಕೇ ನನಗೆ ಈ ದುಃಖ" ಕಣ್ಣೊರೆಸಿಕೊಂಡಳು ವಾಸಂತಿ.

ಎಲ್ಲರಿಗೂ ಹೇಳಿ ಹೊರಟಳು. ಭಾಗೀರಥಮ್ಮನವರು ಸೊಸೆಗೆ ಉಡಿತುಂಬಿ ಹಸಿರು ರೇಷ್ಮೆ ಸೀರೆ ಉಡಿಸಿ ಕಳುಹಿಸಿದರು.

ಅಕ್ಕನ ಬಸಿರು ಹೊಸಿಗೆಗೆ ಇಂದಿರಾ ಬರದೇ ಇರುತ್ತಾಳೆಯೇ ? ಆರತಿ–ಅಕ್ಷತೆ ಎಲ್ಲದಕ್ಕೂ ಸಂಭ್ರಮವಾಗಿ ಓಡಾಡಿದಳು. ವಾಸಂತಿ ನಡೆಯಲಾರದೆ ಹೆಜ್ಜೆ ಇಡುವುದನ್ನು ನೋಡಿ "ಏನಮ್ಮಾ !.... ಅಕ್ಕಾ ನೀನು ಈಗ ಹೀಗೇಕೆ ಆನೆಯಂತೆ ನಿಧಾನವಾಗಿ ಅಡ್ಡಡ್ಡ ನಡೆಯುತ್ತೀ ?" ಎಂದು ಅವಳಂತೆ ನಡೆದು ಹಾಸ್ಯ ಮಾಡಿದಳು.

ವಾಸಂತಿಗೆ ಹೆರಿಗೆಯಾಗಬೇಕಾದರೆ ಕಷ್ಟವಾಯಿತು. ಸಾವು–ಬದುಕುಗಳ ನಡುವೆ ಹೋರಾಡಿ ಕೊನೆಗೆ ಗಂಡು ಮಗುವಿನ ತಾಯಾದಳು. ಕೆಂಪಗೆ ಪುಷ್ಟಿಯಾಗಿ

ಮುದ್ದಾಗಿದ್ದ ಮೊಮ್ಮಗುವನ್ನು ನೋಡಿ ಪರಮಶಿವಯ್ಯನವರೂ ಭಾಗೀರಥಮ್ಮ ನವರೂ ಹಿಗ್ಗಿಹೋದರು.

ನಾಗರಾಜ ಬಂದು ಮಗುವನ್ನು ನೋಡಿದ. "ವಾಸೀ ನಿನ್ನ ಮಗ ಒಳ್ಳೆ ರಾಜ ಕುಮಾರ ಇದ್ದಹಾಗಿದಾನೆ ಕಣೇ, ಈ ಕಣ್ಣು, ಮೂಗು, ಕೂದಲು ಎಲ್ಲಾ ಥೇಟ್ ರವಿಯಂತೆಯೇ" ಅಂದ.

ವಾಸಂತಿ ಆ ನೋವಿನಲ್ಲೂ ವಿಷಾದದ ನಗೆ ನಕ್ಕು "ಮತ್ತೆ ಇನ್ನು ಹೇಗೆ ಇರಲು ಸಾಧ್ಯ ?" ಎಂದಳು.

"ಈಗ ಹೋಗಿ ರವಿಯನ್ನು ಕರೆದುಕೊಂಡು ಬರುತ್ತೇನೆ ವಾಸೀ ಅವನು ಮಗು ವನ್ನು ಮುಟ್ಟಿಯಾದರೂ ನೋಡಲಿ."

"ನಿಮ್ಮ ಈ ಸರಳ ಸ್ವಭಾವಕ್ಕೆ ಸರಿದೂಗಲು ಯಾರಿಗೆ ಸಾಧ್ಯ ?"

"ನೋಡು ವಾಸೀ.... ಸಧ್ಯ ನಿನ್ನ ಹಂಬಲ ನೆರವೇರಿತಲ್ಲಾ ನಾನು ಗೆದ್ದೆ".

"ನಿಮ್ಮ ಗೆಲುವಿಗಾಗಿ ನಾನು ಸೋತೆ."

"ಅದೆಲ್ಲಾ ಮನಸ್ಸಿಗೆ ಏನೂ ಹಚ್ಚಿಕೊಳ್ಳಬೇಡ ವಾಸೀ, ಬಾಣಂತಿ ನಿನ್ನ ಆರೋಗ್ಯದ ಕಡೆ ಗಮನವಿರಲಿ."

"ಅಯ್ಯೋ ಇವರೊಬ್ಬರು ಮಾತಾಡುವ ದೇವರು ಅಂದುಕೊಂಡು ನಿಟ್ಟುಸಿರು ಬಿಟ್ಟಳು ವಾಸಂತಿ.

ರವಿ ವಾಸಂತಿಯ ಕೈಯ್ಯನ್ನು ಹಿಡಿದೇ "ಅತ್ತಿಗೇ.... ತುಂಬಾ ಆಯಾಸವೇ ?" ಅಂದ.

"ತುಂಬಾ ಸುಸ್ತು.... ಮಗುವನ್ನು ನಿಮ್ಮ ಕೈಯ್ಯಲ್ಲಿಟ್ಟು "ನಾನು ಸತ್ತು ಹೋಗಿ ದ್ದರೇ ಚೆನ್ನಾಗಿತ್ತು" ಎಂದು ಕ್ಷೀಣವಾದ ಧ್ವನಿಯಲ್ಲಿ ಹೇಳಿದಳು.

ಛೆ.... ಇದೇಕೆ ಅತ್ತಿಗೇ ಹೀಗೆ ಹೇಳುತ್ತೀರಿ, ಯಾಕೆ ? ಏನು ಬೇಸರ ? ಅತ್ತಿಗೇ ಅಂದ ಕಾತುರದಿಂದ.

"ಈಗ ಯಾವ ಮಾತೂ ಬೇಡ, ಅಮ್ಮ ಕೈಕಾಲು ತೊಳೆಯಲು ಹೊರಗೆ ಹೋಗಿದ್ದಾಳೆ, ಇನ್ನೇನು ಬರುತ್ತಾಳೆ. ಇದೋ ನಿನ್ನ ಮಗು ಮುಟ್ಟಿ ನೋಡು, ಎಂದು ಅವನ ಕೈಯ್ಯನ್ನು ಹಿಡಿದು ಮಗುವಿನ ಮೈಯ್ಯನ್ನು ಮುಟ್ಟಿಸಿದಳು.

ಮಿದುವಾಗಿ ದಪ್ಪ-ದಪ್ಪಗಿದ್ದ ಮಗುವಿನ ಮೈಯ್ಯನ್ನು ಮುಟ್ಟಿ ನೋಡಿದ.

" ಮಗು ಚೆನ್ನಾಗಿರಬಹುದು ಅಲ್ಲವೇ ಅತ್ತಿಗೇ ?"

"ಮುದ್ದು ಮುದ್ದಾಗಿ ನಿನ್ನಂತೆಯೇ ಇದಾನೆ".

"ಏನಂದೇ ? ನನ್ನಂತೆ ? ಸಧ್ಯ ಮಗೂಗೆ ಕಣ್ಣು ಕಾಣುತ್ತದೆ ತಾನೇ ಅತ್ತಿಗೇ ?"

ಎಂದು ಗಾಬರಿಯಿಂದ ಕೇಳಿದ.

"ಒಳ್ಳೆ ಬಟ್ಟಲಿನಂತೆ ದೊಡ್ಡದಾಗಿ ಕಣ್ಣು ಬಿಡುತ್ತಾನೆ ತುಂಟ. ಮೊದಲಿದ್ದ ನಿನ್ನ ಕಣ್ಣೇ ಜ್ಞಾಪಕಕ್ಕೆ ಬರುತ್ತದೆ ರವೀ" ಎಂದು ವ್ಯಸನದಿಂದ ಹೇಳಿದಳು.

"ಹೋಗಲಿ ಬಿಡಿ, ನಿಮಗೆ ಮಗುವಾಗಿದ್ದು ಸಂತೋಷವಿಲ್ಲವೇ ಅತ್ತಿಗೇ ?"

"ನನ್ನ ಹಂಬಲ ತೀರಿಸಿದೆ ರವೀ ನೀನು,ಎಲ್ಲಕ್ಕಿಂತ ನಿಮ್ಮಮ್ಮನ ಕಣ್ಣಿಗೆ ಕಸವಾಗಿ ಕಾಣುತ್ತಿದ್ದ ನನಗೆ ಒಂದು ಸ್ಥಾನ ಈ ಮನೆಯಲ್ಲಿ ಕೊಟ್ಟೆ". ಆದರೂ ನನಗೆ ನೆಮ್ಮದಿ ಇಲ್ಲ.

"ಅಣ್ಣ ಏನನ್ನುತ್ತಾನೆ ?"

ನಿಮ್ಮಣ್ಣನಿಗೆ.... ಅನ್ನುತ್ತಿದ್ದಂತೆಯೇ ವಾಸಂತಿಯ ತಾಯಿ ಬಂದರು. ಭಾಗೀರಥಮ್ಮನವರೂ ಫ್ಲಾಸ್ಕಿನಲ್ಲಿ ಕಾಫಿ ತೆಗೆದುಕೊಂಡು ಬಂದರು. ಒಂದು ತೊಟ್ಟು ಕಾಫಿ ಕುಡೀಮ್ಮಾ ವಾಸಂತೀ ಎಂದು ಅಕ್ಕರೆಯಿಂದ ಹೇಳಿದರು.

ಮಗುವನ್ನೆತ್ತಿ ರವಿಯ ಕೈಯ್ಯಲ್ಲಿಡುತ್ತಾ "ರವೀ ಕೃಷ್ಣನಂತೆ ಹುಟ್ಟಿರುವ ನಿಮ್ಮಣ್ಣನ ಮಗುವನ್ನು ನೋಡಲು ನಿನಗೆ ಅದೃಷ್ಟವಿಲ್ಲವಲ್ಲಾ ರವೀ.... ದೇವರು ಎಲ್ಲಾ ಕೊಟ್ಟು, ನಿನ್ನ ಕಣ್ಣನ್ನೇ ಕಿತ್ತುಕೊಂಡ" ಎಂದು ಅತ್ತರು.

"ನೀವೆಲ್ಲಾ ನೋಡಿ ಹೇಳಿದರೇ ಸಾಕಮ್ಮಾ ! ಸಧ್ಯ ನಮ್ಮ ಮನೆಗೊಂದು ಮುದ್ದು ಪಾಪ ಬಂತಲ್ಲಾ ನನಗೆ ಅಷ್ಟೇ ಸಂತೋಷ" ಎಂದ.

ಮಗು ಬಾಣಂತಿ ಆರೋಗ್ಯವಾಗಿದ್ದುದರಿಂದ ಒಂಭತ್ತುದಿನಕ್ಕೇ ವಾಸಂತಿಯನ್ನು ಅವಳ ತಾಯಿ ಮನೆಗೆ ಕರೆದುಕೊಂಡು ಹೋದರು.

ನೀರಾದನಂತರ ನಾಮಕರಣ ಇಟ್ಟುಕೊಳ್ಳಬೇಕೆಂಬುದು ಎಲ್ಲರ ಆಪೇಕ್ಷೆ. ಅದಕ್ಕೆ ನಾಗರಾಜ ಒಪ್ಪಲಿಲ್ಲ. ಆ ದಿನ ಮುಖ್ಯ ಕೆಲಸಕ್ಕಾಗಿ ನಾನು ಮೈಸೂರಿಗೆ ಹೋಗಬೇಕಾಗಿದೆ, ನೀವೇ ತೊಟ್ಟಿಲಿನ ಶಾಸ್ತ್ರ ಮಾಡಿಕೊಳ್ಳಿ" ಎಂದು ಹೇಳಿ ಆ ದಿನ ಅವನು ಊರಿನಲ್ಲಿಯೇ ಇರಲಿಲ್ಲ.

ತನ್ನ ಗಂಡನ ಅನುಸರಣೆಯ ಬುದ್ಧಿಗೆ ವಾಸಂತಿ ಮೆಚ್ಚಿಕೊಂಡಳು. ಹಸೆಮಣೆಯಲ್ಲಿ ಕೂತು ಶಾಸ್ತ್ರಸಮ್ಮತವಾಗಿ ನನ್ನ ಮಗು ಎಂದು ಹೇಗೆ ನಾಮಕರಣ ಮಾಡಲು ಸಾಧ್ಯ ? ಧರ್ಮ ದೇವತೆಯೇ ತನ್ನ ಗಂಡ ಎಂದು ಸಮಾಧಾನಪಟ್ಟುಕೊಂಡಳು.

ವಾಸಂತಿಯನ್ನು ಮಾತಾಡಿಸಲು ಯಾವತ್ತಾದರೂ ಒಂದೊಂದು ದಿನ ರವಿ ವಾಸಂತಿಯ ಮನೆಗೆ ಬರುತ್ತಿದ್ದ. ಆಗೆಲ್ಲಾ ಅತ್ತಿಗೇ ನನಗೆ ತುಂಬಾ ಬೇಜಾರು, ಬೇಗ ಬಂದುಬಿಡಿ" ಎನ್ನುತ್ತಿದ್ದ.

ಅಲ್ಲಿಯೇ ಇದ್ದ ಇಂದಿರಾ "ಇನ್ನೇನು ನಮ್ಮ ಅಕ್ಕನಿಗೆ ಮೊದಲ ಮಗು ನೀವೇ

ತಾನೇ ? ಅಕ್ಕಾ ಮೊದಲು ದೊಡ್ಡ ಮಗುವನ್ನು ಸುಧಾರಿಸು. ತೊಟ್ಟಿಲಿನ ಮಗು ಹಾಗಿರಲಿ" ಎಂದು ತಮಾಷಿ ಮಾಡುತ್ತಿದ್ದಳು.

ತೊಟ್ಟಿಲಿನ ಶಾಸ್ತ್ರ ಮಾಡಿ ಭಾಗೀರಥಮ್ಮನವರ ಹರಕೆಯ ಪ್ರಕಾರ "ಮಂಜು ನಾಥ ಪ್ರಸಾದ್" ಎಂದು ಹೆಸರಿಟ್ಟರು ಮಗುವಿಗೆ.

ನಾಗರಾಜನೂ ವಾಸಂತಿಗೆ ಬೇಸರವಾಗಬಾರದೆಂದು ಆಗಾಗ ಬರುತ್ತಿದ್ದ. ತೊಟ್ಟಿಲಿನ ತುಂಬಾ ತುಂಬುವಂತೆ ಮುದ್ದು–ಮುದ್ದಾಗಿ ಬೆಳೆಯುತ್ತಿದ್ದ ಮಗುವನ್ನು ಎತ್ತಿ ಮುದ್ದಾಡುತ್ತಿದ್ದ. ಇದರಿಂದ ವಾಸಂತಿಗೆ ಎಷ್ಟೋ ನೆಮ್ಮದಿ.

ಇಂದಿರಾ ಭಾವನನ್ನು ತುಂಬಾ ಛೇಡಿಸುತ್ತಿದ್ದಳು. "ಭಾವಾ... ಇಂಥಾ ಮುದ್ದಾಗಿ ಹುಟ್ಟುವ ಮಗನನ್ನು ಎಷ್ಟು ದಿವಸ ತಡೆಹಿಡಿದಿಟ್ಟಿದ್ದಿರಿ ? ಅಬ್ಬಬ್ಬ ! ಇಷ್ಟು ಸಮಯಕ್ಕೆ ಇಂಥಾ ಧೀರ ಸುಂದರ ಕುಮಾರರು ಮೂರು ಜನ ಇರುತ್ತಿದ್ದರು. ನಿಮಗೇನು ನಷ್ಟವಾಗುತ್ತಿತ್ತು ?" ಎನ್ನುವಳು.

ಆಗೆಲ್ಲಾ ವಾಸಂತಿ ಗಂಡನ ಮುಖವನ್ನು ನೋಡಿ ನೋವು ನುಂಗುತ್ತಿದ್ದಳು. ನಾಗರಾಜ ಯಾರಿಗೂ ಅನುಮಾನ ಬಾರದಂತೆ ವಾಸಂತಿಯ ರಕ್ಷಣೆ ಮಾಡುತ್ತಿದ್ದ.

ವಾಸಂತಿ ಹಾಗೆಯೇ ಯೋಚಿಸುವಳು. ತನ್ನ ಗಂಡ ತನಗಾಗಿರುವ ಆಘಾತವನ್ನು ರಹಸ್ಯವಾಗಿಡದೆ ಯಾರೊಂದಿಗೆ ಬಾಯಿ ಬಿಟ್ಟಿದ್ದರೂ ನಾನು ಒಂದು ಮಗುವಿನ ತಾಯಿಯಾಗಲು ಸಾಧ್ಯವಿತ್ತೇ ? ಅಬ್ಬ ! ಅವರ ಮುನ್ನೆಚ್ಚರಿಕೆ ಎಷ್ಟು ? ಎಂದು ಆಶ್ಚರ್ಯಪಡುವಳು.

ಭಾಗೀರಥಮ್ಮನವರಿಗೂ ಪರಮಶಿವಯ್ಯನವರಿಗೂ ಮೊಮ್ಮಗನನ್ನು ಎಷ್ಟು ಬೇಗ ಮನೆಗೆ ಕರೆದುಕೊಂಡು ಬಂದೇವು ? ಎಂದು ಕಾತುರ, ಐದನೆಯ ತಿಂಗಳಲ್ಲಿ ಮಗು–ಬಾಣಂತಿಯನ್ನು ಕರೆದುಕೊಂಡು ಬಂದರು.

ಮುಖ ನೋಡಿ ಕಿಲ–ಕಿಲನೆ ನಗುತ್ತಿದ್ದ ಮಗುವನ್ನು ಮನೆಯವರೆಲ್ಲಾ ಒಬ್ಬರು ತಪ್ಪಿ ಒಬ್ಬರು ಎತ್ತಿ ಮುದ್ದಾಡುವವರೇ. ರವಿಗೆ ತನ್ನದೇ ಆದ ಮುದ್ದು ಕಂದನನ್ನು ಎಷ್ಟು ಮುದ್ದಾಡಿದರೂ ಸಾಲದು.

ಎಲ್ಲರ ಕಣ್ಮಣಿಯಾಗಿ ಮೆರೆಯುತ್ತಿರುವ ತನ್ನದೇ ಮಗುವನ್ನು ತನ್ನದೆಂದು ಹೇಳಿಕೊಳ್ಳುವ ಭಾಗ್ಯವಿಲ್ಲವಲ್ಲಾ ಎಂದು ಅವನ ಕೊರತೆ.

ತನ್ನದಲ್ಲವೆಂದು ತಿಳಿದರೂ ಮಗುವಿನ ತಂದೆ ತಾನು ಎಂದು ತೋರಿಕೆಗೆ ನಡೆದು ಕೊಳ್ಳಬೇಕಾದ ಸಂಕಟ ನಾಗರಾಜನಿಗೆ.

ಮುದ್ದಾದ ಮಗುವಿನ ತಾಯಿಯಾಗಿ ಎಲ್ಲರ ಹೊಗಳಿಕೆಗೆ ಪಾತ್ರಳಾದರೂ ಸರಿ ಯಾದ ರೀತಿಯಲ್ಲಿ ತಾಯಿಯಾಗಲಿಲ್ಲವಲ್ಲಾ ಎಂಬ ಕೊರಗು ವಾಸಂತಿಗೆ.

ಮೂವರ ಪರಿಸ್ಥಿತಿಯೂ ಮನೆಯಲ್ಲಿ ಯಾರಿಗೂ ಅರ್ಥವಾಗದೇ ಗೋಪ್ಯವಾಗಿ ಅವರವರ ಮನಸ್ಸಿನಲ್ಲಿ ಕೊರೆಯುತ್ತಿತ್ತು.

ಮಗುವನ್ನು ಆಡಿಸಲು ಅತ್ತೆಯ ಕೈಗೆ ಕೊಟ್ಟು ವಾಸಂತಿ ಕೆಲಸಕ್ಕೆ ತೊಡಗಿದಳು ಪರಮಶಿವಯ್ಯನವರಂತೂ ಈಗ ಮನೆ ಬಿಟ್ಟು ಹೊರಕ್ಕೇ ಹೋಗುತ್ತಿರಲಿಲ್ಲ. ದಿನ ಕ್ಕೊಂದು ಆಟದ ಸಾಮಾನು ಮೊಮ್ಮಗನಿಗೆ ತಂದುಕೊಟ್ಟು ಅವನ ಜೊತೆಯಲ್ಲಿ ಇವರೂ ಕುಣಿದಾಡುತ್ತಿದ್ದರು.

ಅವರು ಬೆನ್ನು ಬಗ್ಗಿಸಿ ಮಂಡಿಯೂರಿ ಕುಳಿತರೆ ಭಾಗೀರಥಮ್ಮನವರು ಮೊಮ್ಮಗನನ್ನು ಅವರ ಬೆನ್ನಿನ ಮೇಲೆ ಕೂರಿಸಿ ಹಿಡಿದುಕೊಳ್ಳುತ್ತಿದ್ದರು. ಮಗು ಮುದ್ದಾಗಿ ಐಯ್ ಐಯ್ ಮಾಡು ಎಂದು ತಾತನನ್ನು ಹಿಡಿದುಕೊಳ್ಳುತ್ತಿದ್ದ. ಅಜ್ಜಿ ತಾತನಿಗೆ ಖುಷಿಯೋ ಖುಷಿ. ಇವರ ಜೊತೆ ರವಿಯೂ ಸೇರಿಕೊಳ್ಳುತ್ತಿದ್ದ.

ಮಗುವನ್ನು ಆಡಿಸಲು ದಿನದ ವೇಳೆ ಇವರಿಗೆ ಸಾಕಾಗುತ್ತಿರಲಿಲ್ಲ. ನಂದಿ ಹೋಗುತ್ತಿದ್ದ ಬೆಳಕು ಮತ್ತೆ ಪ್ರಜ್ವಲಿಸಿತು.

ಆದರೆ ನಾಗರಾಜ ಮತ್ತೆ ಮೊದಲಿನಂತೆ ವೈರಾಗಿಯಾದ ಹೆಚ್ಚು ಹೊತ್ತು ಮನೆಯಲ್ಲಿ ಇರುತ್ತಿರಲಿಲ್ಲ. ಬಂದರೂ ಎಲ್ಲರೊಂದಿಗೆ ಕಲೆತು ಮಾತನಾಡುವುದು ಅವನಿಗೆ ಬೇಕಾಗಿರಲಿಲ್ಲ. ಯಾವಾಗಲಾದರೂ ಒಂದೊಂದು ಸಲ ಮಗುವನ್ನು ಎತ್ತಿ ಕೊಂಡರೂ ಯಾವ ಆಕರ್ಷಣೆಯೂ ಇಲ್ಲದಂತೆ ಮತ್ತೆ ವಾಸಂತಿಯ ಕೈಗೆ ಕೊಟ್ಟು ಬಿಡುತ್ತಿದ್ದ.

ಒಂದು ದಿನ ಭಾಗೀರಥಮ್ಮನವರೂ ಸೊಸೆ–ಮೊಮ್ಮಗನೊಂದಿಗೆ ದೇವಸ್ಥಾನಕ್ಕೆ ಹೋಗಿದ್ದರು. ಮನೆಯಲ್ಲಿ ರವಿ ಒಬ್ಬನೇ ಬಾಗಿಲು ಹಾಕಿಕೊಂಡಿದ್ದ. ನಾಗರಾಜ ಬ್ಯಾಂಕಿನಿಂದ ಬಂದು ಬಾಗಿಲು ತಟ್ಟಿದ. ರವಿಯೇ ಬಂದು ಬಾಗಿಲು ತೆಗೆದ.

"ಮನೆಯವರೆಲ್ಲಾ ಎಲ್ಲಿ ರವೀ ?"

"ಎಲ್ಲರೂ ದೇವಸ್ಥಾನಕ್ಕೆ ಹೋಗಿದಾರೆ, ಬಾ.... ಅಣ್ಣಾ ಕಾಫಿ ಕುಡಿದು, ಒಂದು ನಿಮಿಷ ನನ್ನ ರೂಮಿಗೆ ಬಾ, ನಿನ್ನ ಕೈಲಿ ಮಾತಾಡಬೇಕು" ಅಂದ.

ಸರಿ.... ಎಂದು ನಾಗರಾಜ "ಬಾ.... ರವೀ ಈಗಲೇ ಬರುತ್ತೇನೆ ಏನು ಹೇಳು"

"ಅಣ್ಣಾ ಎಷ್ಟೋ ದಿನಗಳಿಂದ ನಿನ್ನ ಹತ್ತಿರ ಬಂದು ಮಾತಾಡಬೇಕು, ಎಂದು ಕೊಂಡೆ. ಆದರೆ ನನಗೆ ಧೈರ್ಯವೇ ಬರಲಿಲ್ಲ. ನೀನಂತೂ ದೂರ–ದೂರವಾಗಿಯೇ ಇರುತ್ತೀ, ನನ್ನನ್ನು ಕ್ಷಮಿಸು ಅಣ್ಣಾ, ನಿನ್ನಂಥಾ ದೇವರಿಗೆ ನಾನು ದ್ರೋಹ ಬಗೆದೆ" ಎಂದು ಅಣ್ಣನ ಕಾಲನ್ನು ಭದ್ರವಾಗಿ ಹಿಡಿದು ಗಳ–ಗಳನೆ ಅತ್ತುಬಿಟ್ಟ.

"ಬಿಡು ಏಳು ರವೀ ನಿನ್ನದೇನೂ ತಪ್ಪಿಲ್ಲ, ವಾಸಂತಿಯದೂ ತಪ್ಪಿಲ್ಲ, ನನ್ನದೇ ತಪ್ಪು. ಆದರೆ ಈ ರಹಸ್ಯ ಕೆಲಸದಿಂದಾಗಿ ನೋಡು ಮನೆ ಎಷ್ಟು ಕಳೆ-ಕಳೆಯಿಂದಿದೆ, ಅಮ್ಮನೂ ಅಪ್ಪನೂ ಎಷ್ಟು ಸಂತೋಷವಾಗಿದ್ದಾರೆ. ನನ್ನಿಂದ ಸಾಧ್ಯವಾಗದ ಈ ಒಂದು ಮಹತ್ವದ ಕೆಲಸವನ್ನು ನೀನು ಮಾಡಿದ್ದೀ ನಾವು ಅಣ್ಣ-ತಮ್ಮಂದಿರು ಮೊದಲಿನಿಂದಲೂ ಒಂದೇ ಜೀವವಾಗಿದ್ದೆವು. ಈಗ ಇದರಲ್ಲಿಯೂ ನನಗೆ ದೋಷವಾಗಿ ತೋರಲಿಲ್ಲ". ನಾನು ಮದುವೆಯೇ ಆಗುವುದಿಲ್ಲವೆಂದು ಹಟ ಮಾಡುತ್ತಿದ್ದುದು ನಿನಗೆ ಜ್ಞಾಪಕವಿರಬಹುದು. ನೋಡು, ನನ್ನಿಂದ ಒಂದು ಹೆಣ್ಣಿಗೆ ಎಷ್ಟು ಸಂಕಟ ? ವಾಸಂತಿ ನೆಮ್ಮದಿಯಾಗಿಲ್ಲ ರವೀ. ಅವಳು ಯಾವಾಗಲೂ ಕೊರಗುತ್ತಿದ್ದಾಳೆ, ಇನ್ನು ಮುಂದೆ ವಾಸಂತಿಯನ್ನು ನೆಮ್ಮದಿಯಾಗಿಡುವುದು ನಿನ್ನ ಜವಾಬ್ದಾರಿ" ಎಂದು ಇಷ್ಟೂ ಒಂದೇ ಸಮ ಹೇಳಿ ಅಲ್ಲಿ ನಿಲ್ಲದೆ ಮಹಡಿ ಮೇಲಕ್ಕೆ ಹೊರಟುಹೋದ ನಾಗರಾಜ.

ಗಂಡನ ಉದಾಸೀನ ದಿನೇ ದಿನೇ ಹೆಚ್ಚುತ್ತಿದ್ದರೂ ಅವನ ಊಟ-ಉಪಚಾರವನ್ನು ವಾಸಂತಿ ನಿಷ್ಠೆಯಿಂದ ಮಾಡುತ್ತಿದ್ದಳು

ರವಿ ಹೆಚ್ಚು ಹೊತ್ತು ಮನೆಯಲ್ಲಿಯೇ ಇರಲು ಇಷ್ಟಪಡುತ್ತಿದ್ದ. ವರ್ಕ್‌ಶಾಪ್ ಕೆಲಸಕ್ಕೆ ಸರಿಯಾಗಿ ಹೋಗುತ್ತಿರಲಿಲ್ಲ. ಬಾಲಚಂದ್ರ ಸ್ನೇಹಿತನಾಗಿ ಎಷ್ಟು ಸೋಲುತ್ತಾನೆ ? ಅವನು ಕೆಲಸ ಮಾಡದೆಯೇ ಸಂಬಳ ಅಳೆಯಲು ಹೇಗೆ ಸಾಧ್ಯ ?

ಒಂದು ದಿನ ಬಾಲು ರವಿಯ ಮನೆಗೆ ಬಂದ. "ಲೋ !.... ರವೀ" ಎಂದು ಕೂಗುತ್ತಾ ರೂಂಗೇ ಬಂದ. ವಾಸಂತಿ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟುತ್ತಾ ಕುಳಿತಿದ್ದಳು. ರವಿ ಮಂಚದಲ್ಲಿ ಮಲಗಿದ್ದ.

"ಲೋ !... ರಂಗಧಾಮ ಏಳೋ ಮೇಲೆ.... ಸೋಂಬೇರಿ ! ಮನೆಗೆ ಏನೋ ಉದ್ಧಾರ ಮಾಡ್ತಾನಂತೆ ಇವನೂ. ಎಷ್ಟು ದಿನ ಆಯ್ತೋ ನೀನು ವರ್ಕ್‌ಶಾಪಿಗೆ ಬಂದು ?" ಅಂದ.

ಅಲ್ಲಿಯೇ ಇದ್ದ ವಾಸಂತಿ "ನಾನೂ ಹೇಳ್ತಾನೇ ಇದ್ದೀನಿ ಬಾಲು, ಕೆಲಸದ ಅಭ್ಯಾಸ ತಪ್ಪಿಹೋದರೆ ಕಷ್ಟವಾಗುತ್ತೆ, ಹೋಗು ಎಂದು ನನ್ನ ಮಾತು ಕೇಳಬೇಕಲ್ಲಾ...." ಅಂದಳು

"ಅತ್ತಿಗೇ ನೀವು ಅವನನ್ನು ಉಬ್ಬಿಸಿ ಬಿಟ್ಟಿದ್ದೀರಿ. ಮಗು ಬೇರೆ ಕೈಗೆ ಸಿಕ್ಕಿಬಿಡ್ತು, ಅಣ್ಣ ತಂದು ಹಾಕ್ತಾನೆ, ಇವನಿಗೇನು ಚಿಂತೆ ?" ಎಂದು ಬೈದ.

"ಬಾಲೂ ರೇಗಬೇಡ ನಾಳೆಯಿಂದ ಸರಿಯಾಗಿ ಬರ್ತೀನಿ ಕಣೋ" ಅಂದ ರವಿ.

"ಅತ್ತಿಗೇ ತಗೊಳ್ಳಿ ಅವನ ಈ ತಿಂಗಳ ಸಂಬಳ" ಅಂತ ಮುನ್ನೂರು ರೂಪಾಯಿ ವಾಸಂತಿಯ ಕೈಗೆ ಕೊಟ್ಟ.

"ಇಲ್ಲ ಬಾಲು ಇದು ಬೇಡ, ಅವನು ದುಡಿಯದೆಯೇ ನೀನು ಸುಮ್ಮನೆ ಹಣ ಕೊಡಬೇಡ ತಗೋ" ಎಂದು ಬಲವಂತವಾಗಿ ವಾಪಸ್ ಮಾಡಿದಳು ವಾಸಂತಿ.

ಈ ಪೋಸ್ಟೇ ಕೋಳೀನ ನಾಳೆಯಿಂದ ಕೆಲಸಕ್ಕೆ ಕಳುಹಿಸು ಅತ್ತಿಗೇ" ಎಂದು ಹೇಳಿ ಬಾಲು ಹೊರಟ.

"ಇರು, ಬಂದೆ ಬಾಲು ಎಂದು ಮಗುವನ್ನು ಮಂಚದ ಮೇಲೆ ಮಲಗಿಸಿ ಬಂದು ಬಾಲಚಂದ್ರನಿಗೆ ಚಪಾತಿ–ಪಲ್ಯ, ಕಾಫಿ ಕೊಟ್ಟಳು.

"ಅಲ್ಲಾ ಅತ್ತಿಗೇ ಅವನು ಸಲೀಸಾಗಿ ಒಂದು ಕೆಲಸ ಹಿಡಿದರೆ ಅವನಿಗೆ ಯಾರಾದರೂ ಹೆಣ್ಣು ಕೊಡುತ್ತಾರೆ. ನಾನೇ ಒಂದು ಒಳ್ಳೆ ಮನೆ ಹುಡುಗೀನ ನೋಡಿ ಮದುವೆ ಮಾಡಸ್ತೀನಿ. ಎಷ್ಟು ದಿವಸ ಅಂತ ನೀವು ಅವನ ಸೇವೆ ಮಾಡುತ್ತೀರಿ ?" ಅಂದ ಭಾಲು.

ಬಾಲುವಿನ ಮಾತು ಅವಳ ಮನಸ್ಸಿಗೆ ನಾಟಿತು. "ಹೌದು ಬಾಲು, ಸಧ್ಯ ಅವನಿಗೆ ಒಂದು ಮದುವೆಯಾದರೆ ನಾನು ಗೆದ್ದೆ" ಅಂದಳು.

ಬಾಲು ಹೊರಟುಹೋದ ಮೇಲೆ ವಾಸಂತಿ ರವಿಯನ್ನು ತರಾಟೆಗೆ ತೆಗೆದುಕೊಂಡಳು. "ರವೀ ಇನ್ನು ನೀನು ನನ್ನ ಪ್ರಾಣ ತಿನ್ನಬೇಡ, ಒಂದು ಮದುವೆಯಾಗಿ ನಿನ್ನ ಪಾಡಿಗೆ ನೀನಿರು".

ರವಿ ಗಾಬರಿಯಿಂದ "ಏನತ್ತಿಗೇ ! ನನಗೆ ಮದುವೆಯೇ ? ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ".

"ಸಾಧ್ಯವಾಗುತ್ತದೆ ನೋಡುತ್ತಿರು, ನನ್ನ ತಂಟೆಗೆ ಇನ್ನು ಬರಕೂಡದು."

"ಅದು ಮಾತ್ರ ಸಾಧ್ಯವಿಲ್ಲ ನೀವಿಲ್ಲದೆ ನನ್ನ ಪ್ರಾಣವೇ ನಿಲ್ಲುವುದಿಲ್ಲ" ಎಂದನು.

"ನಿಲ್ಲದಿದ್ದರೆ ಹೋಗಲಿ, ನೀನೂ ಸಾಯಿ, ನಾನೂ ಸಾಯುತ್ತೇನೆ" ಎಂದು ರೋಷದಿಂದ ಹೇಳಿದಳು.

"ಯಾಕೆ ನನ್ನ ಮುದ್ದು ರಾಣಿಗೆ ಇಷ್ಟು ಕೋಪ ?" ಎಂದು ಅವನ ಹತ್ತಿರಕ್ಕೆ ಎಳೆದುಕೊಂಡು ಮುದ್ದಿಸಿದ.

"ನೋಡು ಇದಕ್ಕೇ ರವೀ ನನ್ನ ಸುದ್ದಿಗೆ ಬರಬೇಡ ಅನ್ನುವುದು. ನಿನಗೋ ಕಣ್ಣು ಕಾಣೋಲ್ಲ. ಯಾರಿದಾರೆ ಇಲ್ಲಾ ಅನ್ನೋದೂ ಗೊತ್ತಾಗೊಲ್ಲ, ಯಾವಾಗಲೂ ನನ್ನದೇ ಗೀಳು. ನನ್ನ ಮಾನ ತೆಗೀಬೇಡಾ...." ಎಂದು ಅವನಿಂದ ದೂರ ಬಂದಳು.

ರವಿಯ ಕಾಮ ಪಿಪಾಸೆ ಹೆಚ್ಚುತ್ತಿತ್ತು. ಮನೆಯವರ ಗಮನವಾಗಲೀ, ಅಣ್ಣನ ಇರುವಿಕೆಯಾಗಲೀ, ಅವನಿಗೆ ಅಡ್ಡಿಯೆನಿಸಲಿಲ್ಲ. ಇವನು ಅಪೇಕ್ಷಿಸಿದಾಗ ವಾಸಂತಿ ಅವನ ಬಳಿ ಬಂದುಬಿಡಬೇಕು, ಅನ್ನುವ ಮಟ್ಟಕ್ಕೆ ಬಂದುಬಿಟ್ಟಿದ್ದ.

ಈ ಸಂಕಟ ಗಂಡನಿಗೆ ಎಷ್ಟು ಹೇಳಿದರೂ ಅರ್ಥವಾಗುತ್ತಿರಲಿಲ್ಲ. "ಹೋಗು ವಾಸೀ... ನನಗೇನೂ ಬೇಸರವಿಲ್ಲ" ಅನ್ನುತ್ತಿದ್ದ.

ಇಕ್ಕಳದಲ್ಲಿ ಸಿಕ್ಕ ಇಲಿಯಂತೆ ವಾಸಂತಿ ವಿಲ-ವಿಲನೆ ಒದ್ದಾಡುವಳು. ಮನೆಯ ಹಿರಿಯರಿಗೆ ತಿಳಿದರೆ ತನ್ನ ಮರ್ಯಾದೆ ಎಲ್ಲಿ ಉಳಿಯುತ್ತೆ ? ಎಂದು.

ಇವಳು ಇಂಥಾ ಪೇಚಿನಲ್ಲಿ ಸಿಕ್ಕಿ ತವಕಿಸುತ್ತಿರುವಾಗಲೇ ಮತ್ತೆ ತನಗೆ ಗರ್ಭ ನಿಂತಿದೆ ಎಂದು ತಿಳಿಯಿತು. ಮಗುವಿಗೆ ಇನ್ನೂ ಒಂದು ವರ್ಷವಿಲ್ಲ, ಮತ್ತೆ ಈ ಕರ್ಮ.... ಏನು ಮಾಡುವುದು ? ಎಂದು ಭಯಪಟ್ಟು ವಾಸಂತಿ ಕಂಗಾಲಾದಾಗಲೇ ಮನೆಯವರೆಲ್ಲರೂ ಪ್ರಸಾದನ ಹುಟ್ಟುಹಬ್ಬದ ಸಂಭ್ರಮದಲ್ಲಿ ತೊಡಗಿದ್ದರು.

ಭಾಗೀರಥಮ್ಮನವರು ಮೊಮ್ಮಗನ ಹುಟ್ಟಿದ ಹಬ್ಬಕ್ಕೆ ನೆಂಟರಿಷ್ಟರಿಗೆಲ್ಲಾ ಆಹ್ವಾನ ಕೊಟ್ಟಿದ್ದರು. ಪ್ರಸಾದ ಪುಟ್ಟ ಹೆಜ್ಜೆಯಿಡುತ್ತಾ ಮನೆಯೆಲ್ಲಾ ಓಡಾಡುತ್ತಿದ್ದ. ಅವನ ಮುದ್ದು ಮಾತು ಎಲ್ಲರನ್ನೂ ಆಕರ್ಷಿಸುತ್ತಿತ್ತು. ವಾಸಂತಿಯ ತಾಯಿ ಮನೆಯವರು ಒಂದೆಳೆ ಚಿನ್ನದ ಸರವನ್ನು ಮಗುವಿಗೆ ಮಾಡಿಸಿಕೊಟ್ಟರು.

ಹುಟ್ಟಿದ ಹಬ್ಬಕ್ಕೆ ದೇವಿಕಾ-ಶೇಖರರೂ ಬಂದಿದ್ದರು. ದೇವಿಕಾಗೆ ಸಂತೋಷವೋ ಸಂತೋಷ. ವಾಸಂತಿಗೆ ಎಷ್ಟು ಉಪಚಾರ ಮಾಡಿದರೂ ಸಾಲದು. "ಅಕ್ಕಾ ನಿಮ್ಮ ಪುಣ್ಯದ ಫಲ, ನನ್ನ ಸಂಸಾರ ನಿಲ್ಲಿಸಿದಿರಿ. ನಿಮಗೆ ದೇವರು ಮುತ್ತಿನಂಥಾ ಮಗು ಕೊಟ್ಟ. ನೋಡ್ತಿ, ಥೇಟ್ ಚಿಕ್ಕಪ್ಪನನ್ನೇ ಹೋಲುತ್ತಾನೆ, ತುಂಟ" ಎಂದಳು.

"ಏನು ಫಲವೋ.... ಏನು ಸಂತೋಷವೋ ದೇವಿಕಾ ! ನನಗಂತೂ ಸಾಕಾಗಿದೆ. ಮಗೂಗೆ ಇನ್ನೂ ವರ್ಷವಿಲ್ಲಾ, ನನಗೆ ಮೂರು ತಿಂಗಳು ದೇವಿಕಾ, ನನ್ನ ಕರ್ಮ ಏನು ಮಾಡಲಿ ಹೇಳು",

"ಅಕ್ಕಾ.... ಸಧ್ಯ ತುಂಬ ಸಂತೋಷ, ಮಕ್ಕಳಿಗಾಗಿ ಬಾಯಿ ಬಿಡುತ್ತಿದ್ದಿರಿ. ದೇವರು ಕೊಟ್ಟಾಗ ಏಕೆ ಬೇಸರ ? ಮೂರು ಮಕ್ಕಳಾಗಲಿ, ಆಮೇಲೆ ಏನಾದರೂ ಮಾಡಿಸಿಕೊಂಡರಾಯಿತು" ಎಂದಳು ದೇವಿಕಾ.

"ಸಾಕು ದೇವಿಕಾ, ನನಗೆ ಒಂದೇ ಮಗುವಿಗೇ ಸಾಕಾಯಿತು. ನಿನ್ನಷ್ಟು ನೆಮ್ಮದಿ ನನಗಿಲ್ಲ ದೇವಿಕಾ" ಎಂದು ನಿರಾಸೆಯ ಧ್ವನಿಯಲ್ಲಿ ಹೇಳಿದಳು.

ಇಷ್ಟು ಎಲ್ಲರೂ ಓಲೈಸುತ್ತಿರುವಾಗ ವಾಸಂತಿಗೇಕೆ ವ್ಯಥೆ ಎಂದು ಯೋಚಿಸಿದಳು ದೇವಿಕಾ.

ಪ್ರಸಾದ್‌ನ ಹುಟ್ಟುಹಬ್ಬ ಸಂಭ್ರಮವಾಗಿ ನಡೆಯಿತು. ನಾಗರಾಜ ಬ್ಯಾಂಕಿನವರನ್ನೆಲ್ಲಾ ಕರೆದು ಟಿಫಿನ್, ಕಾಫಿ ಕೊಟ್ಟ. ಮಗುವನ್ನು ನೋಡಿ ಎಲ್ಲರೂ ನಾಗರಾಜನ ಅದೃಷ್ಟವನ್ನು ಕೊಂಡಾಡುವವರೇ, ನಾಗರಾಜ ಮಾತ್ರ ನಿರ್ಲಿಪ್ತನಂತೆ ಇದ್ದ.

ದಿನ ಒಂದರ ಮೇಲೊಂದು ಹೇಗೋ ಕಳೆದುಹೋಯಿತು.ಬಂದ ನೆಂಟರನ್ನೆಲ್ಲಾ

ಕಳುಹಿಸಿ, ಸ್ವಲ್ಪ ಬಿಡುವಾಗಲಿ ಗಂಡನಿಗೆ ಹೇಳಿ ಈ ಗರ್ಭವನ್ನು ತೆಗೆಸಿಬಿಡಬೇಕು ಎಂದು ಯೋಚಿಸುತ್ತಿರುವಾಗಲೇ ಅವಳಿಗೆ ಮೂರು ತಿಂಗಳು ತುಂಬಿಯೇ ಹೋಯಿತು. ಅತ್ತೆಗೆ ಸಹ ತಿಳಿದು ಅವರ ಸಂತೋಷಕ್ಕೆ ಪಾರವೇ ಇಲ್ಲ.

ಮತ್ತೆ ವಾಸಂತಿಗೆ ಉಪಚಾರ ಶುರು. ನೋಡಮ್ಮಾ ವಾಸಂತೀ ದೇವರ ಕೃಪೆ ನಮ್ಮ ಮೇಲಾಗಿದೆ. ಇಷ್ಟು ದಿವಸ ಇಲ್ಲದ್ದಕ್ಕೆ ಈಗ ದೇವರು ಬೇಗ ಬೇಗ ಕೊಟ್ಟ ಎಂದರು ಭಾಗೀರಥಮ್ಮ.

ಎಂತಹ ಸ್ವಾರ್ಥಿಗಳು.... ನನ್ನ ಜೀವ ಹೇಗಾದರೂ ಹಾಳಾಗಲಿ. ಇವರಿಗೆ ಮಕ್ಕಳನ್ನು ಹೆತ್ತು ಕೊಡುತ್ತಿದ್ದರೆ ಸರಿ.... ಎಂದು ಕೋಪದಿಂದ "ಅತ್ತೇ ; ನನಗೆ ಇಷ್ಟು ಬೇಗ ಮತ್ತೆ ಆಗುವ್ರದು ಇಷ್ಟವಿಲ್ಲ, ಈ ಸಲ ಗರ್ಭಪಾತ ಮಾಡಿಸಿಬಿಡೋಣ" ಎಂದಳು

ಭಾಗೀರಥಮ್ಮ ಬೆಚ್ಚಿದವರಂತೆ ಏನೂ ? ಏನಂದೆ ವಾಸಂತೀ ? ಗರ್ಭಪಾತ ? ಅಯ್ಯೋ ಅಯ್ಯೋ.... ಅಂಥಾ ಕೆಟ್ಟ ಆಲೋಚನೆ ಎಂದೂ ಮಾಡಬೇಡಮ್ಮಾ.... ಈಗ ನಿನಗೇನು ಕಷ್ಟವಾಗಿದೆ ? ಪ್ರಸಾದ್ ಏನೂ ತೊಂದರೆ ಕೊಡುವ್ರದಿಲ್ಲ, ನಾನಿದ್ದೀನಿ ನೋಡ್ಕೊಳ್ಳೋಕೆ ಎಂದರು.

ವಾಸಂತಿಗೆ ಪಕ್ಕದ ಮನೆಯ ಪದ್ಮಾಳ ಸ್ಥಿತಿಯೇ ಜ್ಞಾಪಕ ಬಂದಿತು. ಮನೆಯ ತುಂಬಾ ಮಕ್ಕಳಾಗಬೇಕೆಂಬ ಅತ್ತೆಯ ದುರಾಸೆಗೆ ಪದ್ಮಾ ಬಲಿಯಾಗಿದ್ದಳು. ಈಗ ಆ ತಬ್ಬಲಿ ಮಕ್ಕಳ ಸ್ಥಿತಿ ಕಣ್ಣಿಂದ ನೋಡುವುದಕ್ಕಾಗುವುದಿಲ್ಲ. ಅವರಿಗೇನು ಹಣದ ಕೊಬ್ಬು, ಅವಳು ಸತ್ತ ವರ್ಷದೊಳಗಾಗಿ ಇನ್ನೊಂದು ಹೆಣ್ಣನ್ನು ಮದುವೆಯಾದ ಆ ಮಹಾರಾಯ. ಈಗ ಬಂದಿರುವವಳು ಸರಿಯಾದ ಘಾಟಿ, ಅತ್ತೆಯನ್ನು ಮೂಲೆಗೆ ಕೂರಿಸಿ ಮಕ್ಕಳನ್ನು ಚಚ್ಚಿ ಬಡಿದು ತನ್ನ ಆಡಳಿತವೇ ಮನೆಯಲ್ಲಿ ನಡೆಯುವಂತೆ ಮಾಡಿಕೊಂಡಳು. ಪದ್ಮಾನ ನೆನೆಸಿಕೊಂಡು ನಾನು ಎಷ್ಟು ದಿನ ಕಣ್ಣೀರಿಟ್ಟಿಲ್ಲ. ನನಗೂ ಏಕೋ ಅದೇ ಸ್ಥಿತಿಯೇ ಬರುತ್ತೋ ಏನೋ ? ಎಂದು ಚಿಂತಿಸಿದಳು ವಾಸಂತಿ.

ರಾತ್ರಿ ನಾಗರಾಜನ ಬಳಿ ಗೋಳಾಡಿದಳು ವಾಸಂತಿ. ನೋಡಿ ನೀವು ಮಾಡಿದ ಸಲಹೆ ನನಗೆ ಉರುಲಾಯಿತು ಅವನು ಇತ್ತೀಚೆಗೆ ಕಾಮ ಪಿಶಾಚಿಯಾಗುತ್ತಿದ್ದಾನೆ. ಅವನನ್ನು ಸುಧಾರಿಸುವುದು ನನಗೆ ತುಂಬಾ ಕಷ್ಟವಾಗಿದೆ, ಈಗ ನನಗೆ ಮತ್ತೆ ಮೂರು ತಿಂಗಳು. ಈಗಲೇ ಗರ್ಭಪಾತ ಮಾಡಿಸಿಬಿಡಿ. ಸಾಕು ಸಧ್ಯ ಮಕ್ಕಳ ಹಂಬಲ, ಎಂದು ಅತ್ತಳು.

ವಾಸಂತಿಯನ್ನು ಹೇಗೆ ಸಮಾಧಾನಪಡಿಸುವುದೆಂದೇ ನಾಗರಾಜನಿಗೆ ಅರ್ಥವಾಗ ಲಿಲ್ಲ. "ವಾಸಂತಿ ಇಷ್ಟೇಕೆ ಬೇಜಾರು ಈ ಸಲ ಸುಮ್ಮನಿರು, ಮೈ ಕೆಡಿಸಿಕೊಳ್ಳಬೇಡ. ನಿನ್ನ ಆರೋಗ್ಯ ಚೆನ್ನಾಗಿ ನೋಡಿಕೋ" ಎಂದು ಸಮಾಧಾನಪಡಿಸಿದ.

ವಾಸಂತಿ ಗಂಡನ ಎದೆಯಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತಳು. ಮೌನ ವಾಗಿ ಅವಳ ತಲೆ ನೇವರಿಸಿದ ನಾಗರಾಜ. ವಾಸಂತಿಗೆ ದಿನ ತುಂಬಿತು. ಈ ಸಲ ಅವಳ ತೌರಿನಲ್ಲಿಯೂ ಏನೇನೊ ಕಷ್ಟ. ವಾಸಂತಿಯ ತಂದೆ ತೀರಿಕೊಂಡರು. ಮನೆ ಯಲ್ಲಿ ಮಗ ಸೊಸೆಯರ ಆಡಳಿತ. ಎಂದಾದರೂ ಅಪರೂಪವಾಗಿ ಅಮ್ಮನನ್ನು ನೋಡಿ ಕೊಂಡು ಬರಲು ವಾಸಂತಿ ತೌರುಮನೆಗೆ ಹೋಗಿ ಬರುತ್ತಿದ್ದಳು.

ತಾಯಿಗೆ ಇರುವ ಸಂಕಟದಲ್ಲಿ ತನ್ನದೂ ಏಕೆ ಅವರಿಗೆ ಚಿಂತೆ ಎಂದು ತನ್ನ ಬೇಸರವನ್ನು ಹೇಳಿಕೊಳ್ಳದೆ ಸುಮ್ಮನೆ ಬರುತ್ತಿದ್ದಳು.

ವಾಸಂತಿಗೆ ಈ ಸಲವೂ ಗಂಡು ಮಗುವೇ ಆಯಿತು. ಭಾಗೀರಥಮ್ಮನವರೇ ಅಕ್ಕರೆಯಿಂದ ಬಾಣಂತನ ಮಾಡಿದರು. ರವಿಯೂ ಅಮ್ಮನಿಗೆ ಸಹಾಯಕನಾಗಿ ತನ್ನ ಕೈಲಾದ ಕೆಲಸಗಳನ್ನು ಮಾಡಿಕೊಡುತ್ತಿದ್ದ. ನೆಪ್ಪಿನಿಂದ ಮನೆಯಲ್ಲಾ ಓಡಾಡುತ್ತಿದ್ದ.

ಈ ಸಳವೂ ಮಗುವಿಗೆ ನಾಮಕರಣ ಶಾಸ್ತ್ರವಿಲ್ಲದೆ ತೊಟ್ಟಿಲಿಟ್ಟು ಶಾಸ್ತ್ರಮಾಡಿ "ಶಿವಪ್ರಕಾಶ" ಎಂದು ಹೆಸರಿಟ್ಟರು. ಪ್ರಸಾದ ಪ್ರಕಾಶ, ಅಂತ ಚಿಕ್ಕದಾಗಿ ಕೂಗಲು ತುಂಬಾ ಚೆನ್ನಾಗಿದೆ ಮಕ್ಕಳ ಹೆಸರು ಎಂದು ಎಲ್ಲರೂ ಕೊಂಡಾಡಿದರು.

ಪ್ರಸಾದನಿಗಿಂತ ಇನ್ನೂ ಪುಷ್ಟಿಯಾಗಿ ಇನ್ನೂ ಮುದ್ದಾಗಿದ್ದ ಪ್ರಕಾಶ. ಅತ್ತೆಯ ಕೈಯಲ್ಲಿ ಹೆಚ್ಚು ಕೆಲಸ ಆಗುವುದಿಲ್ಲವೆಂದು ವಾಸಂತಿ ಮೂರು ತಿಂಗಳಿಗೆಲ್ಲಾ ಮನೆಗೆಲಸ ಮಾಡಲು ಶುರು ಮಾಡಿಬಿಟ್ಟಳು.

ಪ್ರಸಾದ ಅಮ್ಮಾ.... ಅಮ್ಮಾ.... ಎಂದು ಹಿಂದೆ ಮುಂದೆ ಓಡಾಡಲು ಶುರು ಮಾಡಿದ್ದ. ಪ್ರಕಾಶ ಅಂಬೆಗಾಲಿಡಲು ತೊಡಗಿದ್ದ. ರವಿ ಮಕ್ಕಳನ್ನು ಎತ್ತಿ ಸುಧಾ ರಿಸುತ್ತಿದ್ದ.

ಮನೆಯಲ್ಲಿ ಇಂಥಾ ಮುದ್ದು ಮಕ್ಕಳಿದ್ದರೂ ನಾಗರಾಜನ ಮನಸ್ಸು ಮಾತ್ರ ನೆಮ್ಮದಿಯಾಗಿರಲಿಲ್ಲ, ಹಗಲೆಲ್ಲಾ ದುಡಿದು ರಾತ್ರಿ ನೆಮ್ಮದಿಯಿಲ್ಲದೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ.

ವಾಸಂತಿಗಾದರೂ ನೆಮ್ಮದಿಯೆಲ್ಲಿ ಬಂತು. ತನ್ನ ಪತಿಯ ಈ ಧರ್ಮ ಸಂಕಟ ವನ್ನು ನೋಡಿ ಕೊರಗುವಳು. ಮನೆಯ ಪರಿಸ್ಥಿತಿ ಹೀಗಿರುವಾಗಲೇ ನಾಗರಾಜನಿಗೆ ಬಳ್ಳಾರಿಗೆ ವರ್ಗವಾಯಿತು. ಮನೆಯವರಿಗೆಲ್ಲರಿಗೂ ಯೋಚನೆಗಿಟ್ಟುಕೊಂಡಿತು. ವರ್ಗದ ತಡೆಗೆ ಎಷ್ಟೋ ಪ್ರಯತ್ನ ಪಟ್ಟರೂ ಆಗಲಿಲ್ಲ, ನಾಗರಾಜ ಹೋಗಲೇಬೇಕಾಯಿತು,

ಭಾಗೀರಥಮ್ಮನವರು ಏನೋ ನಾಗರಾಜ ಈ ವಯಸ್ಸಾದ ಕಾಲದಲ್ಲಿ ನೀನೂ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೊರಟು ಹೋದರೆ ನಾವು ಈ ಮನೇಲಿ ಹೇಗೆ ಇರೋದಪ್ಪಾ ? ಎಂದು ಅತ್ತೇಬಿಟ್ಟರು.

ಇಲ್ಲಪ್ಪಾ ; ಎಲ್ಲರೂ ಇಲ್ಲಿಯೇ ಇರಲಿ. ನಾನು ಮಾತ್ರ ಹೋಗಿ ಅಲ್ಲಿ ಒಂದು ರೂಮು ಮಾಡಿಕೊಂಡಿರುತ್ತೇನೆ. ಆಗಾಗ ಬರುತ್ತೇನೆ ಎಂದ.

ಹೌದು ಕಣೋ .. ಆ ಮಕ್ಕಳನ್ನು ನಾನು ಬಿಟ್ಟಿರಲಾರೆ. ಅದೂ ವಾಸಂತಿ ಇಲ್ಲದಿದ್ದರೆ ರವಿಯನ್ನು ಯಾರು ನೋಡಿಕೊಳ್ಳುತ್ತಾರೆ ? ಎಂದರು.

ಈ ಮಾತು ಕೇಳಿಸಿಕೊಂಡ ವಾಸಂತಿಗೆ ವಿಪರೀತ ಕೋಪ ಬಂದಿತು. ''ರವಿಗೆ ನಾನೇ ಹೊಣೆಯೇ ? ಒಂದು ಹೆಣ್ಣು ನೋಡಿ ಮದುವೆ ಮಾಡಿ, ಅಲ್ಲಿ ಅವರೊಬ್ಬರೇ ಊಟ–ತಿಂಡಿಗೆ ಕಷ್ಟ ಪಡುವಾಗ ನಾನಿಲ್ಲಿ ಹೇಗೆ ಸುಮ್ಮನಿರಲಿ?'' ಎಂದಳು.

ರವಿ ರೂಮಿನಿಂದ ಹೊರಗೆ ಬಂದು ''ಅತ್ತಿಗೇ !... ನೀವಿದ್ದ ಕಡೆ ನಾನು, ನೀವು ಹೋದರೆ ನಿಮ್ಮ ಜೊತೆಯಲ್ಲಿ ನಾನೂ ಬರುತ್ತೇನೆ'' ಎಂದು ಹಠಮಾರಿಯಂತೆ ಹೇಳಿದ.

''ಇನ್ನೇನು ನೀನು ನನ್ನ ಬೆನ್ನಿಗೆ ಕಟ್ಟಿದ ಭೇತಾಳವಾಗಿದ್ದೀ''.

''ಅದನ್ನು ನೀವೇ ಮಾಡಿಕೊಂಡದ್ದು''.

''ಸಾಕು ಮುಚ್ಚು ಬಾಯಿ ರವೀ ...'' ಎಂದು ಗದರಿದಳು.

''ವಾಸಂತಿ ನಿನಗೆ ಮಕ್ಕಳಾದ ಮೇಲೆ ಅಹಂಕಾರ ಬಂದುಬಿಟ್ಟಿದೆ. ಅಷ್ಟು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ರವಿಯನ್ನು ಹೀಗೇಕೆ ದ್ವೇಷಿಸುತ್ತೀ ? ಅವನು ನಿನ್ನ ಮಕ್ಕಳನ್ನು ಎಷ್ಟು ಪ್ರೀತಿಸುತ್ತಾನೆ ? ನೀನೇಕೆ ಹೀಗಾದೆಯೋ ? ಕಣ್ಣಿಲ್ಲದ ಆ ಮಗನನ್ನು ನಾನೆಲ್ಲಿ ತಳ್ಳಲಿ ?'' ಎಂದು ಗಳ–ಗಳನೆ ಅತ್ತೇ ಬಿಟ್ಟರು.

ಈ ಹಗರಣ ನಾಗರಾಜನಿಗೂ ಕೇಳಿಸಿತು. ''ಅಮ್ಮಾ ಸುಮ್ಮನೆ ಯಾಕೆ ಕೂಗಾಡುತ್ತೀರಿ ? ವಾಸಂತಿ ಇಲ್ಲೇ ಇರುತ್ತಾಳೆ ಸುಮ್ಮನಿರು'' ಎಂದು ಹೇಳಿ ಮೇಲೆ ತನ್ನ ರೂಮಿಗೆ ಹೋದ.

ವಾಸಂತಿಗೆ ತುಂಬಾ ದುಃಖವಾಯಿತು. ಅಳುತ್ತಲೇ ನಾಗರಾಜನ ಬಳಿಗೆ ಹೋದಳು. ''ಏನ್ರೀ ! ಈ ನರಕ ಕೂಪದಲ್ಲಿ ನನ್ನನ್ನು ತಳ್ಳಿ ನೀವು ಇಲ್ಲಿಂದ ಜಾರಿಕೊಳ್ಳುತ್ತಿದ್ದೀರಾ ? ನಿಮ್ಮ ಜೊತೆಯಲ್ಲಿ ನನ್ನನ್ನೂ ಕರೆದುಕೊಂಡು ಹೋಗಿ''.

''ವಾಸಂತೀ ಅದು ಸಾಧ್ಯವಿಲ್ಲ, ನೀನು ಇಲ್ಲಿಯೇ ಇದ್ದು ರವಿಯನ್ನೂ ರವಿಯ ಮಕ್ಕಳನ್ನೂ ನೋಡಿಕೊಳ್ಳುವುದೇ ನಿನ್ನ ಧರ್ಮ, ನನ್ನ ಮನಸ್ಸು ಎಂದೂ ಇದರಿಂದ ವಿಚಲಿತವಾಗುವುದಿಲ್ಲ''.

ನಿಮ್ಮ ಧರ್ಮ ತತ್ವ ಬೆಂಕಿಗೆ ಬೀಳಲಿ, ಇದು ನಿಮ್ಮ ಸ್ವಾರ್ಥ. ನೀವೇಕೆ ಮದುವೆಯಾದಿರಿ ? ಹೆಂಡತಿಯನ್ನು ಸಾಕಲಾರದ ಮೇಲೆ ನೀವೆಂತಹ ಹೇಡಿ ?

''ಹೌದು ವಾಸೀ ನಾನು ಹೇಡಿಯಾದುದಕ್ಕೇ ಇನ್ನೊಬ್ಬನಿಗೆ ಹೆಂಡತಿಯನ್ನು ಬಿಟ್ಟುಕೊಟ್ಟೆ. ಆದರೆ ಸಾಕಲಾರದೆ ಅಲ್ಲಾ, ಪ್ರತಿ ತಿಂಗಳೂ ಹಣ ಕಳುಹಿಸುತ್ತೇನೆ. ನಿನಗೆ ಬೇಕಾದ್ದಕ್ಕೆ ಉಪಯೋಗಿಸಿಕೋ''.

''ಇಲ್ಲ.... ಇಲ್ಲ ನೀವು ಇಷ್ಟು ಕಠಿಣವಾಗಿರಲಿಲ್ಲ. ನನಗೆ ಹಣ ಏಕೆ ಬೇಕು ? ಅವನ ಮಕ್ಕಳನ್ನು ಸಾಕುವ ಹೊಣೆ ಅವನಿಗಿರಬೇಕು. ನನಗೆ ನೆಮ್ಮದಿ ಬೇಕು. ಹೆಣ್ಣು ಯಾವಾಗಲೂ ಒಬ್ಬನಿಗೆ ಮಾತ್ರ ಮನಸ್ಸು ಕೊಡಲು ಸಾಧ್ಯ. ನಿಮ್ಮ ಬಲವಂತಕ್ಕೆ ನಾನು ಅವನಿಗೆ ದೇಹ ಒಪ್ಪಿಸಿದರೂ ನನ್ನ ಹೃದಯದಲ್ಲಿ ನಿಮಗೇ ಸ್ಥಾನ.

''ವಾಸೀ ಸತ್ಯವಾಗಿ ನಿನ್ನ ಮೇಲಿನ ಪ್ರೀತಿ ಕಿಂಚಿತ್ತೂ ಕಮ್ಮಿಯಾಗಿಲ್ಲ. ಆದರೆ ನಾನು ಮಾತ್ರ ನೆಮ್ಮದಿಯಾಗಿರುವೆನೇ : ನನ್ನದೊಂದು ಧರ್ಮ ಸಂಕಟ ವಾಸೀ .. ಸಂತಾನಪ್ರಾಪ್ತಿಗಾಗಿ ನಿನ್ನನ್ನು ತ್ಯಾಗ ಮಾಡಿದ ಮೇಲೆ ಮತ್ತೆ ನಾನು ಸ್ವೀಕರಿಸಲಾರೆ''

ನಾಗರಾಜನ ಮಾತುಗಳು ವಾಸಂತಿಯ ತಲೆಯಲ್ಲಿ ಅಲೆಗಳು ಬಂದು ಅಪ್ಪಳಿಸಿ ಹೋದಂತೆ ಆದುವು. ಸ್ವಲ್ಪ ಹೊತ್ತು ಸ್ತಬ್ಧವಾಗಿ ಕುಳಿತಿದ್ದಳು. ನಂತರ ನಿರಾಶೆಯ ಸ್ವರದಲ್ಲಿ ''ಸರಿ ಬಿಡಿ, ನೀವು ನನ್ನನ್ನು ನಿರಾಕರಿಸಿದರೆ ನಾನು ಖಂಡಿತಾ ಬದುಕಲಾರೆ. ಈ ವ್ಯಭಿಚಾರದಿಂದ ನನ್ನ ಮನಸ್ಸು ಚಿತ್ರಹಿಂಸೆ ಪಡುತ್ತಿದೆ'' ಎಂದು ಅತ್ತಳು.

''ಬೇಡ ವಾಸೀ ನೀನು ಇಷ್ಟು ದುಃಖಪಡಬೇಡ, ನಾನು ಹೋಗಿ ನೋಡಿ ಕರೆಸಿಕೊಳ್ಳುತ್ತೇನೆ ಸುಮ್ಮನಿರು'' ಎಂದ. ಅಲ್ಲಿಗೆ ವಾಸಂತಿಗೆ ಸ್ವಲ್ಪ ನೆಮ್ಮದಿಯಾಯಿತು.

ನಾಗರಾಜ ಸ್ವಲ್ಪ ಮಾತ್ರ ಮುಖ್ಯವಾದ ಸಾಮಾನನ್ನು ತೆಗೆದುಕೊಂಡು ಬಳ್ಳಾರಿಗೆ ಹೊರಟು ಹೋದ.

ವಾಸಂತಿಯ ದುಃಖ ಹೇಳತೀರದು. ಯಾವ ಮನೆಯು ಸ್ವರ್ಗಮಯವಾಗಿತ್ತೋ? ಯಾವ ಮನೆಯಲ್ಲಿ ಪತಿಯ ಪ್ರೇಮದ ಪನ್ನೀರಿನಲ್ಲಿ ಮಿಂದಿದ್ದಳೋ? ಯಾವ ಮನೆಯೇ ಮಂದಿರವಾಗಿ ದೈವಭಕ್ತಿಯ ಸಾಮ್ರಾಜ್ಯದಲ್ಲಿ ನಾನು ಸಾಮ್ರಾಜ್ಞಿಯಾಗಿ ಮೆರೆದೆನೋ, ಎಲ್ಲರ ಗೌರವಕ್ಕೂ ಪಾತ್ರಳಾಗಿ ಸ್ವಚ್ಛಜೀವನ ನಡೆಸಿದೆನೋ. ಅಂತಹವಳಿಗೆ ಇಂದು ಮನಸ್ಸು ಮುಳ್ಳಾಗಿ ಚುಚ್ಚುತ್ತಿದೆ. ಮಕ್ಕಳಿಲ್ಲವೆಂಬ ಚಿಂತೆಯನ್ನು ಬಿಟ್ಟರೆ ನಾನು ಪರಮ ಸುಖಿಯಾಗಿದ್ದೆ. ಯಾವ ಮಕ್ಕಳಿಗಾಗಿ ಹಂಬಲಿಸುತ್ತಿದ್ದೆನೊ ಅಂತಹ ಮುದ್ದು ಮಕ್ಕಳು ಕೈಯ್ಯಲ್ಲಿದ್ದರೂ ನಾನು ಪ್ರೀತಿಸಲಾರದವಳಾಗಿದ್ದೇನೆ. ರವಿಯಲ್ಲಿ ಇಟ್ಟಿದ್ದ ಪ್ರೀತಿ ವಾತ್ಸಲ್ಯಕ್ಕೆ ಬದಲಾಗಿ ದ್ವೇಷಾಗ್ನಿ ಹೊಗೆಯಾಡುತ್ತಿದೆ. ಅವನ ಮಕ್ಕಳೆಂಬ ಕಾರಣಕ್ಕಾಗಿ ಆ ಮಕ್ಕಳೂ ಬೇಡವಾಗಿವೆ. ರವಿಯ ಕಾಮಾಗ್ನಿಯಲ್ಲಿ ಬೆಂದು ಹೋಗುತ್ತಿದ್ದೇನೆ. ಅವನದಾದರೂ ಏನು ತಪ್ಪು ? ನಾನೇ ಅವನನ್ನು ತಪ್ಪುದಾರಿಗೆ ಎಳೆದೆ. ನಾನಾದರೂ ಎಲ್ಲಿ ತಪ್ಪುದಾರಿಗೆ ಎಳೆದೆ ? ಅವರ ಒತ್ತಾಯ ನನ್ನನ್ನು ತಪ್ಪುದಾರಿಗೆ ತಳ್ಳಿತು. ಅವರಾದರೂ ಏನು ಮಾಡುತ್ತಾರೆ ? ವೈದ್ಯರ ಬೇಜವಾಬ್ದಾರಿಯಿಂದ ಅವರಿಗಾದ ಅನ್ಯಾಯ ಒಂದು ಕುಟುಂಬವನ್ನೇ ಮುಳುಗಿಸುವ

ಮಟ್ಟಕ್ಕೆ ಬಂದಿದೆ. ಅಯ್ಯೋ ! ದೇವರೇ !.... ಯಾವ ಹೆಣ್ಣಿಗೂ ಇಂತಹ ಸಂಕಟ ಬೇಡಪ್ಪಾ" ಎಂದು ಯಾವಾಗಲೂ ಚಿಂತಿಸುತ್ತಾ ದಿನ ಕಳೆಯುತ್ತಿದ್ದಳು.

ನಾಗರಾಜ ಹೊರಟು ಹೋದ ಮೇಲೆ ವಾಸಂತಿ ಕೊರಗಿ ಕೃಶಳಾದಳು. ನಾಗರಾಜ ಆಗಾಗ ಕಾಗದ ಬರೆಯುತ್ತಿದ್ದ. ಪ್ರತಿ ಕಾಗದದಲ್ಲಿಯೂ ಇಲ್ಲಿ ಇನ್ನೂ ಸರಿಯಾಗಿ ಮನೆ ಸಿಕ್ಕಿಲ್ಲ, ಸಿಕ್ಕಿದ ಮೇಲೆ ತಿಳಿಸುತ್ತೇನೆ ಎಂದು ಬರಯುತ್ತಿದ್ದ.

ಮನೆಯ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ಪರಮಶಿವಯ್ಯನವರು ಹೆಚ್ಚು ಓಡಾಡಲಾರದೇ ಹಾಸಿಗೆ ಹಿಡಿದರು. ಭಾಗೀರಥಮ್ಮನವರೂ ವಯಸ್ಸಾದ ಕಾರಣ ಕುಳಿತಲ್ಲಿಯೇ ಕುಳಿತು ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ರವಿಗಂತೂ ಇದ್ದಲ್ಲಿಗೆ ಎಲ್ಲಾ ನಡೆಯಬೇಕು. ಈ ನಡುವೆ ಅತ್ತಿಗೆಯ ಮೇಲೆ ಜೋರುಮಾಡಿ ಮಾಡಿಸಿಕೊಳ್ಳುತ್ತಿದ್ದ. ಇವರೆಲ್ಲರ ಉಪಚಾರ ಮಾಡುವ ವೇಳೆಗೆ ವಾಸಂತಿಗೆ ಸಾಕು—ಸಾಕಾಗುತ್ತಿತ್ತು.

ಬಾಲು ಯಾವಾಗಲಾದರೂ ಒಂದೊಂದು ದಿನ ಮನೆಗೆ ಬರುತ್ತಿದ್ದ. ಮನೆಯ ಪರಿಸ್ಥಿತಿಯನ್ನು ನೋಡಿ ಅವನಿಗೇ ವ್ಯಸನವಾಯಿತು. "ಇದೇನು ಅತ್ತಿಗೇ ನಿಮ್ಮ ದುಡಿತಕ್ಕೆ ಕೊನೆ ಮೊದಲೇ ಇಲ್ಲವೇ ?" ಅಂದ.

"ಬಾಲೂ ನನಗೆ ಜೀವನವೇ ಬೇಸರವಾಗಿ ಬಿಟ್ಟಿದೆ. ಏನು ಮಾಡಲಿ ?" ಎಂದಳು.

"ನೋಡಿ ಅತ್ತಿಗೇ, ನಾನು ಅದೇ ಒಂದು ವಿಷಯ ತಿಳಿಸೋಣ ಅಂತ ಬಂದೆ. ನಮ್ಮ ವರ್ಕ್‌ಶಾಪಿಗೆ ಸುರೇಂದ್ರ ಅಂತ ಒಬ್ಬ ಹುಡುಗ ಬರುತ್ತಿದ್ದಾನೆ. ಅವನಿಗೆ ಒಬ್ಬ ತಂಗಿ ಇದ್ದಾಳೆ. ತುಂಬಾ ಬಡವರು. ತಂದೆ ಇಲ್ಲದ ಮಕ್ಕಳು. ಆ ತಂಗಿಗೆ ಒಂದು ವರ ಸಿಕ್ಕಿದರ ಸಾಕು ಅಂತ ಒದ್ದಾಡುತ್ತಿದ್ದಾನೆ.

ವಾಸಂತಿ ಸಂತೋಷದಿಂದ ಹೌದಾ ! ಬಾಲೂ ? ಈ ಕುರುಡನಿಗೆ ನಿಜವಾಗಿಯೂ ಅವರು ಹೆಣ್ಣು ಕೊಡುತ್ತಾರೆಯೇ ? ಬಾಲೂ...."

ರವಿಯನ್ನು ವರ್ಕ್‌ಶಾಪಿನಲ್ಲಿ ಅವನು ನೋಡಿದ್ದಾನೆ ಅತ್ತಿಗೇ. ನನ್ನ ತಂಗಿಗೆ ಇಂಥಾ ವರ ಸಿಕ್ಕಿದರೆ ನಾವು ಅದೃಷ್ಟ ಮಾಡಿದ್ದೆವು ಅನ್ನುತ್ತಾನೆ. ರವಿ ಸರಿಯಾಗಿ ದುಡಿದರೆ ತಾನೇ ಒಂದು ರೇಡಿಯೋ ರಿಪೇರಿ ಶಾಪು ಇಟ್ಟುಕೊಳ್ಳಬಹುದು. ಅವನಿಗೆ ಒಂದು ಮದುವೆ ಮಾಡಿದರೇ ಬುದ್ಧಿ ಬರಬಹುದು ಅತ್ತಿಗೇ".

ಹೌದು ಬಾಲೂ, ನಾನೂ ಅದೇ ಹೇಳೋದು. ಅವನಿಗೊಂದು ಮದುವೆ ಮಾಡಿಬಿಟ್ಟು ಇಲ್ಲಿಂದ ನಾನು ಹೊರಟು ಹೋದರೆ ಸಾಕು".

"ಆಗಲಿ ಅತ್ತಿಗೇ ... ಅವರೊಂದಿಗೆ ನಾನು ಮಾತಾಡಿ ಹೆಣ್ಣನ್ನು ಮನೆಗೆ ಕರೆದುಕೊಂಡು ಬರುವಂತೆ ಹೇಳುತ್ತೇನೆ. ನೀವೇ ಒಂದು ಮಾತು ರವಿಗೆ ಹೇಳಿ ಅವನನ್ನು ಮದುವೆಗೆ ಒಪ್ಪಿಸಿ" ಅಂತ ಹೇಳಿ ಹೊರಟುಹೋದ ಬಾಲು.

ರವಿ ಮನೆಯಲ್ಲಿ ಇರಲಿಲ್ಲ. ಪ್ರಸಾದನ ಕೈ ಹಿಡಿದು ಅಷ್ಟು ದೂರ ವಾಕ್ ಹೋಗಿ ಬರುತ್ತಿದ್ದ ಪ್ರತಿದಿನ. ಪ್ರಸಾದನಿಗೆ ಈಗ ನಾಲ್ಕು ವರ್ಷ. ಮುದ್ದಾಗಿ "ಚಿಕ್ಕಪ್ಪಾ ಹೀಗೆ ಬಾ ಚಿಕ್ಕಪ್ಪಾ ! ಆಟೋ ಬರ್ತಿದೆ. ಇನ್ನೂ ಹತ್ತಿರಕ್ಕೆ ಬಾ ಎಂದು ಮುದ್ದು ಮುದ್ದಾಗಿ ಮಾತಾಡುತ್ತಾ ರವಿಯ ಜೊತೆ-ಜೊತೆಗೆ ಇರುತ್ತಿದ್ದ. "ಅತ್ತಿಗೇ ನೋಡಿ ನನ್ನ ಮಗ ನನ್ನನ್ನು ಎಷ್ಟು ಚೆನ್ನಾಗಿ ವಾಕಿಂಗ್ ಮಾಡಿಸಿ ಬರುತ್ತಾನೆ" ಅಂತ ಹೇಳುತ್ತಲೇ ಬಂದ.

ಮನೆಗೆ ಯಾರೋ ನೆಂಟರು ಬಂದಿದ್ದರು. "ಏನಪ್ಪಾ ! ರವೀ ! ಸಲೀಸಾಗಿ ನಿನ್ನ ಮಗ ಅಂದೇ ಬಿಟ್ಟೆಯಲ್ಲಾ" ಎಂದರು.

ರವಿ ಯಾರಿದ್ದಾರೆ. ಯಾರಿಲ್ಲ ಎಂಬ ವಿವೇಚನೆ ಇಲ್ಲದೇ ಮಾತಾಡಿಬಿಡುತ್ತಿದ್ದ. ಅಲ್ಲಿಯೇ ಇದ್ದ ವಾಸಂತಿ ಕಿಡಿ-ಕಿಡಿಯಾದಳು. ರವಿ ತುಟಿಕಚ್ಚಿ "ಇನ್ನೇನು, ನನ್ನ ಅಣ್ಣನ ಮಗ ನನ್ನ ಮಗನಲ್ಲವೆ ?" ಅಂದು ಕೂಡಲೇ ತಿದ್ದಿಕೊಂಡ.

ಎಷ್ಟೋ ವಿಷಯಗಳಲ್ಲಿ ರವಿಯಿಂದ ಇಂತಹ ಅಪಮಾನಕ್ಕೊಳಗಾಗುವ ಸಂದರ್ಭಗಳು ಬಂದು ವಾಸಂತಿ ನೊಂದುಕೊಳ್ಳುತ್ತಿದ್ದಳು.

ರಾತ್ರಿ ಊಟವಾದ ಮೇಲೆ ವಾಸಂತಿ ರವಿಯನ್ನು ಮಹಡಿ ಮೇಲಕ್ಕೆ ಕರೆದು "ರವೀ.... ಬಾಲು ಬಂದಿದ್ದ. ನಿನಗೆ ಮದುವೆಗೆ ಹೆಣ್ಣು ಗೊತ್ತು ಮಾಡಿದ್ದಾನಂತೆ. ನೀನು ಮದುವೆ ಆಗಲೇಬೇಕು" ಅಂದಳು.

"ಅತ್ತಿಗೇ ಅವನಿಗೆ ಬೇರೆ ಕೆಲಸವಿಲ್ಲವಂತೇನು ? ನನ್ನ ಸುದ್ದಿಗೆ ಬರಬೇಡ ವೆಂದು ಹೇಳಿ".

ರವೀ ಇನ್ನು ನಿನ್ನ ಅವತಾರವೆಲ್ಲಾ ನಡೆಯುವುದಿಲ್ಲ. ಅವರು ಹೆಣ್ಣನ್ನು ಕರೆದುಕೊಂಡು ಬರುತ್ತಾರೆ. ನೀನು ಒಪ್ಪಲೇಬೇಕು".

ನನ್ನನ್ನು ಮದುವೆಯಾದರೆ ಆ ಹೆಣ್ಣು ಕೆರೆಯೋ ಭಾವಿಯೋ ನೋಡಿಕೊಳ್ಳ ಬೇಕಾಗುತ್ತೆ. ಅಷ್ಟೇ. ಈ ಮನೆಯಲ್ಲಿ ಒಂದು ಘಳಿಗೆಯೂ ಇರಗೊಡುವುದಿಲ್ಲ ನಾನು.

ರವೀ... ಒಳ್ಳೆ ರಾಕ್ಷಸನಾಗಿ ಬಿಟ್ಟಿದ್ದೀ ನಿನಗೇನು ಬಂತೋ ? ನನ್ನ ಜೀವ ತಿನ್ನು ತ್ತೀಯಾ ? ಬೇಡ ರವೀ....ನನ್ನ ಮಾತನ್ನು ಒಂದು ಚೂರೂ ಮೀರುತ್ತಿರಲಿಲ್ಲ ಮೊದಲು, ಈಗೇಕೆ ಹೀಗೆ ಮಾಡುತ್ತಿದ್ದೀಯೋ ?

ಅತ್ತಿಗೇ ನಿಮ್ಮ ಮಾತು ಮೀರದಿದ್ದುದೇ ನನ್ನ ಸ್ಥಿತಿ ಹೀಗಾಯಿತು. ನಿಮ್ಮ ಮೇಲಿನ ಪಾಶ ನನ್ನನ್ನು ಬಂಧಿಸಿಬಿಟ್ಟಿದೆ. ಇದರಿಂದ ಬಿಡಿಸಿಕೊಳ್ಳಲಾರದಾಗಿದ್ದೇನೆ.

ರವೀ ಅದು ಖಂಡಿತ ಪ್ರೇಮಪಾಶವಲ್ಲ ಯಮಪಾಶ, ತಿಳಿದುಕೋ, ನಾನು ನಿನ್ನನ್ನು ಪ್ರೀತಿಸುವುದಿಲ್ಲ ದ್ವೇಷಿಸುತ್ತೇನೆ ರವೀ....

ನನಗೆ ಅದು ಎಂದೋ ಚೆನ್ನಾಗಿ ಗೊತ್ತಾಗಿದೆ. ನಿಮ್ಮ ದ್ವೇಷವನ್ನು ಸಹಿಸುವ ಧೈರ್ಯ ನನಗಿದೆ.

''ಥೂ ಪಾಪಿ ನಿನ್ನ ಧೈರ್ಯ ಹಾಳಾಗಲಿ, ಬೇಡ ರವೀ. ಇದು ಇಬ್ಬರಿಗೂ ಒಳ್ಳೆಯದಲ್ಲ".

''ಈ ಬುದ್ಧಿ ನಿಮಗೆ ಮೊದಲೇ ಇರಬೇಕಾಗಿತ್ತು. ನನ್ನಿಂದ ಎರಡು ಮಕ್ಕಳಾದ ಮೇಲೆ ಏನು ಪ್ರಯೋಜನ ?"

''ಇದನ್ನು ನಿಮ್ಮ ಅಣ್ಣನಿಗೆ ಹೇಳು".

''ಈಗ ನನಗೆ ಅಣ್ಣ ಅಲ್ಲ ಬೇಕಾಗಿರುವುದು, ನೀವು. "

''ಅಯ್ಯೋ ! ಮೆಲ್ಲನೆ ಮಾತನಾಡೋ, ಕೆಳಗೆ ಯಾರು ಯಾರೋ ಇದಾರೆ."

''ನಾನು ಯಾರಿಗೂ ಭಯಪಡುವುದಿಲ್ಲ ಅತ್ತಿಗೇ".

ಆಯಿತು ರವೀ....ಇದು ಏನೋ ವಿನಾಶದಲ್ಲಿಯೇ ಮುಕ್ತಾಯಗೊಳ್ಳುವಂತೆ ಕಾಣುತ್ತೆ ದೈವೇಚ್ಛೆ ಹೇಗಾದರೂ ಆಗಲಿ. ಎಂದು ಅತ್ತಳು. ಅಷ್ಟರಲ್ಲಿ ಪ್ರಕಾಶ ಅಮ್ಮಾ.. ಎಂದು ಎದ್ದ. ಮಗುವನ್ನು ಪಕ್ಕದಲ್ಲಿ ಮಲಗಿಸಿಕೊಂಡು ಮಲಗಿದಳು ವಾಸಂತಿ. ರವಿ ಪಕ್ಕದಲ್ಲಿಯೇ ಬಂದು ಕುಳಿತದ್ದನ್ನು ನೋಡಿ ''ಹೋಗು ರವೀ ಕೆಳಗೇ ಯಾರಾದರೂ ಮನೆಗೆ ಬಂದಿರುವಾಗ ಮರ್ಯಾದಿ ಕಳೆಯಬೇಡ" ಅಂದಳು.

''ಹೋಗುತ್ತೇನೆ ಅತ್ತಿಗೇ, ನೀವು ಬೇಗ ನನ್ನನ್ನು ಕಳುಹಿಸಿಕೊಡಿ"

ಹೀಗೆ ರವಿಯು ಮೃದು ಸ್ವಭಾವ ಮಾಯವಾಗಿ ಅವನು ಒಳ್ಳೆ ರೌಡಿಯಂತಾಗಿದ್ದ ಅವನನ್ನು ಸುಧಾರಿಸುವುದು ಮನೆಯಲ್ಲಿ ಯಾರಿಂದಲೂ ಆಗುತ್ತಿರಲಿಲ್ಲ. ಅವನು ಕೋಪದಿಂದ ಕೂಗಾಡಿದರೆ ಕೂಡಲೇ ಭಾಗೀರಥಮ್ಮನವರು '' ನೋಡಮ್ಮ ವಾಸಂತೀ ಅವನಿಗೆ ಏನು ಬೇಕೋ ಕೇಳು" ಅನ್ನುತ್ತಿದ್ದರು.

'' ಸುಂಕದವರ ಕೈಲಿ ಸುಖ ದುಃಖ " ಅನ್ನುವಂತೆ ವಾಸಂತಿ ಇನ್ನು ಯಾರಲ್ಲಿ ಏನು ಹೇಳಿಕೊಂಡಾಳು !

ಆ ದಿನ ರವಿ ವರ್ಕ್‌ಶಾಪಿನಲ್ಲಿ ಕೆಲಸ ಮಾಡುತ್ತಿದ್ದ. ಬಾಲಚಂದ್ರ ಸುರೇಂದ್ರನಿಗೆ ಹೇಳಿದ್ದ. ಈ ದಿನ ನಿನ್ನ ತಂಗಿಯನ್ನು ಇಲ್ಲಿಗೇ ಕರೆದುಕೊಂಡು ಬಾ. ರವಿ ಕುರುಡ ಎಂದು ತಿಳಿಸಿದ್ದೀಯಲ್ಲಾ, ಒಂದು ಸಲ ಅವಳು ಅವನನ್ನು ನೋಡಲಿ

ಅವಳು ಒಪ್ಪಿದರೆ ಮುಂದಿನ ಏರ್ಪಾಡು ಮಾಡೋಣ, ಅವನಂತೂ ಹೆಣ್ಣನ್ನು ನೋಡುವ ಹಾಗಿಲ್ಲ. ' ಅವನ ಅತ್ತಿಗೆ ಒಪ್ಪಿದರೆ ಆಯಿತು. ಅತ್ತಿಗೆ ಹೇಳಿದಂತೆ ಇವನು, ಎಂದು ಹೇಳಿದ.

ಸರಿ ಎಂದು ಸುರೇಂದ್ರ ಮಧ್ಯಾಹ್ನ ಊಟಕ್ಕೆ ಹೋದಾಗ ಅವನ ತಂಗಿ ಉಷಾ ಳನ್ನು ಜೊತೆಯಲ್ಲಿ ಕರೆದುಕೊಂಡು ಬಂದ.

ಈ ಸಂಗತಿ ರವಿಗೆ ತಿಳಿಸದೆಯೇ ಇವರು ಏರ್ಪಾಡು ಮಾಡಿದ್ದರು. ರವಿ ನೀಟಾಗಿ ಸೂಟ್ ಹಾಕಿ ಕೂಲಿಂಗ್‌ಗ್ಲಾಸ್ ಹಾಕಿಕೊಂಡು ಕೆಲಸ ಮಾಡುತ್ತಿದ್ದ. ಅವನು ಕುರುಡನೆಂದು ಯಾರೂ ಹೇಳುವ ಹಾಗಿರಲಿಲ್ಲ. ಗುಂಗುರು ಕೂದಲಿನ ಕ್ರಾಪು ಬಹಳ ಆಕರ್ಷಣೆಯಾಗಿತ್ತು.

ಉಷಾ ರವಿಯನ್ನು ಕಣ್ಣರಳಿಸಿ ನೋಡಿದಳು. ಕಣ್ಣಿಲ್ಲದಿದ್ದರೂ ಎಷ್ಟು ಸೂಕ್ಷ್ಮ ವಾದ ಕೆಲಸವನ್ನು ಮಾಡುತ್ತಾನೆ ಈತ ? ಎಷ್ಟು ಮೋಹಕವಾಗಿದ್ದಾನೆ ? ಎಂದು ಹಿಗ್ಗಿದಳು. ಅಲ್ಲಿ ಯಾರೂ ಮಾತಾಡಲಿಲ್ಲ.

ಸ್ವಲ್ಪ ಹೊತ್ತಾದನಂತರ ಬಾಲಚಂದ್ರ ಸನ್ನೆಮಾಡಿ ಅವರನ್ನು ಹೊರಕ್ಕೆ ಕರೆದ ಏನಪ್ಪಾ ; ಸುರೇಂದ್ರ ನಿಮ್ಮ ತಂಗಿಯ ಅಭಿಪ್ರಾಯ ? ಎಂದ.

ಉಷಾ ಹುಡುಗನನ್ನು ನೋಡಿದೆಯಲ್ಲಾ ? ನಿನ್ನ ಅಭಿಪ್ರಾಯ ಸಂಕೋಚ ವಿಲ್ಲದೆ ಹೇಳಮ್ಮ ; ಆಮೇಲೆ ಕುರುಡನಿಗೆ ಕಟ್ಟಿದ ಎಂದು ಬಯ್ಯಬೇಡ ಅಂದ ಸುರೇಂದ್ರ.

ಉಷಾ ತಲೆ ತಗ್ಗಿಸಿ "ಅವರನ್ನು ಇಷ್ಟಪಟ್ಟು ಮದುವೆ ಆಗುತ್ತೇನೆ, ಅಣ್ಣಾ ಅವರ ಸೇವೆ ಮಾಡುವ ಪುಣ್ಯ ನನಗೆ ಸಿಗಲಿ. ನಾನೂ ಒಂದು ಕೆಲಸಕ್ಕೆ ಸೇರಿ ದುಡಿ ಯುತ್ತೇನೆ" ಅಂದಳು. ಬಾಲಚಂದ್ರನಿಗೆ ತುಂಬಾ ಸಂತೋಷವಾಯಿತು, ನಿನ್ನಂತಹ ಹೆಣ್ಣು ಸಿಕ್ಕಿದ್ದು ನಮ್ಮ ರವಿಯ ಪುಣ್ಯವಮ್ಮಾ. ಮುಂದಿನ ಏರ್ಪಾಡು ನನಗಿರಲಿ ಎಂದು ಹೇಳಿದ.

ಬಾಲಚಂದ್ರ ಒಳಕ್ಕೆ ಬಂದು " ಏಯ್ ರವೀ.... ವೆರಿ ಲಕ್ಕಿ ಕಣೋ ನೀನು ಒಂದು ಗುಡ್‌ನ್ಯೂಸ್ ಹೇಳುತ್ತೇನೆ ಮೊದಲು ಸ್ವೀಟ್ ತರಿಸೋ " ಅಂದ.

" ಏನಪ್ಪಾ ! ಅದು ಅಂಥಾ ಸಮಾಚಾರ " ಅಂದ ರವಿ.

ಲೋ ರವೀ ನಮ್ಮ ವರ್ಕ್‌ಷಾಪಿಗೆ ಸುರೇಂದ್ರ ಅಂತ ಬರ್ತೋಲ್ವಾ ? ಅವನ ತಂಗಿ ಉಷಾ ಅಂತೆ. ಹುಡುಗಿ ತುಂಬಾ ಚೆನ್ನಾಗಿದ್ದಾಳೆ ಎಸ್. ಎಸ್. ಎಲ್. ಸಿ., ವರೆಗೆ ಓದಿದ್ದಾಳೆ. ಅವಳು ನಿನ್ನನ್ನು ಮದುವೆಯಾಗಲು ಒಪ್ಪಿದ್ದಾಳೆ ಕಣೋ....

ಲೋ....ಬಾಲೂ ನನ್ನ ಮದುವೆ ಸುದ್ದಿ ನಿನಗೆ ಬೇಡಾ ಅಂತ ಅವತ್ತೇ ನಾನು ನಿನಗೆ ಹೇಳಲಿಲ್ಲವೇನೋ ? ನಾನು ಖಂಡಿತಾ ಮದುವೆ ಆಗೋಲ್ಲ.

ಇನ್ನೇನು ...ಮದುವೆ ಆಗಬೇಡ. ನಿಮ್ಮ ಅತ್ತಿಗೆ ಪ್ರಾಣ ತೆಗಿ. ಅವರು ಎಷ್ಟು ಅಂತ ಸೇವೆ ಮಾಡುತ್ತಾರೋ ?

ಅದೆಲ್ಲ ಯೋಚನೆ ನಿನಗೆ ಬೇಡ. ಒಟ್ಟಿನಲ್ಲಿ ನನಗೆ ಮದುವೆ ಬೇಡ.

ನೋಡು ರವೀ ಹುಡುಗೀನ ನಾಳೆ ಅವರು ನಿಮ್ಮ ಮನೆಗೆ ಕರೆದುಕೊಂಡು ಬರುತ್ತಾರೆ. ನಿಮ್ಮ ತಂದೆ ತಾಯಿ ನಿಮ್ಮ ಅತ್ತಿಗೆ ಎಲ್ಲಾ ಒಪ್ಪಿದರೆ ಆಯಿತು, ನಿನ್ನನ್ನು ಯಾರು ಕೇಳುವುದಿಲ್ಲ ಅಂದ.

ಬಾಲೂ ಇದೆಲ್ಲಾ ಹುಡುಗಾಟವಲ್ಲ ಸುಮ್ಮನಿರು ಅಂದ. ಬಾಲೂಗೆ ಇವನ ಮೊಂಡಾಟ ಏಕೋ ಸರಿಬೀಳಲಿಲ್ಲ. ನಿನಗೆ ಹೇಳೋಕೆ ಬದಲು ಒಂದು ಬಂಡೆಗೆ ಹೇಳ ಬಹುದು ಎಂದು ಸುಮ್ಮನಾದ.

ರವಿ ಮದುವೆಗೆ ಇಷ್ಟಪಡದ ವಿಚಾರವನ್ನು ರವೀಂದ್ರನಿಗೆ ಬಾಲು ತಿಳಿಸಿದ್ದ ಆದರೆ ಉಷಾ ನಾನು ಅವರನ್ನೇ ಆಗಿ ಅವರು ಒಪ್ಪುವಂತೆ ಇರುತ್ತೇನೆ ಪರವಾಗಿಲ್ಲ ಎಂದು ಧೃಡವಾಗಿ ಹೇಳಿದಳು.

ಮಾರನೆಯ ದಿನ ಬಾಲು ಬಂದು ವಾಸಂತಿಗೆ ಹೇಳಿದ ಅತ್ತಿಗೇ ಅವರು ಮಧ್ಯಾಹ್ನ 4 ಗಂಟೆ ವೇಳೆಗೆ ಹೆಣ್ಣನ್ನು ಕರೆದುಕೊಂಡು ಬರುತ್ತಾರಂತೆ. ಆ ಮೊಂಡು ಫಕೀರನಿಗೆ ನೀವೇ ಒಪ್ಪಿಸಬೇಕು ಅಂದ.

ಅದು ಸರಿ ಬಾಲು ಹುಡುಗಿ ಒಪ್ಪಿದ್ದಾಳೆಯೇ ? ಎಂದು ವಾಸಂತಿ ಕೇಳಿದಳು.

''ಹುಡುಗಿಯೇ ಒಪ್ಪಿದ್ದಾಳೆ. ನಾನು ಅವರನ್ನೇ ಮದುವೆಯಾಗಿ ಅವರು ಒಪ್ಪುವಂತೆ ಇರುತ್ತೇನೆ ಅನ್ನುತ್ತಾಳೆ.... ನಾಳೆ ನೀವೇ ಹುಡುಗಿಯನ್ನು ನೋಡಿ" ಎಂದು ಹೇಳಿ ಹೊರಟುಹೋದ ಬಾಲು.

ವಾಸಂತಿಗೆ ಎಷ್ಟೋ ಸಮಾಧಾನ. ಸಧ್ಯ ಈ ಮನೆಗೆ ಇನ್ನೊಂದು ಹೆಣ್ಣು ಬರುವಂತಾದರೆ ಸಾಕಪ್ಪಾ ದೇವರೇ ಅಂದುಕೊಂಡಳು.

ಭಾಗೀರಥಮ್ಮನವರಿಗೆ ಎಲ್ಲಾ ವಿಷಯ ತಿಳಿಸಿದಳು. ''ಸಧ್ಯ ರವಿಗೆ ಒಂದು ಮದುವೆ ಅಂತ ಆಗುತ್ತೇ ? ಎಂದು ಕೊರಗುತ್ತಿದ್ದೇವಮ್ಮಾ, ಆ ಹೆಣ್ಣು ಸಧ್ಯ ಒಪ್ಪಿ ಅದರೆ ಗೆದ್ದೆವು" ಎಂದರು.

ಮಾರನೆಯ ದಿನ ಸುರೇಂದ್ರ ತಂಗಿ ಉಷಾಳನ್ನು ಕರೆದುಕೊಂಡು ಬಂದ. ಯಾವ ಆಡಂಬರವೂ ಇಲ್ಲದ ಸಾಧಾರಣವಾಗಿ ಸ್ನೇಹಿತರ ಮನೆಗೆ ಬರುವಂತೆ ಅಣ್ಣ ತಂಗಿ ಬಂದಿದ್ದರು.

ಕಣ್ಣು–ಮೂಗು ಲಕ್ಷಣವಾಗಿ ನಿಲುವಾಗಿದ್ದ ಉಷಾಳನ್ನು ನೋಡಿ ವಾಸಂತಿಗೆ ತುಂಬಾ ಸಂತೋಷವಾಯಿತು. ಅವಳ ಮೈಮೇಲೆ ಒಂದಾದರೂ ಚಿನ್ನದಾಭರಣ ಇರಲಿಲ್ಲ. ಸಾಧಾರಣ ವಾಯಿಲ್ ಸೀರೆ ಉಟ್ಟಿದ್ದಳು. ಬಡತನವನ್ನು ಬಚ್ಚಿಟ್ಟು ಯಾವ ಆಡಂಬರವನ್ನೂ ತೋರ್ಪಡಿಸಿಕೊಂಡಿರಲಿಲ್ಲ ಅವಳು, ಹಾಗೂ ಆಕರ್ಷಣೆ ಯಾಗಿದ್ದಳು.

ಸುರೇಂದ್ರ ಲಕ್ಷಣವಾಗಿ ತಂದಿದ್ದ ಹೂವು–ಹಣ್ಣನ್ನು ಅಲ್ಲಿಯೇ ತಟ್ಟೆಯಲ್ಲಿಟ್ಟು ಏನೋ ಬಡವರ ಮನೆ ಹೆಣ್ಣನ್ನು ಮಾಡಿಕೊಂಡು ನಮ್ಮನ್ನು ಉದ್ಧಾರ ಮಾಡ ಬೇಕೆಂದು ಹಿರಿಯರಾದ ಭಾಗೀರಥಮ್ಮನವರಿಗೆ ಕೈಮುಗಿದ. ಉಷಾ ಭಾಗೀರಥಮ್ಮ ನವರಿಗೂ, ವಾಸಂತಿಗೂ ನಮಸ್ಕರಿಸಿದಳು.

ವಾಸಂತಿಯ ಮೈ ಪೂರಾ ಒಂದು ನಿಮಿಷ ಗಡ–ಗಡನೆ ನಡುಗಿತು. ಈ ನಿಷ್ಕಪಟ ಹೆಣ್ಣಿಗೆ ನಾನೇನು ಆಶೀರ್ವಾದ ಮಾಡಲಿ ? ನಾನೇ ಪಾಪಿಯಾಗಿದ್ದೇನೆ.ರವಿ ಯಂತಹ ರೌಡಿಯನ್ನು ಕಟ್ಟಿಕೊಂಡು ಈ ಹೆಣ್ಣು ಏನು ಸುಖಪಟ್ಟಾಳು ? ನಾನಾಗಿಯೇ ಒಂದು ಹೆಣ್ಣನ್ನು ದುಃಖದ ಕೂಪಕ್ಕೆ ತಳ್ಳಲೇ ಎಂದು ಒಂದು ನಿಮಿಷ ತಲ್ಲಣಿಸಿದಳು ವಾಸಂತಿ.

ವಾಸಂತಿ ಏನೋ ಯೋಚಿಸುತ್ತಿರುವಳೆಂದು ತಿಳಿದು ಉಷಾ ಧೈರ್ಯವಾಗಿ ''ಅಕ್ಕಾ ಅವರಿಗೆ ಕಣ್ಣಿಲ್ಲವಲ್ಲಾ ಈ ಹುಡುಗಿ ಏನು ಮಾಡುವಳೋ ಎಂದು ಚಿಂತೆ ಇರಬಹುದು ನಿಮಗೆ, ಯೋಚಿಸಬೇಡಿ,. ನಾನೆಲ್ಲಾ ಹೊಂದಿಕೊಳ್ಳುತ್ತೇನೆ" ಎಂದಳು.

''ದೇವರು ನಿನಗೆ ಆ ಶಕ್ತಿ ಕೊಡಲಿ ಕಣಮ್ಮಾ" ಎಂದಳು ವಾಸಂತಿ. ಭಾಗೀ ರಥಮ್ಮನವರಂತೂ ''ನಮಗೆಲ್ಲಾ ಒಪ್ಪಿಗೇಪ್ಪಾ, ಧಾರಾಳವಾಗಿ ಸಂತೋಷದಿಂದ ಇಂಥಾ ಹೆಣ್ಣನ್ನು ಮನೆ ತುಂಬಿಸಿಕೊಳ್ಳುತ್ತೇವೆ" ಅಂದರು.

ಪರಮಶಿವಯ್ಯನವರು ಈಗ ಯಾವ ಮಾತಿಗೂ ಬರುತ್ತಿರಲಿಲ್ಲ. ರವಿ ರೂಂ ನಿಂದ ಹೊರಕ್ಕೇ ಬರಲಿಲ್ಲ. ವಾಸಂತಿ ಹೋಗಿ ಬಲವಂತವಾಗಿ ಅವನನ್ನು ಹೊರಕ್ಕೆ ಕರೆದುಕೊಂಡು ಬಂದಳು.

ಸುರೇಂದ್ರ ಅವನ ಬಳಿ ಬಂದು ''ನೀವು ಸ್ವಲ್ಪವೂ ಬೇಸರಪಟ್ಟುಕೊಳ್ಳಬೇಡಿ, ನನ್ನ ತಂಗಿ ನಿಮಗೆ ಹೊಂದಿಕೊಳ್ಳುತ್ತಾಳೆ" ಎಂದ.

ರವಿ ಗಂಭೀರವಾಗಿ ''ನನಗೆ ಮದುವೆ ಆಗುವುದೇ ಇಷ್ಟವಿಲ್ಲ" ಎಂದು ಮಾತೆ. ಹೇಳಿ ಎದ್ದು ಒಳಕ್ಕೆ ಹೊರಟುಹೋದ.

ಅವನು ಬಿಳಿಯ ಪಂಚೆಯುಟ್ಟು ಮೇಲೆ ನೆಟ್ ಬನಿಯನ್ ಹಾಕಿದ್ದ ಅಷ್ಟೇ, ಹಾಗೂ ಉಷಾ ಕಣ್ಣಿಗೆ ಅವನು ಬಹಳ ಅಂದವಾಗಿ ಕಂಡ.

ಭಾಗೀರಥಮ್ಮನವರು ಬಂದ ಹೆಣ್ಣೂ ಎಲ್ಲಿ ತಪ್ಪಿ ಹೋಗುತ್ತೋ ? ಎಂದು "ಏನಪ್ಪಾ ಸುರೇಂದ್ರ ಅವನು ತನಗೆ ಕಣ್ಣಿಲ್ಲವಲ್ಲಾ ಎಂಬ ಕೊರಗಿಗೆ ಹಾಗೆ ಹೇಳುತ್ತಾನೆ. ನೀವು ಮದುವೆಗೆ ಎಲ್ಲಾ ಏರ್ಪಾಡು ಮಾಡಿಕೊಳ್ಳಿ, ನಾವು ನಿಧಾನವಾಗಿ ಅವನಿಗೆ ಹೇಳುತ್ತೇವೆ" ಅಂದರು.

ಉಷಾಗೆ ಆ ಮನೆ ಆ ಜನ ಎಲ್ಲಾ ತುಂಬಾ ಇಷ್ಟವಾಯಿತು. ಮನೆಗೆ ಹೋಗಿ ಅವರ ತಾಯಿಗೆ ಎಲ್ಲಾ ವಿಷಯ ಹೇಳಿದರು. ಪಾಪ ! ಅವರ ದೊಡ್ಡಮಗ ಬಳ್ಳಾರಿಯಲ್ಲಿದ್ದಾರೆ. ಇವರನ್ನು ನೋಡಿಕೊಳ್ಳುವುದಕ್ಕೋಸ್ಕರವೇ ಅವರ ಹೆಂಡತಿ ಇಲ್ಲೇ ಇದ್ದಾರೆ. ಉಷಾ ಮದುವೆಯಾದರೆ ಅವಳೇ ಮನೆ ಯಜಮಾನಿ. ದೊಡ್ಡ ಸೊಸೆ ಬಳ್ಳಾರಿಗೆ ಹೊರಟುಹೋಗುತ್ತಾರೆ" ಎಂದೆಲ್ಲಾ ಹೇಳಿದ. ತಾಯಿಗೂ ಇಷ್ಟವಾಯಿತು.

ರವಿಯ ಮಾತನ್ನು ಅಷ್ಟಾಗಿ ಲಕ್ಷಿಸದೆ ಎರಡು ಮನೆಯಲ್ಲಿಯೂ ಮದುವೆ ಏರ್ಪಾಡು ನಡೆಯತೊಡಗಿದವು.

ರವಿ ವಾಸಂತಿಯೊಂದಿಗೆ ಕೂಗಾಡಿದ. "ಅತ್ತಿಗೇ ! ಈ ಮದುವೆ ಖಂಡಿತ ನಡೆಯುವುದಿಲ್ಲ ತಿಳಿದುಕೊಳ್ಳಿ, ನೀವಿರುವಾಗ ನನಗೆ ಬೇರೆ ಮದುವೆಯೇಕೆ ? ಅಣ್ಣ ನಿಮ್ಮನ್ನು ನನಗೆ ಒಪ್ಪಿಸಿದ್ದಾನೆ, ಆಯಿತು. ಬೇರೆ ಯಾವ ಹೆಣ್ಣನ್ನೂ ನಾನು ಪ್ರೀತಿಸಲಾರೆ" ಎಂದ.

"ರವೀ ಬೇಡ, ನಾನು ನಿನಗೆ ಶಾಶ್ವತವಲ್ಲ, ಉಷಾ ತುಂಬಾ ಒಳ್ಳೆಯ ಹೆಣ್ಣು, ಅಂಥಾ ಹೆಣ್ಣನ್ನು ಅನ್ಯಾಯವಾಗಿ ಕಳೆದುಕೊಳ್ಳಬೇಡ" ಎಂದು ಎಷ್ಟೋ ಬುದ್ಧಿವಾದ ಹೇಳಿದಳು ವಾಸಂತಿ.

ರವಿಯದು ಒಂದೇ ಹಟ. 'ನನಗೆ ಮದುವೆ ಬೇಡ'. ಏನೇ ಆದರೂ ಇವನಿಗೆ ಒಂದು ಮದುವೆ ಆಗಬೇಕು. ಅದಕ್ಕೆ ಉಷಾಗಿಂತ ಇನ್ನು ಒಳ್ಳೆಯ ಹೆಣ್ಣು ಸಿಕ್ಕುವುದಿಲ್ಲ ಎಂದು ಮದುವೆ ಸಿದ್ಧತೆ ಮುಂದುವರೆಸಿದಳು ವಾಸಂತಿ.

ಹುಡುಗಿಗೆ ಒಡವೆ ಸೀರೆ ಎಲ್ಲಾ ಒಳ್ಳೆಯದನ್ನು ಆರಿಸಿ ತಂದಳು. ಜೊತೆಜೊತೆಗೆ ಉಷಾನನ್ನೂ ಕರೆದುಕೊಂಡು ಹೋಗಿ ಅವಳಿಗೆ ಇಷ್ಟವಾದ ಸೀರೆಯನ್ನೇ ತೆಗೆದಳು.

ಉಷಾ ವಾಸಂತಿಯ ಗುಣವನ್ನು ಕೊಂಡಾಡಿದಳು. "ಅತ್ತಿಗೇ ನಿಮ್ಮ ಜೊತೆ ಇರುವುದಕ್ಕೆ ನಾನೆಷ್ಟು ಪುಣ್ಯ ಮಾಡಿದ್ದೆನೋ ?" ಎಂದಳು.

ವಾಸಂತಿ ಗಂಡನಿಗೆ ಕೂಡಲೇ ಬರುವಂತೆ ಕಾಗದ ಬರೆದಳು. ರವಿಗೆ ಮದುವೆ ಮಾಡುವ ವಿಷಯ ಸ್ವಲ್ಪ ತೊಡಕಿನ ವಿಷಯ. ಇರಲಿ ನಾನು ಭಾನುವಾರ ಬರುತ್ತೇನೆ ಎಂದು ನಾಗರಾಜ ಬರೆದ.

ರವಿ ಮನೆಯಲ್ಲಿ ನಡೆಯುವ ಸಂಭ್ರಮ–ಓಡಾಟ ನೋಡಿ ''ಏನು ಅತ್ತಿಗೇ ನಾನು ಎಷ್ಟು ಬೇಡವೆಂದರೂ ನೀವು ಕೇಳುತ್ತಿಲ್ಲವಲ್ಲಾ'' ಅಂದ.

''ರವೀ ನಿನ್ನ ಇಷ್ಟವನ್ನು ಈಗ ನಾವು ಕೇಳುವುದಿಲ್ಲ. ನಾವು ಹೇಳಿದಂತೆ ನೀನು ಕೇಳಲೇಬೇಕು. ಇದೋ ಲಗ್ನಪತ್ರಿಕೆ ಸಹ ಪ್ರಿಂಟಾಗಿದೆ'' ಎಂದು ತೋರಿಸಿದಳು

ರವಿ ಕೋಪದಿಂದ ಕೈಯ್ಯಲ್ಲಿದ್ದ ಲಗ್ನಪತ್ರಿಕೆಯನ್ನು ಚೂರು–ಚೂರಾಗಿ ಹರಿದುಹಾಕಿ, ''ಅತ್ತಿಗೇ ನಿಮಗೆ ಸರಿಯಾಗಿ ಬುದ್ಧಿ ಕಲಿಸುತ್ತೇನೆ ತಾಳಿ'' ಎಂದು ಮನೆಯಿಂದ ಹೊರಗೆ ಹೋದ. ಸ್ವಲ್ಪ ಹೊತ್ತಿಗೆಲ್ಲಾ ಮನೆಗೆ ಬಂದು ಬಾಗಿಲು ಹಾಕಿಕೊಂಡ.

ಸಧ್ಯ ಎಲ್ಲಿ ಹೊರಟು ಹೋದನೋ ಎಂದು ವಾಸಂತಿಗೆ ಭಯವಾಗಿತ್ತು. ಸಧ್ಯ ಮನೆಗೆ ವಾಪಸ್ ಬಂದನಲ್ಲಾ ಎಂದು ಸಮಾಧಾನದಿಂದ ವಾಸಂತಿ ತನ್ನ ಕೆಲಸದಲ್ಲಿ ತಾನಿದ್ದಳು.

ಸ್ವಲ್ಪ ಹೊತ್ತಿಗೆಲ್ಲಾ ರೂಮಿನಿಂದ ನರಳಾಟ. ಅಯ್ಯೋ... ಅಮ್ಮಾ.... ಅತ್ತಿಗೇ.... ಎಂದು ಕೂಗಾಟ ಕೇಳಿ ವಾಸಂತಿ ಓಡಿಬಂದು ಬಾಗಿಲು ಬಡಿದಳು. ಒಳಗೆ ಬೋಲ್ಟ್ ಹಾಕಿತ್ತು.

ಎಷ್ಟು ಬಡಿದರೂ ತೆಗೆಯಲಿಲ್ಲ. ವಾಸಂತಿಗೆ ಗಾಬರಿಯಾಗಿ ಅತ್ತೆ–ಮಾವ ಎಲ್ಲರನ್ನೂ ಕೂಗಿಕೊಂಡಳು. ರವಿಯ ನರಳಾಟ ಜೋರಾಯಿತು. ವಾಸಂತಿ ಏನೋ ಅಪಾಯವಾಗಿದೆ ಎಂದು ಭಯದಿಂದ, ರೂಮಿಗೆ ಮತ್ತೊಂದು ಬಾಗಿಲಿದ್ದುದರಿಂದ ಅದನ್ನು ಜೋರಾಗಿ ಒದ್ದಳು. ಅದರ ಒತ್ತಿಗೆ ಮಂಚ ಹಾಕಿದ್ದುದರಿಂದ ಸ್ವಲ್ಪ ತಡೆಯಿತು. ಆದರೂ ಸ್ವಲ್ಪ ತೂರುವಂತೆ ಸಂಧಿ ಬಿಟ್ಟಿತು. ಪ್ರಸಾದನನ್ನು ಮೆಲ್ಲನೆ ಅದರಲ್ಲಿ ತೂರಿಸಿ ಬೋಲ್ಟ್ ತೆಗೆಯುವಂತೆ ಹೇಳಿದಳು.

ಪಾಪ ! ಮಗು ಒಳಗೆ ತೂರಿ ಬೋಲ್ಟ್ ತೆಗೆಯಿತು. ಎಲ್ಲರೂ ಒಳಗೆ ಗಾಬರಿಯಿಂದ ನುಗ್ಗಿದರು. ರವಿ ಪ್ರಾಣ ಸಂಕಟದಿಂದ ಒದ್ದಾಡುತ್ತಿದ್ದಾನೆ. ಅವನ ಪಕ್ಕದಲ್ಲಿಯೇ ಫಾಲಿಡಾಲ್ ಬಾಟಲ್ ಇತ್ತು.

ಫಾಲಿಡಾಲ್ ಕುಡಿದುಬಿಟ್ಟಿದ್ದಾನೆ ಎಂದು ತಿಳಿಯಿತು. ವಾಸಂತಿಗೆ ಕೈ ಕಾಲು ನಡುಗಿತು. ಭಾಗೀರಥಮ್ಮನವರು ಒಂದು ಕಡೆ ಗೋಳೋ ಎಂದು ಅಳುತ್ತಾರೆ. ನೆರೆ ಹೊರೆಯವರು ಬಂದರು, ಕೂಡಲೆ ಒಂದು ಟ್ಯಾಕ್ಸಿ ತಂದು ರವಿಯನ್ನು ಆಸ್ಪತ್ರೆಗೆ ಸಾಗಿಸಿದರು.

ಆ ವೇಳೆಗೆ ರವಿ ತುಂಬಾ ಸುಸ್ತಾಗಿದ್ದ. ಡಾಕ್ಟರುಗಳು ಬಂದುನೋಡಿ ಹೆಚ್ಚು ಫಾಲಿಡಾಲ್ ಹೊಟ್ಟೆಗೆ ಸೇರಿದೆ ಬದುಕುವುದು ಕಷ್ಟ... ಎಂದುಕೊಂಡು ಕೂಡಲೆ ವಾಂತಿಯಾಗುವಂತೆ ಮಾಡಿದರು. ಮೈಯೆಲ್ಲಾ ಶಾಖ ಬರುವಂತೆ ಮಾಡಿದರು.

ತುಂಬಾ ವಾಂತಿಯಾದ ನಂತರ ರವಿ ಬದುಕಿದ–ತುಂಬಾ ಸುಸ್ತಾಗಿದ್ದ ರವಿ-ಸ್ವಲ್ಪ ಸುಧಾರಿಸಿಕೊಂಡ ಮೇಲೆ ಡಾಕ್ಟರು–ಪೋಲಿಸಿನವರು ಎಲ್ಲಾ ಬಂದು ಮುತ್ತಿಕೊಂಡರು. ಫಾಲಿಡಾಲ್ ಕುಡಿದು ಪ್ರಾಣ ಬಿಡಲು ಕಾರಣವೇನು ? ಬರೆದು ಕೊಡಿ ಎಂದು ಕೇಳಿದರು.

ಇಷ್ಟು ಪ್ರಮಾದವಾಗುತ್ತದೆಂದು ತಿಳಿದಿರಲಿಲ್ಲ, "ನಾನು ಕುರುಡನಾಗಿದ್ದರಿಂದ ಜೀವನದಲ್ಲಿ ಜಿಗುಪ್ಸೆ ಹೊಂದಿ ಸಾಯಲು ಪ್ರಯತ್ನಪಟ್ಟೆ ವಿಧಿ ಉಳಿಸಿತು" ಎಂದು ಬರೆದುಕೊಟ್ಟ. ಸಧ್ಯ ಎಲ್ಲರೂ ಬದುಕಿದರು ಎಂದುಕೊಂಡರು.

ಡಾಕ್ಟರು ಇವತ್ತು ಒಂದು ದಿನ ಸುಧಾರಿಸಿಕೊಳ್ಳಲಿ ನಾಳೆ ಬೆಳಿಗ್ಗೆ ಮನೆಗೆ ಕರೆದುಕೊಂಡು ಹೋಗಿ ಎಂದರು.

ಈ ಒಂದು ಘಟನೆ ವಾಸಂತಿಯ ಮನಸ್ಸಿನ ಮೇಲೆ ತುಂಬಾ ಆಘಾತ ಮಾಡಿತು. ನನ್ನ ಜೀವವಿರುವವರೆಗೂ ನನ್ನನ್ನು ಬಿಡುವಂತಿಲ್ಲ. ಇವನಿಂದಾಗಿ ನಾನು ಇನ್ನೂ ಎಷ್ಟು ಅಪಮಾನ ಚಿತ್ರಹಿಂಸೆ ಅನುಭವಿಸಬೇಕಾಗುತ್ತೋ ? ಬೇಡ ದೇವರೇ ಈ ಜನ್ಮ ಸಾಕು ಅನ್ನಿಸಿಬಿಟ್ಟಿತು. ಅವಳಿಗೆ.

ಅತ್ತೇ ...ಮಕ್ಕಳು ನಾನೂ ಮನೆಗೆ ಹೋಗುತ್ತೇವೆ ಸಂಜೆ, ಕತ್ತಲಾಗುತ್ತಾ ಬಂತು. ಈ ರಾತ್ರಿ ನೀವು ಇಲ್ಲೇ ಇರಿ ಊಟ ಕಳುಹಿಸುತ್ತೇನೆ ಎಂದು ಹೇಳಿದವಳೇ ಮಕ್ಕಳೊಂದಿಗೆ ಮನೆಗೆ ಹೊರಟುಬಿಟ್ಟಳು.

ಆ ವೇಳೆಗೆ ಬಾಲು ಬಂದು ರವಿಯನ್ನು ತರಾಟೆಗೆ ತೆಗೆದುಕೊಂಡಿದ್ದ. ಮಹರಾಯ : ನಿನ್ನ ಸಹವಾಸ ಸಾಕು ಫಾಲಿಡಾಲ್ ಕುಡಿದು ಸಾಯುವುದಕ್ಕೆ ನಿನಗೇನಾಗಿತ್ತೋ ? ನೀನು ಮದುವೆಯಾಗದಿದ್ದರೆ ಪ್ರಪಂಚ ಮುಳುಗಿ ಹೋಗೋಲ್ಲ ಎಂದು ಹೇಳಿ ಹೊರಟು ಹೋದ.

ವಾಸಂತಿ ಅಡಿಗೆ ಮಾಡಿ ಮಕ್ಕಳಿಗೆ ಬಡಿಸಿದಳು. ಆಸ್ಪತ್ರೆಗೆ ಪಕ್ಕದ ಮನೆ ಹುಡುಗನ ಕೈಲಿ ಊಟ ಕೊಟ್ಟು ಕಳುಹಿಸಿದಳು. ಮಕ್ಕಳನ್ನು ಮಲಗಿಸಿ ದೇವರ ಮುಂದೆ ಕುಳಿತು ಮನದಣಿಯ ಅತ್ತಳು.

ಮಾರನೆಯ ದಿನ ಭಾನುವಾರ. ನಾಗರಾಜ ಬರೆದಿದ್ದಂತೆ ಬಳ್ಳಾರಿಯಿಂದ ರಾತ್ರಿ ಹೊರಟು ಬೆಳಗಿನಜಾವ ಬೆಂಗಳೂರಿಗೆ ಬಂದ. ಮನೆಗೆ ಬರುವ ವೇಳೆಗೆ ಆಗತಾನೇ ಸೂರ್ಯೋದಯವಾಗಿತ್ತು. ಚಿಲಿ–ಪಿಲಿಗುಟ್ಟುವ ಹಕ್ಕಿಗಳು ರೆಕ್ಕೆ ಬಡಿದು ಹಾರಿದುವು. ಯಾರಿಗೆ ಸುಖವೋ ! ಯಾರಿಗೆ ದುಃಖವೋ ! ಕಾಲಚಕ್ರವಂತೂ ಉರುಳುತ್ತಿರುತ್ತದೆ.

ನಾಗರಾಜ ಮನೆಗೆ ಬಂದು ಬಾಗಿಲು ತಟ್ಟಿದ. ಆದರೆ ಬಾಗಿಲು ಹಾಕಿತ್ತು, ತಟ್ಟಿದ ಕೂಡಲೇ ತೆರೆದುಕೊಂಡಿತು. ಒಳಕ್ಕೆ ಬಂದು ಇನ್ನೂ ಎಲ್ಲರೂ ಮಲಗಿರಬಹುದೆಂದುಕೊಂಡ.

ಅಮ್ಮಾ ; ಎಂದು ಕೂಗುತ್ತಾ ಭಾಗೀರಥಮ್ಮನವರ ರೂಮಿಗೆ ಬಂದ. ಅಲ್ಲಿ ಯಾರೂ ಇರಲಿಲ್ಲ. ತಂದೆಯ ರೂಮಿನಲ್ಲಿ ಅವರೂ ಇರಲಿಲ್ಲ. ಅವರೂ ಆಸ್ಪತ್ರೆ ಯಲ್ಲಿಯೇ ಉಳಿದುಕೊಂಡಿದ್ದರು.

ರವೀ....ವಾಸಂತೀ ... ಎಂದು ಗಟ್ಟಿಯಾಗಿ ಕೂಗಿದ, ಯಾರ ಸದ್ದೂ ಇಲ್ಲ ಮನೆ ನಿಶ್ಶಬ್ಧ ರವಿಯ ರೂಮಿನಲ್ಲಿ ರವಿಯೂ ಇಲ್ಲ ... ಇದೇನು ಇಷ್ಟು ಹೊತ್ತಿಗೆ ವಾಸಂತಿ ಎದ್ದು ಕಾಫಿ ಮಾಡಬೇಕಾಗಿತ್ತಲ್ಲಾ ಎಂದುಕೊಂಡು ಮಹಡಿ ಹತ್ತಿದ. ರೂಮಿನ ಬಾಗಿಲು ತೆರೆದೇ ಇತ್ತು. ಅವನು ಕಂಡ ದೃಶ್ಯ ಭಯಾನಕ. ಕಾಲು ನೆಲಕ್ಕೆ ಕೀಲಿಸಿದಂತೆ ಅಲ್ಲಿಯೇ ನಿಂತ.

ವಾಸಂತಿಯ ಹೆಣ " ತೊಟ್ಟಿಲು ಕಟ್ಟಿದ್ದ ತೊಲೆಯಲ್ಲಿ ನೇತಾಡುತ್ತಿದೆ " ಅಯ್ಯೋ ! ವಾಸಂತೀ....ಎಂದು ಚೀರಿ ಕೆಳಗೆ ಕುಕ್ಕರಿಸಿದ ನಾಗರಾಜ.

ಅವನಿಗೆ ದಿಗ್ಭ್ರಮೆಯಾಗಿತ್ತು. ಇದೇನು ನಿಜವಾಗಿ ವಾಸಂತಿಯೇ ? ಎಂದು ಕಂಗಾಲಾದ. ಇವನು ಚೀರಿದ ಶಬ್ದಕ್ಕೆ ಪ್ರಸಾದ–ಪ್ರಕಾಶ ಇಬ್ಬರೂ ಎದ್ದು ಅಮ್ಮಾ ಎಂದು ಕೂಗಿದರು. ನಾಗರಾಜ ರೂಮಿಗೆ ಬಂದು ಮಕ್ಕಳನ್ನು ಎತ್ತಿಕೊಂಡು ಹೊರಕ್ಕೆ ಬಂದ...ವಾಸಂತಿಯ ಕತ್ತು ಒಂದು ಪಕ್ಕಕ್ಕೆ ವಾಲಿತ್ತು. ಮುಖವಲ್ಲಾ ನೀಲಿಯಾಗಿ ವಿಕಾರವಾಗಿತ್ತು....ಅವಳು ತೊಟ್ಟಿಲು ಕಟ್ಟುವ ಹಗ್ಗದಿಂದಲೇ ನೇಣು ಹಾಕಿಕೊಂಡು ಸತ್ತಿದ್ದಳು.

ನಾಗರಾಜನಿಗೆ ಒಂದೂ ಅರ್ಥವಾಗಲಿಲ್ಲ. ಓಡಿಹೋಗಿ ಅಕ್ಕಪಕ್ಕದ ಮನೆಯಲ್ಲಿ ವಿಚಾರಿಸಿದ. ಅವರು ನಿನ್ನೆ ತಾನೇ ರವಿ ಫಾಲಿಡಾಲ್ ಕುಡಿದು ಆಸ್ಪತ್ರೆಗೆ ಅಡ್ಮಿಟ್ ಆದ ವಿಷಯ ತಿಳಿಸಿದರು. ಮನೆಯ ಈ ಅವಾಂತರ ಏನೆಂದೇ ಅರ್ಥವಾಗಲಿಲ್ಲ ನಾಗರಾಜನಿಗೆ. ಮುಂದೆ ಏನೂ ಮಾತಾಡಲಾರದೆ ಮಕ್ಕಳನ್ನೂ ಆಟೋದಲ್ಲಿ ಕೂರಿಸಿ ಕೊಂಡು ಆಸ್ಪತ್ರೆಗೆ ಓಡಿದ.

ಅಲ್ಲಿ ತಾಯಿಯನ್ನು ಕಂಡಕೂಡಲೇ ಅಮ್ಮಾ ವಾಸಂತಿ ಸತ್ತು ಹೋಗಿದ್ದಾಳೆ ಬನ್ನೀಮ್ಮಾ ಮನೆಗೆ ಎಂದ. ಕೂಡಲೇ ರವಿ ಹಾಂ .. ಏನಣ್ಣಾ ಅತ್ತಿಗೆಯೇ ? ಸತ್ತು ಹೋಗಿದ್ದಾರೆಯೇ ? ಎಲ್ಲಿ ! ಎಲ್ಲಿ ? ಕಿರಿಚಿಕೊಂಡು ಎದ್ದ.

ಎಲ್ಲಾ ಮನೆಗೆ ಬರುವ ವೇಳೆಗೆ ಸುತ್ತ ಮುತ್ತ ಸಮಾಚಾರ ಹರಡಿ ಮನೆಯ ಮುಂದೆ ಜನ ಜಾತ್ರೆಯೇ ಸೇರಿತ್ತು.

ವಾಸಂತಿಯ ಹೆಣವನ್ನು ತಂದು ಹಜಾರದಲ್ಲಿ ಮಲಗಿಸಿದರು. ಏಕೆ ಸತ್ತಳು ? ಕಾರಣವೇನು ? ಪ್ರಶ್ನೆಯ ಸುರಿಮಳೆ.

ವಾಸಂತಿಯ ರವಿಕೆಯ ಒಳಗಿನಿಂದ ಒಂದು ಕಾಗದ ಹೊರಕ್ಕೆ ಕಾಣುತ್ತಿತ್ತು ಪೋಲೀಸಿನವರು ಆ ಕಾಗದ ತೆಗೆದುಕೊಂಡರು.

ಕಾಗದ ಹೀಗಿತ್ತು.

ನನ್ನ ಸಾವಿಗೆ ಯಾರೂ ಕಾರಣರಲ್ಲ. ನಾನೇ ಕಾರಣ, ...ಹೆಣ್ಣು ಒಡಲಿನಲ್ಲಿ ಬಡಬಾಗ್ನಿಯನ್ನು ಬಚ್ಚಿಟ್ಟು ಬದುಕುತ್ತಾಳೆ. ಅವಳ ಮನಸ್ಸಿನಾಳವನ್ನು ಬೆದಕಿದಾಗ ಅವಳು ಹೇಗೆ ದಹಿಸುತ್ತಿದ್ದಾಳೆ ಎಂಬುದು ತಿಳಿಯುತ್ತೆ. ಕಡೆಗೆ ಅವಳು ಹಾಗೆಯೇ ದಹಿಸಿ ಸುಟ್ಟು ಬೂದಿಯಾಗುತ್ತಾಳೆ.

ಅವಳ ಸಂಕಟ ಅವಳೊಂದಿಗೇ ದಹಿಸಿ ಹೋಗುತ್ತದೆ. ಈ ರೀತಿಯ ಹೇಳ ಲಾರದ ಒಂದು ಸಂಕಟದಿಂದ ನನ್ನ ಜೀವ ನೊಂದು ಬೆಂದಿತು. ನನ್ನ ನೋವು ನನ್ನೊಂದಿಗೆ ದಹಿಸಿ ಹೋಗಲಿ.

ನನ್ನ ಪತಿದೇವರಿಗೆ ನನ್ನ ಅನಂತ ಪ್ರಣಾಮಗಳು, ತಮ್ಮ ಅಪ್ಪಣೆಯನ್ನು ಶಿರಸಾವಹಿಸಿ ಪಾಲಿಸಿದೆ. ಕಡೆಗೆ ನಿಮ್ಮಿಂದ ದೂರವಾಗಿ ಬೆಂಕಿಯಲ್ಲಿ ಬಿದ್ದ ಪತಂಗ ದಂತೆ ಪರಿತಪಿಸಿದೆ. ನನ್ನನ್ನು ಕ್ಷಮಿಸಿ ನನ್ನ ಮಕ್ಕಳೆಂಬ ಪ್ರೀತಿಯಿಂದಲಾದರೂ ಆ ಮಕ್ಕಳ ಪಾಲನೆ ಪೋಷಣೆಯನ್ನು ವಹಿಸಿಕೊಳ್ಳಿ. ನಿಮ್ಮ ವಂಶೋದ್ಧಾರಕರು ಅವರು.

ರವೀ ನಿನಗೆ ನಿನ್ನ ಅತ್ತಿಗೆ ಏನೆಂದು ಬರೆಯುತ್ತಾಳೆ ? ಎಲ್ಲಾ ನಿನಗೆ ಅರ್ಥ ವಾಗಿದೆ ರವೀ '' ಕಾಮಕ್ಕೆ ಕಣ್ಣಿಲ್ಲ '' ಎಂಬುದು ಅರ್ಥವಾಯಿತೆ ? ನೀನು ನಿನ್ನೆ ಸಾಯಲು ಹೊರಟಿದ್ದೆ. ಆದರೆ ಅದೇ ದಾರಿಯಲ್ಲಿ ನಾನು ಮುಂದುವರಿದಿದ್ದೇನೆ.

ರವೀ ನಾನು ಸತ್ತ ಮೇಲಾದರೂ ನನ್ನದೊಂದು ಮಾತನ್ನು ನಡೆಸಿಕೊಡು. ನೀನು ಉಷಾಳನ್ನು ಮದುವೆಯಾಗಲೇಬೇಕು. ಮದುವೆಯಾದ ಹೆಣ್ಣನ್ನು ನೋಯಿಸದೆ ನೋಡಿಕೋ.... ಆಗ ಮಾತ್ರ ನನ್ನ ಆತ್ಮಕ್ಕೆ ಶಾಂತಿ ; ನನ್ನ ಮಕ್ಕಳಿಗೆ ಮುಂದೆ ಅವಳೇ ತಾಯಿಯೆಂದು ಹೇಳು.

ಕಡೆಯದಾಗಿ ನನ್ನ ಮತ್ತೊಂದು ಆದೇಶ. ನಮ್ಮ ಭಾರತದಲ್ಲಿ ಜನನ ನಿಯಂತ್ರಣ ಕಾರ್ಯ ಆವಶ್ಯಕ. ಸರ್ಕಾರ ಅದಕ್ಕಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದೆ. ಅದು ಸರಿಯಾದ ರೀತಿಯಲ್ಲಿ ಜನರಿಗೆ ಉಪಯೋಗವಾಗಬೇಕು. ವೈದ್ಯರ ಬೇಜವಾಬ್ದಾರಿ ಯಿಂದ ಒಂದೊಂದು ಸಂಸಾರವೇ ಮುಳುಗಿ ಹೋಗುತ್ತದೆ ಎಂಬುದನ್ನು ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡುವ ವೈದ್ಯರು ತಿಳಿದಿರಲಿ. ಮುಂದೆಂದೂ ಯಾವ ಹೆಣ್ಣಿಗೂ ನನ್ನಂತಹ ನನಗಾದಂತಹ ಅನ್ಯಾಯವಾಗದಿರಲಿ ಎಂದು ಆಶಿಸುತ್ತೇನೆ. ನನಗಾಗಿರುವ ಅನ್ಯಾಯವನ್ನು ನಾನು ಹೇಳಬಯಸುವುದಿಲ್ಲ. ನನ್ನ ಮರಣೋತ್ತರವೂ ಅದು ರಹಸ್ಯವಾಗಿಯೇ ಉಳಿಯಬೇಕೆಂದು ನನ್ನ ಇಷ್ಟ. ನನ್ನ ಅಂತರಂಗದ ಅಲೆ ಗಳು ನನ್ನಲ್ಲಿಯೇ ಅಡಗಲಿ ಎಂದು ಆಶಿಸುತ್ತೇನೆ.

ಇತಿ ನಿಮ್ಮಿಂದ ದೂರವಾಗುತ್ತಿರುವ ವಾಸಂತಿ.

ಈ ಕಾಗದವನ್ನು ಒಬ್ಬ ಪೋಲೀಸಿನವರು ಗಟ್ಟಿಯಾಗಿ ಓದಿದರು. ಎಲ್ಲರ ಕಣ್ಣಿನಲ್ಲಿಯೂ ನೀರು. ರವಿ ಅಯ್ಯೋ! ಅತ್ತಿಗೇ ಎಂದು... ಅಲ್ಲೇ ವಾಸಂತಿಯ ಕಾಲಬಳಿ ಕುಸಿದು ಕಣ್ಣೀರಿಟ್ಟ.